# ಬಳಗಾನೂರು ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ)


ಸಂಶೋಧನೆ

ಅಮರೇಶ

R.NO.KUAH/00520

ಮಾರ್ಗದರ್ಶನ

ಡಾ. ಎಸ್. ವೈ. ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು





ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ


೨೦೧೩

# ಬಳಗಾನೂರು ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ)


ಸಂಶೋಧನೆ

**ಅಮರೇಶ**

ಮಾರ್ಗದರ್ಶನ

**ಡಾ. ಎಸ್.ವೈ. ಸೋಮಶೇಖರ್**

ಸಹಾಯಕ ಪ್ರಾಧ್ಯಾಪಕರು



ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

# ಸಂಶೋಧಕರ ಪ್ರಮಾಣ ಪತ್ರ

"**ಬಳಗಾನೂರು ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ**" ಎಂಬ ಶೀರ್ಷಿಕೆಯ ಈ ಪ್ರೌಢ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಡಾ. ಎಸ್.ವೈ. ಸೋಮಶೇಖರ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಪ್ರೌಢ ಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ :

(ಅಮರೇಶ) 31/07/2013

ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

# ಮಾರ್ಗದರ್ಶಕರ ದೃಢೀಕರಣ ಪತ್ರ

**ಅಮರೇಶ ಅವರು "ಬಳಗಾನೂರು ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಪ್ರೌಢ ಪ್ರಬಂಧವನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

20/02/2012

ಸ್ಥಳ : ವಿದ್ಯಾರಣ್ಯ

ದಿನಾಂಕ :

**(ಡಾ. ಎಸ್.ವೈ. ಸೋಮಶೇಖರ್)**

ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

# ಪರಿವಿಡಿ


# ಬಳಗಾನೂರು ಹೋಬಳಿ ನಕ್ಷೆ



# ಸಿಂಧನೂರು ತಾಲೂಕು ನಕ್ಷೆ



# ರಾಯಚೂರು ಜಿಲ್ಲೆ ನಕ್ಷೆ



ಆಂಧ್ರ ಪ್ರದೇಶ
ರಾಯಚೂರು
ಮಾನ್ವಿ
ದೇವದುರ್ಗ
ಯಾದಗಿರಿ ತಾಲೂಕು
ಯಾದಗಿರಿ ಜಿಲ್ಲೆ
ಬಳಗಾನೂರು ಹೋಬಳಿ
ಸಿಂಧನೂರು
ಲಿಂಗಸೂಗೂರು
ಕೊಪ್ಪಳ ಜಿಲ್ಲೆ
ಬಾಗಲಕೋಟೆ ಜಿಲ್ಲೆ

# ಅಧ್ಯಾಯ : ಒಂದು

# ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಸಮೀಕ್ಷೆ

# ಅಧ್ಯಾಯ : ಒಂದು

# ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಸಮೀಕ್ಷೆ

## ಪ್ರಸ್ತಾವನೆ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕವು ಇಡೀ ದೇಶದಲ್ಲಿಯೇ ತನ್ನನ್ನು ವಿಶೇಷತೆಯೊಂದಿಗೆ ಗುರುತಿಸಿಕೊಂಡಿದೆ, ಪ್ರಾಯಶಃ ತಮಿಳುನಾಡನ್ನು ಬಿಟ್ಟರೆ ಕರ್ನಾಟಕದಷ್ಟು ಪ್ರಾಚೀನ ಇತಿಹಾಸ, ಸಾಹಿತ್ಯ ಸಂಸ್ಕೃತಿಗಳ ಪರಂಪರೆಯನ್ನು ಪಡೆದ ಪ್ರದೇಶ ಮತ್ತೊಂದಿಲ್ಲ. ಈ ನೆಲದ ಒಂದೊಂದು ಕಲ್ಲು ಇತಿಹಾಸಕ್ಕೆ ಕಾಣಿಕೆ ಕೊಡಬಲ್ಲದು. ಒಂದೊಂದು ಹಳ್ಳಿಯೂ ಭಾರತೀಯ ಸಂಸ್ಕೃತಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಕೊಡಬಲ್ಲ ಸಂಪತ್ತನ್ನು ಪಡೆದಿದೆ. ಕರ್ನಾಟಕ ಮತ್ತು ಭಾರತ ದೇಶದ ಕಾಲಾನುಕ್ರಮದ ಇತಿಹಾಸ ರಚನೆಗೆ ಉತ್ತರ ಕರ್ನಾಟಕ ಭಾಗದ ಪ್ರಮುಖ ಜಿಲ್ಲೆ ರಾಯಚೂರಿನ ಕೊಡುಗೆ ಅನನ್ಯವಾದುದು. ಈ ಜಿಲ್ಲೆಯ ಪ್ರಮುಖ ಪ್ರಾಗಿತಿಹಾಸ ನೆಲೆಗಳಾದ ಲಿಂಗಸೂಗೂರು, ಪಿಕ್ಲಿಹಾಳ, ಮಸ್ಕಿ ತಮ್ಮದೇ ಆದ ಗುರುತುಗಳನ್ನು ದೇಶದ ಪ್ರಾಗಿತಿಹಾಸ ಮತ್ತು ಇತಿಹಾಸ ರಚನೆಯಲ್ಲಿ ಮೂಡಿಸಿವೆ. ಮೌರ್ಯ ಚಕ್ರವರ್ತಿ ಅಶೋಕನ ಬಗೆಗೆ ಹಾಗೂ ಆತನ ಹೆಸರನ್ನೂ ಪ್ರಪ್ರಥಮವಾಗಿ 'ದೇವನಾಂಪಿಯ ಪಿಯದಸಿ ಅಸೋಕಸ' ಎಂದು ಉಲ್ಲೇಖಿತ ಶಾಸನವು ಮಸ್ಕಿಯಲ್ಲಿ ಕಂಡುಬಂದಿದೆ. ಈ ಪ್ರದೇಶವು ಎಷ್ಟರಮಟ್ಟಿಗೆ ಬೆಳೆದುಬಂದಿತ್ತೆಂದರೆ ಆ ಕಾಲದಲ್ಲಿ ರೋಮನ್ನರೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದುದು ಆಕರಗಳಿಂದ ದೃಢವಾಗುತ್ತದೆ.

ಇಂತಹ ಅನೇಕ ವಿಭಿನ್ನ ವಿಚಾರಗಳನ್ನೊಂದಿದ ಮಸ್ಕಿ ಪ್ರದೇಶದಿಂದ ಅನತಿ ದೂರದಲ್ಲಿರುವ ಪ್ರಸ್ತುತ ಸಿಂಧನೂರು ತಾಲೂಕಿನ ಒಂದು ಭಾಗವಾದ ಬಳಗಾನೂರು ಹೋಬಳಿ ಪರಿಸರವು ಅಷ್ಟೇ ಪ್ರಾಮುಖ್ಯತೆಯನ್ನು ಹೊಂದಿದೆ. ಇಲ್ಲಿ ಪ್ರಾಗಿತಿಹಾಸ ಕಾಲದ ಆದಿಮಾನವನ ಕುರುಹುಗಳು ಕಂಡು ಬಂದಿದ್ದು, ಈವರೆಗೆ ಲಭ್ಯವಿರುವ ಆಧಾರಗಳಿಂದ ಪ್ರಾಗಿತಿಹಾಸ ಕಾಲಕ್ಕಿಂತಲೂ ಇತಿಹಾಸ ಕಾಲದಲ್ಲಿ ಹೆಚ್ಚಿನ ಚಟುವಟಿಕೆ ಹೊಂದಿದ್ದುದು ಸ್ಪಷ್ಟವಾಗುತ್ತದೆ. ಬಳಗಾನೂರು ಹೋಬಳಿ ಪರಿಸರವು ಎಡದೊರೆ ನಾಡು, ದೋ-ಅಬ್ ಪ್ರದೇಶವೆಂದು ಕರೆಯಲಾಗುವ ರಾಯಚೂರು ಜಿಲ್ಲೆಯ ಒಂದು ಭಾಗವಾಗಿದೆ. ಫಲವತ್ತಾದ ಮಣ್ಣು, ಉತ್ತಮ ನೀರಾವರಿ ವ್ಯವಸ್ಥೆ ಮತ್ತು ಉತ್ತಮ ಹವಾಗುಣವನ್ನು ಹೊಂದಿರುವ ಆಯಕಟ್ಟಿನ ಈ ಪ್ರದೇಶದ ಕಡೆಗೆ ಅನೇಕ ಅರಸುಮನೆತನಗಳು ಕಣ್ಣು ಹಾಯಿಸಿದವು. ಪ್ರಾಚೀನ, ಮಧ್ಯಕಾಲ, ಆಧುನಿಕ ಕಾಲದ

ಅರಸುಮನೆತನಗಳ ಆಳ್ವಿಕೆಯನ್ನೂ ಈ ಪ್ರದೇಶದಲ್ಲಿ ಕಾಣಬಹುದು. ಇಲ್ಲಿಯವರೆಗೆ ಲಭ್ಯವಿರುವ ಆಧಾರಗಳು ಕರ್ನಾಟಕದ ಲಿಖಿತ ಇತಿಹಾಸವನ್ನು ಮೌರ್ಯರಿಂದ ಆರಂಭಗೊಳಿಸಿದಂತೆ, ಈ ಭಾಗದ ಇತಿಹಾಸಕಾಲವು ಮೌರ್ಯರಿಂದ ಪ್ರಾರಂಭಗೊಳ್ಳುತ್ತದೆ. ಮೌರ್ಯರ ದಕ್ಷಿಣ ರಾಜಧಾನಿ ಸುವರ್ಣಗಿರಿ ಮಸ್ಕಿಯೇ ಆಗಿತ್ತೆಂಬುದರ ಕಡೆಗೆ ಹೆಚ್ಚಿನ ಒಲವು ಇರುವುದರಿಂದ ಈ ಪ್ರದೇಶವೂ ಮೌರ್ಯರ ಆಳ್ವಿಕೆಗೆ ಒಳಪಟ್ಟಿತೆಂದು ತಿಳಿದುಬರುತ್ತದೆ. ಮೌರ್ಯರ ನಂತರ ಪ್ರಾಚೀನ ಕಾಲದಲ್ಲಿ ಶಾತವಾಹನ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮತ್ತು ಕಲಚೂರಿಗಳು ಈ ಪ್ರದೇಶವನ್ನು ಆಳಿದ್ದಾರೆ. ಅಲ್ಲದೆ ಮಾಂಡಳಿಕ, ಸಾಮಂತ, ಅರಸರಾದ ಕರಡಿಕಲ್ಲು ಕದಂಬರು, ಸಿಂಧರು, ಹೈಹಯರ ಆಳ್ವಿಕೆಯನ್ನು ಇಲ್ಲಿ ಕಾಣಬಹುದು. ಮಧ್ಯಕಾಲ ಸಂದರ್ಭದಲ್ಲಿ ವಿಜಯನಗರ, ಬಹಮನಿ ಸುಲ್ತಾನರಿಂದ ತುಂಬಾ ಚಟುವಟಿಕೆ ತೋರಿದ ಈ ಪ್ರದೇಶದಲ್ಲಿ ಕೆಲವೊಂದು ಮಹತ್ವದ ಬದಲಾವಣೆಗಳುಂಟಾದವು. ಆಧುನಿಕ ಕಾಲದಲ್ಲಿ ಪಾಳೆಯಗಾರ, ನಿಜಾಮ, ವಸಾಹತುಶಾಹಿ ಬ್ರಿಟಿಷರ ಮತ್ತು ನಾಡಗೌಡರ ಆಳ್ವಿಕೆಯ ಪ್ರಭಾವ ಈ ಪ್ರದೇಶದಲ್ಲಿ ಕಂಡುಬರುತ್ತದೆ.

ಈ ಎಲ್ಲಾ ಅರಸುಮನೆತನಗಳು ತಮ್ಮ ಆಳ್ವಿಕೆಯ ಕಾಲದಲ್ಲಿ ಸಾಂಸ್ಕೃತಿಕ ಸಂಕೇತಗಳಾಗಿ ನಿರ್ಮಿಸಿ ಬಿಟ್ಟು ಹೋದ ದೇವಾಲಯ, ಶಿಲಾಶಾಸನ, ವೀರಗಲ್ಲು, ಲೌಕಿಕ ವಾಸ್ತುಗಳು ಮತ್ತು ಉತ್ಸವ ಆಚರಣೆ ಮುಂತಾದವುಗಳನ್ನು ಅವಲೋಕಿಸಿ ವಿಶ್ಲೇಷಿಸುವ ಮೂಲಕ ಈ ಪರಿಸರದ ಸಮಗ್ರ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನವಿದು. ಕಲ್ಯಾಣ ಚಾಲುಕ್ಯ, ವಿಜಯನಗರ, ಬಹಮನಿ ಮತ್ತು ಪಾಳೆಯಗಾರರ ಕಾಲದ ವಿಶಿಷ್ಟ ರಚನಾತ್ಮಕ ವಾಸ್ತುವನ್ನುಳ್ಳ ದೇವಾಲಯ, ಶಾಸನ, ವೀರಗಲ್ಲು, ಲೌಕಿಕ ವಾಸ್ತುಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಕಾಣಸಿಗುತ್ತವೆ. ಇವುಗಳಿಂದ ಅವರ ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡಲು ಸಾಧ್ಯವಿದೆ.

ಬಳಗಾನೂರು ಹೋಬಳಿ ಪರಿಸರ ಪುರಾತತ್ವ ದೃಷ್ಟಿಯಿಂದ, ಮೌಖಿಕ ಚರಿತ್ರೆಯಿಂದ, ಐತಿಹ್ಯಗಳಿಂದ ಹಾಗೂ ರಾಜಕೀಯ, ಶಾಸನಶಿಲ್ಪ, ಆಡಳಿತ ಮುಂತಾದ ಹಲವು ಚಾರಿತ್ರಿಕ ಅಂಶಗಳ ದೃಷ್ಟಿಯಿಂದ ಮಹತ್ವವುಳ್ಳದ್ದಾಗಿದೆ. ಇಲ್ಲಿ ಬೌದ್ಧ, ಜೈನ, ಶೈವ, ವೈಷ್ಣವ ಮತ್ತು ಹಿಂದೂ-ಮುಸ್ಲಿಂ ಧರ್ಮಗಳ ಪ್ರಭಾವವನ್ನು ಕಾಣಬಹುದು. ಅವರ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸ್ಥಿತಿಗತಿಯೊಂದಿಗೆ ಅವುಗಳ ನಡುವಿನ ಬಾಂಧವ್ಯವನ್ನು ಕುರಿತು ಚರ್ಚಿಸಲಾಗಿದೆ. ಹಾಗೆಯೇ ಇಲ್ಲಿನ ಆರ್ಥಿಕ ಪರಿಸ್ಥಿತಿಯ ಕಡೆಗೆ ಗಮನಹರಿಸಲಾಗಿದೆ. ಇನ್ನೂ ಈ ಭಾಗದಲ್ಲಿ ಪರಂಪರಾನುಗತವಾಗಿ ನಡೆದುಕೊಂಡು ಬಂದ ಜಾತ್ರೆ, ಉತ್ಸವ, ಆಚರಣೆ, ಹಬ್ಬ-ಹರಿದಿನಗಳ ಬಗ್ಗೆ ಒತ್ತುಕೊಡಲಾಗಿದೆ. ಒಟ್ಟಾಗಿ ಇಲ್ಲಿಯವರೆಗೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬಳಗಾನೂರು ಪರಿಸರದ ಚರಿತ್ರೆಯನ್ನು ವಿಶ್ಲೇಷಿಸುವ ಪ್ರಯತ್ನವನ್ನು ಈ ಅಧ್ಯಯನದ ಮೂಲಕ ಮಾಡಲಾಗುವುದು.

### ಅಧ್ಯಯನದ ಉದ್ದೇಶ

ಯಾವುದೇ ಒಂದು ವಿಷಯ ಕುರಿತು ನಡೆಯುವ ನಿರ್ದಿಷ್ಟವಾದ ಅಧ್ಯಯನಕ್ಕೆ ಉದ್ದೇಶ ಮುಖ್ಯ. ಅದರಂತೆ, ಬಳಗಾನೂರು ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನವು ಕೂಡ ಉದ್ದೇಶವನ್ನು ಒಳಗೊಂಡಿದೆ. ಬಳಗಾನೂರು ಪರಿಸರವು ಹಲವು ಸಾಂಸ್ಕೃತಿಕ ಅಂಶಗಳನ್ನು ಹೊಂದಿದ್ದರೂ ಇದು ಇತಿಹಾಸ ಪುಟಗಳಿಂದ

ಅಜ್ಞಾತವಾಗಿ ಉಳಿದುಕೊಂಡು ಬಂದಿದ್ದು ವಿಸ್ತಾರವಾದ ಅಧ್ಯಯನಗಳು ನಡೆದಿರುವುದಿಲ್ಲ. ಇಂತಹ ಪ್ರದೇಶದ ಮೇಲೆ ಬೆಳಕು ಚೆಲ್ಲುವುದು ಪ್ರಸ್ತುತ ಅಧ್ಯಯನದ ಮೊದಲ ಉದ್ದೇಶವಾಗಿದೆ.

ಇಲ್ಲಿ ಪ್ರಾಗಿತಿಹಾಸ ಕಾಲದ ಭೌತಿಕ ಚಹರೆಗಳಿದ್ದು, ಈಗಾಗಲೇ ಇಂಥ ಅನೇಕ ಕುರುಹುಗಳು ನಾಶವಾಗಿವೆ. ಇತಿಹಾಸ ಕಾಲ ಸಂದರ್ಭದಲ್ಲಿ ವಿವಿಧ ಅರಸುಮನೆತನಗಳು ಈ ಪ್ರದೇಶವನ್ನು ಆಳ್ವಿಕೆ ಮಾಡಿದ್ದಾರೆಂಬುದು ಸ್ಪಷ್ಟ. ಈ ಮನೆತನಗಳು ತಮ್ಮ ಸಂಸ್ಕೃತಿಯನ್ನು ಪರಿಚಯಿಸುವ ಕುರುಹುಗಳಾಗಿ ತಮ್ಮ ಆಡಳಿತದ ಕಾಲಾವಧಿಯಲ್ಲಿ ನಿರ್ಮಿಸಿ ಬಿಟ್ಟು ಹೋದ ದೇವಾಲಯ, ವೀರಗಲ್ಲು, ಶಾಸನ, ಮೂರ್ತಿಶಿಲ್ಪ, ಕೋಟೆ-ಕೊತ್ತಲ ಹಾಗೂ ಕೆರೆ-ಬಾವಿ ಮೊದಲಾದ ಪ್ರಾಚ್ಯಾವಶೇಷಗಳು ಕಂಡುಬರುತ್ತಿದ್ದು, ಪ್ರತಿಯೊಂದು ಸ್ಮಾರಕವೂ ತನ್ನದೇ ಆದ ಔಚಿತ್ಯಪೂರ್ಣ ಐತಿಹ್ಯವನ್ನು ಹೊಂದಿದೆ. ಇವು ತಮ್ಮ ಸಂಸ್ಕೃತಿಯನ್ನು ಇಂದಿಗೂ ಜೀವಂತವಾಗಿರಿಸಿವೆ. ಇಂತಹ ಸ್ಮಾರಕಗಳು ಇಲ್ಲಿನ ಜನರ ಅಜ್ಞಾನ, ಅಜಾಗರೂಕತೆ, ಗಣಿಗಾರಿಕೆ ಮೊದಲಾದ ಸ್ವಾರ್ಥಕ್ಕೆ ಸಿಲುಕಿವೆ. ಇಂತಹ ಸಾಂಸ್ಕೃತಿಕ ಹೆಜ್ಜೆಗುರುತುಗಳನ್ನು ಕಾಲಗರ್ಭದಲ್ಲಿ ಪ್ರಕೃತಿವಿಕೋಪ ಗಳಿಂದ ನಾಶವಾಗುವ ಮುನ್ನ ದಾಖಲಿಸಿ, ವಿಶ್ಲೇಷಿಸುವ ಕಾರ್ಯ ಇಂದು ಜರೂರಾಗಿ ಆಗಬೇಕಾಗಿದೆ. ಈ ಹೋಬಳಿ ಪರಿಸರದ ಪ್ರತಿಯೊಂದು ಹಳ್ಳಿಯೂ ವಿಶಿಷ್ಟ ಸ್ಥಳನಾಮ ಮತ್ತು ಐತಿಹ್ಯವನ್ನು ಹೊಂದಿವೆ. ಇಲ್ಲಿನ ಉತ್ಸವ ಆಚರಣೆಗಳ ಹಿನ್ನೆಲೆಯೇನು? ಹೀಗೆ ಸಂಸ್ಕೃತಿಯನ್ನು ಬಿಂಬಿಸುವ ಪ್ರತಿಯೊಂದು ಅಂಶಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಜೊತೆಗೆ ಮುಂದಿನ ಪೀಳಿಗೆಗೆ ದಾಖಲೆಯನ್ನು ಒದಗಿಸುವುದು ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ.

### ಅಧ್ಯಯನದ ವ್ಯಾಪ್ತಿ

ಸಂಶೋಧನೆಯ ಪ್ರತಿಯೊಂದು ಅಧ್ಯಯನವನ್ನು ನೋಡಿದಾಗ ಅದು ಸ್ಪಷ್ಟವಾಗಿ ಗುರುತಿಸಲಾಗಿರುವ ವ್ಯಾಪ್ತಿ, ಮೇರೆಗಳನ್ನು ಹೊಂದಿರುತ್ತದೆ. ಸರಿಯಾಗಿ ಗುರುತಿಸಿರುವ ಎಲ್ಲೆಗಳಿಲ್ಲದ ಅಧ್ಯಯನ ಕ್ಷೇತ್ರವನ್ನು ಪ್ರವೇಶಿಸುವುದು ಅಪಾಯಕರ. ಅದೊಂದು 'ಭೂಪಟವಿಲ್ಲದೆ ಸಮುದ್ರದಲ್ಲಿ ಚಲಿಸುವ ಹಡಗಿನಂತೆ'. ವಿಷಯಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಸಂಪೂರ್ಣವಾದ ಅರಿವನ್ನು ಗಳಿಸಬೇಕಾದರೆ ಅಧ್ಯಯನದ ವ್ಯಾಪ್ತಿಯನ್ನು ನಿರ್ಧರಿಸಬೇಕಾದುದು ಅವಶ್ಯಕ. ಈ ನಿಟ್ಟಿನಲ್ಲಿ ಪ್ರಸ್ತುತ ಬಳಗಾನೂರು ಹೋಬಳಿ ಪರಿಸರ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕ ಮತ್ತು ಕಾಲಾವಧಿ ದೃಷ್ಟಿಯಿಂದ ನಿರ್ಧರಿಸಿಕೊಳ್ಳಲಾಗಿದೆ. ಭೌಗೋಳಿಕವಾಗಿ ಇದು ಬಳಗಾನೂರು, ಬೆಳ್ಳಿಗನೂರು, ಬುದ್ದಿನ್ನಿ, ಜಾಲವಾಡಿಗಿ, ಗೌಡನಬಾವಿ, ಹುಲ್ಲೂರು, ಸುಂಕನೂರು, ಚಿಕ್ಕಕಡಬೂರು, ಕ್ಯಾತನಹಟ್ಟಿ, ಉದ್ಬಾಳ(ಉ), ದಿದ್ದಿಗಿ, ರಾಮತ್ನಾಳ, ಬನ್ನಿಗನೂರು, ಜವಳಗೆರೆ, ಸುಲ್ತಾನಪುರ, ಕಲ್ಯಾಣ ಹುಡೇವು ಮತ್ತು ಬೇಚರಾಕು ಹಳ್ಳಿಗಳಾದ ಗೋವಿಂದನಾಯಕನ ದೊಡ್ಡಿ, ಮಸ್ಕಿಹಟ್ಟಿ, ಬೆಂಡಲಹಟ್ಟಿ, ನಾಗನಾಸ್ತಿ (ಹಟ್ಟಿ), ಜುಜಲಾಪುರ, ಶಂಕರಬಂಡಿ-ಡಿ, ಕೊಂಗನಾಯಕನದೊಡ್ಡಿಯೊಂದಿಗೆ ಆರು ಆಂಧ್ರ ಕ್ಯಾಂಪ್‌ಗಳನ್ನು ಹೊಂದಿದೆ. ಇವೆಲ್ಲ ಗ್ರಾಮಗಳಿಗೆ ಗಡಿಯಾಗಿ ಉತ್ತರ ಭಾಗದಲ್ಲಿ ಮಸ್ಕಿಹಳ್ಳ, ಪೂರ್ವಕ್ಕೆ ವಲ್ಕಂದಿನ್ನಿ ಹೋಬಳಿ ಮತ್ತು ರಾಜ್ಯಹೆದ್ದಾರಿ-೨೩, ದಕ್ಷಿಣದಲ್ಲಿ ರಾಜ್ಯ ಹೆದ್ದಾರಿ-೧೯ ಹಾಗೂ ಕಾಕಮಾನಹಳ್ಳ ಮತ್ತು ಪಶ್ಚಿಮ ದಿಕ್ಕಿನಲ್ಲಿ ಮಸ್ಕಿ ಮೂಲಕವಾಗಿ ಮುಂದೆ ರಾಯಚೂರಿಗೆ ಹರಿದುಹೋಗುವ ತುಂಗಭದ್ರಾ ಎಡದಂಡೆ ಕಾಲುವೆಗಳನ್ನು ಗುರುತಿಸಿಕೊಳ್ಳಲಾಗಿದೆ.

ಕಾಲಾವಧಿಯಿಂದಾಗಿ ಪ್ರಾಗಿತಿಹಾಸ ಕಾಲದಿಂದ ಹೈದರಾಬಾದ್ ನಿಜಾಮನ ಅವನತಿಯ ಕಾಲದವರೆಗೆ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

## ಅಧ್ಯಯನದ ವಿಧಾನ

'ಬಳಗಾನೂರು ಹೋಬಳಿ ಪರಿಸರ: ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವನ್ನು ಇಟ್ಟುಕೊಂಡು ಕೈಗೊಂಡಿರುವ ಸಂಶೋಧನೆಯು ಕ್ಷೇತ್ರಕಾರ್ಯ ಆಧಾರಿತವಾದುದು. ಅಧ್ಯಯನದ ಪ್ರತಿಯೊಂದು ಹಳ್ಳಿಗೆ ಸ್ವತಃ ಭೇಟಿ ನೀಡಿ ಅಲ್ಲಿರುವ ಸ್ಮಾರಕ ಮತ್ತು ಪ್ರಾಚ್ಯಾವಶೇಷಗಳನ್ನು ಅವಲೋಕಿಸಿ ದಾಖಲಿಸಿಕೊಳ್ಳುವುದರ ಜೊತೆಗೆ ಅವುಗಳ ಛಾಯಾಚಿತ್ರಗಳನ್ನು ಪಡೆದುಕೊಂಡು ಕಾಲಾನುಕ್ರಮದಲ್ಲಿ ವಿಂಗಡಿಸಿ ಸಂಶೋಧನೆಗೆ ಒಳಪಡಿಸಿಕೊಳ್ಳಲಾಗಿದೆ. ಅಧ್ಯಯನಕ್ಕಾಗಿ ಈಗಾಗಲೇ ಈ ಪರಿಸರದ ಕೆಲವೊಂದು ಗ್ರಾಮ, ವಿಷಯಗಳ ಕುರಿತಾದ ಬಿಡಿ ಅಧ್ಯಯನಗಳನ್ನು ಹಾಗೂ ಪ್ರಾಥಮಿಕ ಆಕರಗಳ ಜೊತೆಗೆ ಆನುಷಂಗಿಕ ಆಕರಗಳಾಗಿ ಶಾಸನ ಸಂಪುಟ, ಗ್ಯಾಸೆಟಿಯರ್‌ಗಳು ಸಹಾಯಕವಾಗಿವೆ. ಅಲ್ಲದೇ ಮೌಖಿಕ ಆಕರಗಳನ್ನು ಅಧ್ಯಯನಕ್ಕೆ ಗಂಭೀರವಾಗಿ ಬಳಸಿಕೊಳ್ಳುವ ಮೂಲಕವಾಗಿ ಐತಿಹ್ಯ, ಜನಪದ ಆಕರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅವಲೋಕಿಸಲಾಗಿದೆ.

## ಅಧ್ಯಯನದ ಸ್ವರೂಪ

ಈ ಮೇಲಿನ ಅಧ್ಯಯನದ ವಿಧಾನದಲ್ಲಿ ಗಮನಿಸಿದಂತೆ ಹಲವು ವಿಧಾನಗಳನ್ನು ಅನುಸರಿಸಿ ಪ್ರತ್ಯೇಕಿಸಲಾದ ವಿಷಯಗಳನ್ನಿಟ್ಟುಕೊಂಡು ಪ್ರಸ್ತುತ ಅಧ್ಯಯನದ ಪ್ರಬಂಧದಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ. ಈ ಆರು ಅಧ್ಯಾಯಗಳು ಒಳಗೊಂಡ ವಿಷಯ ಮತ್ತು ತಾತ್ವಿಕ ಸ್ವರೂಪ ಕೆಳಕಂಡಂತಿದೆ.

ಒಂದನೇ ಅಧ್ಯಾಯ ಪ್ರಸ್ತಾವನೆಯಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಕುರಿತು ಸ್ಪಷ್ಟೀಕರಿಸಲಾಗಿದೆ.

ಎರಡನೇ ಅಧ್ಯಾಯ ಭೌಗೋಳಿಕತೆ ಮತ್ತು ಇತಿಹಾಸ ಕಾಲ. ಈ ಅಧ್ಯಾಯದಲ್ಲಿ ಬಳಗಾನೂರು ಹೋಬಳಿ ಪರಿಸರದ ಭೌಗೋಳಿಕ ಲಕ್ಷಣಗಳ ಜೊತೆಗೆ ಇತಿಹಾಸ ಕಾಲದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳ ಕುರಿತು ಚರ್ಚಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಸ್ಥಳನಾಮದೊಂದಿಗೆ ಇಲ್ಲಿ ರೂಢಿಯಲ್ಲಿರುವ ಐತಿಹ್ಯಗಳ ಬಗ್ಗೆ ತಿಳಿಸಲಾಗಿದೆ.

ನಾಲ್ಕನೇ ಅಧ್ಯಾಯ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ದೇವಾಲಯ ವಾಸ್ತುಶಿಲ್ಪ, ಲೌಕಿಕ ವಾಸ್ತುವಿನಲ್ಲಿ ಕೋಟೆ - ಕೊತ್ತಲ, ಕೆರೆ - ಬಾವಿ, ಮೂರ್ತಿಶಿಲ್ಪ ಮತ್ತು ಶಾಸನಶಿಲ್ಪಗಳ ಕುರಿತು ವಿವರಣಾತ್ಮಕವಾಗಿ ಅಭ್ಯಸಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸಮಾಜ ಮತ್ತು ಧರ್ಮ ಎಂಬ ಅಂಶವನ್ನು ಮುಖ್ಯವಾಗಿಟ್ಟುಕೊಂಡು, ಸಾಂಸ್ಕೃತಿಕ ವಿಚಾರಗಳಾದ ಸಾಮಾಜಿಕ ಸ್ಥಿತಿಗತಿ, ಧಾರ್ಮಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಯೊಂದಿಗೆ ಆ ಭಾಗದ ವಿಶಿಷ್ಟ ಉತ್ಸವ, ಆಚರಣೆಗಳ ಕುರಿತು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಆರನೇ ಅಧ್ಯಾಯ ಪ್ರಸ್ತುತ ಅಧ್ಯಯನದ ಸಂಕ್ಷಿಪ್ತರೂಪವಾದ ಸಮಾರೋಪವಾಗಿದೆ.

ಅಧ್ಯಯನದ ಕೊನೆಯ ಭಾಗದಲ್ಲಿ ಅಂದರೆ ಅನುಬಂಧದಲ್ಲಿ ಅಧ್ಯಯನಕ್ಕಾಗಿ ಬಳಸಿಕೊಂಡ ವಿಶ್ವಕೋಶ, ಗ್ಯಾಸೆಟಿಯರ್, ಶಾಸನಸಂಪುಟ, ಕೃತಿ, ಲೇಖನ ಮತ್ತು ಅಂತರ್ಜಾಲ ವಿವರಣೆಯನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ಹಾಗೆಯೇ ಅನುಬಂಧವು ತಲವಿನ್ಯಾಸ, ಛಾಯಾಚಿತ್ರಗಳನ್ನು ಒಳಗೊಂಡಿದೆ.

**ಅಧ್ಯಯನದ ಸಮೀಕ್ಷೆ**

ಈವರೆಗೆ ಬಳಗಾನೂರು ಹೋಬಳಿ ಪರಿಸರದ ಬಗ್ಗೆ ಪೂರ್ಣಪ್ರಮಾಣದಲ್ಲಿ ವ್ಯವಸ್ಥಿತವಾಗಿ ಅಧ್ಯಯನಗಳು ನಡೆದು ಬಂದಿರುವುದು ತೀರಾ ವಿರಳ. ಆದರೆ ಈ ಪರಿಸರದ ಕುರಿತಾಗಿ ಕೆಲ ವಿಚಾರಗಳ ಕುರಿತು ಬಿಡಿಬಿಡಿಯಾಗಿ ಅಲ್ಲಲ್ಲಿ ನಡೆದಿರುವ ಅಧ್ಯಯನಗಳು ಕಾಣಸಿಗುತ್ತವೆ. ಅವು ಈ ಕೆಳಗಿನಂತಿವೆ.

ಸಿ.ಎಸ್. ಪಾಟೀಲ್. ಅವರ ಟೆಂಪಲ್ಸ್ ಆಫ್ ಬಳ್ಳಾರಿ ಆ್ಯಂಡ್ ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಬಳಗಾನೂರು ಪ್ರದೇಶದ ಪ್ರಮುಖ ದೇವಾಲಯ ಲಕ್ಷ್ಮೀನಾರಾಯಣ ದೇವಾಲಯದ ವಾಸ್ತುವಿನ ವಿವರಣೆಯನ್ನು ನೀಡಲಾಗಿದೆ.

ದೇವರಕೊಂಡಾರೆಡ್ಡಿ ಅವರು ಸಂಪಾದಿಸಿರುವ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭ 'ರಾಯಚೂರು ಜಿಲ್ಲೆ' ಶಾಸನ ಸಂಪುಟದಲ್ಲಿ ಬಳಗಾನೂರಿನ ಏಳು ದಿದ್ದಿಗಿ, ಸುಂಕನೂರು, ಬನ್ನಿಗನೂರಿನ ಒಂದೊಂದು ಶಾಸನಗಳನ್ನು ವಿವರಪೂರ್ವಕವಾಗಿ ದಾಖಲಿಸಲಾಗಿದೆ.

ಸಿ.ಎಸ್.ವಾಸುದೇವನ್ ಅವರು 'ಕರ್ನಾಟಕ ದೇವಾಲಯಕೋಶ : ರಾಯಚೂರು ಜಿಲ್ಲೆ' ಪುಸ್ತಕದಲ್ಲಿ ಜಿಲ್ಲೆಯ ದೇವಾಲಯಗಳ ಜೊತೆಗೆ ಬಳಗಾನೂರು ಪರಿಸರದ ದೇವಾಲಯಗಳ ಕುರಿತು ಚರ್ಚಿಸಿದ್ದಾರೆ.

ಚನ್ನಬಸವ ಹಿರೇಮಠ ಅವರ ತಮ್ಮ ಸತ್ಯದ ಹಾದಿ ಪುಸ್ತಕದಲ್ಲಿ ಉದ್ಬಾಳ(ಉ), ಜವಳಗೆರೆ ನಾಡಗೌಡ ಮನೆತನಗಳ ಕುರಿತು ವಿವರಣೆಯನ್ನು ನೀಡಿರುವ ಪ್ರಯತ್ನವನ್ನು ಮಾಡಿದ್ದಾರೆ.

ಅಮರೇಶ ಯತಗಲ್ ಅವರು ಸಂಪಾದಿಸಿರುವ 'ದೋ-ಅಬ್ ರಾಯಚೂರು ಇತಿಹಾಸ' ಪುಸ್ತಕದಲ್ಲಿ ಸ್ವತಃ ಜಿಲ್ಲೆಯ ಅಗ್ರಹಾರಗಳು ಮತ್ತು ಬ್ರಹ್ಮಪುರಿಗಳು ಕುರಿತ ಲೇಖನದಲ್ಲಿ ಅಗ್ರಹಾರ ಬಳಗಾನೂರು ಮತ್ತು ದಿದ್ದಿಗಿ ಗ್ರಾಮಗಳ ಬಗ್ಗೆ ವಿವರಿಸಿದ್ದಾರೆ. ರಡ್ಡೆಪ್ಪಹಳ್ಳಿಯವರು ಬಳಗಾನೂರಿನ ಯಲ್ಲಮ್ಮ ಗುಡಿ ಮತ್ತು ನಾಗಭೂಷಣ ದೇವಾಲಯಗಳನ್ನು ಪರಿಚಯಿಸಿದ್ದಾರೆ.

ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರು 'ಲಿಂಗಾಯತ ನಾಡಗೌಡ ಮನೆತನಗಳು: ರಾಣಿಯರು (ರಾಯಚೂರು ಜಿಲ್ಲೆ)' ಪುಸ್ತಕದಲ್ಲಿ ಜವಳಗೆರೆ ನಾಡಗೌಡ ಮನೆತನದ ಆಡಳಿತ ಕುರಿತು ಚರ್ಚಿಸಿದ್ದಾರೆ.

ಚನ್ನಬಸಪ್ಪ ಬಿ. ಅವರು ಬಳಗಾನೂರಿನ ಅಪ್ರಕಟಿತ ಶಾಸನ ಎಂಬ ಲೇಖನದಡಿಯಲ್ಲಿ ಯಲ್ಲಮ್ಮ ದೇವಿಗೆ ಕೊಟ್ಟ ದಾನದ ವಿವರಣೆಯನ್ನು ನೀಡಿದ್ದಾರೆ. ಇದು ಇತಿಹಾಸ ದರ್ಶನದಲ್ಲಿ ಪ್ರಕಟಗೊಂಡಿದೆ.

ದೇವರಕೊಂಡಾರೆಡ್ಡಿಯವರು ದಿದ್ದಿಗಿಯ ಕಾಮಕೋಟಿ ಭಳಾರಿ ಶಾಸನ ಕುರಿತು ಲೇಖನವನ್ನು ಬರೆದಿದ್ದಾರೆ. ಇದು ಇತಿಹಾಸ ದರ್ಶನ ೧೪/೨೦೦೪ರಲ್ಲಿ ಪ್ರಕಟಗೊಂಡಿದೆ.

ಕೆ.ಬಿ. ಶಿವತಾರಕ್ ಅವರು ತಮ್ಮ ಕರ್ನಾಟಕದ ಪುರಾತತ್ವ ನೆಲೆಗಳು ಎಂಬ ಪುಸ್ತಕದಲ್ಲಿ ರಾಯಚೂರು ಜಿಲ್ಲೆಯ ಪ್ರಾಗಿತಿಹಾಸಕಾಲದ ನೆಲೆಗಳನ್ನು ಗುರುತಿಸುವ ಜೊತೆಗೆ ಹುಲ್ಲೂರು ಬೃಹತ್ ಶಿಲಾಗೋರಿ ನೆಲೆಯನ್ನು ದಾಖಲಿಸಿದ್ದಾರೆ.

ಡಿ.ಕೆ. ಭೀಮಸೇನರಾಯರು ತಮ್ಮ ಸಾಹಿತ್ಯಾವಲೋಕನ ಕೃತಿಯಲ್ಲಿ ದಿದ್ದಿಗಿ ಗ್ರಾಮದ ಸ್ಥಳನಾಮ ಮತ್ತು ಶಾಸನಗಳ ಬಗ್ಗೆ ತಿಳಿಸಿದ್ದಾರೆ.

ಕೇದಾರನಾಥ ಹಿರೇಮಠ (ಸಂ) ಅವರ 'ಪಂಪಕಿರಣ' ಪುಸ್ತಕದಲ್ಲಿ ಬಳಗಾನೂರಿನ ಐತಿಹಾಸಿಕ ಹಿನ್ನೆಲೆ, ಜನಜೀವನ, ಸಾಹಿತ್ಯದ ಕುರಿತು ಚರ್ಚಿಸಿದ್ದಾರೆ.

ಇಷ್ಟು ವಿಚಾರಗಳ ಬಗ್ಗೆ ಈ ಮೇಲಿನ ಅಧ್ಯಯನಗಳು ತಿಳಿಸುತ್ತವೆ. ಆದರೆ ಇವು ಬಳಗಾನೂರು ಪರಿಸರದ ಸಂಪೂರ್ಣ ಚರಿತ್ರೆಯನ್ನು ಖಚಿತವಾಗಿ ನಿರ್ಮಿಸುವಲ್ಲಿ ವಿಫುಲಗೊಂಡಿವೆ. ಈ ನಿಟ್ಟಿನಲ್ಲಿ 'ಬಳಗಾನೂರು ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ಆ ಭಾಗದ ಅಧ್ಯಯನ ಕೊರತೆಯನ್ನು ನೀಗಿಸುವ ಪ್ರಯತ್ನ ಮಾಡಲಾಗಿದೆ.

❑❑❑

## ಅಧ್ಯಾಯ : ಎರಡು

# ಭೌಗೋಳಿಕತೆ ಮತ್ತು ಇತಿಹಾಸ

---

೨.೧. ಭೌಗೋಳಿಕತೆ

೨.೨. ಇತಿಹಾಸ

# ಅಧ್ಯಾಯ : ಎರಡು

# ಭೌಗೋಳಿಕತೆ ಮತ್ತು ಇತಿಹಾಸ

ಪ್ರಸ್ತುತ ಅಧ್ಯಾಯದಲ್ಲಿ ಬಳಗಾನೂರು ಹೋಬಳಿ ಪರಿಸರದ ಭೌಗೋಳಿಕತೆ ಮತ್ತು ಇತಿಹಾಸದ ಕುರಿತಾಗಿ ಚರ್ಚಿಸಲಾಗಿದೆ. ಇತಿಹಾಸವನ್ನು ಅಧ್ಯಯನದ ಅನುಕೂಲತೆ ದೃಷ್ಟಿಯಿಂದ ಪ್ರಾಗಿತಿಹಾಸ ಮತ್ತು ಇತಿಹಾಸವೆಂದು ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ.

## ೨.೧. ಭೌಗೋಳಿಕತೆ

ಭೂಗೋಳಶಾಸ್ತ್ರವೆನ್ನುವ ರಂಗಭೂಮಿಯ ಮೇಲೆ ಇತಿಹಾಸದ ನಾಟಕವನ್ನು ಆಡಲಾಗುತ್ತದೆ. ಇತಿಹಾಸಕ್ಕೆ ಭೂಗೋಳಶಾಸ್ತ್ರ ಮತ್ತು ಕಾಲಗಣನಾಶಾಸ್ತ್ರ ಕಣ್ಣುಗಳಿದ್ದಂತೆ ಜಗತ್ತಿನ ರಾಷ್ಟ್ರಗಳ ಸ್ವರೂಪ, ಸ್ವಭಾವ ಹಾಗೂ ವಿಶಿಷ್ಟ ಚಟುವಟಿಕೆ ಇತ್ಯಾದಿಗಳನ್ನು ನಿರ್ಧರಿಸುವ ಕಾರ್ಯದಲ್ಲಿ ಭೌಗೋಳಿಕಾಂಶಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ. ಮಾನವನು ಬದುಕುವುದಕ್ಕಾಗಿ ಉತ್ತಮ ಭೌಗೋಳಿಕ ಪರಿಸರವನ್ನು ಶೋಧಿಸಿ ಅಲ್ಲಿ ವಾಸ ಮಾಡುತ್ತಾನೆ. ಒಂದು ದೇಶದ ಅಸ್ತಿತ್ವಕ್ಕೆ ಭೌಗೋಳಿಕ ಪರಿಸರ, ಸರ್ಕಾರ, ಸಂವಿಧಾನ ಹಾಗೂ ಪರಮಾಧಿಕಾರಗಳು ಅವಶ್ಯಕವೆಂದು ರಾಜ್ಯಶಾಸ್ತ್ರ ಗ್ರಂಥಗಳು ಹೇಳಿವೆ.[೧] ಭೌಗೋಳಿಕ ಅಂಶಗಳಾದ ಪರ್ವತಶ್ರೇಣಿ, ಬೆಟ್ಟ ಗುಡ್ಡ, ನದಿ, ನದಿಬಯಲು, ಸರೋವರ, ತೀರ ಪ್ರದೇಶ, ಮಣ್ಣಿನ ರಚನೆ, ನಿಧಿ ನಿಕ್ಷೇಪ, ವಾಯುಗುಣ, ಹವಾಗುಣ, ಉಷ್ಣಾಂಶ, ರೇಖಾಂಶ ಮುಂತಾದವುಗಳು ಮಾನವನ ಸಂಸ್ಕೃತಿಯ ಮೇಲೆ ನೇರವಾದ ಪರಿಣಾಮವನ್ನು ಬೀರುತ್ತವೆ. ಉತ್ತಮ ಭೌಗೋಳಿಕ ಪರಿಸರ ಆ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಹೆಚ್ಚಿಸಿ, ಜನಜೀವನ, ನಾಗರಿಕತೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಸಹಾಯಕಾರಿ ಯಾಗುತ್ತದೆ. ಭೌಗೋಳಿಕ ಅಂಶಗಳು ಒಂದು ಉತ್ತಮ ಸಂಸ್ಕೃತಿ ಬೆಳೆದು ಬರುವಲ್ಲಿ ಎಷ್ಟು ಸಹಕಾರಿ ಮತ್ತು ಅವಶ್ಯಕವಾಗಿರುತ್ತವೆಯೋ ಹಾಗೆಯೇ ಅವುಗಳಿಂದಾಗಿ ಕೆಲವು ವಿಶಿಷ್ಟ ಸಂಸ್ಕೃತಿಗಳು ನಾಶವಾಗಿದ್ದನ್ನು ಇತಿಹಾಸದಲ್ಲಿ ನೋಡುತ್ತೇವೆ(ಉದಾಹರಣೆಗೆ ಸಿಂಧೂ ನಾಗರಿಕತೆ ಮುಂತಾದವು.).

ಇತಿಹಾಸಪೂರ್ವ ಮತ್ತು ಇತಿಹಾಸ ಕಾಲದಲ್ಲಿ ಮಾನವನು ವಾಸಕ್ಕಾಗಿ ಸೂಕ್ತ ಪ್ರದೇಶ ಹುಡುಕುತ್ತಿದ್ದುದನ್ನು ಗಮನಿಸಿದಾಗ ಭೌಗೋಳಿಕ ಅಂಶಗಳ ಪ್ರಾಮುಖ್ಯತೆ ಸ್ಪಷ್ಟವಾಗುತ್ತದೆ. ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಪೂರ್ವದಲ್ಲಿ ಭೌಗೋಳಿಕ ವೈಶಿಷ್ಟ್ಯತೆಗಳನ್ನು ಮರೆತು ಇತಿಹಾಸ ವಿವೇಚಿಸಲು ಸಾಧ್ಯವಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದಾಗಿ ಬಳಗಾನೂರು ಹೋಬಳಿ ಪರಿಸರದ ರಾಜಕೀಯ

ಇತಿಹಾಸ ಮತ್ತು ಸಾಂಸ್ಕೃತಿಕ ವಿವೇಚನೆಯ ಸಂದರ್ಭದಲ್ಲಿ ಈ ಪರಿಸರದ ಭೌಗೋಳಿಕ ಅಂಶಗಳನ್ನು ತಿಳಿಯಲು ಪ್ರಯತ್ನಿಸಿದೆ. ಅಧ್ಯಯನ ದೃಷ್ಟಿಯಿಂದ ಇದು ಅನಿವಾರ್ಯ ಮತ್ತು ಅವಶ್ಯಕವೂ ಆಗಿದೆ.

### ೨.೧.೧. ಭೌಗೋಳಿಕ ಪ್ರದೇಶ

ಬಳಗಾನೂರು ಹೋಬಳಿಯು ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಒಂದು ಭಾಗ. ಇದು ತಾಲೂಕಿನ ವಾಯುವ್ಯ ದಿಕ್ಕಿನಲ್ಲಿದ್ದು ಜಿಲ್ಲಾ ಕೇಂದ್ರದಿಂದ ೭೯.೭ ಕಿ.ಮೀ. ತಾಲೂಕು ಕೇಂದ್ರದಿಂದ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಈ ಪ್ರದೇಶವು ೧೫°, ೨೬°, ೨೩° ಡಿಗ್ರಿ ಉತ್ತರ ಅಕ್ಷಾಂಶ ಮತ್ತು ೭೦°, ೪೫°, ೪.೫° ಡಿಗ್ರಿ ಪೂರ್ವರೇಖಾಂಶಗಳ[೧] ನಡುವೆ ಪಸರಿಸಿಕೊಂಡಿದೆ. ಈ ಹೋಬಳಿಯು ಉತ್ತರಕ್ಕೆ ಮಸ್ಕಿಹಿರೆಹಳ್ಳ, ಪೂರ್ವಕ್ಕೆ ಸಿಂಧನೂರಿನಿಂದ ಜವಳಗೆರೆ ಮೂಲಕವಾಗಿ ರಾಯಚೂರಿಗೆ ಹಾದು ಹೋಗುವ ರಾಜ್ಯ ಹೆದ್ದಾರಿ ೨೩ ಹಾಗೂ ವಲ್ಕಂದಿನ್ನಿ ಹೋಬಳಿ, ದಕ್ಷಿಣಕ್ಕೆ ಕಾಕಮಾನಹಳ್ಳ ಮತ್ತು ಪಶ್ಚಿಮಕ್ಕೆ ಗುಡದೂರು ಹೋಬಳಿ ಹಾಗೂ ಐತಿಹಾಸಿಕ ಮಸ್ಕಿ ಪ್ರದೇಶಗಳಿಂದ ಸುತ್ತುವರಿಯಲ್ಪಟ್ಟಿದೆ. ಮಸ್ಕಿಯ ಹಿರೆಹಳ್ಳದ ಬಲದಂಡೆಯ ಮೇಲಿರುವ ಈ ಹೋಬಳಿಯು ಲಿಂಗಸೂಗೂರು ಮತ್ತು ಮಾನ್ವಿ ತಾಲೂಕುಗಳ ಗಡಿಭಾಗಕ್ಕೆ ಅಂಟಿಕೊಂಡಿದೆ. ಇದು ಸಿಂಧನೂರು ತಾಲೂಕಿನಲ್ಲಿ ವಿಸ್ತಾರವಾದ ಹಾಗೂ ಪ್ರಮುಖ ಹೋಬಳಿಯಾಗಿದೆ.

ಈ ಪ್ರದೇಶವು ಒಟ್ಟು ೨೧,೫೮೯.೧೦ ಎಕರೆ ಭೂಮಿಯಷ್ಟು ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಇದರಲ್ಲಿ ೨೦,೨೬೭.೨೪ ಎಕರೆ ಭೂಮಿಯು ಸಾಗುವಳಿಗೊಳಪಟ್ಟಿದ್ದರೆ, ೩೨೧ ಎಕರೆ ಭೂಮಿಯು ಸಾಗುವಳಿಗೆ ಯೋಗ್ಯವಾಗಿಲ್ಲ. ಸುಮಾರು ೮೯೨೧.೦೫ ಎಕರೆ ಭೂಮಿಯಲ್ಲಿ ಮುಂಗಾರು ಬೆಳೆಗಳನ್ನು ಬೆಳೆಯಲು ಅನುಕೂಲಕರವಾಗಿದ್ದರೆ, ಇನ್ನು ೭೦೯೯.೨೫ ಎಕರೆ ಭೂಮಿಯು ಹಿಂಗಾರು ಬೆಳೆಯನ್ನು ಬೆಳೆಯಲು ಅನುಕೂಲವಾಗಿದೆ. ಹಿಂಗಾರು ಮತ್ತು ಮುಂಗಾರು ಬೆಳೆಗಳನ್ನು ಬೆಳೆಯುವ ಒಟ್ಟು ಕೃಷಿ ಭೂಮಿ ೧೬೦೨೦.೩೦ ಎಕರೆಯಾಗಿದೆ.[೨]

ಸಿಂಧನೂರು ತಾಲೂಕಿನಲ್ಲಿ ಸಾಗುವಳಿಗೊಳಪಟ್ಟ ಭೂಮಿಯಲ್ಲಿ ಮೊದಲ ನಾಲ್ಕು ಸ್ಥಾನಗಳನ್ನು ಪಡೆದ ಗ್ರಾಮಗಳಲ್ಲಿ ಬಳಗಾನೂರು ಗ್ರಾಮವು ಮೂರನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿರುವ ತುರ್ವಿಹಾಳ ಗ್ರಾಮದಲ್ಲಿ ೪೫೮೦ ಎಕರೆ ಭೂಮಿ, ಎರಡನೆಯ ಸ್ಥಾನದಲ್ಲಿರುವ ಸಾಲಗುಂದ ಗ್ರಾಮದಲ್ಲಿ ೩೮೨೫ ಎಕರೆ ಭೂಮಿ, ಮೂರನೇ ಸ್ಥಾನದಲ್ಲಿರುವ ಬಳಗಾನೂರು ಗ್ರಾಮದಲ್ಲಿ ೩೨೫೪.೦೪ ಎಕರೆ ಭೂಮಿ, ನಾಲ್ಕನೇ ಸ್ಥಾನದಲ್ಲಿರುವ ಸಿಂಧನೂರಿ(ಗ್ರಾ)ನಲ್ಲಿ ೨೮೫೨.೪ ಎಕರೆ ಭೂಮಿಯು ಸಾಗುವಳಿ ಗೊಳಪಟ್ಟಿದೆ.[೩] ಗಮನಿಸಬೇಕಾದ ವಿಷಯವೆಂದರೆ ಇಲ್ಲಿ ನೀಡಿರುವ ಅಂಕಿ-ಅಂಶಗಳು ನಿರ್ದಿಷ್ಟ ಗ್ರಾಮಕ್ಕೆ ಮಾತ್ರ ಅನ್ವಯಿಸು ವಂತಹವುಗಳಾಗಿವೆ.

ಬಳಗಾನೂರು ಹೋಬಳಿಯು ಒಟ್ಟು ೧೪ ಹಳ್ಳಿಗಳನ್ನು ಒಳಗೊಂಡಿದ್ದು ಪ್ರಸ್ತುತ ಮಸ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೊಳಪಟ್ಟಿದೆ. ಈ ಹೋಬಳಿಯ ಒಟ್ಟು ಜನಸಂಖ್ಯೆ ೧೯,೯೨೬ ಆಗಿದೆ. ಇದರಲ್ಲಿ ಮಹಿಳೆಯರ ಜನಸಂಖ್ಯೆ ೯೯೩೫ ಇದ್ದರೆ, ಪುರುಷರ ಸಂಖ್ಯೆ ೯೯೯೧ ಇದೆ.[೪]

### ೨.೧.೨. ಭೂಮಿಯ ಸ್ವರೂಪ

ಭೌಗೋಳಿಕವಾಗಿ ವಿಸ್ತಾರವನ್ನು ಹೊಂದಿದ ಈ ಪ್ರದೇಶದ ಭೂಮಿಯು ಸ್ವರೂಪ ಸಮತಟ್ಟಾಗಿದ್ದು ಮೈದಾನದಂತೆ ಕಾಣಿಸುತ್ತದೆ. ಇಲ್ಲಿನ ಭೂಮಿಯು ಕಪ್ಪು ಎರೆಮಣ್ಣನ್ನು ಹೊಂದಿದೆ. ಈ ಮಣ್ಣು ಅಧಿಕ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವುದರಿಂದ ಕೃಷಿಗೆ ಅನುಕೂಲಕರವಾಗಿದೆ. ಈ ಭೂಮಿಯಲ್ಲಿ ಅಧಿಕ ಇಳುವರಿಯನ್ನು ತೆಗೆಯಲಾಗುತ್ತದೆ. ಹಿರಿಯರು ಹೇಳುವ 'ಎರೆ ಇದ್ದವ ದೊರೆ' ಎಂಬ ಮಾತು ಈ ಪ್ರದೇಶಕ್ಕೆ ಅನ್ವಯಿಸುತ್ತದೆ. ಕಪ್ಪುಮಣ್ಣನ್ನು ಬಿಟ್ಟರೆ ಹಳ್ಳದ ತೀರದಲ್ಲಿ ಮರಳುಮಿಶ್ರಿತ ಮಣ್ಣು ಹಾಗೂ ಗ್ರಾಮದ ಸುತ್ತಮುತ್ತ ಸೀಮಿತ ಪ್ರದೇಶದಲ್ಲಿ ಸವಳು ಮಣ್ಣು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಭತ್ತವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದರಿಂದ ಇದನ್ನು ಭತ್ತದ ಮೈದಾನ(ಕಣಜ) ಎಂದು ಕರೆಯಲಾಗುತ್ತಿದೆ. ಸುಂಕನೂರು, ಬಳಗಾನೂರು ಮತ್ತು ಗೌಡನಬಾವಿ ಗ್ರಾಮದ ಸುತ್ತಲಿನ ಭೂಮಿಯು ಭತ್ತದ ಬೆಳೆಗೆ ಹೆಸರುವಾಸಿ.

ಬಳಗಾನೂರು ಹೋಬಳಿಯ ಪಶ್ಚಿಮ ದಿಕ್ಕಿನಲ್ಲಿರುವ ಮಸ್ಕಿ ಪ್ರದೇಶದಲ್ಲಿ ಮಾತ್ರ ಎತ್ತರವಾದ ಹಾಗೂ ವಿಶಾಲವಾದ ಗ್ರಾನೈಟ್ ಕಲ್ಲುಗುಡ್ಡಗಳು ಕಂಡುಬರುತ್ತವೆ. ಉಳಿದಂತೆ ಯಾವ ದಿಕ್ಕಿನಲ್ಲಿಯೂ ಬೆಟ್ಟಗುಡ್ಡಗಳು ಕಾಣಿಸುವುದಿಲ್ಲ.

### ೨.೧.೩. ವಾಯುಗುಣ ಮತ್ತು ಮಳೆ

ಈ ಪ್ರದೇಶದ ವಾಯುಗುಣವು ತೇವರಹಿತ ಹವೆಯಿಂದ ಕೂಡಿರುತ್ತದೆ. ಬೇಸಿಗೆ ಕಾಲವು ದೀರ್ಘಾವಧಿಯಾಗಿದ್ದರೆ, ಚಳಿಗಾಲ ಮತ್ತು ಮಳೆಗಾಲವು ಕಡಿಮೆ ಅವಧಿಯನ್ನು ಹೊಂದಿರುತ್ತವೆ. ಫೆಬ್ರವರಿ ತಿಂಗಳಿನಿಂದ ಆರಂಭವಾಗುವ ಬೇಸಿಗೆ ಕಾಲ ಜೂನ್ ತಿಂಗಳಿನವರೆಗೂ ಮುಂದುವರಿಯುತ್ತದೆ. ಬೇಸಿಗೆಯ ಕಾಲದ ಹಗಲಿನಲ್ಲಿ ಉಷ್ಣತೆಯು ಸಾಮಾನ್ಯವಾಗಿ ೩೮-೩೯° ಇರುತ್ತದೆ. ಅದೇ ಸಮಯದ ರಾತ್ರಿಯಲ್ಲಿ ೩೨-೩೪° ಇರುವುದು. ಕೆಲವು ಸಲ ಉಷ್ಣತೆಯು ೪೨-೪೪° ವರೆಗೂ ಏರುವ ಸಾಧ್ಯತೆಗಳಿವೆ. ಈ ಸಮಯದಲ್ಲಿ ಜಲಮೂಲಗಳಾದ ಕೆರೆ, ಕಾಲುವೆ, ಬಾವಿ, ಹಳ್ಳಗಳು ಬತ್ತಿಹೋಗುತ್ತವೆ. ಇಲ್ಲಿನ ಮಳೆಗಾಲವು ಜುಲೈ ತಿಂಗಳಿಂದ ಆರಂಭವಾಗಿ ಅಕ್ಟೋಬರ್ ತಿಂಗಳವರೆಗೆ ಮುಂದುವರೆಯುತ್ತದೆ. ಮಳೆಯ ಪ್ರಮಾಣದಲ್ಲಿ ನಿರ್ದಿಷ್ಟತೆಯೆಂಬುದು ಕಾಣಬರುವುದಿಲ್ಲ. ಪಶ್ಚಿಮ ಮಾರುತಗಳು ಗಂಟೆಗೆ ೧೬(ಕೆಪಿಎಚ್) ಕಿ.ಮೀ. ಪ್ರಮಾಣದಲ್ಲಿ ಬೀಸಿ ಮಳೆಯನ್ನು ಸುರಿಸುತ್ತವೆ.[೧] ಇಲ್ಲಿನ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೬೩೬.೦೦ ಮೀ.ಮಿ.[೨] ಮುಂಗಾರು ಮಳೆಯು ಕೆಲವರ್ಷ ಬಂದರೆ ಇನ್ನೊಂದು ವರ್ಷ ಬರದ ಸ್ಥಿತಿಯು ಇಲ್ಲಿರುತ್ತದೆ. ಅಕಾಲಿಕ ಮಳೆಯಿಂದ ಈ ಪ್ರದೇಶವು ನೆರೆಹಾವಳಿಗೆ ಸಿಲುಕಿ ಅಪಾರ ಆಸ್ತಿಪಾಸ್ತಿಯು ಹಾನಿಗೀಡಾಗುತ್ತದೆ. ಚಳಿಗಾಲ ಅಕ್ಟೋಬರ್ ತಿಂಗಳಿನಿಂದ ಪ್ರಾರಂಭವಾಗಿ ಜನವರಿಯವರೆಗೂ ಮುಂದುವರಿಯುತ್ತದೆ. ಚಳಿಗಾಲದ ಹಗಲಿನಲ್ಲಿ ಉಷ್ಣತೆ ೩೦-೩೨° ಇದ್ದು ರಾತ್ರಿಯ ಸಮಯದಲ್ಲಿ ೧೮-೨೦° ಇರುತ್ತದೆ.

### ೨.೧.೪. ಜಲಸಂಪತ್ತು ಮತ್ತು ಬೆಳೆಗಳು

ಹಿಂದೆ ಹೆಚ್ಚಾಗಿ ಮಳೆಯ ನೀರನ್ನು ಅವಲಂಬಿಸಿದ್ದ ಈ ಪ್ರದೇಶವು ಕೆಲವೊಮ್ಮೆ ನೀರಿನ ಕೊರತೆಯನ್ನು ಎದುರಿಸಿದ್ದುಂಟು. ತುಂಗಭದ್ರಾ ನದಿಯ ನೀರು ದೊರೆತ ಮೇಲೆ ಆ ಕೊರತೆ ಬಹುತೇಕವಾಗಿ ಕಡಿಮೆಯಾಗಿದೆ.

ತುಂಗಭದ್ರಾ ನದಿಯು ಈ ಪ್ರದೇಶಕ್ಕೆ ವರದಾನವಾಗಿ ಪರಿಣಮಿಸಿದೆ. ನದಿಯ ನೀರಿನಿಂದ ಈ ಪ್ರದೇಶವು ನೀರಾವರಿಗೊಳಪಟ್ಟಿದೆ. ಮಸ್ಕಿ ಹಿರೆಹಳ್ಳವು ಮೊದಲು ಸತತವಾಗಿ ನೀರಿನಿಂದ ಕೂಡಿರುತ್ತಿತ್ತು. ಆದರೆ ಮಾರಲದಿನ್ನಿ ಹತ್ತಿರ ಅಣೆಕಟ್ಟು ನಿರ್ಮಿಸಿರುವುದರಿಂದ ಹಳ್ಳವು ವರ್ಷದ ಹೆಚ್ಚಿನ ದಿನ ಒಣಗಿ ಹೋಗಿರುತ್ತದೆ. ಇದು ಹಿಂದೆ ವಿಶಾಲವಾಗಿತ್ತು. ಆದರೆ ಇಂದು ಹಿರೆಹಳ್ಳ ಸಣ್ಣ ಹಳ್ಳವಾಗಿ ರೂಪುಗೊಂಡಿದೆ. ಇವುಗಳ ಜೊತೆಗೆ ಕೆರೆ, ಬಾವಿ, ಕೊಳವೆ ಬಾವಿ, ಬೋರ್‌ವೆಲ್ ಇನ್ನಿತರ ನೀರಿನ ಮೂಲಗಳು ಇಲ್ಲಿವೆ. ಬಹುಶಃ ಈ ಪ್ರದೇಶದಲ್ಲಿರುವಷ್ಟು ಬೋರ್‌ವೆಲ್‌ಗಳು ತಾಲೂಕಿನ ಯಾವ ಭಾಗದಲ್ಲಿಯೂ ಕಾಣುವುದಿಲ್ಲ. ಮಸ್ಕಿ ಹಳ್ಳ ಈ ಪ್ರದೇಶಕ್ಕೆ ಹೆಚ್ಚಿನ ನೀರನ್ನು ಒದಗಿಸುತ್ತದೆ.

ಇಲ್ಲಿನ ವಾತಾವರಣಕ್ಕೆ ತಕ್ಕಂತಹ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇಲ್ಲಿನ ಪ್ರಮುಖ ಆಹಾರ ಬೆಳೆಗಳೆಂದರೆ ಭತ್ತ, ಜೋಳ, ಸಜ್ಜೆ, ದ್ವಿದಳ ಧಾನ್ಯಗಳಾದ ನೆಲಗಡಲೆ, ತೊಗರಿ, ಹಲಸಂದಿ, ಹೆಸರು, ಅವರೆಕಾಳುಗಳ ಜೊತೆಗೆ ಹತ್ತಿ, ಕಬ್ಬು, ಕುಸುಬೆಯನ್ನು ವಾಣಿಜ್ಯ ಬೆಳೆಗಳಾಗಿ ಬೆಳೆಯಲಾಗುತ್ತಿದೆ. ಮೆಣಸಿನಕಾಯಿ ಇಲ್ಲಿನ ಮತ್ತೊಂದು ಪ್ರಮುಖ ಬೆಳೆಯಾಗಿದೆ.

ತರಕಾರಿಗಳಲ್ಲಿ ಹೀರೆಕಾಯಿ, ಸೌತೆಕಾಯಿ, ಬೆಂಡೆಕಾಯಿ, ಚವಳೆಕಾಯಿ, ಬದನೆ, ಟೊಮೋಟೋ, ಈರುಳ್ಳಿ ಮುಂತಾದವುಗಳನ್ನು ಬೆಳೆಯುತ್ತಾರೆ. ಹಣ್ಣುಗಳಲ್ಲಿ ಮಾವುವನ್ನು ಮಾತ್ರ ಇಲ್ಲಿ ಬೆಳೆಯಲಾಗುತ್ತದೆ.

### ೨.೧.೫. ಅರಣ್ಯ ಮತ್ತು ಪ್ರಾಣಿ ಸಂಪತ್ತು

ಈ ಪ್ರದೇಶದಲ್ಲಿ ಅರಣ್ಯಸಂಪತ್ತು ಇಲ್ಲವೆಂದು ಹೇಳುವುದೇ ಸೂಕ್ತವೆನಿಸುತ್ತದೆ. ಮಳೆಯ ಪ್ರಮಾಣ ಕಡಿಮೆ ಇರುವುದು ಇದಕ್ಕೆ ಕಾರಣ. ಇಲ್ಲಿ ಸಾಮಾನ್ಯವಾಗಿ ಕಂಡುಬರುವ ಸಸ್ಯ ಮತ್ತು ಗಿಡಮರಗಳೆಂದರೆ ಈಚಲು, ವಿವಿಧ ಜಾತಿಯ ಹುಲ್ಲುಸಸ್ಯ, ಹಾಪು, ಬೇವು, ಜಾಲ, ಹುಣಸೆ, ಕಕ್ಕೆ, ನೀಲಗಿರಿ, ನೇರಳೆಮರ, ಬನ್ನಿಮರ, ತಾಳೆ, ಬಸಿರೆಮರ, ಕಣಗಲು, ಕ್ಯಾದಗಿ, ಕರಿಜಾಲಿಗಳು.

ಅರಣ್ಯಸಂಪತ್ತು ಇಲ್ಲದಿರುವುದರಿಂದ ಪ್ರಾಣಿಸಂಪತ್ತು, ಪಕ್ಷಿಸಂಪತ್ತು ಅಷ್ಟಾಗಿ ಕಾಣಬರುವುದಿಲ್ಲ. ಹಳ್ಳದ ದಂಡೆ, ಮಾಳಿ ಮತ್ತು ಮುಳ್ಳಿನ ಪೊದೆಗಳಲ್ಲಿ ಕೆಲವು ಪ್ರಾಣಿಗಳು ಕಂಡುಬರುತ್ತವೆ. ಮೊಲ, ನರಿ, ತೋಳ, ಕಾಡುಬೆಕ್ಕು, ಕಾಡುಹಂದಿಗಳು ಕಂಡುಬಂದರೂ ಅವುಗಳ ಸಂಖ್ಯೆ ವಿರಳ. ಪಕ್ಷಿಗಳಲ್ಲಿ ಗಿಳಿ, ಹದ್ದು, ಗಿಡುಗ, ಅನೇಕ ಬಗೆಯ ಕೊಕ್ಕರೆಗಳು, ಗುಬ್ಬಿ, ಕಾಗೆಗಳು, ಭತ್ತ ತಿನ್ನುವ ಹಕ್ಕಿ, ಮರಕುಟಿಗ, ಪಾರಿವಾಳ, ಗುಬ್ಬಚ್ಚಿ, ಗೊರವಂಕ, ಗೂಬೆ, ಬಾವಲಿ, ಹಾಲಕ್ಕಿ, ಕೋಗಿಲೆಗಳು ಕಂಡುಬರುತ್ತವೆ. ನಾಗರಹಾವು, ಬಳವಡಕ, ಕೆರೆ ಹಾವು, ಹಸಿರು ಹಾವು, ಮಣ್ಣುಮುಕ್ಕ ಹಾವು, ಬೆಣಗಿ ಹಾವು, ಊಸರವಳ್ಳಿ ಮತ್ತು ಬಂಡೆಗಳಲ್ಲಿ ಅನೇಕ ತರಹದ ಚೇಳುಗಳನ್ನು ಇಲ್ಲಿ ಕಾಣಬಹುದು.

### ೨.೧.೬. ಜನಜೀವನ

ಫಲವತ್ತಾದ ಭೂಮಿಯ ಜೊತೆಗೆ ತುಂಗಭದ್ರಾ ನದಿಯ ನೀರನ್ನು ವರದಾನವಾಗಿ ಪಡೆದಿರುವ ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಕೃಷಿಯ ಜೊತೆಗೆ ಕುರಿ, ಕೋಳಿ, ಪಾರಿವಾಳ, ಎಮ್ಮೆ, ಹಸುಗಳನ್ನು ಸಾಕುತ್ತಾರೆ. ಎಮ್ಮೆ, ಹಸುಗಳನ್ನು ಹೈನುಗಾರಿಕೆಗಾಗಿ ಸಾಕಿದರೆ, ಕೃಷಿಗಾಗಿ ಎತ್ತುಗಳನ್ನು ಸಾಕುತ್ತಾರೆ.

ಪ್ರಸ್ತುತವಾಗಿ ಇಲ್ಲಿ ಹಿಂದೂ ಮತ್ತು ಮುಸ್ಲಿಂ ಧರ್ಮದವರಿದ್ದಾರೆ. ಹಾಗೆಯೇ ಹಿಂದೂಗಳಲ್ಲಿ ಲಿಂಗಾಯತ, ಬಣಜಿಗ, ಗೌಡ, ಕುರುಬ, ರೆಡ್ಡಿ, ಮಾರವಾಡಿ, ಶೇಟ್, ಬಡಗಿ, ಅಕ್ಕಸಾಲಿಗ, ನಾಯಕ, ತಳವಾರ, ಕೊರವ, ಮಾದಿಗ ಜನಾಂಗದವರು ಇಲ್ಲಿದ್ದಾರೆ. ಇವರು ತಮ್ಮ ತಮ್ಮ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಉತ್ತಮ ಭೌಗೋಳಿಕ ಪರಿಸರ ಇಲ್ಲಿದ್ದರೂ ಬಡತನ ಮತ್ತು ಸಾಕ್ಷರತೆ ಹೇಳಿಕೊಳ್ಳುವಷ್ಟು ಪ್ರಗತಿ ಸಾಧಿಸಿಲ್ಲ. ಇಲ್ಲಿನ ಜನತೆ ಬೇಸಿಗೆ ಹಾಗೂ ಕೆಲಸವಿಲ್ಲದೆ ಇತರೆ ದಿನಗಳಲ್ಲಿ ಉದ್ಯೋಗವನ್ನರಸಿ ದಕ್ಷಿಣ ಕರ್ನಾಟಕದ ವಿವಿಧ ಭಾಗಗಳಿಗೆ ವಲಸೆ(ಗುಳೆ) ಹೋಗುತ್ತಾರೆ.

## ೨.೨. ಇತಿಹಾಸ

### ೨.೨.೧. ಪ್ರಾಗಿತಿಹಾಸ

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಮುಖ್ಯ ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು ಲಿಖಿತ ಆಕರಗಳು ಸಿಗದ ಹಂತ ಅಥವಾ ಪ್ರಾಗಿತಿಹಾಸ. ಎರಡನೆಯದು ಲಿಖಿತ ಆಕರಗಳು ದೊರೆಯುವ ಹಂತ ಅಥವಾ ಇತಿಹಾಸ ಕಾಲವೆಂದು ಹೇಳಬಹುದು. ಇವುಗಳಲ್ಲಿ ಪ್ರಾಗಿತಿಹಾಸ ಕಾಲದಲ್ಲಿ ಮಾನವನು ನಿತ್ಯೋಪಯೋಗಕ್ಕಾಗಿ ಬಳಸುತ್ತಿದ್ದ ವಸ್ತುಗಳ ಆಧಾರದಿಂದ ಶಿಲಾಯುಗ ಮತ್ತು ಲೋಹಯುಗ ಸಂಸ್ಕೃತಿ ಎಂದು ಎರಡು ವಿಭಾಗಗಳನ್ನಾಗಿಸಲಾಗಿದೆ. ಅಧ್ಯಯನದ ತೀವ್ರತೆ, ಅನುಕೂಲತೆ ಮತ್ತು ಪ್ರತಿಹಂತದಲ್ಲಾದ ಬದಲಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಶಿಲಾಯುಗ ಸಂಸ್ಕೃತಿಯನ್ನು ಹಳೇ ಶಿಲಾಯುಗ, ಸೂಕ್ಷ್ಮ ಶಿಲಾಯುಗ ಮತ್ತು ನವಶಿಲಾಯುಗ ಸಂಸ್ಕೃತಿಯೆಂದು ವರ್ಗೀಕರಿಸಲಾಯಿತು. ಬಳಗಾನೂರು ಪರಿಸರದಲ್ಲಿ ಹಳೆಯ ಮತ್ತು ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಕುರುಹುಗಳು ಕಂಡುಬಂದಿಲ್ಲ. ಆದರೆ ಕ್ರಮವಾಗಿ ನೆರೆಯ ಮಾನ್ವಿ ತಾಲೂಕಿಗೆ ಸೇರಿದ ಕರಡಿಗುಡ್ಡ ಮತ್ತು ಕಲ್ಲೂರು ಗ್ರಾಮಗಳಲ್ಲಿ ಈ ಸಂಸ್ಕೃತಿಗಳ ಕುರುಹು ಕಂಡುಬಂದಿವೆ. ಬಳಗಾನೂರು ಪರಿಸರದಿಂದ ಕರಡಿಗುಡ್ಡ ೧೫ ಕಿ.ಮೀ. ಮತ್ತು ಕಲ್ಲೂರು ೪೦ ಕಿ.ಮೀ.ಗಳ ಅಂತರದಲ್ಲಿವೆ. ಇವೆರಡು ಪ್ರದೇಶಗಳ ಸಂಸ್ಕೃತಿಯು ಬಳಗಾನೂರು ಪರಿಸರಕ್ಕೂ ಅನ್ವಯಿಸುತ್ತದೆ.

ನವಶಿಲಾಯುಗದ ಪ್ರಮುಖ ನೆಲೆಗಳಲ್ಲಿ ಮಸ್ಕಿಯೂ ಒಂದು. ಮಸ್ಕಿ ನವಶಿಲಾಯುಗದ ಉಪಕರಣಗಳ ತಯಾರಿಕಾ ಕೇಂದ್ರವಾಗಿತ್ತು. ಇಲ್ಲಿ ಅನೇಕ ಶಿಲಾಯುಧ ಉಪಕರಣಗಳು ಕಂಡುಬಂದಿವೆ. ಮಸ್ಕಿ ಪ್ರದೇಶಕ್ಕೆ ತಾಗಿಕೊಂಡಿರುವ ಬಳಗಾನೂರು ಪರಿಸರ ಈ ಸಂಸ್ಕೃತಿಗೆ ಆಶ್ರಯ ಒದಗಿಸಿದ್ದುದರಲ್ಲಿ ಸಂಶಯವಿಲ್ಲ. ನೂತನ ಶಿಲಾಯುಗ ಸಂಸ್ಕೃತಿಯ ನಂತರದಲ್ಲಿ ಹೆಚ್ಚಿನದಾಗಿ ಲೋಹಗಳನ್ನು ಬಳಸಲು ಪ್ರಾರಂಭಿಸಲಾಯಿತು. ಅಲ್ಲಿಂದ ಲೋಹಯುಗ ಸಂಸ್ಕೃತಿಯನ್ನು ಸ್ಪಷ್ಟವಾಗಿ ಕಾಣಬಹುದು.

ಲೋಹಯುಗ ಕಾಲದ ಪ್ರಥಮ ಹಂತದಲ್ಲಿ ಶಿಲೆಯ ಜೊತೆಗೆ ತಾಮ್ರವನ್ನು ಬಳಕೆ ಮಾಡಿರುವುದು ಕಂಡುಬರುತ್ತದೆ. ಆ ಹಂತವನ್ನು ಶಿಲಾತಾಮ್ರಯುಗವೆಂದು ಕರೆಯಲಾಯಿತು. ಕಾಲಾನಂತರದಲ್ಲಿ ಮಾನವನ ತಿಳುವಳಿಕೆ ಮಟ್ಟ ಹೆಚ್ಚುತ್ತಾ ಬಂದಂತೆ ಕೆಲ ಬದಲಾವಣೆಗಳು ಕಾಣಿಸಿದವು. ಈ ಬದಲಾವಣೆಯ ಸಂದರ್ಭದಲ್ಲಿ ಸುಲಭ ಜೀವನ ನಡೆಸುವ ಉದ್ದೇಶದಿಂದ ಮುಖ್ಯವಾಗಿ ಕೃಷಿಗೆ ಅನುಕೂಲಕರವಾದ ಗಟ್ಟಿಲೋಹ ಕಬ್ಬಿಣವನ್ನು

ಬಳಸಲು ಪ್ರಾರಂಭಿಸಿದನು. ಶಿಲೆಯ ಜೊತೆಗೆ ಕಬ್ಬಿಣವನ್ನು ಬಳಕೆ ಮಾಡಲಾಯಿತು. ಕಬ್ಬಿಣದ ಬಳಕೆಯೊಂದಿಗೆ ಬೃಹತ್ ಗಾತ್ರದ ಕಲ್ಲುಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ರೂಪಿಸಿದ ಇದನ್ನು ಕಬ್ಬಿಣಯುಗದ ಬೃಹತ್ ಶಿಲಾಗೋರಿ ಸಂಸ್ಕೃತಿ ಎಂದು ಕರೆಯಲಾಯಿತು.[೮] ಈ ರೀತಿಯಾಗಿ ಜನರ ಪ್ರಾರಂಭಿಕ ನಂಬಿಕೆಗಳ ತಳಹದಿಯ ಮೇಲೆ ರಚಿತವಾದ 'ಬೃಹತ್ ಶಿಲಾಗೋರಿಗಳು' ರಾಯಚೂರು ಜಿಲ್ಲೆಯನ್ನೊಳಗೊಂಡಂತೆ ಕರ್ನಾಟಕದ ತುಂಬಾ ಹರಡಿಕೊಂಡಿವೆ. ಹೀಗೆ ಹರಡಿಕೊಂಡ ಬೃಹತ್ ಶಿಲಾಗೋರಿ ನೆಲೆಗಳಲ್ಲಿ ಪ್ರಸ್ತುತ ಬಳಗಾನೂರು ಹೋಬಳಿ ಪರಿಸರದ ಬೃಹತ್ ಶಿಲಾಗೋರಿ ಹುಲ್ಲೂರು ಗ್ರಾಮ ಒಂದಾಗಿದೆ. ಈ ನೆಲೆಯಲ್ಲಿ ಶಿಲಾವೃತ್ತಗಳ ರಚನೆ ಕಂಡುಬಂದಿದ್ದು ಇದೊಂದು ಹಾದಿಕೋಣೆ ಗೋರಿಯಾಗಿದೆ.[೯]

**೨.೨.೨. ರಾಜಕೀಯ ಇತಿಹಾಸ**

ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಪ್ರಚಲಿತವಿದೆ. ಇತಿಹಾಸವನ್ನು ಚಿತ್ರಿಸುವ ಗ್ರಂಥಗಳಲ್ಲಿ ರಾಜಕೀಯ ಇತಿಹಾಸವೇ ಪ್ರಧಾನ. ಇತಿಹಾಸ ಕಾಲದಲ್ಲಿ ಆಳ್ವಿಕೆ ಮಾಡಿದ ಅರಸುಮನೆತನಗಳ ಇತಿಹಾಸವೇನಿದ್ದರೂ ಒಂದು ಪ್ರದೇಶದ ಇತಿಹಾಸ ರಚನೆಗೆ ಅಸ್ಥಿಪಂಜರವನ್ನು ಒದಗಿಸಬಹುದು. ಈ ಅಸ್ಥಿಪಂಜರಕ್ಕೆ ರಕ್ತಮಾಂಸಗಳನ್ನು ತುಂಬುತ್ತದೆ ಆ ಪ್ರದೇಶದ ಜನತೆಯನ್ನು ಕುರಿತ ಹೊರಟ ಸಾಂಸ್ಕೃತಿಕ ಅಧ್ಯಯನ. ಹೀಗೆ ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನ ಗಳೆರಡೂ ಪರಸ್ಪರ ಪೂರಕ ಮತ್ತು ಪೋಷಕ.[೧೦]

''ನಿರ್ದಿಷ್ಟ ಪ್ರದೇಶದ ಚರಿತ್ರೆಯು ಬಹುವಾಗಿ ಅದರ ಭೂಗೋಲದಿಂದ ನಿರ್ಧಾರವಾಗುತ್ತದಂತೆ''. ಮೊದಲೇ ಹೇಳಿದಂತೆ ಪ್ರಸ್ತುತ ಬಳಗಾನೂರು ಹೋಬಳಿ ಪರಿಸರವು ಕೃಷ್ಣ ತುಂಗಭದ್ರೆಯರ ಮಡಿಲ ಕೂಸಾಗಿರುವ ರಾಯಚೂರು ಜಿಲ್ಲೆಯ ಒಂದು ಭಾಗವಾಗಿದ್ದು, ಫಲವತ್ತಾದ ಭೂಮಿ, ಉತ್ತಮ ನೀರಾವರಿ ವ್ಯವಸ್ಥೆ, ಮತ್ತು ಉತ್ತಮ ಹವಾಗುಣವನ್ನು ಹೊಂದಿರುವ ಆಯಕಟ್ಟಿನ ಪ್ರದೇಶವಾಗಿದೆ. ಸಾಮ್ರಾಜ್ಯಗಳ ಆಡಳಿತ ವ್ಯವಸ್ಥೆಯಿಂದ ಮತ್ತು ಆರ್ಥಿಕ ಸದೃಢತೆಯ ದೃಷ್ಟಿಯಿಂದ ಅನುಕೂಲಕರವಾದ ಈ ಪರಿಸರದಲ್ಲಿ ಪ್ರಾಚೀನ, ಮಧ್ಯಕಾಲ ಮತ್ತು ಆಧುನಿಕ ಕಾಲದ ಅನೇಕ ಅರಸು ಮನೆತನಗಳ ಆಳ್ವಿಕೆಯನ್ನು ಇಲ್ಲಿ ಕಾಣಬಹುದು. ಶತ ಶತಮಾನಗಳಿಂದ ಈ ಪರಿಸರವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದ ಅರಸು ಮನೆತನಗಳನ್ನಿಟ್ಟುಕೊಂಡು ಇಲ್ಲಿನ ರಾಜಕೀಯ ಇತಿಹಾಸವನ್ನು ಕಾಲಾನುಕ್ರಮವಾಗಿ ಪ್ರಸ್ತುತ ಅಧ್ಯಾಯದಲ್ಲಿ ಕೆಳಕಾಣಿಸಿದಂತೆ ವಿವರಿಸಲಾಗಿದೆ.

ಈ ಪರಿಸರದ ಇತಿಹಾಸ ನಿರ್ಮಿತಿಗೆ ಆಯಾ ಅರಸುಮನೆತನಗಳ ಕಾಲಘಟ್ಟದಲ್ಲಿ ನಿರ್ಮಾಣಗೊಂಡ ಸ್ಮಾರಕ ಅವಶೇಷಗಳಾದ ಶಿಲಾಶಾಸನ, ವೀರಗಲ್ಲು, ದೇವಾಲಯ ಮತ್ತು ಲೌಕಿಕ ವಾಸ್ತುಶಿಲ್ಪ ಮುಂತಾದವುಗಳ ಜೊತೆಗೆ ಅನಾದಿಕಾಲದಿಂದ ಪರಂಪರಾನುಗತವಾಗಿ ಉಳಿದುಕೊಂಡು ಬಂದಿರುವ ಮೌಖಿಕ ಆಕರಗಳು ಹಾಗೂ ಆನುಷಂಗಿಕ ಆಕರಗಳು ಸಹಾಯಕವಾಗಿವೆ.

**ಮೌರ್ಯರು**

ಕರ್ನಾಟಕದಲ್ಲಿ ಇತಿಹಾಸಯುಗ ಆರಂಭವಾಗುವುದು ಸದ್ಯ ನಮಗೆ ತಿಳಿದಂತೆ ಕ್ರಿ.ಪೂ. ೪-೩ನೇ ಶತಮಾನಗಳಿಂದ. ಉತ್ತರ ಭಾರತದಲ್ಲಿ ಪಾಟಲಿಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ

ಮೌರ್ಯರನ್ನು ದಕ್ಷಿಣದ ನೈಸರ್ಗಿಕ ಮತ್ತು ಅಪಾರ ಖನಿಜಸಂಪತ್ತು ಆಕರ್ಷಿಸಿತು. ಮೌರ್ಯವಂಶದ ಅರಸರು ಕರ್ನಾಟಕದ ಉತ್ತರ ಭಾಗದಲ್ಲಂತೂ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರೆಂಬುದಕ್ಕೆ ಸಾಕ್ಷ್ಯಾಧಾರಗಳಿವೆ. ಕರ್ನಾಟಕದಲ್ಲಿ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗ ರಾಮೇಶ್ವರ(ಚಿತ್ರದುರ್ಗ ಜಿಲ್ಲೆ), ಮಸ್ಕಿ(ರಾಯಚೂರು), ಕೊಪ್ಪಳ(ಕೊಪ್ಪಳ ಜಿಲ್ಲೆ), ಉದೆಗೊಳಂ, ನಿಟ್ಟೂರು(ಬಳ್ಳಾರಿ ಜಿಲ್ಲೆ), ಸನ್ನತಿ (ಗುಲಬರ್ಗಾ ಜಿಲ್ಲೆ)ಯಲ್ಲಿ ದೊರೆತ ಶಾಸನಗಳು. ಇವುಗಳಿಂದ ಮೌರ್ಯರ ಆಳ್ವಿಕೆಗೆ ಈ ಜಿಲ್ಲೆಗಳು ಒಳಪಟ್ಟಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಕರ್ನಾಟಕವನ್ನೊಳಗೊಂಡು ದಕ್ಷಿಣ ಭಾರತದ ಬಹುತೇಕ ಪ್ರದೇಶಗಳನ್ನು ವಶಪಡಿಸಿಕೊಂಡ ಮೌರ್ಯರು ದಕ್ಷಿಣದ ಹೃದಯ ಭಾಗದಲ್ಲಿ 'ಸುವರ್ಣಗಿರಿ' ಎಂಬ ಪ್ರದೇಶವನ್ನು ಆಡಳಿತದ ಅನುಕೂಲಕ್ಕಾಗಿ ಎರಡನೇ ರಾಜಧಾನಿಯಾಗಿ ನೇಮಿಸಿಕೊಂಡರು. ಸುವರ್ಣಗಿರಿಯಲ್ಲಿ ಆರ್ಯಪುತ್ರನೆಂಬುವವನು ಆಳುತ್ತಿದ್ದನೆಂದು ಅಶೋಕನ ಶಾಸನಗಳು ತಿಳಿಸುತ್ತವೆ.[೧೧]

ಆ ಸುವರ್ಣಗಿರಿಯು ಕೆಲವು ವಿದ್ವಾಂಸರ ಪ್ರಕಾರ ಅಶೋಕನ ಪ್ರಮುಖ ಶಾಸನ ದೊರೆತ ರಾಯಚೂರು ಜಿಲ್ಲೆಯ ಮಸ್ಕಿ ಪರಿಸರ. ಚರಿತ್ರೆಕಾರ ಯಾಜ್‌ದಾನಿ ಅವರ ನಿಲುವು ಸಹಾ ಇದೇ ಆಗಿದೆ. ಇದಕ್ಕೆ ಕಾರಣ ಈ ಪ್ರದೇಶದಲ್ಲಿ ಕಂಡುಬಂದಿರುವ ಚಿನ್ನದ ಗಣಿ ಅವಶೇಷಗಳು. ಇದು ಅನೇಕ ಅಂಶಗಳಿಂದ ದೃಢಪಟ್ಟಿದೆ. ಈ ಪ್ರದೇಶದಲ್ಲಿ ಖನಿಜ ಪರಿವೀಕ್ಷಣೆ ನಡೆಸಿದ ಭೂಶಾಸ್ತ್ರಜ್ಞ ಲಿಯೋನಾರ್ಡ್‌ಮನ್ ಅವರು ಇಲ್ಲಿ ಸುವರ್ಣನಗರ ಇದ್ದಿರಬೇಕೆಂದು ತರ್ಕಿಸಿದರು.[೧೨] ಹೀಗೆ ಅನೇಕ ವಿದ್ವಾಂಸರ ನಿಲುವು ಕೂಡ ಆ ಸುವರ್ಣಗಿರಿ ಮಸ್ಕಿಯೇ ಆಗಿತ್ತು ಎಂಬುದಾಗಿದೆ. ಇಂತಹ ಅನೇಕ ವಿಶೇಷತೆಯನ್ನುಳ್ಳ ಮಸ್ಕಿ ಪ್ರದೇಶದಿಂದ ಅನತಿ ದೂರದಲ್ಲಿರುವ ಬಳಗಾನೂರು ಹೋಬಳಿ ಪರಿಸರವು ಮೌರ್ಯರ ಆಳ್ವಿಕೆಯನ್ನು ಕಂಡಿದೆ.

**ಶಾತವಾಹನರು**

ಮೌರ್ಯ ಸಾಮ್ರಾಜ್ಯ ಅವನತಿ ನಂತರ ದಖನ್‌ನಲ್ಲಿ ಅಧಿಕಾರ ಸ್ಥಾಪಿಸಿದವರೆಂದರೆ ಶಾತವಾಹನರು. ಬೃಹತ್ ಶಿಲಾಯುಗೀಯ ಸಾಂಸ್ಕೃತಿಕ ಅಂಶಗಳು ಐತಿಹಾಸಿಕ ಕಾಲಾವಧಿಯ ಆರಂಭಕ್ಕೆ ನಿರಂತರವಾಗಿ ಹರಿದುಬಂದವೆಂಬುದು ಒಪ್ಪತಕ್ಕದ್ದು. ಬೃಹತ್ ಶಿಲಾಯುಗೀಯ ಜನರು ಮತ್ತು ಶಾತವಾಹನರ ನಡುವಿನ ಸಂಬಂಧ ಪಿತೃತ್ವದ ಸಂಬಂಧವೆಂದು ಅನುಮಾನಿಸಲಾಗುವುದರಿಂದ ಮಸ್ಕಿಯು ಶಾತವಾಹನ ಕಾಲದಲ್ಲಿ ಪ್ರಮುಖ ನಗರವಾಗಿದ್ದಿತೆಂದು ತಿಳಿಯಬಹುದು.[೧೩] ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಅನೇಕ ಕುರುಹುಗಳು ಕಂಡುಬಂದಿವೆ. ಪ್ರಸ್ತುತ ಅಧ್ಯಯನ ಪರಿಸರದ ಹುಲ್ಲೂರು ಗ್ರಾಮದಲ್ಲಿ ಬೃಹತ್ ಶಿಲಾಗೋರಿ ನೆಲೆ ಕಂಡುಬಂದಿರುವುದರಿಂದ ಶಾತವಾಹನರ ಪ್ರಭಾವಕ್ಕೆ ಈ ಪ್ರದೇಶವೂ ಒಳಪಟ್ಟಿತ್ತೆಂದು ಹೇಳಬಹುದಾಗಿದೆ.

**ರಾಷ್ಟ್ರಕೂಟರು**

ಕ್ರಿ.ಶ. ೮ನೆಯ ಶತಮಾನದ ಮಧ್ಯಭಾಗದಿಂದ ೧೦ನೆಯ ಶತಮಾನದ ಕೊನೆಯ ಪಾದದವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಭಾಗಗಳನ್ನು ಆಳಿದ ರಾಜಮನೆತನ ರಾಷ್ಟ್ರಕೂಟ. ಪ್ರಾರಂಭದಲ್ಲಿ ಚಾಲುಕ್ಯರ ಆಶ್ರಿತರಾಗಿದ್ದು ಸ್ವಶ್ರಮದಿಂದ ರಾಜ್ಯ ಸಾಧಿಸಿ, ಚಾಲುಕ್ಯರ ರಾಜಕೀಯ ಉತ್ತರಾಧಿಕಾರಿಗಳಾಗಿ, ದಂತಿದುರ್ಗ, ೧ನೆಯ ಕೃಷ್ಣ, ಧ್ರುವ, ೩ನೆಯ ಗೋವಿಂದ, ೧ನೆಯ ಅಮೋಘವರ್ಷ(ನೃಪತುಂಗ), ೨ನೆಯ

ಕೃಷ್ಣ, ಮೂರನೇ ಇಂದ್ರ, ನಾಲ್ಕನೇ ಗೋವಿಂದ, ಮೂರನೇ ಕೃಷ್ಣ ಮುಂತಾದ ಹೆಸರಾಂತ ಅರಸರು ಈ ವಂಶವನ್ನು ಆಳಿದರು. ಇವರು ಇಂದಿನ ಗುಲ್ಬರ್ಗ ಜಿಲ್ಲೆಯ ಮಾನ್ಯಖೇಟ ಅಥವಾ ಮಳಖೇಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ರಾಷ್ಟ್ರಕೂಟ ಅರಸರ ಪರಿಶ್ರಮದಿಂದ ಕರ್ನಾಟಕದ ಕ್ಷಾತ್ರ ಪ್ರಭಾವವನ್ನು ದಕ್ಷಿಣ ಭಾರತದಲ್ಲಷ್ಟೇ ಅಲ್ಲದೆ ಉತ್ತರ ಭಾರತದಲ್ಲಿ ಒಂದು ಕಡೆ ಕನೋಜಿನವರೆಗೂ ಇನ್ನೊಂದು ಕಡೆ ಮಿಥಿಲೆಯವರೆಗೂ ಹಬ್ಬಿಸಿ ಸಮಕಾಲೀನ ಭಾರತೀಯ ರಾಜಕೀಯದಲ್ಲಿ ಪರಮೋಚ್ಚ ಶಕ್ತಿಯಾಗಿ ಮೆರೆದ ಕನ್ನಡ ಮೂಲದ ರಾಜವಂಶ. ಬಾದಾಮಿ ಚಾಲುಕ್ಯರ ಸಂಬಂಧಿಗಳೂ ಮಾಂಡಳಿಕರೂ ಆಗಿದ್ದ ತಲಕಾಡಿನ ಗಂಗರು ರಾಷ್ಟ್ರಕೂಟರ ಆಳ್ವಿಕೆಯನ್ನು ಮೊದಲು ವಿರೋಧಿಸಿದ್ದಲ್ಲದೆ ಅವರ ಮೇಲೆ ಇಂದಿನ ಕಂಪ್ಲಿ ಬಳಿಯಲ್ಲಿ ಯುದ್ಧ ಮಾಡುತ್ತಾರೆ. ಹೀಗಾಗಿ ರಾಷ್ಟ್ರಕೂಟರ ದಂಡು ಮಾನ್ಯಖೇಟದಿಂದ ರಾಯಚೂರು ಜಿಲ್ಲೆಯ ಮೇಲೆ ಹಾದು ಗಡಿಭಾಗದಲ್ಲಿರುವ ಕಂಪ್ಲಿ ಕಡೆಗೆ ಸಾಗಿರಬೇಕು. ಆದರೂ ರಾಷ್ಟ್ರಕೂಟ ಆರಂಭದ ಶಾಸನಗಳು ಈ ಜಿಲ್ಲೆಯಲ್ಲಿ ದೊರೆಯುವುದಿಲ್ಲ. ಕ್ರಿ.ಶ. ೯-೧೦ನೆಯ ಶತಮಾನದ ಶಾಸನಗಳು ಈ ಜಿಲ್ಲೆಯಲ್ಲಿ ದೊರೆಯುವ ಮೂಲಕ, ಆಳುತ್ತಿದ್ದ ರಾಷ್ಟ್ರಕೂಟ ಅರಸರ ಆಳ್ವಿಕೆಯ ಉಲ್ಲೇಖ ಆರಂಭವಾಗುತ್ತದೆ.[೧೪]

ರಾಷ್ಟ್ರಕೂಟ ಅರಸ ಕನ್ನರನು ತನ್ನ ಆಡಳಿತ ಕಾಲಾವಧಿಯಲ್ಲಿ ಬಲ್ಲನಮಗನೂರು(ಬನ್ನಿಗನೂರು) ದೇವರಿಗೆ ದಾನ ನೀಡಿದ್ದನ್ನು ಅಲ್ಲಿನ ಕ್ರಿ.ಶ. ೯೧೧ನೇ ಶಾಸನವು ಉಲ್ಲೇಖಿಸುತ್ತದೆ.[೧೫] ಕನ್ನರನು ಇಮ್ಮಡಿ ಕೃಷ್ಣನ ಮಗಳು ಮತ್ತು ಚೋಳರ ಮೊದಲನೆಯ ಆದಿತ್ಯನ ಮಗನಾಗಿದ್ದನು. ಇದು ಈ ಪರಿಸರದ ಆರಂಭಿಕ ಶಾಸನವಾಗಿದೆ. ಮುಂದೆ ಮೂರನೇ ಕೃಷ್ಣನವರೆಗೂ ಇವರ ಆಡಳಿತದ ಯಾವುದೇ ಕುರುಹುಗಳು ಬಳಗಾನೂರು ಪರಿಸರದಲ್ಲಿ ಕಾಣಸಿಗುವುದಿಲ್ಲ. ದಿದ್ದಿಗಿ ಗ್ರಾಮದಲ್ಲಿ ರಾಷ್ಟ್ರಕೂಟ ಅರಸ ಮುಮ್ಮಡಿಕೃಷ್ಣನ ಶಾಸನ ಕಂಡುಬರುತ್ತದೆಯಾದರೂ ಇದು ಕಾಲದ ಉಲ್ಲೇಖದಿಂದ ತೊಡಕಾಗಿದೆ. ಶಾಸನದ ಕಾಲವನ್ನು ಸುಮಾರು ಕ್ರಿ.ಶ. ೯೧೮ ಅಥವಾ ಕ್ರಿ.ಶ. ೯೬೦ಕ್ಕೆ ಸೇರಿದ್ದೆಂದು ಹೇಳಲಾಗುತ್ತಿದೆ. ಶಾಸನದ ಆರಂಭ ಭಾಗದಲ್ಲಿ ಸಮಸ್ತಭುವನಾಶ್ರಯ, ಶ್ರೀಪೃಥ್ವೀವಲ್ಲಭ, ಮಹಾರಾಜಾಧಿರಾಜ, ರಾಜಪರಮೇಶ್ವರ, ಪರಮ ಭಟ್ಟಾರಕ ಮುಂತಾದ ವಿಶೇಷಣಗಳಲ್ಲದೆ ರಟ್ಟರ ಮೇರು, ಮದಗಜಮಲ್ಲ, ಎಲ್ಲರ ಮರುಳ, ಪರಾಂಗನಪುತ ಮೊದಲಾದ ವಿಶೇಷಣಗಳನ್ನುಳ್ಳ ಶ್ರೀಮದತುಂಗ ದೇವರ ಉಲ್ಲೇಖ ಬರುತ್ತದೆ. ಈ ಬಿರುದುಗಳಲ್ಲಿ ಬಹುತೇಕವು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕಾಲದ್ದಾಗಿದ್ದು ಕ್ರಿ.ಶ. ೯೬೦ಕ್ಕೆ ಸೇರಿದುದಾಗಿರಬಹುದು.[೧೬] ಶಾಸನದ ಹಿಂಬದಿಯಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲಿನ ಶಿಲ್ಪವಿದೆ.[೧೭] ಪ್ರಸ್ತುತ ಬಳಗಾನೂರು ಪರಿಸರದಲ್ಲಿ ಕಾಣಸಿಗುವ ಇವೆರಡು ಪ್ರಮುಖ ಶಾಸನಗಳಿಂದ ಇದು ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ.

## ಕಲ್ಯಾಣ ಚಾಲುಕ್ಯರು

ರಾಷ್ಟ್ರಕೂಟರ ಅನಂತರ ಉತ್ತರ ಕರ್ನಾಟಕ ಭಾಗವನ್ನಲ್ಲದೆ ಸುತ್ತಲ ದಕ್ಷಿಣ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಪ್ರದೇಶಗಳ ಬಹುಭಾಗಗಳಲ್ಲಿ ಕಲ್ಯಾಣದ ಚಾಲುಕ್ಯರು ಆಳ್ವಿಕೆ ನಡೆಸಿದರು. ಈ

ವಂಶದವರ ಆಳ್ವಿಕೆ ಪ್ರಾರಂಭವಾದದ್ದು ಕ್ರಿ.ಶ. ೯೭೩ರಲ್ಲಿ. ಆ ವರ್ಷ ರಾಷ್ಟ್ರಕೂಟ ಖೊಟ್ಟಿಗನನ್ನು ಸೋಲಿಸಿ ಚಾಲುಕ್ಯವಂಶದ ಇಮ್ಮಡಿ ತೈಲಪ ಸಿಂಹಾಸನವನ್ನು ಆಕ್ರಮಿಸಿಕೊಂಡ. ಅಲ್ಲಿಂದ ಸುಮಾರು ೨ ಶತಮಾನಗಳವರೆಗೆ ಚಾಲುಕ್ಯರ ಆಳ್ವಿಕೆ ಅವ್ಯಾಹತವಾಗಿ ಸಾಗಿ ಅನಂತರ ಇಳಿಮುಖವಾಗಿ ೧೨ನೆಯ ಶತಮಾನದ ಅಂತ್ಯದ ಹೊತ್ತಿಗೆ ಮರೆಯಾಯಿತು. ಈ ರಾಜಕೀಯ ಅಂಶಗಳು ಚಾಲುಕ್ಯರ ಇತಿಹಾಸದ ಅವಲೋಕನದಿಂದ ತಿಳಿದುಬರುತ್ತವೆ.

ಕಲ್ಯಾಣ ಚಾಲುಕ್ಯರು ಇಡೀ ರಾಯಚೂರು ಪ್ರದೇಶವನ್ನು ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಸದ್ಯ ರಾಯಚೂರು ಜಿಲ್ಲೆಯಲ್ಲಿ ಬೆಳಕಿಗೆ ಬಂದಿರುವ ಬಹಳಷ್ಟು ಪ್ರಾಚೀನ ಶಾಸನಗಳಲ್ಲಿ ಈ ವಂಶದ್ದೇ ಸಿಂಹಪಾಲು.[೧೮] ಬಳಗಾನೂರು ಪರಿಸರವು ರಾಷ್ಟ್ರಕೂಟರ ನಂತರ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಶಾಸನಾಧಾರಗಳು ಸ್ಪಷ್ಟಪಡಿಸುತ್ತವೆ. ಈ ಪರಿಸರದಿಂದ ಕೇವಲ ೧೫ ಕಿ.ಮೀ. ಅಂತರದಲ್ಲಿರುವ ಬೆಳ್ಗುರ್ಕಿಯ ಕ್ರಿ.ಶ. ೯೯೨ರ ಶಾಸನವು ಅರಿಕೇಸರಿಯು ಕೇತವಿಕಲ್ಲು ನೆಲೆವೀಡಿನಲ್ಲಿದ್ದಾಗ ಅರಸ ಅಜವರ್ಮ ಎಂಬುವನು ಕೆಳವಾಡಿ ೩೦೦ರ ಬಾಡವನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[೧೯] ಬಳಗಾನೂರು ಕೆಳವಾಡಿ ೩೦೦ರ ಆಡಳಿತ ವಿಭಾಗದ ಒಂದು ಭಾಗವಾಗಿದ್ದರಿಂದ ಪ್ರಾರಂಭಿಕ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಪ್ರಭಾವವನ್ನು ಇಲ್ಲಿ ಕಾಣಬಹುದು. ಇಲ್ಲಿಂದ ಮುಂದೆ ಕ್ರಿ.ಶ. ೧೦೧೦ರ ಶಾಸನ ದೊರೆಯುತ್ತದೆ. ಇದರಲ್ಲಿ ತ್ರಿಭುವನಮಲ್ಲ ಎಂಬ ವಿಶೇಷಣವನ್ನು ಪಡೆದಿದ್ದ ಐದನೆಯ ವಿಕ್ರಮಾದಿತ್ಯನು ಇವನ ತಮ್ಮ ಇಮ್ಮಡಿ ಜಯಸಿಂಹನು ರಾಜಧಾನಿ ಮೋಸಂಗಿಯಿಂದ ಆಳುತ್ತಿದ್ದಂತೆ ಉಲ್ಲೇಖವಿದ್ದು ಆಹವಮಲ್ಲನ ಚಟ್ಟ(ಸೇವಕ) ಕರಿಯಯ್ಯನಿಗೆ ೧೦೦ ಮತ್ತರು ದಾನ ನೀಡಿದ. ಈ ಗ್ರಾಮವನ್ನು ಶಾಸನದಲ್ಲಿ ಚಲುಕಿಯರ ಪೊಲಗೆರೆ ಎಂದು ಕರೆಯಲಾಗಿದೆ.[೨೦] ಇಮ್ಮಡಿ ಜಯಸಿಂಹನು ಮಸ್ಕಿಯಲ್ಲಿ ಆಳುತ್ತಿದ್ದಾಗ ವೈರಿ ಚೋಳ ಅರಸ ರಾಜೇಂದ್ರಚೋಳ ತನ್ನ ಅಳಿಯ ರಾಜರಾಜನ ಪಕ್ಷ ವಹಿಸಿ ಜಯಸಿಂಹನ ವಿರುದ್ಧ ಹೋರಾಟಕ್ಕೆ ಸನ್ನದ್ಧನಾದನು. ಇವರೀರ್ವರ ನಡುವೆ ಮಾಸ್ಕಿ ಎಂಬಲ್ಲಿ ಯುದ್ಧ ನಡೆದು ಯುದ್ಧದಲ್ಲಿ ಜಯಸಿಂಹ ಸೋಲನ್ನನುಭವಿಸಿದನು.[೨೧] ಮತ್ತೆ ಕೆಲ ಸಮಯದ ನಂತರ ಚೇತರಿಸಿಕೊಂಡ ಜಯಸಿಂಹ ಚೋಳರನ್ನು ಸಂಪೂರ್ಣವಾಗಿ ಸೋಲಿಸಿ ತನ್ನ ರಾಜ್ಯದಿಂದ ಹೊರಗಟ್ಟುವಲ್ಲಿ ಯಶಸ್ವಿಯಾದನು. ಯುದ್ಧದ ನಂತರ ಮಸ್ಕಿ ಸುತ್ತಮುತ್ತಲ ಪ್ರದೇಶಗಳ ಆಡಳಿತವನ್ನು ನೋಡಿಕೊಳ್ಳಲು ವೆಂಗಿ ಮನೆತನದ ವಿಜಯಾದಿತ್ಯನನ್ನು ನಾಯಕನನ್ನಾಗಿ ನೇಮಿಸಿದನು. ಈ ಸಮಯದಲ್ಲಿ ಜಯಸಿಂಹನು ಪಿರಿಯ ಮೋಸಂಗಿಯ ನಾಡಪ್ಪೆಯ ದೇವರಿಗೆ ಕಡಂಬೂರ ಉತ್ತರಕ್ಕಿರುವ ಭೂಮಿಯನ್ನು ದಾನ ನೀಡುತ್ತಾನೆ. ದಾನ ಕೊಟ್ಟ ವಿಚಾರವನ್ನು ಸುಂಕನೂರಿನ ಶಾಸನವು(ಕ್ರಿ.ಶ. ೧೦೨೩) ಸ್ಪಷ್ಟೀಕರಿಸುತ್ತದೆ.[೨೨]

ಜಗದೇಕಮಲ್ಲ ಇಮ್ಮಡಿ ಜಯಸಿಂಹನ ರಾಣಿ ಸೋವಲದೇವಿಯು ಏತಗಿರಿ ನೆಲೆವೀಡಿನಲ್ಲಿದ್ದಾಗ ದಿಗ್ಗಿಗೆಯ(ದಿದ್ದಿಗಿ) ಮಧುಸೂದನ ಭಟ್ಟನಿಗೆ ೧೦೦ ಮತ್ತರು ಭೂದಾನ ನೀಡುತ್ತಾಳೆ. ಇದನ್ನು ಕ್ರಿ.ಶ. ೧೦೩೧ರ ಶಾಸನವು ಉಲ್ಲೇಖಿಸುತ್ತದೆ.[೨೩] ಪ್ರಸ್ತುತ ಅಧ್ಯಯನ ವ್ಯಾಪ್ತಿಯಿಂದ ಸುಮಾರು ೨೫ ಕಿ.ಮೀ. ಅಂತರದಲ್ಲಿರುವ ಕ್ರಿ.ಶ. ೧೦೮೫ರ ಸಾಲಗುಂದೆ ಶಾಸನ ನೂರ್ಮಡಿ ತೈಲನಿಂದಾರಂಭಿಸಿ ಆರನೆಯ

ವಿಕ್ರಮಾದಿತ್ಯನವರೆಗೆ ಚಾಲುಕ್ಯ ವಂಶಾವಳಿಯ ಕುರಿತು ವಿವರ ನೀಡುತ್ತದೆ.[೨೪] ಇದು ಸಿಂಧನೂರು ತಾಲೂಕಿನಲ್ಲಿಯೇ ಸಿಕ್ಕಿರುವ ಪ್ರಮುಖ ಶಾಸನವಾಗಿದೆ.

ಇಮ್ಮಡಿ ಜಯಸಿಂಹನ ನಂತರ ಒಂದನೇ ಸೋಮೇಶ್ವರ ಮತ್ತು ಎರಡನೆಯ ಸೋಮೇಶ್ವರರು ಆಳ್ವಿಕೆ ನಡೆಸಿದರು. ಇಮ್ಮಡಿ ಸೋಮೇಶ್ವರನ ನಂತರ ಕಲ್ಯಾಣ ಚಾಲುಕ್ಯ ಮನೆತನವನ್ನು ಕೊನೆಯ ಪ್ರಸಿದ್ಧ ಸಾಮ್ರಾಟನಾಗಿ ಆಳ್ವಿಕೆ ಮಾಡಿದವರೆಂದರೆ 'ಪೆರ್ಮಾಡಿದೇವ', 'ತ್ರಿಭುವನಮಲ್ಲ' ಎಂಬ ಬಿರುದುಳ್ಳ ಆರನೇ ವಿಕ್ರಮಾದಿತ್ಯ. ಬಳಗಾನೂರಿನ ಕ್ರಿ.ಶ. ೧೧೭೫ ಮತ್ತು ಕ್ರಿ.ಶ. ೧೧೮೭ರ ಶಾಸನಗಳಲ್ಲಿ ದಾನಗಳನ್ನು ನೀಡುವಾಗ ತ್ರಿಭುವನಮಲ್ಲನ ನಿತ್ಯ ಭೂಮಿ ದಾನದ ಭೂಮಿ[೨೫] ಎಂದು ಕರೆದು ನೀಡಲಾಗಿದೆ. ಇದು ತ್ರಿಭುವನಮಲ್ಲನ ಬಗ್ಗೆ ಜನರಲ್ಲಿ ಹಾಗೂ ಆಡಳಿತಗಾರರಿಗೆ ಇದ್ದ ಗೌರವವನ್ನು ತೋರಿಸುತ್ತದೆ. ಈ ಮೇಲಿನ ಎರಡು ಶಾಸನಗಳು ಆರನೇ ವಿಕ್ರಮಾದಿತ್ಯನ ಕಾಲದವುಗಳಲ್ಲ ಎಂಬುದು ತಿಳಿದು ಕೊಂಡಿರಬೇಕಾದ ವಿಷಯ. ಆದರೂ ವಿಕ್ರಮಾದಿತ್ಯ ತನ್ನ ಆಡಳಿತ ಕಾಲಾವಧಿಯಲ್ಲಿ ಈ ಪ್ರದೇಶವನ್ನು ಆಳ್ವಿಕೆ ಮಾಡಿರುವುದರಲ್ಲಿ ಅನುಮಾನವಿಲ್ಲ.

ಆರನೇ ವಿಕ್ರಮಾದಿತ್ಯನ ನಂತರ ಈ ಪರಿಸರದಲ್ಲಿ ದೊರೆಯುವ ಆಧಾರಗಳೆಂದರೆ ನಾಲ್ಕನೆಯ ಸೋಮೇಶ್ವರನ ಕುರಿತಾದವುಗಳಾಗಿವೆ. ಚಾಲುಕ್ಯ ಅರಸ ಮುಮ್ಮಡಿ ತೈಲಪನು ದುರ್ಬಲನಾಗಿದ್ದು, ತನ್ನ ಸಾಮರ್ಥ್ಯವನ್ನು ಅರಿತು ಮಗನಾದ ತ್ರಿಭುವನಮಲ್ಲ ನಾಲ್ಕನೆಯ ಸೋಮೇಶ್ವರನನ್ನು ಉತ್ತರಾಧಿಕಾರಿಯಾಗಿ ನೇಮಿಸಿ ರಾಜ್ಯಭಾರ ವಹಿಸಿದನು. ಮುಮ್ಮಡಿ ತೈಲಪನ ಆಡಳಿತಾವಧಿ ಕ್ರಿ.ಶ. ೧೧೪೯-೧೧೬೨. ನಾಲ್ಕನೆಯ ಸೋಮೇಶ್ವರನು ಕೂಡ ದುರ್ಬಲ ಅರಸನಾಗಿದ್ದನು. ಕ್ರಿ.ಶ. ೧೧೬೨ರಲ್ಲಿ ಈತನ ಮೇಲೆ ದಾಳಿ ಮಾಡಿದ ಕಲಚೂರಿಗಳು ವಿಜಯ ಸಾಧಿಸಿ ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಸಜ್ಜಾದರು. ಇಲ್ಲಿಂದ ಸುಮಾರು ೨೦ ವರ್ಷಗಳ ಕಾಲ ಕಲ್ಯಾಣ ಚಾಲುಕ್ಯರ ಆಡಳಿತ ಮರೀಚಿಕೆಯಾಗಿರುತ್ತದೆ. ಕ್ರಿ.ಶ. ೧೧೮೨-೮೪ರ ಸುಮಾರಿನಲ್ಲಿ ಅನೇಕರ ಬೆಂಬಲವನ್ನು ಪಡೆದ ನಾಲ್ಕನೆಯ ಸೋಮೇಶ್ವರನು ಕಲ್ಯಾಣ ಚಾಲುಕ್ಯರ ಎರಡನೇ ಹಂತದ ಆಳ್ವಿಕೆಯನ್ನು ಪ್ರಾರಂಭಿಸಿದನು.[೨೬]

ಈ ರೀತಿಯಾಗಿ ಅಧಿಕಾರವನ್ನು ಸ್ಥಾಪಿಸಿಕೊಂಡ ನಾಲ್ಕನೆಯ ಸೋಮೇಶ್ವರನ ಆಳ್ವಿಕೆ ಮತ್ತು ದಾನ ನೀಡಿದ ಕುರಿತಾಗಿ ಬಳಗಾನೂರಿನ ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಕ್ರಿ.ಶ. ೧೧೮೭ರ ಬಳಗಾನೂರಿನ ನಗರೇಶ್ವರ ದೇವಾಲಯದ ಶಾಸನವು ನಾಲ್ವಡಿ ಸೋಮೇಶ್ವರನು ಆಳುತ್ತಿದ್ದಾಗ ಪಿರಿಯ ಬಳೆರನೂರ ದೇವರಿಗೆ ದಾನ ನೀಡಿದಂತೆ ಉಲ್ಲೇಖಿಸುತ್ತದೆ.[೨೭] ಇಲ್ಲಿನ ಲಕ್ಷ್ಮೀನಾರಾಯಣ ದೇವಾಲಯದ ಕ್ರಿ.ಶ. ೧೧೯೧ರ ಶಾಸನವು ಚಾಲುಕ್ಯ ವಂಶದ ಅರಸ ಸೋಮೇಶ್ವರನು ಆಳುತ್ತಿದ್ದಾಗ ಅವನ ಸಾಮಂತ ಹಾಗೂ ಮಹಾಮಂಡಳೇಶ್ವರನಾದ ಹೊಲ್ಲರಸನು ಹಿರಿಯ ಬಳಗಾನೂರಿನ ಅಗ್ರಹಾರದಲ್ಲಿ ಸಭ್ಯದೇವಸೆಟ್ಟಿ ಅವನ ತಮ್ಮ ಮಹೇಶ್ವರ, ವಿರೂಪಾಕ್ಷಶೆಟ್ಟಿ ಕಟ್ಟಿಸಿದ ಲಕ್ಷ್ಮೀನಾರಾಯಣ ದೇವರ ದೇವಾಲಯಕ್ಕೆ ೧೪ ಮತ್ತರು ಭೂದಾನ ನೀಡುತ್ತಾನೆಂದು ತಿಳಿಸುತ್ತದೆ.[೨೮] ಹಾಗೆಯೇ ಚಾಲುಕ್ಯರ ಸಾಮಂತರಾಗಿದ್ದ ಹೈಹಯ ಅರಸರು ದಾನ ನೀಡಿದ್ದನ್ನು ಇಲ್ಲಿನ ಶಾಸನಗಳು ತಿಳಿಸುತ್ತವೆ.

ಈ ಅಧ್ಯಯನದಲ್ಲಿ ಪ್ರಸ್ತಾಪಿಸುವುದೇನೆಂದರೆ ಇಲ್ಲಿಯವರೆಗೆ ನಾಲ್ಕನೆಯ ಸೋಮೇಶ್ವರನು ಕ್ರಿ.ಶ. ೧೧೮೯ರಲ್ಲಿ ಕಾಲವಾದನೆಂದು ಅಲ್ಲಿಗೆ ಕಲ್ಯಾಣ ಚಾಲುಕ್ಯರ ಆಡಳಿತ ಕರಗಿ ಹೋಯಿತೆಂದು ಹೇಳಲಾಗಿದೆ. ಆದರೆ ಬಳಗಾನೂರಿನ ಶಾಸನಗಳು ಈ ಅಂಶದ ವಿರುದ್ಧವಾಗಿವೆ. ಇಲ್ಲಿನ ಶಾಸನಗಳು ಸೋಮೇಶ್ವರನು ಕ್ರಿ.ಶ. ೧೧೯೧ರ ಸಂದರ್ಭದಲ್ಲಿ ಆಳುತ್ತಿದ್ದನೆಂದು ಹೇಳುವುದರಿಂದ ಸೋಮೇಶ್ವರನ ಆಳ್ವಿಕೆ ಮತ್ತು ಚಾಲುಕ್ಯರ ಅವನತಿಯ ಕಾಲವನ್ನು ಮುಂದೂಡಬಹುದು.

ಕಲ್ಯಾಣ ಚಾಲುಕ್ಯರು ಬಳಗಾನೂರಿನ ಪ್ರದೇಶವನ್ನು ಆಳಿದ್ದಾರೆಂಬುದಕ್ಕೆ ಈ ಮೇಲಿನ ಲಿಖಿತ ಆಕರಗಳ ಜೊತೆಗೆ ಇವರ ಕಾಲದ ದೇವಾಲಯ, ವೀರಗಲ್ಲುಗಳು, ಸ್ಮಾರಕ ಅವಶೇಷಗಳು ಸಹಾಯಕವಾಗಿವೆ.

**ಕಲಚೂರಿಗಳು**

ಕಲ್ಯಾಣದ ಕಲಚೂರಿಗಳು ಸ್ವತಂತ್ರವಾಗಿ ಆಳ್ವಿಕೆ ಮಾಡಿದ ಕಾಲ ತೀರಾ ಸಣ್ಣದು. ಆದರೆ ಸಾಮಂತರಾಗಿ ಆಳ್ವಿಕೆ ಮಾಡಿದ ಕಾಲಾವಧಿ ಹೆಚ್ಚಿನದು ಎಂದು ಹೇಳಿದರೆ ಸಮಂಜಸವೆನಿಸುತ್ತದೆ. ಕಲ್ಯಾಣದ ಕಲಚೂರಿಗಳು ಕರ್ನಾಟಕದ ಇತಿಹಾಸದಲ್ಲಿ ಬೆಳಕಿಗೆ ಬಂದದ್ದು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕೊನೆಯ ಕಾಲಘಟ್ಟದಲ್ಲಿ. ಅಂದರೆ ಕ್ರಿ.ಶ. ೧೨ನೆಯ ಶತಮಾನದ ಮಧ್ಯಭಾಗದಲ್ಲಿ. ಕಲ್ಯಾಣ ಚಾಲುಕ್ಯರಿಗೆ ಹೆಚ್ಚಿನ ಕಾಲಾವಧಿಯವರೆಗೆ ಸಾಮಂತರಾಗಿದ್ದವರಲ್ಲಿ ಇವರೇ ಮೊದಲಿಗರು. ಕ್ರಿ.ಶ. ೧೧೬೨ರಲ್ಲಿ ದುರ್ಬಲ ಚಾಲುಕ್ಯ ಅರಸ ಸೋಮೇಶ್ವರನನ್ನು ಸೋಲಿಸುವ ಮೂಲಕ ಸ್ವತಂತ್ರವನ್ನು ಘೋಷಿಸಿಕೊಂಡು ಕ್ರಿ.ಶ. ೧೧೮೨-೧೧೮೩ರವರೆಗೆ ಸ್ವತಂತ್ರವಾಗಿ ಆಳ್ವಿಕೆ ಮಾಡಿದರು. ಕ್ರಿ.ಶ. ೧೧೬೨ರ ಕೊನೆಯಲ್ಲಿ ೩ನೆಯ ತೈಲನ ಮರಣಾನಂತರ ಕಲಚೂರಿಗಳು ಇಡೀ ಚಾಲುಕ್ಯ ಸಾಮ್ರಾಜ್ಯದ ಅಧಿಕೃತ ಅರಸರೆಂದು ಘೋಷಿಸಿಕೊಂಡರು.[೨೯] ಈ ವಂಶದ ಪ್ರಮುಖ ಅರಸ ಎರಡನೇ ಬಿಜ್ಜಳ. ಈತನು ತನ್ನ ಮಗಳು ಸಿರಿಯಾದೇವಿಯನ್ನು ಸಿಂದಕುಲದ ಅಚುಗಿಯ ಮಗನಿಗೆ ಕೊಟ್ಟನೆಂದು ಬಳಗಾನೂರು ಶಾಸನ ತಿಳಿಸುತ್ತದೆ.[೩೦] ಬಿಜ್ಜಳನಿಗೆ ಸೋಮೇಶ್ವರ, ಸಂಕಮ, ಆಹವಮಲ್ಲ ಮತ್ತು ಸಿಂಘಣ ಎಂಬ ನಾಲ್ವರು ಪುತ್ರರಿದ್ದರು. ಕ್ರಿ.ಶ. ೧೧೬೭ರಲ್ಲಿ ಬಿಜ್ಜಳ ರಾಜ್ಯಸೂತ್ರಗಳನ್ನು ತನ್ನ ಹಿರಿಯ ಮಗ ಸೋವಿದೇವನಿಗೆ (ಸೋಮೇಶ್ವರ) ಒಪ್ಪಿಸಿದ.[೩೧] ಶ್ರೀಪೃಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಪ್ರತಾಪಲಂಕೇಶ್ವರ ಎಂಬ ವಿಶೇಷಣಗಳನ್ನು ಹೊಂದಿದ್ದ ಕಲಚೂರಿ ಚಕ್ರವರ್ತಿ ರಾಯಮುರಾರಿ ಸೋವಿದೇವ ಆಳುತ್ತಿದ್ದಾಗ ರಾಜ್ಯದ ಶ್ರೇಯೋಭಿವೃದ್ಧಿಗಾಗಿ ಹಾಗೂ ಸರ್ವಬಾಧಾಪರಿಹಾರವಾಗಿ ಬಳಗಾನೂರಿನ ದೇವರಿಗೆ ದಾನ ನೀಡಿದ್ದನ್ನು ಅಲ್ಲಿನ ಕ್ರಿ.ಶ. ೧೧೭೪ರ ಶಾಸನವು ಉಲ್ಲೇಖಿಸುತ್ತದೆ.[೩೨]

ರಾಯಮುರಾರಿ ಸೋವಿದೇವನ ನಂತರ ಕಳಚೂರಿ ಆಹವಮಲ್ಲನ ಆಡಳಿತದ ಕುರಿತಾಗಿ ಬಳಗಾನೂರಿನ ಎರಡು ಶಾಸನಗಳು ಮಾಹಿತಿಯನ್ನು ಒದಗಿಸುತ್ತವೆ. ಆಹವಮಲ್ಲನು ತನ್ನ ನಾಲ್ಕನೆಯ ವರ್ಷದ ಆಳ್ವಿಕೆಯಲ್ಲಿ ಅಂದರೆ ಕ್ರಿ.ಶ. ೧೧೮೨ರ ಒಂದು ಶಾಸನದಲ್ಲಿ ಬಳಗಾನೂರಿನ ದೇವರಿಗೆ ತನ್ನ ರಾಜ್ಯದ ಅಂಕಿಮಗೆರೆಯಲ್ಲಿ ದಾನ ಬಿಡಿಸುತ್ತಾನೆ.[೩೩] ಕ್ರಿ.ಶ. ೧೧೮೪ರಲ್ಲಿ ಕಲ್ಯಾಣ ಚಾಲುಕ್ಯ ಅರಸ ನಾಲ್ಕನೆಯ ಸೋಮೇಶ್ವರನ ದಂಡನಾಯಕ ಬೊಮ್ಮರಸನಿಂದಾಗಿ ಸೋಲನ್ನನುಭವಿಸಿದ ಕಲಚೂರಿಗಳ ಅಲ್ಪಾವಧಿ ಆಳ್ವಿಕೆ ಕೊನೆಗೊಂಡಿತು.[೩೪]

ಕಲಚೂರಿಗಳು ಸ್ವತಂತ್ರವಾಗಿ ಆಳ್ವಿಕೆ ಮಾಡಲು ಪ್ರಾರಂಭಿಸಿದ ಕೆಲವು ವರ್ಷಗಳಿಂದ ಹಿಡಿದು ಅವನತಿಯವರೆಗಿನ ಮಾಹಿತಿಯನ್ನು ಬಳಗಾನೂರಿನ ಶಾಸನಗಳು ತಿಳಿಸುತ್ತವೆ. ಇವರ ಕಾಲದಲ್ಲಿ ಬಳಗಾನೂರು ಪ್ರದೇಶವು ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತೆಂದು ಹೇಳಬಹುದು.

**ದೇವಗಿರಿಯ ಯಾದವರು(ಸೇವುಣರು)**

ಇವರು ದೇವಗಿರಿಯ ಯಾದವರು (ಸೇವುಣರು) ಎಂದು ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಬಾದಾಮಿ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ಮರಣಾನಂತರ ದಕ್ಷಿಣಾಪಥದಲ್ಲಿ ಒಂದು ವಿಲಕ್ಷಣ ರಾಜಕೀಯ ಪರಿಸ್ಥಿತಿಯುಂಟಾಯಿತು. ಅನಂತರ ರಾಷ್ಟ್ರಕೂಟರು ಪ್ರಬಲರಾಗಿ ದಕ್ಷಿಣಾಪಥವನ್ನು ಒಂದುಗೂಡಿಸಿ ಆಳಿ ಕೀರ್ತಿ ಗಳಿಸಿದರು. ರಾಷ್ಟ್ರಕೂಟರ ಆಶ್ರಯದಲ್ಲಿ ಅನೇಕ ಸಾಮಂತ ಮನೆತನಗಳು ತಲೆಯೆತ್ತಿದವು. ಅವುಗಳಲ್ಲಿ ಮುಖ್ಯರಾದವರು ಕಲ್ಯಾಣದ ಚಾಲುಕ್ಯರು ಮತ್ತು ದೇವಗಿರಿಯ ಸೇವುಣರು. ರಾಷ್ಟ್ರಕೂಟರ ನಂತರ ಕಲ್ಯಾಣ ಚಾಲುಕ್ಯರು ಸ್ವತಂತ್ರರಾದರು. ಆದರೆ ಸೇವುಣರು ಸ್ವತಂತ್ರರಾಗುವಷ್ಟು ಶಕ್ತಿವಂತರಲ್ಲದೇ ಇದ್ದುದರಿಂದ ಕಲ್ಯಾಣ ಚಾಲುಕ್ಯರ ಸಾಮಂತರಾದರು. ಚಾಲುಕ್ಯರಿಗೂ ಮತ್ತು ಕಳಚೂರ್ಯರಿಗೂ ಯುದ್ಧ ನಡೆಯುತ್ತಿದ್ದಾಗ ಸಾಮಂತರಾದ ಸೇವುಣರು ಸ್ವತಂತ್ರಕ್ಕಾಗಿ ಹವಣಿಸಿ ಯಶಸ್ವಿಯಾದರು. ಸೇವುಣರ ಆಡಳಿತವು ಕ್ರಿ.ಶ. ೮೩೫ರಿಂದ ಆರಂಭವಾಗುತ್ತದೆಯಾದರೂ ರಾಷ್ಟ್ರಕೂಟರ ಸಾಮಂತನಾಗಿದ್ದ ವಡ್ಡಿಗನ ನಂತರವೇ ಇವರ ಆಳ್ವಿಕೆ ಪ್ರಾಮುಖ್ಯತೆ ಯನ್ನು ಪಡೆದುಕೊಂಡಿತು.[೩೫] ರಾಯಚೂರು ಜಿಲ್ಲೆಯಲ್ಲಿ ಇವರ ಆರಂಭದ ಶಾಸನಗಳು ಕಂಡುಬರದಿದ್ದರೂ ಕ್ರಿ.ಶ. ೧೧೯೧ರ ಕಾಲದಿಂದೀಚೆಗೆ ಶಾಸನಗಳು ದೊರೆಯುತ್ತವೆ. ಬಳಗಾನೂರು ಪ್ರದೇಶವೂ ಕೂಡ ಸೇವುಣರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತೆಂಬುದಕ್ಕೆ ಇಲ್ಲಿ ಸಿಕ್ಕಿರುವ ಶಾಸನವೊಂದು ಸಾಕ್ಷಿಯನ್ನೊದಗಿಸುತ್ತದೆ. ಬಳಗಾನೂರಿನ ಯಲ್ಲಮ್ಮ ಗುಡಿಯ ಮುಂಭಾಗದಲ್ಲಿನ ಶಾಸನವು ಸೇವುಣ ವಂಶದ ಅರಸ ಕನ್ನರದೇವನ ಹೆಸರಿನ ಜೊತೆಗೆ ಆತನ ಆಡಳಿತ ಕಾಲ ಕ್ರಿ.ಶ. ೧೨೬೮ ಎಂದು ಉಲ್ಲೇಖಿಸುತ್ತದೆ.[೩೬]

**ಹೈಹಯರು**

ದೇವಗಿರಿಯ ಯಾದವರ ಆಳ್ವಿಕೆಗೆ ಒಳಪಟ್ಟ ಬಳಗಾನೂರು ಪ್ರದೇಶವು ಹೈಹಯರ ಆಳ್ವಿಕೆಗೂ ಒಳಪಟ್ಟಿತ್ತು. ಇವರ ಕಾಲದಲ್ಲಿ ಇದೊಂದು ಪ್ರಮುಖ ಪಟ್ಟಣ ಕೂಡ ಆಗಿತ್ತು. ಹೈಹಯರು ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಎಡದೊರೆ ೨೦೦೦ ನಾಡಿನಲ್ಲಿ ಆಳ್ವಿಕೆ ಮಾಡುತ್ತಿದ್ದರು. ಮಾನ್ವಿ ತಾಲೂಕಿನ ಚಿಕ್ಕಗ್ರಾಮ ಮಲ್ಲಟ ಮೊರಟ ಹೆಸರಿನಿಂದ ೧೨ನೆಯ ಶತಮಾನದಲ್ಲಿ ಹೈಹಯರ ರಾಜಧಾನಿಯಾಗಿತ್ತು.[೩೭]

ಬಳಗಾನೂರಿನ ಲಕ್ಷ್ಮೀನಾರಾಯಣ ದೇವಾಲಯದ ಮಂಟಪದಲ್ಲಿರುವ ಕ್ರಿ.ಶ. ೧೧೯೧ರ ಶಾಸನವು ಕಲ್ಯಾಣ ಚಾಲುಕ್ಯ ಅರಸ ನಾಲ್ಕನೆಯ ಸೋಮೇಶ್ವರನು ಆಳುತ್ತಿದ್ದಾಗ ಮಹಾಮಂಡಳೇಶ್ವರರಾದ ಹೈಹಯ ಅರಸರು ಈ ದೇವರಿಗೆ ದಾನ ನೀಡಿದ್ದನ್ನು ಸ್ಪಷ್ಟಪಡಿಸುತ್ತದೆ. ಹೈಹಯ ಹೊಲ್ಲರಸನು ೧೪ ಮತ್ತರು ಭೂಮಿಯನ್ನು ನೀಡುತ್ತಾನೆಂದು ಹಾಗೂ ಮಹಾಮಂಡಳೇಶ್ವರ ಮಲ್ಲಿದೇವರಸನು ಮದನಸಿರಿಊರ(ಸಿರಿವಾರ) ರಾಜಧಾನಿಯಲ್ಲಿ ಪತ್ನಿ ಮಾಕಲದೇವಿ ಮಕ್ಕಳು ಪ್ರಧಾನರೊಂದಿಗೆ ಸೇರಿ ಭೂಮಿಯನ್ನು ದಾನ ಬಿಡುತ್ತಾನೆ. ಇವರಿಗೆ ಅಲ್ಲಹುಲಿದೇವರಸನೆಂಬ ಮಗನಿದ್ದನು. ಇವನು ತಂದೆಯ ಆಳ್ವಿಕೆಯಲ್ಲಿ ಕೆರೆಯೂರು ಮೊದಲಾದವು ಗಳನ್ನು ಕುಮಾರ ವೃತ್ತಿಯಿಂದ ಆಳುತ್ತಿದ್ದನೆಂದು ಬಳಗಾನೂರಿನ ಶಾಸನ ಹೇಳಿದೆ.[೩೮]

## ಕರಡಿಕಲ್ಲಿನ ಕದಂಬರು(ಕಡಂಬರು)

ಬನವಾಸಿ ಕದಂಬರ ಮನೆತನದ ಆಳ್ವಿಕೆಯು ಕೊನೆಗೊಂಡ ನಂತರದಲ್ಲಿ ಅದು ಅನೇಕ ಶಾಖೆಗಳಾಗಿ ವಿಭಜಿತಗೊಂಡಿತು. ಆ ಶಾಖೆಗಳನ್ನು ಈ ರೀತಿಯಾಗಿ ಗುರುತಿಸಬಹುದು. ಅವು ಗೋವೆಯ ಕದಂಬರು, ಹಾನಗಲ್ ಕದಂಬರು, ನೂರಂಬಾಡದ ಕದಂಬರು, ಕರಡಿಕಲ್ಲಿನ ಕದಂಬರು, ಬಂಕಾಪುರದ ಕದಂಬರು, ಬಯಲ್ನಾಡ ಕದಂಬರು, ಚಂದಾವರ ಕದಂಬರು ಮತ್ತು ನಾಗರಖಂಡ ೭೦ರ ಕದಂಬರು ಪ್ರಮುಖ ಶಾಖೆಗಳಾಗಿವೆ. ಇತರ ಕದಂಬ ಶಾಖೆಗಳಿಗಿಂತ ಕರಡಿಕಲ್ಲ ಕದಂಬರು ಭಿನ್ನರಾಗಿ ಕಂಡುಬರುತ್ತಾರೆ. ಇದು ಇವರು ಧರಿಸಿದ ನವಿಲೆಯ ಪಾರ್ಥ, ತೊರದಡಿಯ ಭೀಮ, ಮನ್ನೆಯ ಗೊಡವೆ ಎಂಬ ವಿಶಿಷ್ಟ ಬಿರುದುಗಳಿಂದ ಕಂಡುಬರುತ್ತದೆ[೩೯](ನವಿಲೆ ಎಂಬುದು ಈಗಿನ ನವಲಿ ಎಂಬ ಗ್ರಾಮ).

ಈಗಿನ ಲಿಂಗಸೂಗೂರು ತಾಲೂಕಿನ ಕರಡಿಕಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದ ಕದಂಬರನ್ನು ಕರಡಿಕಲ್ಲ ಕದಂಬರೆಂದು ಕರೆಯಲಾಗಿದೆ. ಸಿಂಧನೂರು ತಾಲೂಕಿನ ಹಿರೇಬೇರಿಗೆಯ ಕ್ರಿ.ಶ. ೧೧೦೦ರ ಶಾಸನವು ಕಡಂಬ ಬಾಚರಸನು ವಿಕ್ರಮಾದಿತ್ಯನ ಸಾಮಂತನಾಗಿ ಆಳುತ್ತಿದ್ದನೆಂದು ತಿಳಿಸುತ್ತದೆ.[೪೦] ಹಿರೇಬೇರಿಗೆ ಗ್ರಾಮವು ಬಳಗಾನೂರು ಪ್ರದೇಶದಿಂದ ಕೇವಲ ೨೦ ಕಿ.ಮೀ. ಅಂತರದಲ್ಲಿರುವುದರಿಂದ ಈ ಪ್ರದೇಶವೂ ಕೂಡ ಕರಡಿಕಲ್ಲ ಕದಂಬರ ಆಳ್ವಿಕೆಗೆ ಒಳಪಟ್ಟಿರಬೇಕು.

## ಸಿಂಧರು

ಸಿಂಧನೂರು ತಾಲೂಕಿನ ಸಾಲಗುಂದಿ ಗ್ರಾಮವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಸಿಂಧರನ್ನು ಸಾಲಗುಂದಿ ಸಿಂಧರು ಎಂದು ಕರೆಯಲಾಗುತ್ತದೆ. ಸಾಲಗುಂದಿ ಸಿಂಧರ ಮನೆತನವು ಉಳಿದ ಸಿಂಧರ ಮನೆತನಗಳಿಗಿಂತ ಭಿನ್ನವಾದುದು. ಇವರು ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಆಳುತ್ತಿದ್ದರು ಎಂಬುದನ್ನು ಮುಕ್ಕುಂದೆಯಲ್ಲಿರುವ ಕ್ರಿ.ಶ. ೧೦೮೮ರ ಶಾಸನವು ತಿಳಿಸುತ್ತದೆ. ಇವರು ತಮ್ಮ ವಂಶದ ಮೂಲ ಪುರುಷ, ನಾಗೇಂದ್ರ ಮತ್ತು ನಾಗಿಣಿಯರೆಂದು ಹೇಳಿಕೊಂಡಿದ್ದಾರೆ.[೪೧]

ಬಳಗಾನೂರು ಪರಿಸರದ ದಿದ್ದಿಗಿ ಗ್ರಾಮದಲ್ಲಿನ ಸೋಮನಾಥೇಶ್ವರ ದೇವಾಲಯದ ಸುತ್ತಮುತ್ತಲಲ್ಲಿ ಸಿಂಧರ ಕಾಲದ ಶಾಸನಗಳಿವೆ.[೪೨] ಇವುಗಳಿಂದ ಈ ಪರಿಸರ ಸಿಂಧರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ.

## ವಿಜಯನಗರ ಸಾಮ್ರಾಜ್ಯ

ದಕ್ಷಿಣ ಭಾರತದ ಇತಿಹಾಸದಲ್ಲಿ ಸುಮಾರು ಮೂರು ಶತಮಾನಗಳಿಗಿಂತ ಹೆಚ್ಚು ಕಾಲ ಆಳ್ವಿಕೆ ನಡೆಸಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಪೋಷಿಸಿದ ಸಾಮ್ರಾಜ್ಯ ಇದಾಗಿತ್ತು. ಅತ್ಯಂತ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದ ಜನರ ಬದುಕಿನಲ್ಲಿ ಹೊಸ ಚೇತನವನ್ನು ಮೂಡಿಸಿತು. ಎಲ್ಲೆಲ್ಲೂ ಅತಂತ್ರ ಸ್ಥಿತಿಯನ್ನು ನಿರ್ಮಿಸುತ್ತಿದ್ದ ಮುಸ್ಲಿಮರ ದಾಳಿಗಳನ್ನು ವಿಜಯನಗರದ ಅರಸರು ಯಶಸ್ವಿಯಾಗಿ ತಡೆದು ಆಂತರಿಕ ಗಲಭೆಗಳನ್ನು ಹತ್ತಿಕ್ಕಿ ಶಾಂತಿ ವ್ಯವಸ್ಥೆಯನ್ನು ಸ್ಥಾಪಿಸಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಕೆಲವೇ ವರ್ಷಗಳ ನಂತರ ಅಧಿಕೃತವಾಗಿ ಸ್ಥಾಪನೆಯಾದ ಬಹಮನಿ ಸಾಮ್ರಾಜ್ಯದ ಉದ್ದಂಡವನ್ನು ವಿಜಯನಗರವು ಹತ್ತಿಕ್ಕಿತು.

ವಿಜಯನಗರದ ಅರಸರ ಆಳ್ವಿಕೆ ಕಾಲದಲ್ಲಿ ರಾಯಚೂರು ಜಿಲ್ಲೆಯು ಪ್ರಮುಖ ಪಾತ್ರವನ್ನು ವಹಿಸಿದೆ. ಕೃಷ್ಣ-ತುಂಗಭದ್ರೆಯರ ಮಡಿಲ ಕೂಸಾಗಿರುವ ರಾಯಚೂರು ದೋ-ಅಬ್ ಪ್ರದೇಶವನ್ನು ಪಡೆದುಕೊಳ್ಳಲು ವಿಜಯನಗರ ಮತ್ತು ಬಹಮನಿ ಸುಲ್ತಾನರ ನಡುವೆ ಸುಮಾರು ೨೦೦ ವರ್ಷಗಳಿಗಿಂತ ಹೆಚ್ಚು ಕಾಲ ಸಂಘರ್ಷಗಳು ನಡೆದುಬಂದವು. ಇವೆರಡು ಮನೆತನಗಳಿಂದಾಗಿ ಈ ಪ್ರದೇಶವು ರಣರಂಗವಾಗಿಯೇ ಮಾರ್ಪಟ್ಟಿತ್ತು. ಇವೆರಡೂ ಮನೆತನಗಳ ನಡುವೆ ರಾಯಚೂರು ಪ್ರದೇಶದಲ್ಲಿ ನಡೆದ ಯುದ್ಧಗಳ ಸಂಖ್ಯೆಯಲ್ಲಿ ನಿರ್ದಿಷ್ಟತೆ ಕಂಡುಬಂದಿಲ್ಲ. ಆದರೂ ಒಂದು ಪ್ರದೇಶವನ್ನು ಹಿಡಿತದಲ್ಲಿಟ್ಟುಕೊಳ್ಳಲು ವಿಜಯನಗರ-ಬಹಮನಿ ಅರಸರುಗಳ ನಡುವೆ ರಾಯಚೂರು ಪ್ರದೇಶದಲ್ಲಿ ನಡೆದಷ್ಟು ಯುದ್ಧಗಳು ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಬೇರೆ ಭಾಗದಲ್ಲಿ ನಡೆದಿಲ್ಲವೆನ್ನಬಹುದು. ಈ ಸಾಮ್ರಾಜ್ಯವನ್ನು ಕಾಲಾನುಕ್ರಮದಲ್ಲಿ ೪ ರಾಜವಂಶಗಳು ಆಳಿದವು. ೧. ಸಂಗಮ ವಂಶ(ಕ್ರಿ.ಶ. ೧೩೩೬-೧೪೮೫), ೨. ಸಾಳುವ ವಂಶ(ಕ್ರಿ.ಶ. ೧೪೮೫-೧೫೦೩), ೩. ತುಳುವ ವಂಶ(ಕ್ರಿ.ಶ. ೧೫೦೩-೧೫೫೫), ೪. ಅರವೀಡು ವಂಶ(ಕ್ರಿ.ಶ. ೧೫೫೫-೧೬೪೬).[೪೩]

ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸ್ಥಾಪಿತವಾದರೂ ರಾಯಚೂರು ಜಿಲ್ಲೆಯಲ್ಲಿ ಇವರ ಶಾಸನಗಳು ದೊರೆಯುವುದು ಕ್ರಿ.ಶ. ೧೪೩೬ರ ನಂತರ. ಎರಡನೆಯ ದೇವರಾಯನ ಮುದಗಲ್ಲಿನ ಶಾಸನ ಪ್ರಥಮವಾದುದು.[೪೪] ಎರಡನೆಯ ದೇವರಾಯನ ನಂತರ ಕೃಷ್ಣದೇವರಾಯನವರೆಗೆ ಯಾವುದೇ ಆಧಾರಗಳು ಇಲ್ಲಿ ಸಿಕ್ಕುವುದಿಲ್ಲ. ಕೃಷ್ಣದೇವರಾಯನ ಕಾಲದಲ್ಲಿ ರಾಯಚೂರು ಪ್ರದೇಶವು ಮಹತ್ವವನ್ನು ಪಡೆದುಕೊಂಡಿತ್ತು. ಈ ಪ್ರದೇಶವು ಇಸ್ಮಾಯಿಲ್ ಆದಿಲ್‌ಶಾಹನ ವಶದಲ್ಲಿದ್ದಾಗ ಕ್ರಿ.ಶ. ೧೫೨೦ರಲ್ಲಿ ಅವನನ್ನು ಸೋಲಿಸಿ ರಾಯಚೂರು ಕೋಟೆಯನ್ನು ವಶಪಡಿಸಿಕೊಂಡನು. ಇದು ಕೃಷ್ಣದೇವರಾಯನ ಮಹತ್ವದ ವಿಜಯಗಳಲ್ಲಿ ಒಂದಾಗಿತ್ತು ಎಂದು ತಿಳಿದುಬರುತ್ತದೆ.[೪೫]

ಸಿದ್ರಾಂಪುರದಲ್ಲಿನ ಕ್ರಿ.ಶ. ೧೫೨೩ರ ಶಾಸನದಲ್ಲಿ ರಾಜನ ಉಲ್ಲೇಖವಿಲ್ಲದಿದ್ದರೂ ರವುಡಕುಂದಿಯ ಸೇನಬೋವ, ಸೋಮರಸ ಮತ್ತು ಅವನ ಮಕ್ಕಳು ಸಿಂಗರಸ, ಸೋಮರಸ ಮತ್ತು ನಾಗರಸರು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂದು ವಿರೂಪಾಕ್ಷ ವಿಠ್ಠಲದೇವರನ್ನು ಬೇಡಿಕೊಂಡು ಅರವಟ್ಟಿಗೆ ಕಟ್ಟಿಸಿದ ಉಲ್ಲೇಖವಿದೆ. ಈ ಶಾಸನದ ಒಕ್ಕಣೆ ಹಾಗೂ ಬಳಕೆಯಾಗಿರುವ ಭಾಷೆಯ ಆಧಾರದ ಮೇಲೆ ಇದು ವಿಜಯನಗರ ಕಾಲದ್ದೆಂದು ಹೇಳಬಹುದು.[೪೬] ಸಾಲಗುಂದೆಯ ಕ್ರಿ.ಶ. ೧೫೨೮ರ ಶಾಸನವು ವಿಜಯನಗರ ಅರಸ ವೀರ ಕೃಷ್ಣರಾಯ ರಾಜ್ಯವಾಳುತ್ತಿದ್ದಂತಹ ಸಂದರ್ಭದಲ್ಲಿ ರವುಡಕುಂದಿ ಸೀಮೆಯ ಸಾಲಗುಂದಿ ಗ್ರಾಮವು ಅಬ್ಬರಾವು ಅಯ್ಯನ ಕುದುರೆ ನಾಯಕತನಕ್ಕೆ ಸೇರಿತ್ತು.[೪೭] ಈ ಸಮಯದಲ್ಲಿ ಕೃಷ್ಣದೇವರಾಯನು ರಾಯಚೂರು ಪ್ರದೇಶವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದನು.

ಕೃಷ್ಣದೇವರಾಯನ ನಂತರ ಕ್ರಿ.ಶ. ೧೫೩೦ರಲ್ಲಿ ಪಟ್ಟಕ್ಕೆ ಬಂದಂತಹ ಅಚ್ಯುತ ದೇವರಾಯನಿಗೆ ಸಂಬಂಧಿಸಿದ ಶಾಸನವು ಮಸ್ಕಿ ಪ್ರದೇಶದಲ್ಲಿ ದೊರೆತಿದೆ. ಅಚ್ಯುತದೇವರಾಯನು ತನ್ನ ಆಳ್ವಿಕೆಯ ಸಮಯದಲ್ಲಿ ಮಸ್ಕಿ ಸೀಮೆಯನ್ನು ಸಾಮಂತ ಇಮ್ಮಡಿ ಮೇದಿನಿರಾಯನಿಗೆ ನೀಡಿದನು. ಈತನು ಈ ಭಾಗವನ್ನು ಕ್ರಿ.ಶ. ೧೫೩೭ರವರೆಗೆ ಆಳುತ್ತಿದ್ದುದಕ್ಕೆ ಅನೇಕ ಶಾಸನಗಳ ಆಧಾರವಿದೆ.[೪೮] ಮೇದಿನಿ ರಾಯನು ಕ್ರಿ.ಶ. ೧೫೩೦

ಮತ್ತು ೧೫೩೭ರಲ್ಲಿ ಕ್ರಮವಾಗಿ ತಿದಿಗಿಬಾವಿಯೆಂಬ ಗ್ರಾಮದ ಝುರಣೇದ ದೇವರಿಗೆ ಹಾಗೂ ಮೊಸಗೆ ಮೂಲಸ್ಥಾನ ಮಲ್ಲಿಕಾರ್ಜುನ ದೇವರಿಗೆ ದಾನ ನೀಡುತ್ತಾನೆ. ಹೀಗೆ ಅನೇಕ ರೀತಿಯಲ್ಲಿ ದಾನ ಕೊಟ್ಟಿದ್ದನ್ನು ಇಲ್ಲಿನ ಶಾಸನಗಳು ತಿಳಿಸುತ್ತವೆ. ಅಚ್ಯುತರಾಯನ ತರುವಾಯ ಮಸ್ಕಿಯನ್ನೊಳಗೊಂಡು ಸುತ್ತಮುತ್ತಲಿನ ಪ್ರದೇಶಗಳನ್ನು ಸದಾಶಿವರಾಯನು ಆಳುತ್ತಿದ್ದುದಕ್ಕೆ ಅನೇಕ ಸಾಕ್ಷ್ಯಾಧಾರಗಳಿವೆ. ಮಸ್ಕಿಯು ಸೀಮೆ ಎಂಬ ಆಡಳಿತ ಘಟಕವಾಗಿದ್ದರೆ ಮುದಗಲ್ಲು ಪ್ರದೇಶವು ನಾಡು ಎಂಬ ಆಡಳಿತ ಘಟಕವಾಗಿ ಕಾರ್ಯ ನಿರ್ವಹಿಸುತ್ತಿತ್ತು. ಮುದಗಲ್ಲು, ಮಸ್ಕಿ, ರಾಯಚೂರು ಪ್ರದೇಶಗಳು ವಿಜಯನಗರ ಕಾಲದಲ್ಲಿ ವಿವಿಧ ಶ್ರೇಣೀಕೃತ ಆಡಳಿತ ಘಟಕಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು.[೪೯]

ಪ್ರಸ್ತುತ ಬಳಗಾನೂರು ಪರಿಸರದಲ್ಲಿ ವಿಜಯನಗರ ಅರಸರ ಕುರಿತಾದ ಯಾವುದೇ ಶಾಸನಾಧಾರಗಳು ದೊರೆತಿಲ್ಲ. ಆದ್ದರಿಂದ ಇವರ ಆಳ್ವಿಕೆಯನ್ನು ಕುರಿತು ತಿಳಿಸುವ ಈ ಮೇಲಿನ ಆಧಾರಗಳಿಂದ ಬಳಗಾನೂರು ಪರಿಸರವು ವಿಜಯನಗರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳುವುದು ಅನಿವಾರ್ಯತೆಯಾಗಿದೆ. ಶಾಸನಾಧಾರಗಳು ಸಿಗದಿದ್ದರೂ ವಿಜಯನಗರ ಕಾಲದ ವೀರಗಲ್ಲುಗಳು ಮತ್ತು ದೇವಾಲಯಗಳು ಇಲ್ಲಿ ಕಾಣಸಿಗುತ್ತವೆ. ಇವು ವಿಜಯನಗರದ ಅರಸರು ಈ ಪ್ರದೇಶವನ್ನು ಆಳಿದ್ದಾರೆಂಬುದಾಗಿ ಸ್ಪಷ್ಟೀಕರಿಸುತ್ತವೆ.

## ಬಹಮನಿ ಸಾಮ್ರಾಜ್ಯ

ಉತ್ತರ ಕರ್ನಾಟಕ ಮತ್ತು ದಖನ್ನಿನ ಬಹುಭಾಗದ ಮೇಲೆ ಒಡೆತನ ನಡೆಸಿದ ಮತ್ತು ಕರ್ನಾಟಕದಲ್ಲಿ ನೆಲೆಯೂರಿದ ಪ್ರಥಮ ಇಸ್ಲಾಂ ರಾಜ್ಯ ಇದಾಗಿದೆ. ಹಸನಗಂಗು ಎಂಬುವವನಿಂದ ಕ್ರಿ.ಶ. ೧೩೪೭ರಲ್ಲಿ ಸ್ಥಾಪನೆಯಾಯಿತು. ಸುಮಾರು ೨ ಶತಮಾನಗಳ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಈ ಸಾಮ್ರಾಜ್ಯ ಪ್ರಮುಖ ಪಾತ್ರ ವಹಿಸಿತು. ಬಹಮನಿ ಮತ್ತು ವಿಜಯನಗರ ಸಾಮ್ರಾಜ್ಯಗಳು ರಾಯಚೂರು ದೋ ಅಬ್ ಪ್ರದೇಶವನ್ನು ಪಡೆಯಲು ದೀರ್ಘವಾದ ಸಂಘರ್ಷಕ್ಕಿಳಿದವು. ವಿಜಯನಗರ ಅರಸರ ಸಮಕಾಲೀನರಾಗಿದ್ದ ಬಹಮನಿ ಸುಲ್ತಾನರ ರಾಜಕೀಯ ಚಟುವಟಿಕೆಗಳು ಆ ಮನೆತನದ ಅರಸರ ಚಟುವಟಿಕೆಗಳಿಗೆ ಅನುಗುಣವಾಗಿಯೇ ಇರುತ್ತಿದ್ದುದು ಗಮನಾರ್ಹ. ರಾಯಚೂರು ಪ್ರದೇಶವನ್ನು ವಶಪಡಿಸಿಕೊಳ್ಳುವುದು ಎರಡು ಮನೆತನಗಳು ಪ್ರತಿಷ್ಠೆಯ ಸಂಕೇತವಾಗಿ ಸ್ವೀಕರಿಸಿದ್ದರಿಂದ ಈ ಪ್ರದೇಶವು ಮಧ್ಯಕಾಲೀನ ಸಮಯದಲ್ಲಿ ರಣರಂಗವಾಗಿಯೇ ಮಾರ್ಪಟ್ಟಿತ್ತು. ಇದು ಒಮ್ಮೆ ವಿಜಯನಗರದ ಅಧೀನದಲ್ಲಿದ್ದರೆ, ಮತ್ತೊಮ್ಮೆ ಬಹಮನಿಯರ ಅಧೀನದಲ್ಲಿರುತ್ತಿತ್ತು. ಕ್ರಿ.ಶ. ೧೪೦೭ರಲ್ಲಿ ಅಬ್ದುಲ್ ಪತ್ ಫಿರೋಜ್ ಷಾ ಬಹಮನಿಯು ರಾಯಚೂರು ಜಿಲ್ಲೆಯ ಮಾನ್ವಿಯನ್ನು ಗೆಲ್ಲುವ ಮೂಲಕ ಅಲ್ಲಿದ್ದ ದೇವಾಲಯವನ್ನು ಮಸೀದಿಯಾಗಿ ಪರಿವರ್ತಿಸಿದ.[೫೦] ಇದು ಎರಡು ಮನೆತನಗಳ ನಡುವಿನ ಸಂಘರ್ಷಕ್ಕೆ ಎಡೆಯಾಯಿತು.

ಲಿಂಗಸೂಗೂರು ಮತ್ತು ಮುದಗಲ್ಲು ಪ್ರದೇಶಗಳು ಕ್ರಿ.ಶ. ೧೫೦೦ರ ಆಸುಪಾಸಿನಲ್ಲಿ ವಿಜಯನಗರದ ಅಧೀನದಲ್ಲಿದ್ದರೆ ಹದಿನೈದು ವರ್ಷಗಳ ನಂತರ ಬಹಮನಿಯರ ಅಧೀನಕ್ಕೆ ಬಂದಿತು. ಈ ಸಮಯದಲ್ಲಿ ಮುದಗಲ್ಲು ಮತ್ತು ರಾಯಚೂರು ಕೋಟೆಗಳನ್ನು ಅತ್ಯಂತ ದುರ್ಗಮ ಕೋಟೆಗಳೆಂದು ಪರಿಗಣಿಸಲಾಗಿತ್ತು. ಈ ಕೋಟೆಯ ಕೆಲವು ಭಾಗಗಳನ್ನು ಕ್ರಮವಾಗಿ ಮಲ್ಲಿಕ್ ಮುರಾದ ಹಾಗೂ ಎರಡನೆಯ ಇಬ್ರಾಹಿಂ ಆದಿಲ್‌ಷಾಹನ ಕಾಲದಲ್ಲಿ ಕಟ್ಟಿರುವುದು ತಿಳಿದುಬರುತ್ತದೆ.[೫೧]

ಹೀಗೆ ರಾಜಕೀಯ ಚಟುವಟಿಕೆಗಳು ನಡೆಯುವಂತಹ ಸಂದರ್ಭದಲ್ಲಿ ವಿಜಯನಗರ ಆಳ್ವಿಕೆಗೆ ಒಳಪಟ್ಟಿದ್ದ ಬಳಗಾನೂರು ಪ್ರದೇಶವು ಬಹಮನಿ ಸುಲ್ತಾನರ ಆಳ್ವಿಕೆಗೂ ಒಳಪಟ್ಟಿತ್ತು.

### ಬಿಜಾಪುರದ ಆದಿಲ್‌ಶಾಹಿಗಳು

ಕ್ರಿ.ಶ. ೧೪೯೦-೧೬೮೬ರ ಅವಧಿಯಲ್ಲಿ ಉತ್ತರ ಕರ್ನಾಟಕದ ಬಹುಭಾಗ ಹಾಗೂ ದಖ್ಖನ್ನಿನ ಇತರ ಪ್ರದೇಶಗಳ ಮೇಲೆ ಒಡೆತನ ನಡೆಸಿದ ರಾಜವಂಶ. ಆದಿಲ್‌ಶಾಹಿಗಳ ರಾಜಧಾನಿ ಬಿಜಾಪುರ. ಬಹಮನಿ ಒಡೆದುಹೋದ ಮೇಲೆ ಹುಟ್ಟಿಕೊಂಡ ಐದು ಶಾಹಿ ರಾಜ್ಯಗಳಲ್ಲಿ ಇವರದು ಅತ್ಯಂತ ಪ್ರಸಿದ್ಧವಾದುದು. ಬಳಗಾನೂರು ಪ್ರದೇಶವು ಇವರ ಆಳ್ವಿಕೆಗೂ ಒಳಪಟ್ಟಿತ್ತೆಂಬುದನ್ನು ಶಾಸನಗಳು ದೃಢಪಡಿಸುತ್ತವೆ. ಬಳಗಾನೂರಿನ ಯಲ್ಲಮ್ಮ ಗುಡಿಯ ಮುಂಭಾಗದಲ್ಲಿನ ಶಾಸನವು ಆದಿಲ್‌ಶಾಹಿ ಮನೆತನದ ಅಜರತ್ ಅಲಿ ಸಾಹೇಬರು ಪಾಳೆಯಗಾರ ಪರಿಸರದ ಶ್ರೀಮನ್ಮಹಾನಾಚಾರ್ಯರೊಂದಿಗೆ ಸೇರಿ ಎಲ್ಲಮ್ಮ ದೇವಿಗೆ ಕಪ್ಪು ಭೂಮಿಯನ್ನು ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[೫೨] ಸಿಂಧನೂರು, ಸಿಂಗಾಪುರ ಮತ್ತು ಸುಲ್ತಾನಪುರ ಪ್ರದೇಶಗಳನ್ನು ಆದಿಲ್‌ಶಾಹಿಗಳು ಒಬ್ಬ ಮುಸ್ಲಿಂ ದೇಸಾಯಿಗೆ ವಹಿಸಿಕೊಡುತ್ತಾರೆ.[೫೩] ಇವುಗಳ ಆಧಾರಗಳಿಂದ ಆದಿಲ್‌ಶಾಹಿಗಳು ಈ ಪ್ರದೇಶದ ಮೇಲೆ ಸಂಪೂರ್ಣ ಹಿಡಿತವನ್ನು ಸಾಧಿಸಿದ್ದರೆಂದು ತಿಳಿದುಬರುತ್ತದೆ.

### ಪಾಳೆಯಗಾರರ ಆಳ್ವಿಕೆ

ಬಳಗಾನೂರು ಪರಿಸರವು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರದ ಅರಸರು ತಾಳಿಕೋಟೆ ಕಾಳಗದಲ್ಲಿ ಪತನಗೊಂಡ ನಂತರ ಈ ಭಾಗದಲ್ಲಿ ಸುಲ್ತಾನರ ಪ್ರಭಾವ ಹೆಚ್ಚಾಗುವುದರೊಂದಿಗೆ ಮುಸ್ಲಿಮರ ಅಂಕೆಗೊಳಗಾಯಿತು. ಈ ಸಮಯದಲ್ಲಿ ರಾಯಚೂರು ಜಿಲ್ಲೆಯನ್ನು ಹಲವು ನಾಯಕ ಪಾಳೆಯಗಾರರು ಚಿಕ್ಕಪುಟ್ಟ ಸಂಸ್ಥಾನಗಳನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದರು. ಅಂತಹ ಮಾನ್ಯತೆ ಪಡೆದುಕೊಳ್ಳದೇ ಇರುವ ಸಾಮಾನ್ಯ ವ್ಯಕ್ತಿಯಾದ ಶ್ರೀಮನ್ಮಹಾನಾಚಾರ್ಯ ಮತ್ತು ಅವರ ಬಂಧುಗಳು ಮುಸ್ಲಿಂರೊಂದಿಗೆ ಸೇರಿ ಯಲ್ಲಮ್ಮ ದೇವಿಗೆ 'ಎರೆಭೂಮಿ'ಯನ್ನು ದತ್ತಿಬಿಟ್ಟಿದ್ದನ್ನು ಕ್ರಿ.ಶ. ೧೫೬೫ರ ಬಳಗಾನೂರು ಶಾಸನವು ತಿಳಿಸುತ್ತದೆ.[೫೪] ದಿದ್ದಿಗಿ ಗ್ರಾಮದಲ್ಲಿ ಪಾಳೆಯಗಾರ ಕಾಲದ ಕೋಟೆಯ ಅವಶೇಷಗಳು ಕಾಣಸಿಗುತ್ತವೆ. ಸುರಪುರ ಮತ್ತು ಗುಡಗುಂಟಿ ಸಂಸ್ಥಾನದ ನಡುವೆ ಆಸ್ತಿ ವಿಷಯವಾಗಿ ವ್ಯಾಜ್ಯವುಂಟಾದಾಗ ಜವಳಗೆರೆ ಗ್ರಾಮದ ನಾಡಗೌಡರು ಮಧ್ಯಸ್ತಿಕೆ ವಹಿಸಿದ್ದರು.[೫೫] ವಿಜಯನಗರ ಪತನದ ನಂತರ ಉತ್ತರ ಕರ್ನಾಟಕ ಭಾಗದಲ್ಲಿ ತಲೆಯೆತ್ತಿದ ಸುರಪುರ ಪಾಳೆಯಗಾರ ಮನೆತನ ಪ್ರಬಲವಾಗಿತ್ತು. ಅಲ್ಲದೇ ವಿಸ್ತಾರವಾದ ಪ್ರದೇಶವನ್ನು ಇದು ಹೊಂದಿತ್ತು. ಇಲ್ಲಿ ಕಾಣಸಿಗುವ ಪಾಳೆಯಗಾರರ ಅವಶೇಷಗಳು ಬಹುಶಃ ಸುರಪುರ ನಾಯಕರ ಮನೆತನದವುಗಳಾಗಿರಬಹುದು.

### ಹೈದರಾಬಾದ್ ನಿಜಾಮ

ಉತ್ತರ ಕರ್ನಾಟಕದ ರಾಯಚೂರು ಪ್ರದೇಶವನ್ನು ಬಿಜಾಪುರದ ಆದಿಲ್‌ಶಾಹಿಗಳು ಆಳ್ವಿಕೆ ಮಾಡುತ್ತಿದ್ದಾಗ ಮೊಗಲ್ ಅರಸ ಔರಂಗಜೇಬನು ಕ್ರಿ.ಶ. ೧೬೮೬ರಲ್ಲಿ ಇವರ ಮೇಲೆ ದಾಳಿ ಮಾಡಿ ಆ ಪ್ರದೇಶವನ್ನು ವಶಪಡಿಸಿಕೊಂಡನು. ಔರಂಗಜೇಬನ ಮರಣದ ನಂತರ ನಿಜಾಮ ಅಸಫ್ ಜಾ ಎಂಬುವನು ಕ್ರಿ.ಶ. ೧೭೨೪ರಲ್ಲಿ ಹೈದರಾಬಾದ್ ಸಂಸ್ಥಾನಕ್ಕೆ ಬುನಾದಿ ಹಾಕಿದನು.[೫೬] ಬ್ರಿಟಿಷರಿಂದ ಹೈದರಾಬಾದ್

ನಿಜಾಮರು ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕ(ರಾಯಚೂರು, ಬೀದರ್, ಗುಲ್ಬರ್ಗ)ದ ಕೆಲ ಪ್ರದೇಶಗಳನ್ನು ಪಡೆದರು.[೫೭] ಇವುಗಳನ್ನು ಬ್ರಿಟಿಷರಿಗೆ ಅಧೀನರಾಗಿ ಆಳ್ವಿಕೆ ಮಾಡಬೇಕಾಗಿತ್ತು. ಬ್ರಿಟಿಷ್ ಮತ್ತು ನಿಜಾಮರ ದಬ್ಬಾಳಿಕೆ, ಸರ್ವಾಧಿಕಾರದ ವಿರುದ್ಧ ಅನೇಕರು ದಂಗೆಯೆದ್ದರು. ಅವರಲ್ಲಿ ದಿದ್ದಿಗಿಯ ಡಿ.ಕೆ. ಜಗನ್ನಾಥ್‌ರಾವ್ ಒಬ್ಬರು. ಇವರು ಕ್ರಿ.ಶ. ೧೯೩೭ರಲ್ಲಿ ರಾಯಚೂರಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಚಳವಳಿಯಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಶಿಬಿರದಲ್ಲಿ ಸ್ವಯಂಸೇವಕರಾಗಿ ದುಡಿದಿದ್ದಾರೆ. ಇದಕ್ಕಾಗಿ ಅವರು ಅನೇಕ ಸಲ ಜೈಲುವಾಸವನ್ನು ಕಂಡಿದ್ದಾರೆ.[೫೮]

## ಆಡಳಿತ ವಿಭಾಗಗಳು

### ಎಡದೊರೆ-೨೦೦೦

ಸಾಮ್ರಾಜ್ಯದ ಪ್ರಬಲ ಅರಸರು ತಮ್ಮ ವಿಸ್ತಾರ ಸಾಮ್ರಾಜ್ಯವನ್ನು ಹಿಡಿತದಲ್ಲಿಟ್ಟುಕೊಳ್ಳಲು ರಾಜ್ಯವನ್ನು ಅನೇಕ ಭಾಗಗಳಾಗಿ ವಿಂಗಡಿಸುತ್ತಿದ್ದರು. ಈ ಭಾಗಗಳನ್ನು ನೈಸರ್ಗಿಕ ಗಡಿಗಳಾದ ನದಿ, ಬೆಟ್ಟ, ಗುಡ್ಡ ಮುಂತಾದವುಗಳಿಂದ ಗುರುತಿಸಲಾಗುತ್ತಿತ್ತು. ಈ ರೀತಿ ಗುರುತಿಸಿದ ಪ್ರಸಿದ್ಧ ಪ್ರದೇಶಗಳನ್ನು ಕೇಂದ್ರಗಳನ್ನಾಗಿಸಿ ಆ ನಾಡನ್ನು ಅದೇ ಹೆಸರಿನಿಂದ ಕರೆಯಲಾಗುತ್ತಿತ್ತು. ಇಂತಹ ನಾಡುಗಳನ್ನು ರಾಜವಂಶದವರು, ಉತ್ತರಾಧಿಕಾರಿಗಳು, ರಾಜಪ್ರತಿನಿಧಿಗಳು ಮತ್ತು ಮಹಾಮಂಡಳೇಶ್ವರರು ಒಂದು ಗ್ರಾಮ ಅಥವಾ ಪಟ್ಟಣವನ್ನು ರಾಜಧಾನಿಯನ್ನಾಗಿ ನೇಮಿಸಿಕೊಂಡು ಆಳ್ವಿಕೆ ಮಾಡುತ್ತಿದ್ದರು. ಈ ರೀತಿಯಾಗಿ ಹುಟ್ಟಿಕೊಂಡ ನಾಡುಗಳಲ್ಲಿ ಎಡದೊರೆ-೨೦೦೦ ನಾಡು ಪ್ರಮುಖವಾದುದು. ನಿರ್ದಿಷ್ಟ ಪ್ರದೇಶದಲ್ಲಿ ಬರುವಂತಹ ಹಳ್ಳಿಗಳ ಸಂಖ್ಯೆಯಿಂದ ನಾಡುಗಳನ್ನು ಗುರುತಿಸಲಾಗುತ್ತಿತ್ತು.

ಎಡದೊರೆ-೨೦೦೦ ನಾಡು ಕೃಷ್ಣ, ತುಂಗಭದ್ರೆಗಳಿಂದಾಗಿ ರೂಪುಗೊಂಡಿದೆ. ಆದ್ದರಿಂದ ರಾಯಚೂರು ಜಿಲ್ಲೆಯನ್ನು ಎಡದೊರೆ ನಾಡು ಎಂದು ಕರೆಯುತ್ತಾರೆ.[೫೯] ಈ ಎಡದೊರೆ ನಾಡಿನ ಮೇರೆಗಳನ್ನು ಅಂದಿನ ಆಡಳಿತ ವಿಭಾಗಗಳ ಹಿನ್ನೆಲೆಯಲ್ಲಿ ಗುರುತಿಸುವುದು ಸುಲಭಸಾಧ್ಯ. ಉತ್ತರದಲ್ಲಿ ಅಳಂದೆ ೧೦೦೦ ನಾಡಿನ ಉಪ ವಿಭಾಗ ಅತ್ತಿನೂರು ೮೦, ಈಶಾನ್ಯದಲ್ಲಿ ಅರಲು ೩೦೦, ಪೂರ್ವದಲ್ಲಿ ಆಯಿಜೆ ೩೦೦, ಆಗ್ನೇಯಕ್ಕೆ ಸಿಂದವಾಡಿ ನಾಡಿನ ಮಂಜಾಲ (ಮಂತ್ರಾಲಯ) ೩೬, ದಕ್ಷಿಣದಲ್ಲಿ ಬಲ್ಲಕುಂದೆ ನಾಡಿನ ತೆಕ್ಕೆಕಲ್ಲು ೧೨ ಮತ್ತು ನೆಲ್ಲುಡಿ ೧೨, ನೈರುತ್ಯದಲ್ಲಿ ಪುಲಿಗೆರೆ ೩೦೦ರ ಉಪವಿಭಾಗ ಮಾಸವಾಡಿ ೧೪೦, ಪಶ್ಚಿಮದಲ್ಲಿ ಬೆಳ್ವಲನಾಡಿನ ಕುಕ್ಕನೂರು ೩೦, ಕಿಸುಗಾಡು ೭೦ ಮತ್ತು ಹುನಗುಂದ ೩೦ ಹಾಗೂ ತರ್ದವಾಡಿ ನಾಡಿನ ನಲವತ್ತುಬಾಡ (ನಾಲತವಾಡ), ವಾಯವ್ಯದಲ್ಲಿ ತರ್ದವಾಡಿ ನಾಡಿನ ಸಿಂದಗಿ ೧೨ ಮತ್ತು ನರಿಯಂಬೊಳೆ ೭೦ ವಿಭಾಗಗಳು ಈ ನಾಡಿನ ಬಾಹ್ಯ ಮೇರೆಗಳಾಗಿದ್ದವು.[೬೦]

ಎಡದೊರೆ ನಾಡಿನ ಅತ್ಯಂತ ಪ್ರಾಚೀನ ಉಲ್ಲೇಖ ರಾಷ್ಟ್ರಕೂಟರ ಅರಸ ಅಕಾಲವರ್ಷನ ಕ್ರಿ.ಶ. ೮೯೧-೯೨ರ ಬೋಗಾವತಿ ಶಾಸನದಲ್ಲಿ ಕಂಡುಬರುತ್ತದೆ.[೬೧] ಆಗ ಜಗತುಂಗನು ಎಡದೊರೆ ೨೦೦೦ ನಾಡನ್ನು ಅಣುಗ ಜೀವಿತವಾಗಿ ಆಳುತ್ತಿದ್ದನೆಂದು ಈ ಶಾಸನದಿಂದ ತಿಳಿದುಬರುತ್ತದೆ. ಎಡದೊರೆ ೨೦೦೦ ಆಡಳಿತ ವಿಭಾಗದ ಆರಂಭ ಶಾಸನಗಳು ಸಿಂಧನೂರು ಮತ್ತು ಮಾನ್ವಿ ತಾಲೂಕುಗಳಲ್ಲಿ ದೊರೆಯುವುದರಿಂದ ತುಂಗಭದ್ರಾ ಎಡಗಡೆಯ ಭಾಗವೆಂಬಂತೆ ಅರ್ಥವಾಗುತ್ತದೆ. ತುಂಗಭದ್ರಾ ನದಿ ದಂಡೆಯ ಮೇಲಿರುವ

ಸಿಂಧನೂರು ತಾಲೂಕಿನ ಮುಕ್ಕುಂದೆಯು ಎಡದೊರೆ ನಾಡಿನಲ್ಲಿ ಸಮಾವೇಶಗೊಂಡಿತ್ತು.[೬೨] ಈ ಎಡದೊರೆ ೨೦೦೦ ನಾಡಿನ ರಾಜಧಾನಿಯನ್ನು ಆಡಳಿತದ ಅನುಕೂಲಕ್ಕಾಗಿ ಒಂದು ಗ್ರಾಮದಿಂದ ಮತ್ತೊಂದಕ್ಕೆ ಸ್ಥಳಾಂತರಿಸುವುದನ್ನು ಶಾಸನಗಳು ಉಲ್ಲೇಖಿಸಿವೆ. ಎಡದೊರೆ ನಾಡಿಗೆ ಆರಂಭದಲ್ಲಿ ಅದೇ ಹೆಸರಿನ ಗ್ರಾಮವು ರಾಜಧಾನಿಯಾಗಿದ್ದು, ಮುಂದೆ ಅದು ಮಸ್ಕಿಗೆ ಸ್ಥಳಾಂತರಗೊಂಡಿರಬೇಕು.[೬೩] ಮಸ್ಕಿಯ ಮೂರು ಮತ್ತು ಬಳಗಾನೂರು ಪರಿಸರದ ಸುಂಕನೂರು ಶಾಸನಗಳು 'ರಾಜಧಾನಿ ಪಿರಿಯ ಮೋಸಂಗಿ' ಎಂದು ಕರೆದಿವೆ. ಆದ್ದರಿಂದ ಇಂದಿನ ಲಿಂಗಸೂಗೂರು ತಾಲೂಕಿನ ಮಸ್ಕಿಯು ಚಾಲುಕ್ಯರ ಕಾಲದಲ್ಲಿ ಎಡದೊರೆ ೨೦೦೦ ನಾಡಿನ ರಾಜಧಾನಿಯಾಗಿತ್ತೆಂದು ಹೇಳಬಹುದು.[೬೪]

## ಉಪ ವಿಭಾಗಗಳು

ಆಡಳಿತದ ಅನುಕೂಲಕ್ಕಾಗಿ ಎಡದೊರೆ ನಾಡನ್ನು ಮತ್ತೆ ಕೆಲವು ಉಪ ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಅವು ಕರಡಿಕಲ್ಲು ೩೦೦, ಕೆಳವಾಡಿ ೩೦೦, ಅಯ್ಯಣವಾಡಿ ೩೦೦, ಮೊರಟ ೩೦೦, ಮೊಸಳೆಕಲ್ಲು ೩೦೦ ಮತ್ತು ಸಗರ ೩೦೦ಗಳಾಗಿವೆ.[೬೫]

## ಕರಡಿಕಲ್ಲು ೩೦೦

ಇಂದಿನ ಲಿಂಗಸೂಗೂರು ತಾಲೂಕಿನ ಚಿಕ್ಕ ಹಳ್ಳಿಯಾದ ಕರಡಿಕಲ್ಲು ಈ ವಿಭಾಗದ ಮುಖ್ಯ ಪಟ್ಟಣವಾಗಿದೆ. ಇದರ ಅತ್ಯಂತ ಪ್ರಾಚೀನ ಉಲ್ಲೇಖ ಕ್ರಿ.ಶ. ೯೨೭ ಎರಡೋಣಿ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. ೧೧೯೧ರ ವೇಳೆಯಲ್ಲಿ ಈ ವಿಭಾಗದ ರಾಜಧಾನಿಯು ಮುದಗಲ್ಲು ಪಟ್ಟಣಕ್ಕೆ ಸ್ಥಳಾಂತರಗೊಂಡಿತು. ಇಂದಿನ ಲಿಂಗಸೂಗೂರು ತಾಲೂಕಿನ ಎಲ್ಲ ಹಳ್ಳಿಗಳು ಮತ್ತು ಕುಷ್ಟಗಿ, ಹುನಗುಂದ, ಮಾನ್ವಿ ಹಾಗೂ ಸಿಂಧನೂರು ತಾಲೂಕಿನ ಕೆಲವು ಹಳ್ಳಿಗಳು ಈ ವಿಭಾಗದಲ್ಲಿ ಸಮಾವೇಶಗೊಂಡಿದ್ದವು.[೬೬] ಸಿಂಧನೂರು ತಾಲೂಕಿನ ಒಂದು ಭಾಗವಾದ ಬಳಗಾನೂರು ಪ್ರದೇಶವು ಈ ನಾಡಿನ ಆಡಳಿತ ವ್ಯಾಪ್ತಿಗೆ ಒಳಪಟ್ಟಿರಬೇಕು.

## ಮೊರಟ ೩೦೦

ಮೊರಟ ೩೦೦ ಆಡಳಿತ ವಿಭಾಗದಲ್ಲಿದ್ದ ಸಿರಿವಾರ ಮತ್ತು ಬಳಗಾನೂರು ಗ್ರಾಮಗಳು ಈ ಆಡಳಿತ ವಿಭಾಗದಲ್ಲಿದ್ದ ಪ್ರಮುಖ ಹಳ್ಳಿಗಳಾಗಿವೆ.[೬೭] ಬಳಗಾನೂರಿನ ಕ್ರಿ.ಶ. ೧೧೯೧-೯೨ರ ಶಾಸನವು ಮಲ್ಲದೇವರಸನು ರಾಜಧಾನಿ 'ಮದನಸಿರಿವೂರ'ದಿಂದ ಆಳ್ವಿಕೆ ನಡೆಸುತ್ತಿದ್ದನೆಂದು ಉಲ್ಲೇಖಿಸುತ್ತದೆ.[೬೮] ಈತನ ಮಗನಾದ ಅಲ್ಲಹುಲಿದೇವರಸನು ಮೊರಟನ್ನು ಆಳುತ್ತಿದ್ದಾಗ ಬಳಗಾನೂರಿನ ಲಕ್ಷ್ಮೀನಾರಾಯಣರಿಗೆ ದಾನ ನೀಡಿರುವುದನ್ನು ಅಲ್ಲಿನ ಶಾಸನವೊಂದು ತಿಳಿಸುತ್ತದೆ.[೬೯] ಮಲ್ಲಟ (ಮೊರಟ)ವು ಈ ವಿಭಾಗದ ಮೊದಲ ರಾಜಧಾನಿಯಾಗಿದ್ದರೆ ಬಳಗಾನೂರು ಎರಡನೆಯ ರಾಜಧಾನಿ ಕೇಂದ್ರವಾಗಿತ್ತೆಂದು ತೋರುತ್ತದೆ.

## ಬಳಗಾನೂರು ಸೀಮೆ

ಬಳಗಾನೂರು ಸೀಮೆಯು ಆಡಳಿತ ಘಟಕವಾಗಿತ್ತು. ಇದರ ಉಲ್ಲೇಖ ಇಲ್ಲಿನ ಕ್ರಿ.ಶ. ೧೧೮೨ರ ಶಾಸನದಲ್ಲಿದೆ. ಹದಿನೆಂಟು ಹಳ್ಳಿಯ ಪ್ರಭುಗಳು ಈ ಸೀಮೆಯ ವ್ಯಾಪ್ತಿಗೆ ಒಳಪಟ್ಟಿದ್ದರು. ಆ ಹದಿನೆಂಟು ಹಳ್ಳಿಯ ಪ್ರಭುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ. ಜಲವಾಡಿಗೆ ಪ್ರಭುಗಳು, ರಾವಲವಾಡಿಯ

ಪ್ರಭುಗಳು, ತುಳುಗೆಯ ಪ್ರಭುಗಳು, ಸಂಕನಕೆರೆ, ಲಂಕಿಮಗೆರೆ ಪ್ರಭುಗಳ ಉಲ್ಲೇಖ ಮಾತ್ರ ಸಿಗುತ್ತದೆ.[೨೦] ಇವರು ಅಗ್ರಹಾರ ಮತ್ತು ದೇವಾಲಯಕ್ಕೆ ನೀಡಿದ ದಾನವನ್ನು ಕಾಪಾಡಿಕೊಂಡು ಬರಬೇಕಿತ್ತು.

**ನಾಡಗೌಡ ಮನೆತನಗಳು**

ಪ್ರಬಲ ಸಂಸ್ಥಾನಗಳು ಮತ್ತು ಅರಸರು ಆಡಳಿತದ ಅನುಕೂಲಕ್ಕಾಗಿ ನಾಡಗೌಡ ದೇಸಾಯಿ, ದೇಶಮುಖ, ಕುಲಕರ್ಣಿ, ಜಹಗೀರುದಾರ ಮುಂತಾದವರನ್ನು ನೇಮಿಸಿಕೊಳ್ಳುತ್ತಿದ್ದರು. ಅವರಿಗೆ ಭೂಮಿ ಮತ್ತು ಪ್ರದೇಶವನ್ನು ನೀಡಿ ವತನದಾರರನ್ನಾಗಿ ಮಾಡಿಸಿ ಕಂದಾಯ ವಸೂಲಿ ಮಾಡುವ ಜೊತೆಗೆ ಸೈನ್ಯವನ್ನು ಇಟ್ಟುಕೊಳ್ಳುವ ಅಧಿಕಾರವನ್ನು ಕೊಡಲಾಗುತ್ತಿತ್ತು. ಹೀಗೆ ನಿರ್ದಿಷ್ಟ ಭೂಮಿ ಮತ್ತು ಪ್ರದೇಶಗಳನ್ನಿಟ್ಟುಕೊಂಡು ಆಳ್ವಿಕೆ ಮಾಡಲು ನೇಮಕಗೊಂಡ ಇವರು ಅಗತ್ಯ ಬಿದ್ದಾಗ ಸೈನಿಕ ಸಹಾಯವನ್ನೂ ಮಾಡಬೇಕಾಗಿತ್ತು. ರಾಯಚೂರು ಪ್ರಾಂತವನ್ನು ಆಳಿದ ಕೆಲವು ಸಂಸ್ಥಾನಗಳೊಂದಿಗೆ ನಾಡಗೌಡ ಮನೆತನಗಳವರು ತಮ್ಮದೇ ಆದ ರಾಜಕೀಯ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿರುವರು. ರಾಯಚೂರು ಜಿಲ್ಲೆಯಲ್ಲಿ ಸುಮಾರು ೨೦ ನಾಡಗೌಡ ಮನೆತನಗಳು ಇದ್ದವು. ಜವಳಗೆರೆ, ಉದ್ಬಾಳ, ಉಮಲೂಟಿ(ಸಿಂಧನೂರು ತಾಲೂಕು), ಗೆಜ್ಜಲಗಟ್ಟಿ, ಮೆದಕಿನಾಳ, ಮುದಗಲ್, ಗಣೇಕಲ್(ದೇವದುರ್ಗ ತಾಲೂಕು) ಇವು ಹಿರಿಯ ನಾಡಗೌಡ ಮನೆತನಗಳಾಗಿದ್ದವು. ಬೆಳ್ಳಿಗನೂರು, ಪೋತ್ನಾಳ್, ಜೀನೂರು, ಪಾಮನಕಲ್ಲೂರು, ಮೊನವಿ, ರೌಡಲಬಂಡ, ಕಾಳಾಪೂರ, ಚಿಕ್ಕನಗನೂರು, ಗಣಜಗಿ ಮತ್ತು ಮದರಕಲ್‌ಗಳು ಚಿಕ್ಕ ಸಂಸ್ಥಾನಗಳಾಗಿದ್ದವು. ಬಹುತೇಕ ಎಲ್ಲಾ ನಾಡಗೌಡ ಅರಸು ಮನೆತನಗಳು ಸುರಪುರ ಸಂಸ್ಥಾನದ ನಾಯಕರಿಗೆ ಅಧೀನವಾಗಿದ್ದವು.[೨೧] ಸುರಪುರದ ನಾಯಕರ ನಂತರ ಮುಂದೆ ಇವು ಹೈದರಾಬಾದ್ ನಿಜಾಮನ ಅಧೀನಕ್ಕೆ ಒಳಗಾದವು.

ರಾಯಚೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ಆಳಿದ ಎಲ್ಲಾ ನಾಡಗೌಡ ಮನೆತನಗಳಲ್ಲಿ ಈ ಪರಿಸರದ ಉದ್ಬಾಳ, ಜವಳಗೆರೆ ಮನೆತನಗಳು ಪ್ರಸಿದ್ಧವಾದವುಗಳಾಗಿವೆ. ಬಳಗಾನೂರು ಪರಿಸರದ ಹಳ್ಳಿಗಳು ಈ ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದವು. ಇಲ್ಲಿನ ಸುಲ್ತಾನಪುರ ಗ್ರಾಮವು ಮುಸ್ಲಿಂ ಜಹಗೀರ್‌ದಾರ ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು.

**ಉದ್ಬಾಳ ನಾಡಗೌಡ ಸಂಸ್ಥಾನ**

ಬಿಜಾಪುರದ ಆದಿಲ್‌ಶಾಹಿ ಮನೆತನವು ಕ್ರಿ.ಶ. ೧೬೮೬ರಲ್ಲಿ ಔರಂಗಜೇಬನ ದಾಳಿಗೆ ತುತ್ತಾಗಿ ಅವನತಿ ಹೊಂದಿತು. ಇವರ ಕೈಕೆಳಗೆ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಕೆಲವು ಹಿಂದೂ ಮನೆತನಗಳು ಮೊಗಲರ ದಾಳಿಗೆ ತತ್ತರಿಸಿ ದಕ್ಷಿಣಕ್ಕೆ ವಲಸೆ ಬಂದವು. ಹೀಗೆ ಬಂದವರಲ್ಲಿ ಇಂದಿನ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಬಳಗಾನೂರು ಪರಿಸರದ ಉದ್ಬಾಳ ನಾಡಗೌಡ ಮನೆತನವೂ ಒಂದು. ಇವರು ವೀರಶೈವ ಪಾಕನಾಕರೆಡ್ಡಿ ಉಪವರ್ಗಕ್ಕೆ ಸೇರಿದ್ದಾರೆ.

ಉದ್ಬಾಳ ಸಂಸ್ಥಾನ ಮೂಲತಃ ೧೨೦ ಹಳ್ಳಿಗಳ ಆಡಳಿತ ಘಟಕವಾಗಿತ್ತು.[೨೨] ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದ ಈ ಆಡಳಿತ ಘಟಕವು ವಿಭಾಗವಾಗಿ ೩೨ ಹಳ್ಳಿಗಳು ಮಾತ್ರ ಉಳಿದವು. ಉದ್ಬಾಳ ನಾಡಗೌಡರು ಜಾಲವಾಡಿಗಿ ನಾಡಗೌಡರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದಾಗ ೩೨ ಹಳ್ಳಿಗಳಲ್ಲಿ ೧೬ ಹಳ್ಳಿಗಳನ್ನು

ಅವರಿಗೆ ನೀಡಲಾಯಿತು. ಉಳಿದ ೧೬ ಹಳ್ಳಿಗಳು ಕೊನೆಯವರೆಗೆ ಉಳಿದುಬಂದವು. ಬೆಳ್ಳಿಗನೂರು, ಪೋತ್ನಾಳ, ಪಾಮನಕಲ್ಲೂರು ಮತ್ತು ಜಾಲವಾಡಿಗಿ ಮನೆತನಗಳ ಮೂಲ ಉದ್ಬಾಳ ಸಂಸ್ಥಾನವೇ ಆಗಿತ್ತು. ಆಸ್ತಿ ವಿಭಜನೆಯ ಸ್ವರೂಪದಲ್ಲಿ ಮೂಲ ಸಂಸ್ಥಾನದ ಗ್ರಾಮಗಳು ಸೋದರರಲ್ಲಿ ಹಂಚಿಕೆಯಾದವು. ಇವರು ಕ್ರಮೇಣ ಆಯಾ ಗ್ರಾಮಗಳಲ್ಲಿ ನೆಲೆನಿಂತು ಆಳುವ ಮೂಲಕ ಪ್ರತ್ಯೇಕ ನಾಡಗೌಡಿಕೆಗೆ ಕಾರಣರಾದರು.

ಈ ಸಂಸ್ಥಾನಕ್ಕೆ ಒಳಪಟ್ಟಿದ್ದ ಹಳ್ಳಿಗಳು ಉದ್ಬಾಳ, ಗೌಡನಬಾವಿ, ಪರಾಪುರ, ಜಾಲವಾಡಗಿ, ಹಾಲಾಪುರ, ಅಮೀನಗಡ, ಕಾಚಾಪುರ, ನೆಲಕೊಳ, ಯತಗಲ್ಲು, ಯಕ್ಲಾಸಪುರ, ಬುದ್ದಿನ್ನಿ, ಕುರಕುಂದಿ, ರಾಮಲದಿನ್ನಿ, ಜುಟ್ಲಾಳ(ಬೇಚರಾಕು), ಚೋಳದರಾಸಿ(ಬೇಚರಾಕು), ಬೆಳ್ಳಿಗನೂರು, ಗುಡದಿನ್ನಿ, ಬೆಂಚಮರಡಿ, ಕಬ್ಬೇರಾಳ ಪ್ರಮುಖವಾದವುಗಳಾಗಿವೆ. ಈ ಹಳ್ಳಿಗಳಿಂದ ತೆರಿಗೆಗಳನ್ನು ಸಂಗ್ರಹಿಸಿ ಅದರಲ್ಲಿ ೧೦ ಆಣೆಯನ್ನು ನಿಜಾಮನಿಗೆ ಸಂದಾಯ ಮಾಡುತ್ತಿದ್ದರು. ಉಳಿದ ಆರು ಆಣೆಯನ್ನು ತಮ್ಮಲ್ಲಿ ಇಟ್ಟುಕೊಳ್ಳುತ್ತಿದ್ದರು. ಕಂದಾಯ ವಸೂಲಿ ಮತ್ತು ರಕ್ಷಣೆ ಜವಾಬ್ದಾರಿ ಇವರಿಗೆ ಸೇರಿತ್ತು.

**ಮನೆತನದ ಮೂಲ**

ಮಹಾರಾಷ್ಟ್ರದ ಬಿದರಿಕೋಟೆ ಪ್ರದೇಶದಲ್ಲಿ ದೇಸಗತಿ ನಡೆಸುತ್ತಿದ್ದ ಸೋದರರಲ್ಲಿ(ಹೆಸರು ಮತ್ತು ಆಳ್ವಿಕೆಯ ನಿರ್ದಿಷ್ಟ ಪ್ರದೇಶದ ಉಲ್ಲೇಖವಿಲ್ಲ) ಭೂವ್ಯಾಜ್ಯ ಉಂಟಾಗಿ ಪರಸ್ಪರರು ಕಚ್ಚಾಟದಲ್ಲಿ ತೊಡಗಿದರು. ಈ ಅವಧಿಯಲ್ಲಿ ಅವರು ಮೊಗಲರೊಂದಿಗೂ ಘರ್ಷಣೆಗೆ ಇಳಿಯಬೇಕಾಯಿತು. ಯುದ್ಧದಲ್ಲಿ ಸೋಲುವ ಪ್ರಸಂಗ ಬಂದಾಗ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಊರೂರು ಸುತ್ತುತ್ತ ಇಂದಿನ ಉದ್ಬಾಳ ಗ್ರಾಮಕ್ಕೆ ಬಂದು ನೆಲೆಸಿದರು. ಇದಿಷ್ಟು ಸ್ಥಳಪುರಾಣ ಕಟ್ಟಿಕೊಡುವ ವಿವರಣೆ. ಬಿದರಿಕೋಟೆಯಿಂದ ಬಂದ ಮೊದಲ ವ್ಯಕ್ತಿ ಒಂದನೆಯ ನೀಲಕಂಠರಾವ್ ನಾಡಗೌಡರ ತಂದೆಯೆಂದು ಪಾಮನಕಲ್ಲೂರು ವಂಶಾವಳಿ ಹೇಳುತ್ತದೆ.[೨೩] ಆದರೆ ಆ ವಂಶಾವಳಿಯಲ್ಲಿ ಆತನ ಹೆಸರಿನ ಉಲ್ಲೇಖವಿಲ್ಲ. ವಂಶಾವಳಿಯ ವಿವರಗಳ ಮೇಲಿಂದ ಅವರು ಕ್ರಿ.ಶ. ಸುಮಾರು ೧೪೯೧ರಲ್ಲಿ[೨೪] ಬಿದರಿಕೋಟೆಯನ್ನು ಬಿಟ್ಟು ಕರ್ನಾಟಕಕ್ಕೆ ಬಂದಿರಬೇಕು. ಮುಂದೆ ಕೆಲವು ವರ್ಷಗಳಲ್ಲಿ ತನ್ನ ಶಕ್ತಿ ಸಾಮರ್ಥ್ಯದಿಂದ ಆತನು ಉದ್ಬಾಳ ಪ್ರದೇಶದ ನಾಡಗೌಡಿಕೆಯನ್ನು ಪಡೆದುಕೊಂಡನು.

ಅಸ್ಪಷ್ಟ ಉಲ್ಲೇಖದ ಈ ನಾಡಗೌಡರ ನಂತರ ಒಂದನೆಯ ನೀಲಕಂಠರಾವ್ ನಾಡಗೌಡರು ಉದ್ಬಾಳ ಪ್ರದೇಶವನ್ನು ಕ್ರಿ.ಶ. ೧೭೧೦ರಲ್ಲಿ ಆಳಿದ್ದರಿಂದ ಇವರನ್ನೇ ಸದ್ಯ ಉದ್ಬಾಳ ಸಂಸ್ಥಾನದ ಮೂಲಪುರುಷರೆಂದು ಹೇಳಬಹುದು. ಮುಂದೆ ಕ್ರಮವಾಗಿ ಶಿವಶಂಕರರಾವ್ ನಾಡಗೌಡ(೧೭೩೫), ಅಮರೇಶ್ವರ ನಾಡಗೌಡ(೧೭೬೦), ಬೊರಡ್ಡಿ ನಾಡಗೌಡ(೧೭೮೫) ಮತ್ತು ಎರಡನೆಯ ನೀಲಕಂಠರಾವ್ ನಾಡಗೌಡರು(೧೮೬೦) ಉದ್ಬಾಳ ಪ್ರದೇಶವನ್ನು ಆಳಿದರು.[೨೫] ಆದರೆ ಇವರ ಆಡಳಿತದ ಯಾವ ವಿವರಗಳು ಸ್ಥಳೀಯ ದಾಖಲೆಗಳಿಂದ ತಿಳಿಯುವುದಿಲ್ಲ. ಎರಡನೆಯ ನೀಲಕಂಠರಾವ್ ನಾಡಗೌಡರ ಮಗ ಎರಡನೇ ಮಲಕೇಂದ್ರರಾವ್ ನಾಡಗೌಡರ ಕಾಲದಿಂದ ಉದ್ಬಾಳ ಮನೆತನದ ಇತಿಹಾಸ ಸ್ಪಷ್ಟವಾಗಿದೆ. ಇಲ್ಲಿಂದ ಕ್ರಮೇಣವಾಗಿ ೫ ತಲೆಮಾರುಗಳವರೆಗೆ ನೀಲಕಂಠರಾವ್ ಮತ್ತು ಮಲಕೇಂದ್ರರಾವ್ ಎಂಬ ಹೆಸರುಗಳು ಈ ವಂಶದಲ್ಲಿ ಕಂಡುಬರುತ್ತವೆ.

## ಎರಡನೇ ಮಲಕೇಂದ್ರರಾವ್ ನಾಡಗೌಡ(೧೮೮೫)

ಉದ್ಬಾಳ ಮನೆತನದ ಅತ್ಯಂತ ಪ್ರಸಿದ್ಧ ರಾಜರಲ್ಲಿ ಮಲಕೇಂದ್ರರಾವ್ ನಾಡಗೌಡರು ಒಬ್ಬರು. ಇವರ ರಾಣಿ ಧರ್ಮಾಂಬಿಕಾದೇವಿ ಅಪ್ರತಿಮ ಸುಂದರಿಯೂ ಸಮರ್ಥ ಆಡಳಿತಗಾರಳೂ, ವೀಣೆ-ಮೃದಂಗ ಮೊದಲಾದ ಕಲೆಗಳಲ್ಲಿ ಪರಿಣತಳೂ ಆಗಿದ್ದಳು. ಈ ದಂಪತಿಗಳಿಗೆ ನೀಲಕಂಠರಾವ್, ಪಂಪಾಪತಿ, ಶಂಬಣ್ಣ ಮತ್ತು ರಾಮರಾವ್ ಎಂಬ ನಾಲ್ಕು ಜನ ಗಂಡುಮಕ್ಕಳಿದ್ದರು. ಆರಂಭದಲ್ಲಿ ಚಿಕ್ಕ ವಿಭಾಗವಾಗಿದ್ದ ಉದ್ಬಾಳ ಪ್ರಾಂತವು ಮಲಕೇಂದ್ರರಾವ್ ನಾಡಗೌಡರ ಕಾಲಕ್ಕೆ ವಿಸ್ತಾರವಾಯಿತು. ಹೀಗಾಗಿ ಆಡಳಿತವನ್ನು ಸಮರ್ಥವಾಗಿ ನಿರ್ವಹಿಸಲು ಮಕ್ಕಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ನೇಮಿಸಿದರು. ಹಿರಿಯ ಮಗ ನೀಲಕಂಠರಾವ್ ಉದ್ಬಾಳದಲ್ಲಿಯೇ ಇದ್ದರೆ, ಉಳಿದ ಮೂವರು ಕ್ರಮವಾಗಿ ಪೋತ್ನಾಳ, ಪಾಮನಕಲ್ಲೂರು ಮತ್ತು ಜಾಲವಾಡಿಗಿ ಗಳನ್ನು ತಂದೆಯ ಪ್ರತಿನಿಧಿಗಳಾಗಿ ಆಳಿದರು.[೨೧]

ಮಲಕೇಂದ್ರರಾವ್ ನಾಡಗೌಡರು ಹೈದರಾಬಾದ್ ನಿಜಾಮ ಮೆಹಬೂಬ್ ಅಲಿಖಾನ್‌ರ ಅಧೀನರಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ತಿಳಿದುಬರುತ್ತದೆ. ನಾಡಗೌಡರು ಫಕೀರನ ವೇಷದಲ್ಲಿ ನಿಜಾಮನ ಆಸ್ಥಾನಕ್ಕೆ ಹೋದಾಗ ಹೊರಭಾಗದಲ್ಲಿದ್ದ ಕಾವಲುಗಾರರು ಇವರನ್ನು ತಡೆದು ನಿಲ್ಲಿಸಿ ಒಳಗಡೆ ಎರಡು ಬಲಿಷ್ಠ ಸಿಂಹಗಳಿವೆ. ಒಳಹೋದರೆ ನಿನ್ನನ್ನು ತಿಂದುಬಿಡುತ್ತವೆ ಎಂದು ಹೇಳಿದರು. ಮಾತಿಗೆ ಜಗ್ಗದ ನಾಡಗೌಡರು ಧೈರ್ಯದಿಂದ ಮುನ್ನುಗ್ಗಿದರು. ಕಾವಲುಗಾರರು ಹೇಳಿದಂತೆ ಒಳಗಡೆಯಿದ್ದ ಸಿಂಹಗಳು ನಾಡಗೌಡರ ಹತ್ತಿರ ಧಾವಿಸಿದವು. ಆಗ ನಾಡಗೌಡರು ತನ್ನ ಕಂಕುಳದಲ್ಲಿ ಬಚ್ಚಿಟ್ಟುಕೊಂಡು ತಂದಿದ್ದ ಎರಡು ಕುರಿಮರಿಗಳನ್ನು ಸಿಂಹಗಳಿಗೆ ಕೊಟ್ಟು ನಿಜಾಮನ ಆಸ್ಥಾನದ ಮುಂದೆ ಪ್ರತ್ಯಕ್ಷರಾದರು. ಇವರ ಧೈರ್ಯ, ಸಾಮರ್ಥ್ಯವನ್ನು ಮನಗಂಡ ನಿಜಾಮನು ಕೆಲವು ಹಳ್ಳಿಗಳನ್ನು ಉಂಬಳಿಯಾಗಿ ನೀಡಿದ್ದಲ್ಲದೆ 'ಬಹದ್ದೂರ' ಎಂಬ ಬಿರುದು ನೀಡಿ ಗೌರವಿಸಿದರು. ಇದು ಉತ್ಪ್ರೇಕ್ಷೆಯೆನಿಸಿದರೂ ಸತ್ಯವಾಗಿದೆ. ನಾಡಗೌಡರ ಮನೆಯಲ್ಲಿ 'ರಾಜಮಲೆಕಂಠರಾವ್ ಬಹದ್ದೂರ'. ಹೆಸರಿನ ಅನೇಕ ಮುದ್ರೆಗಳು ಕಂಡುಬಂದಿವೆ. ಅಲ್ಲದೆ ಇಲ್ಲಿ ಲಭ್ಯವಾದ ಹಲವು ದಫ್ತರಗಳಲ್ಲಿಯೂ ಈ ಹೆಸರಿನ ಮುದ್ರೆಗಳಿರುವುದನ್ನು ಖಚಿತಪಡಿಸಿಕೊಂಡಿದ್ದಾಗಿ ಡಾ ಚನ್ನಬಸವ ಹಿರೇಮಠರು ಹೇಳುತ್ತಾರೆ. ಮಲಕೇಂದ್ರರಾವ್ ನಾಡಗೌಡರು ೧೯೦೨ರಲ್ಲಿ ಈ ಪ್ರದೇಶವನ್ನು ಆಳುತ್ತಿದ್ದುದು ಉರ್ದು ದಾಖಲೆಯಿಂದ ತಿಳಿಯುತ್ತದೆ.[೨೨] ಈ ಸಮಯದಲ್ಲಿ ಜಾಲವಾಡಿಗಿ ಪ್ರದೇಶದಲ್ಲಿ ಮಳೆಯಾಗದೆ ಬರಗಾಲ ಬಿದ್ದಿತು. ಜನರು ತೆರಿಗೆ ಕೊಡುವ ಸ್ಥಿತಿಯಲ್ಲಿರಲಿಲ್ಲ. ಆಗ ಮಲಕೇಂದ್ರರಾಯರು ಸಿಂಧನೂರು ತಹಶೀಲ್ದಾರರಿಗೆ ಪತ್ರ ಬರೆದು ಈ ವರ್ಷ ತೆರಿಗೆಯನ್ನು ಮನ್ನಾ ಮಾಡಬೇಕೆಂದು ವಿನಂತಿಸಿಕೊಂಡರು. ಅಲ್ಲದೆ ಇದರಲ್ಲಿ ಯಶಸ್ವಿಯಾದರು. ಇದು ನಾಡಗೌಡರ ಸಾಮಾಜಿಕ ಕಳಕಳಿ ಮತ್ತು ಮುತ್ಸದ್ದಿತನವನ್ನು ಎತ್ತಿ ತೋರಿಸುತ್ತದೆ. ಅಂಬಾದೇವಿಯನ್ನು ಅಂಬಾಮಠದಿಂದ ಸಂಸ್ಥಾನಕ್ಕೆ ಕರೆತಂದದ್ದು ಇವರೇ ಎಂದು ಹೇಳಲಾಗುತ್ತಿದೆ.

ಉತ್ತಮ ವ್ಯಕ್ತಿತ್ವವನ್ನುಳ್ಳ ಮಲಕೇಂದ್ರರಾವ್ ನಾಡಗೌಡರು ಎಲ್ಲಿ ಯಾವಾಗ ತೀರಿಕೊಂಡರು ಎಂದು ತಿಳಿಯದಿರುವುದು ವಿಷಾದನೀಯ ಸಂಗತಿ. ಆದರೆ ಉದ್ಬಾಳ ಗ್ರಾಮದ ಜನರು ಮಲಕೇಂದ್ರರಾವ್ ನಾಡಗೌಡರ

ಹೆಸರಿನಲ್ಲಿ ಗದ್ದುಗೆಯನ್ನು ನಿರ್ಮಿಸಿಕೊಂಡು ಭಕ್ತಿಯಿಂದ ಪೂಜೆ ಪುನಸ್ಕಾರಗಳನ್ನು ಮಾಡಿಕೊಂಡು ಬರುತ್ತಿದ್ದಾರೆ.

**ಮೂರನೇ ನೀಲಕಂಠರಾವ್ ನಾಡಗೌಡ(೧೯೧೦-೧೯೪೧)**

ಮಲಕೇಂದ್ರರಾವ್ ಮತ್ತು ರಾಣಿ ಧರ್ಮಾಂಬಿಕೆದೇವಿಯವರ ಹಿರಿಯ ಮಗನಾದ ನೀಲಕಂಠರಾವ್ ನಾಡಗೌಡರು ಉದ್ಬಾಳ ಪ್ರದೇಶವನ್ನು ಆಳಿದರು. ಇವರಿಗೆ ಸಂಬಂಧಿಸಿದ ಒಂದು ದಫ್ತರಿನಲ್ಲಿ ಸನ್ ೧೩೫೩ ಫಸಲಿ ಎಂಬ ಕಾಲ ನಿರ್ದೇಶನವಿದೆ. ಇದು ಕ್ರಿ.ಶ. ೧೯೨೮ಕ್ಕೆ ಸರಿಹೊಂದುತ್ತದೆ. ಮತ್ತೊಂದರಲ್ಲಿ ಸನ್ ೧೩೫೩ ಫಸಲ್ ಎಂದು ಹೇಳಿದೆ. ಇದು ಕ್ರಿ.ಶ. ೧೯೩೫ಕ್ಕೆ ಸರಿಹೊಂದುತ್ತದೆ.[೨೮] ಪಂಪಮ್ಮ, ವಿಶಾಲಾಕ್ಷಮ್ಮ, ಮೀನಾಕ್ಷಮ್ಮ, ಪಾರ್ವತಮ್ಮ, ಜೀವಮ್ಮ ಮತ್ತು ಯಂಕಮ್ಮರೆಂಬ ಏಳು ರಾಣಿಯರು ಇವರಿಗಿದ್ದರು. ಈ ಸಂಖ್ಯೆಯು ವೈದಿಕ ಸಂಸ್ಕೃತಿಯಲ್ಲಿ ಅಪಶಕುನವೆನಿಸಿದ್ದರಿಂದ ಎರಡು ಬೊಂಬೆಗಳನ್ನು ಸೇರಿಸಿ ಒಟ್ಟು ಒಂಬತ್ತು ರಾಣಿಯರನ್ನು ನೀಲಕಂಠರಾವ್ ಮದುವೆಯಾದರು. ನೀಲಕಂಠರಾವ್ ನಾಡಗೌಡರು ಆಳುತ್ತಿದ್ದಾಗ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿ ತೀವ್ರವಾಗಿತ್ತು. ಈ ಸಮಯದಲ್ಲಿ ಸಂಸ್ಥಾನಿಕರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಿಜಾಮನ ಕೈಗೊಂಬೆಯಂತೆ ವರ್ತಿಸುತ್ತಿದ್ದರು. ಉದ್ಬಾಳ ಸಂಸ್ಥಾನ ಇದಕ್ಕೆ ಹೊರತಾಗಿರಲಿಲ್ಲ.

ಇವರ ಆಳ್ವಿಕೆಯ ಕಾಲದಲ್ಲಿ ಮೇಲ್ವರ್ಗದ ಯುವಕನೋರ್ವ ಕೆಳವರ್ಗದ ಯುವತಿಯ ಮೇಲೆ ಅತ್ಯಾಚಾರವೆಸಗಿದ. ಈ ಅವಮಾನದಿಂದ ತತ್ತರಿಸಿದ ಕುಟುಂಬ ಸದಸ್ಯರು ನ್ಯಾಯಕ್ಕಾಗಿ ನಾಡಗೌಡರಲ್ಲಿ ಮೊರೆಯಿಟ್ಟರು. ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ನೀಲಕಂಠರಾವ್ ಅವರು ಪಂಚಾಯಿತಿ ಸೇರಿಸಿ ಮೇಲ್ವರ್ಗದವರಿಗೆ ಶಿಕ್ಷೆಯನ್ನು ವಿಧಿಸಿದರು. ಆಡಳಿತದಲ್ಲಿ ತಮ್ಮವರಿದ್ದೂ ರಕ್ಷಿಸಲಿಲ್ಲವೆಂಬ ಅಸಮಾಧಾನ ಇವರ ಮನದಲ್ಲಿ ಶಾಶ್ವತವಾಗಿ ಬೇರೂರಿತು. ಪ್ರತೀಕಾರಕ್ಕಾಗಿ ಸಂಚು ಇಲ್ಲಿಂದಲೇ ಆರಂಭವಾಯಿತು. ಆದರೆ ನಾಡಗೌಡರು ಘಟನೆಯನ್ನು ಕಾಲಕ್ರಮೇಣ ಮರೆತುಬಿಟ್ಟರು.[೨೯]

ನಾಡಗೌಡರು ಬಹಳ ದಿನಗಳಿಂದ ಅಸ್ತಮಾ ರೋಗದಿಂದ ಬಳಲುತ್ತಿದ್ದರು. ಚಿಕಿತ್ಸೆ ನಿಮಿತ್ತ ಊರ ಹೊರಗಿರುವ ತಮ್ಮ ತೋಟದ ಬಂಗಲೆಗೆ ತಮ್ಮ ವಾಸವನ್ನು ಸ್ಥಳಾಂತರಿಸಿದರು. ಸಾಹಿತ್ಯ ಮತ್ತು ಸಂಗೀತದಲ್ಲಿ ಆಸಕ್ತರಾಗಿದ್ದ ಗೌಡರು ವಾಡೆಯಲ್ಲಿ ನಡೆಸುತ್ತಿದ್ದ ಗೋಷ್ಠಿಗಳನ್ನು ವರ್ಗಾಯಿಸಿದರು. ವಾಡೆಯಲ್ಲಿ ಗೌಡರ ಮಕ್ಕಳಿಗೆ ಬಳಗಾನೂರು ಹನುಮವ್ವ ಸಂಗೀತವನ್ನು ಹೇಳಿಕೊಡುತ್ತಿದ್ದಳು.[೩೦] ವಾಡೆಯೊಂದಿಗೆ ಹನುಮವ್ವಳ ಸಂಬಂಧ ಕೇವಲ ಸಂಗೀತಕ್ಕೆ ಸೀಮಿತವಾಗಿರದೆ ಅದರಾಚೆಗೂ ಚಾಚಿಕೊಂಡಿತ್ತು. ನೀಲಕಂಠರಾವ್‌ರ ಮಕ್ಕಳಿಗೆ ಆಕೆ ಒಂದರ್ಥದಲ್ಲಿ ತಾಯಿಯೇ ಆಗಿದ್ದಳು. ಆ ಮಕ್ಕಳಿಗೂ ಹನುಮವ್ವನನ್ನು ಕಂಡರೆ ತುಂಬ ಪ್ರೀತಿ.

ಒಮ್ಮೆ ನೀಲಕಂಠರಾಯರು ಸಂಗೀತಗೋಷ್ಠಿಯಲ್ಲಿ ತಲ್ಲೀನರಾಗಿದ್ದಾಗ ಹಿಂದೆ ಶಿಕ್ಷೆಗೊಳಗಾಗಿದ್ದ ತಂಡ ಮಿಂಚಿನ ದಾಳಿ ನಡೆಸಿತು. ಏಕಾಏಕಿ ನಡೆದ ದಾಳಿಗೆ ಗೌಡರು ಗಲಿಬಿಲಿಗೊಂಡರು. ಸಾವರಿಸಿಕೊಂಡು ಮೇಲೇಳುವಷ್ಟರಲ್ಲಿ ಮಚ್ಚಿಗೆ ಬಲಿಯಾದರು. ಕೂಡಲೆ ಕಾರ್ಯಪ್ರವೃತ್ತಳಾದ ಹನುಮವ್ವ ಗೌಡರ ಚಿಕ್ಕಮಗ ವಿಶ್ವನಾಥನನ್ನು ಎದೆಗವುಚಿಕೊಂಡು ಓಡತೊಡಗಿದಳು. ಗೌಡರ ಸಂತತಿಯನ್ನು ನಿರ್ನಾಮ ಮಾಡುವ ಸಂಕಲ್ಪ

ಮಾಡಿ ದಾಳಿಕೋರರು ಆಕೆಯ ಬೆನ್ನು ಹತ್ತಿದರು. ಸಹಾಯಕ್ಕಾಗಿ ಹನುಮವ್ವ ಕಾವಲುಗಾರರನ್ನು ಸುತ್ತಮುತ್ತಲಿನ ಜನರನ್ನು ಕೂಗುತ್ತ ತೋಟದ ತುಂಬ ಓಡಾಡಿದಳು. 'ನನ್ನನ್ನು ಕೊಲ್ಲಿ ಈ ಎಳೆ ಜೀವವನ್ನು ಉಳಿಸಿ' ಎಂದು ಅಂಗಲಾಚಿ ಬೇಡಿಕೊಂಡಳು. ಆಕೆಯ ಮನವಿಯನ್ನು ಕೇಳುವ ಸ್ಥಿತಿಯಲ್ಲಿ ಅವರಿರಲಿಲ್ಲ. ಹನುಮವ್ವಳ ತೋಳಿನಿಂದ ಬಲವಂತವಾಗಿ ಬಾಲಕ ವಿಶ್ವನಾಥನನ್ನು ಕಿತ್ತುಕೊಂಡು ರುಂಡಮುಂಡಗಳನ್ನು ಛೇದಿಸೇಬಿಟ್ಟರು.[೮೧] ಉದ್ಬಾಳ ಸಂಸ್ಥಾನ ಅಕ್ಷರಶಃ ಸ್ಮಶಾನ ಮೌನವಾಯಿತು.

ನೀಲಕಂಠರಾವ್ ನಾಡಗೌಡರು ೧೯೪೧ರಲ್ಲಿ ಅಕಾಲ ಮರಣಕ್ಕೆ ತುತ್ತಾದಾಗ ಹೆಣ್ಣು ಮಕ್ಕಳಿಬ್ಬರೂ ಚಿಕ್ಕವರಿದ್ದರು. ದೇಶದಲ್ಲಿ ಸ್ವಾತಂತ್ರ್ಯ ಚಳವಳಿ ತೀವ್ರವಾಗಿತ್ತು. ಇದರಿಂದ ನಾಡಗೌಡರ ಮನೆ ಅನಾಥವಾಗ ಬಾರದೆಂದು ಯೋಚಿಸಿ ಯಂಕಮ್ಮ ರಾಣಿಯ ತಂದೆ ಶಂಕ್ರಪ್ಪ ದೇಸಾಯಿಯವರು ಸಂಸ್ಥಾನದ ಜವಾಬ್ದಾರಿಯನ್ನು ಕೈಗೆತ್ತಿಕೊಂಡರು.[೮೨]

### ಬೆಳ್ಳಿಗನೂರು ನಾಡಗೌಡರು

ಬೆಳ್ಳಿಗನೂರು ಮನೆತನವು ಉದ್ಬಾಳ ಸಂಸ್ಥಾನದ ಉಪಶಾಖೆಯಾಗಿದ್ದು ಈ ಮನೆತನದ ಮೂಲವ್ಯಕ್ತಿ ಜೀವಮ್ಮ. ನೀಲಕಂಠರಾವ್ ನಾಡಗೌಡರ ಒಂಬತ್ತು ರಾಣಿಯರಲ್ಲಿ ಜೀವಮ್ಮಳೂ ಒಬ್ಬಳು. ಈಕೆಯ ಮಗ ಅಮರೇಶ್ವರ ನಾಡಗೌಡನು ತಂದೆಯ ಸೂಚನೆಯಂತೆ ಬೆಳ್ಳಿಗನೂರು ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಮುಂದೆ ಅದು ಪ್ರತ್ಯೇಕ ಶಾಖೆಯಾಗಿ ಕವಲೊಡೆಯಿತು.[೮೩]

ಇದು ಒಂದು ಚಿಕ್ಕ ಆಡಳಿತ ವಿಭಾಗವಾಗಿದ್ದು, ಬೆಳ್ಳಿಗನೂರು ಮತ್ತು ಬುದ್ದಿನ್ನಿ ಗ್ರಾಮಗಳ ತೆರಿಗೆ ವಸೂಲಿ ಮತ್ತು ರಕ್ಷಣೆಯನ್ನು ಇವರೇ ನೋಡಿಕೊಳ್ಳುತ್ತಿದ್ದರು.

### ಜವಳಗೆರೆ ನಾಡಗೌಡ ಮನೆತನ

ಸಿಂಧನೂರು ತಾಲೂಕಿನ ಜವಳಗೆರೆಯು ನಿಜಾಮರ ಕಾಲದಲ್ಲಿ ಪ್ರಮುಖ ಆಡಳಿತ ಸಂಸ್ಥಾನವಾಗಿತ್ತು. ಹೈದರಾಬಾದ್ ನಿಜಾಮನಿಂದ ೨೦,೦೦೦ ಸಾವಿರ ಹಣಕ್ಕೆ ಜವಳಗೆರೆ ಸುತ್ತಮುತ್ತಲಿನ ಭೂಮಿಯನ್ನು ಗುತ್ತಿಗೆ ಪಡೆದ ಅಮರಪ್ಪ ನಾಡಗೌಡ ಜವಳಗೆರೆ ಸಂಸ್ಥಾನದ ಮೂಲಪುರುಷ. ಸಿಂಧನೂರು ತಾಲೂಕಿನ ಎಲೆ ಕೂಡ್ಲಿಗಿ ಗ್ರಾಮದವರಾದ ಅಮರಪ್ಪ ನಾಡಗೌಡರಿಗೆ ನಾಲ್ಕು ಜನ ಮಕ್ಕಳು. ಇವರು ಲಂಗೇರಿ, ಸಿಂಧನೂರು, ನಾಗರಬೆಟ್ಟ ಮತ್ತು ಜವಳಗೆರೆ ಸಂಸ್ಥಾನಗಳ ಅಧಿಕಾರ ವಹಿಸಿಕೊಳ್ಳುತ್ತಾರೆ. ಅಮರಪ್ಪನವರ ಹಿರಿಯ ಮಗ ರಾಜಾವೆಂಕಟಮಹಿಪಾಲ ಜವಳಗೆರೆಯ ಮೊದಲನೆಯ ನಾಡಗೌಡನಾಗಿ ಸಂಸ್ಥಾನದ ಆಡಳಿತವನ್ನು ವಹಿಸುತ್ತಾನೆ. ಇವರಿಂದ ಮೂರು ತಲೆಮಾರಿನವರೆಗೆ ಸುಮಾರು ಎರಡುನೂರು ವರ್ಷ ಕಾಲ ಜವಳಗೆರೆ ನಾಡಗೌಡರ ಮನೆತನ ಶೌರ್ಯ, ಸಾಹಸ, ದಾನ, ಧರ್ಮ, ಸಾಹಿತ್ಯ ಸಂಸ್ಕೃತಿಗಳನ್ನು ಅಭಿವೃದ್ಧಿ ಗೊಳಿಸುವ ಮೂಲಕ ಪ್ರಸಿದ್ಧಿ ಪಡೆದುಕೊಂಡಿತು.

ರಾಜಾವೆಂಕಟಮಹಿಪಾಲ ನಾಡಗೌಡನ ಸಾಮರ್ಥ್ಯ, ಬುದ್ಧಿವಂತಿಕೆ, ಮುತ್ಸದ್ದಿ ಗುಣಗಳಿಂದ ನಾಡಗೌಡ ಮನೆತನ ಬೆಳೆಯಿತು. ನಿಜಾಮರ ಮನವೊಲಿಸಿ ಸಂಸ್ಥಾನದ ಮೇರೆಯನ್ನು ವಿಸ್ತರಿಸಿದನು. ೩೨ ಹಳ್ಳಿಗಳು ಜವಳಗೆರೆ ಸಂಸ್ಥಾನದಲ್ಲಿ ಸಮಾವೇಶಗೊಂಡವು. ಪೊಲೀಸ್, ಪಟವಾರಿ ಮತ್ತು ಮಾಲಗುಜಾರಿ ಅಧಿಕಾರ

ಆಡಳಿತ ಈ ಸಂಸ್ಥಾನಕ್ಕೆ ಇತ್ತು. ೨೪ ಹಳ್ಳಿಗಳು ಪಟವಾರಿ, ಒಂದು ಹಳ್ಳಿ ಪೊಲೀಸ್ ಅಧಿಕಾರ ಪಡೆದುಕೊಂಡಿದ್ದವು. ಉಳಿದ ೭ ಹಳ್ಳಿಗಳು ಮಾಲಗುಜಾರಿಯ ಅಧಿಕಾರ ಪಡೆದವು. ಸುಮಾರು ೩೦ ಸಾವಿರ ಎಕರೆ ಭೂಮಿ ಜವಳಗೆರೆ ಸಂಸ್ಥಾನಕ್ಕೆ ಒಳಪಟ್ಟಿತ್ತು. ಭೂಮಿಯ ಕಂದಾಯವನ್ನು ಸಂಗ್ರಹಿಸಿ, ಅದರಲ್ಲಿ ನಾಲ್ಕನೆಯ ಒಂದು ಭಾಗವನ್ನು ಸಂಸ್ಥಾನದ ವೆಚ್ಚಕ್ಕೆ ಉಳಿಸಿಕೊಂಡು ಮಿಕ್ಕ ಮೂರು ಭಾಗವನ್ನು ಕೇಂದ್ರ ಸರಕಾರದ ಖಜಾನೆಗೆ ಜಮೆ ಮಾಡಲಾಗುತ್ತಿತ್ತು. ಸಂಸ್ಥಾನಕ್ಕೆ ಸಲ್ಲುವ ಕಂದಾಯದ ನಾಲ್ಕನೆಯ ಒಂದು ಭಾಗವನ್ನು 'ಚಾರಸ್' ಪದ್ಧತಿಯೆಂದು ಕರೆಯುತ್ತಿದ್ದರು.[೮೪]

ವೆಂಕಟಮಹಿಪಾಲ ನಾಡಗೌಡ ಸಂಸ್ಥಾನದ ವಿಸ್ತರಣೆಯ ಜೊತೆಗೆ ಅಭಿವೃದ್ಧಿಯ ಕಾರ್ಯಕ್ಕೆ ಗಮನ ಹರಿಸಿದರು. ಕೃಷಿಗೆ ಮಹತ್ವವನ್ನು ಕೊಟ್ಟು ಕೆರೆಗಳನ್ನು ದುರಸ್ತಿಗೊಳಿಸಿ ಅದರ ಮೂಲಕ ವ್ಯವಸಾಯವನ್ನು ಪ್ರೋತ್ಸಾಹಿಸಿದನು. ಹಳ್ಳಿಗಳಿಗೆ ರಸ್ತೆ ಸಂಪರ್ಕವೇರ್ಪಡಿಸಿದರು. ವ್ಯವಸಾಯದ ಜೊತೆಗೆ ಕೈಗಾರಿಕೆಗಳಿಗೆ ಉತ್ತೇಜನ ದೊರೆಯಿತು. ಕಂಬಳಿ ಮತ್ತು ಬಟ್ಟೆಗಳ ಕೈ ಮಗ್ಗಗಳಿಂದ ನೇಕಾರಿಕೆಯ ಉತ್ಪನ್ನ ಹೆಚ್ಚಿತು. ಜವಳಗೆರೆಯಲ್ಲಿ ನಾಡಗೌಡರ ಮನೆ, ಕಛೇರಿಗಳ ಕಟ್ಟಡ ನಿರ್ಮಾಣಕ್ಕೆ ನಾಡಗೌಡರು ವಿಶೇಷ ಮಹತ್ವ ಕೊಟ್ಟರು. ಇವರ ಕಾಲದಲ್ಲಿ ಗುಡಿಗುಂಡಾರಗಳು ನಿರ್ಮಾಣವಾದವು. ಅವರ ಕುಲದೈವ ವೆಂಕಟರಮಣನ ದೇವಸ್ಥಾನ ನಿರ್ಮಾಣವಾಯಿತು. ಅಗಸೆ ಮತ್ತು ರಕ್ಷಣಾ ಗೋಡೆಗಳು ಸಿದ್ಧವಾದವು.[೮೫]

ರಾಜಾವೆಂಕಟಮಹಿಪಾಲ ನಾಡಗೌಡರ ತರುವಾಯ ರಾಜಾಪ್ರಸನ್ನ ರುದ್ರಮಹಿಪಾಲ ನಾಡಗೌಡ(೧೭೯೫-೧೮೫೦) ಜವಳಗೆರೆಯ ಸಂಸ್ಥಾನದ ನಾಡಗೌಡರಾಗಿ ಅಧಿಕಾರ ವಹಿಸಿಕೊಂಡರು.[೮೬] ಇವರ ಆಳ್ವಿಕೆ ಕಾಲದ ಸಮಯದಲ್ಲಿ ಸುರಪುರ ಮತ್ತು ಗುಡಗುಂಟೆ ಸಂಸ್ಥಾನಗಳ ನಡುವೆ ಸಂಭವಿಸಿದ ವ್ಯಾಜ್ಯವನ್ನು ಬಗೆಹರಿಸುವಲ್ಲಿ ಮಧ್ಯಸ್ತಿಕೆ ವಹಿಸಿದ್ದರು.

ನಾಡಗೌಡ ಮನೆತನದ ಮೂರನೆಯ ಮತ್ತು ಕೊನೆಯ ನಾಡಗೌಡರಾಗಿ ರಾಜಾವೆಂಕಟಮಹಿಪಾಲ ಬಹದ್ದೂರ ನಾಡಗೌಡ(೧೮೫೦-೧೯೦೦) ಅಧಿಕಾರ ವಹಿಸಿಕೊಂಡರು. ಇವರ ಕಾಲದಲ್ಲಿ ಜವಳಗೆರೆ ಸಂಸ್ಥಾನ ಅಭಿವೃದ್ಧಿ ಪಡೆಯಿತು.

ರಾಜಾವೆಂಕಟಮಹಿಪಾಲನಿಗೆ ಇಬ್ಬರು ಹೆಂಡತಿಯರಿದ್ದರು. ರಾಣಿ ನೀಲಮ್ಮಾಜಿ ಹಿರಿಯ ಪತ್ನಿ. ಈಕೆಯ ತವರು ಮೆದಿಕಿನಾಳ ನಾಡಗೌಡರ ಮನೆತನ. ಎರಡನೆಯ ಹೆಂಡತಿ ರಾಣಿ ಉಮನಾಬಾಯಿ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಕೋಲಪುರಂ ಈಕೆಯ ತವರೂರು. ರಾಣಿ ಉಮನಾಬಾಯಿ ವಿದ್ಯಾವಂತೆ, ಕುಶಲಮತಿ, ವ್ಯವಹಾರ ಚತುರೆಯಾಗಿದ್ದಳು. ರಾಜಾವೆಂಕಟಮಹಿಪಾಲನ ಪ್ರೀತಿಯ ಮಡದಿಯಾದ ಈಕೆ ಆಡಳಿತದಲ್ಲಿ ಪತಿಯೊಂದಿಗೆ ಸಹಕರಿಸಿದಳು.

ನಾಡಗೌಡನಿಗೆ ಇಬ್ಬರೂ ಪತ್ನಿಯರಿಂದ ಸಂತಾನವಿರಲಿಲ್ಲ. ಸಂಸ್ಥಾನಕ್ಕೆ ದತ್ತು ಪಡೆಯುವುದು ಅನಿವಾರ್ಯವಾಯಿತು. ದತ್ತು ಪಡೆಯುವಲ್ಲಿ ಇಬ್ಬರು ರಾಣಿಯರ ನಡುವೆ ವ್ಯಾಜ್ಯ ಆರಂಭವಾಯಿತು. ನೀಲಮ್ಮಾಜಿ ಸಂಸ್ಥಾನದ ಮೂಲ ರಾಜಾ ಅಮರಪ್ಪನಾಡಗೌಡನ ವಂಶದವನಾದ ರಾಜಾ ಸಂಗಮೇಶ್ವರನನ್ನು ದತ್ತು ಸ್ವೀಕರಿಸಿದಳು. ಇತ್ತ ಉಮನಾಬಾಯಿ ಸೋಮಶೇಖರರಾಯನನ್ನು ದತ್ತು ಸ್ವೀಕರಿಸಿದಳು. ಈತ ತನ್ನ

ಪತಿಯ ತಾಯಿ ರಾಣಿ ವಿಶಾಲಾಕ್ಷಮ್ಮನ ಸಂಬಂಧಿ ಪುಂಗನೂರಿನ ಸದಾಶಿವರಾಜನ ಅಣ್ಣ. ದತ್ತು ಪ್ರಕ್ರಿಯೆ ಮುಗಿದ ನಂತರ ಮತ್ತೆ ಅಧಿಕಾರಕ್ಕಾಗಿ ಸಮಸ್ಯೆಯುಂಟಾಯಿತು. ರಾಣಿ ನೀಲಮ್ಮಾಜಿಯ ದತ್ತು ಸ್ವೀಕಾರ ನ್ಯಾಯಸಮ್ಮತವೆಂದು ತೀರ್ಪು ಬಂದಿತು. ರಾಜಾ ಸಂಗಮೇಶ್ವರರಾಯ ಜವಳಗೆರೆ ಸಂಸ್ಥಾನದ ನಾಡಗೌಡನಾದ. ಆದರೆ ರಾಣಿ ನೀಲಮ್ಮಾಜಿ ಅದೇ ವರ್ಷ ತೀರಿಕೊಂಡಳು. ಇದರಿಂದ ಕೈಬಿಟ್ಟು ಹೋಗುತ್ತಿದ್ದ ನಾಡಗೌಡಿಕೆ ಅಧಿಕಾರ ರಾಣಿ ಉಮನಾಬಾಯಿ ಕೈಗೆ ಬಂದಿತು. ಸಂಸ್ಥಾನದ ಆಡಳಿತವನ್ನು ಸ್ವತಂತ್ರವಾಗಿ ನಿರ್ವಹಿಸಿದ ರಾಣಿ ಅನೇಕ ಅಭಿವೃದ್ಧಿ ಕಾರ್ಯ ಕೈಗೊಂಡಳು.

ಜವಳಗೆರೆ ಸಂಸ್ಥಾನದ ಧರ್ಮ, ಸಾಹಿತ್ಯ, ಸಂಸ್ಕೃತಿಗಳಿಗೆ ರಾಣಿ ಉಮನಾಬಾಯಿಯಿಂದ ಅಪಾರ ಸೇವೆ ಸಂದಿದೆ. ಸಂಸ್ಥಾನಕ್ಕೆ ಆಸ್ಥಾನ ಪಂಡಿತ ಮನೆತನವನ್ನು ತಂದುಕೊಟ್ಟ ಕೊಡುಗೆ ರಾಣಿಗೆ ಸಲ್ಲುತ್ತದೆ. ಆಂಧ್ರಪ್ರದೇಶದ ಬದಗಾನಪಲ್ಲಿ ಮಠದ ಚರಪಟ್ಟಾಧ್ಯಕ್ಷರು ಈ ಆಸ್ಥಾನ ಪಂಡಿತ ಶಾಸ್ತ್ರಿಮಠದ ಮೂಲಪುರುಷರು. ಇವರಲ್ಲಿ ಪಂಡಿತಾರಾಧ್ಯಶಾಸ್ತ್ರಿ ಪ್ರಸಿದ್ಧರು.

ರಾಣಿಯ ಆಡಳಿತ ಕಾಲದಲ್ಲಿ ಜರುಗಿದ ಮಸೀದಿ ಪ್ರಕರಣ ಜವಳಗೆರೆ ಸಂಸ್ಥಾನಕ್ಕೆ ಕೇಡಾಗಿ ಪರಿಣಮಿಸಿತು. ಮಸೀದಿ ಕೆಡವಿದ್ದನ್ನು ನಿಜಾಮ್ ಸರಕಾರ ಅಪರಾಧವೆಂದು ತೀರ್ಮಾನಿಸಿತು. ಈ ಅಪರಾಧಕ್ಕೆ ಉಗ್ರಶಿಕ್ಷೆ ವಿಧಿಸಲು ಅದು ಗಂಭೀರವಾಗಿ ಆಲೋಚಿಸಿತು. ನವಾಬರ ರಾಜ್ಯದಲ್ಲಿ ಮಸೀದಿ ಕೆಡಹುವುದು ಘೋರ ಅಪರಾಧವಾಗಿತ್ತು. ಇಸ್ಲಾಂ ಧರ್ಮವನ್ನು ಅಪಮಾನಗೊಳಿಸುವುದೆಂದರೆ ನಿಜಾಮ್‌ಶಾಹಿ ಅಧಿಕಾರವನ್ನೇ ಧಿಕ್ಕರಿಸಿದಂತೆ ಎಂದು ಬಗೆದು ಅಂಥವರಿಗೆ ಘೋರ ಶಿಕ್ಷೆ ವಿಧಿಸಲು ನಿಜಾಮ್ ಸರಕಾರ ತೀರ್ಮಾನಿಸಿತು. ಜವಳಗೆರೆ ಸಂಸ್ಥಾನವನ್ನೇ ಅಪರಾಧಿಯಸ್ಥಾನಕ್ಕೆ ನಿಲ್ಲಿಸಿ, ಸಂಸ್ಥಾನವನ್ನು ರದ್ದುಗೊಳಿಸಲು ಹುಕುಂ ಹೊರಡಿಸಿತು. ಸಂಸ್ಥಾನವನ್ನು ರದ್ದುಗೊಳಿಸುವ ಮೂಲಕ ನಾಡಗೌಡಕಿಯ ಅಧಿಕಾರವನ್ನು ಅವರಿಂದ ಕಿತ್ತುಕೊಳ್ಳಲಾಯಿತು. ೧೯೦೯-೧೦ರಲ್ಲಿ ಜವಳಗೆರೆ ನಾಡಗೌಡಕಿ ಅಧಿಕಾರವನ್ನು ಕಳೆದುಕೊಳ್ಳುವುದರೊಂದಿಗೆ ಜವಳಗೆರೆ ಸಂಸ್ಥಾನ ರದ್ದಾಯಿತು.[೬೭]

### ಅಡಿಟಿಪ್ಪಣಿಗಳು

೧. ಮಹಂತೇಶ ಎಸ್.ಎನ್. ೨೦೦೮, ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು, ಪುಟ-೭.

೨. Geographical Featurs of Balaganur. www.onefivenine.com, India/Village/Raichur/Sindhanur/Balaganur.

೩. ಬಳಗಾನೂರು ಹೋಬಳಿ ಕಂದಾಯ ವಲಯ ಸಾಮಾನ್ಯ ಮಾಹಿತಿ ೨೦೦೫-೦೬ ಪುಟ-೩.

೪. httpil/ NIPU.nic.Samany mahithi created by Govt. (etd.used. edu.ft.th.8416-pdf)

೫. PCA 2011, Census, Raichur District.

೬. Geographical Featurs of Balaganur. www.onefivenine.com, India/Village/Raichur/Sindhanur/Balaganur.

೭. ಬಳಗಾನೂರು ಹೋಬಳಿ ಕಂದಾಯ ವಸೂಲಿ ಸಾಮಾನ್ಯ ಮಾಹಿತಿ ೨೦೦೫-೦೬ ಪುಟ-೪.

೮. ಶಿವತಾರಕ್ ಕೆ.ಬಿ. ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು, ಪುಟ-೩.

೯. ಅದೇ, ಪುಟ-೬೦೩.

೧೦. ಚಿದಾನಂದಮೂರ್ತಿ ಎಂ, ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೨.

೧೧. ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನಯುಗ, ಪುಟ-೪೪.

೧೨. ಅದೇ, ಪುಟ-೪೫.

೧೩. ಅದೇ, ಪುಟ-೧೬೮.

೧೪. ದೇವರಕೊಂಡಾರೆಡ್ಡಿ(ಸಂ), ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-xxxi.

೧೫. ಅದೇ, ಪುಟ-೪೧೬.

೧೬. ದೇವರಕೊಂಡಾರೆಡ್ಡಿ, ೧೯೯೯, ದಿದ್ದಿಗೆಯ ಕಾಮಕೋಟಿ ಭಳಾರಿ ಶಾಸನ, ಇತಿಹಾಸ ದರ್ಶನ -೧೪ ಪುಟ-೪೨.

೧೭. ಅದೇ, ಪುಟ-೪೪.

೧೮. ದೇವರಕೊಂಡಾರೆಡ್ಡಿ,(ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-xxxi.

೧೯. ಅದೇ, ಪುಟ-xxxi.

೨೦. ಅದೇ, ಪುಟ-xxxi

೨೧. ಸುರೇಂದ್ರರಾವ್ ಬಿ. (ಸಂ), ೧೯೯೭, ಕರ್ನಾಟಕ ಚರಿತ್ರೆ, ಚರಿತ್ರೆ ಮಾಲೆ-೨, ಪುಟ-೬೦

೨೨. ದೇವರಕೊಂಡಾರೆಡ್ಡಿ,(ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ ಪುಟ-೩೯೬

೨೩. ಅದೇ, ಪುಟ-xxxii.

೨೪. ಅದೇ, ಪುಟ-೩೪೯.

೨೫. ಪುಟ-xxxiv.

೨೬. ಅಂಬಳಿಕೆ ಹಿರಿಯಣ್ಣ(ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ-೩೪೯

೨೭. ದೇವರಕೊಂಡಾರೆಡ್ಡಿ, (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-೪೧೩

೨೮. ಅದೇ, ಪುಟ-೪೦೬.

೨೯. ಅಂಬಳಿಕೆ ಹಿರಿಯಣ್ಣ(ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ-೨೩೬.

೩೦. ಅಮರೇಶ ಯತಗಲ್, ೨೦೧೦, ದೋ-ಆಬ್ ರಾಯಚೂರು ಇತಿಹಾಸ, ಪುಟ-೨೪೩.

೩೧. ಅಂಬಳಿಕೆ ಹಿರಿಯಣ್ಣ (ಪ್ರ.ಸಂ.), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ-೨೩೬.

೩೨. ದೇವರಕೊಂಡಾರೆಡ್ಡಿ, (ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-೩೯೯.

೩೩. ಅದೇ, ಪುಟ-೪೦೧.

೩೪. ಅಂಳಿಕೆ ಹಿರಿಯಣ್ಣ (ಪ್ರ.ಸಂ.) ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ ಪುಟ-೨೩೬.

೩೫. ನರಸಿಂಹಮೂರ್ತಿ ಎ.ವಿ., ೨೦೦೦, ಸೇವುಣರ ಇತಿಹಾಸ, ಪುಟ-೪೪.

೩೬. ಚನ್ನಬಸಪ್ಪ ಬಿ. ೨೦೦೫, ಇತಿಹಾಸ ದರ್ಶನ-೨೦, ಅಪ್ರಕಟಿತ ಬಳಗಾನೂರು ಶಾಸನ, ಪುಟ-೧೦೬.

೩೭. ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಪುಟ-೧೩.

೩೮. ದೇವರಕೊಂಡಾರೆಡ್ಡಿ, (ಸಂ) ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ ಪುಟ-೪೦೬.

೩೯. ಅಂಬಳಿಕೆ ಹಿರಿಯಣ್ಣ(ಪ್ರ.ಸಂ.), ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ-೧೯೮.

೪೦. ದೇವರಕೊಂಡಾರೆಡ್ಡಿ, (ಸಂ) ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ರಾಯಚೂರು ಜಿಲ್ಲೆ, ಪುಟ-xxxviii.

೪೧. ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಪುಟ-೧೨.

೪೨. ವಾಸುದೇವನ್ ಸಿ.ಎಸ್., ೨೦೧೨, ಕರ್ನಾಟಕ ದೇವಾಲಯ ಕೋಶ, ರಾಯಚೂರು ಜಿಲ್ಲೆ, ಪುಟ-೧೩೫.

೪೩. ಅಂಬಳಿಕೆ ಹಿರಿಯಣ್ಣ(ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ-೯೬೦.

೪೪. ದೇವರಕೊಂಡಾರೆಡ್ಡಿ, (ಸಂ) ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ರಾಯಚೂರು ಜಿಲ್ಲೆ, ಪುಟ-xxxv.

೪೫. ವಾಸುದೇವನ್ ಸಿ.ಎಸ್., ೨೦೧೨, ಕರ್ನಾಟಕ ದೇವಾಲಯ ಕೋಶ, ರಾಯಚೂರು ಜಿಲ್ಲೆ, ಪುಟ-೧೫.

೪೬. ದೇವರಕೊಂಡಾರೆಡ್ಡಿ, (ಸಂ) ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-೩೭೯.

೪೭. ಅದೇ, ಪುಟ-೩೪೮.

೪೮. ಅದೇ, ಪುಟ-xxxvi

೪೯. ವಾಸುದೇವನ್ ಸಿ.ಎಸ್., ೨೦೧೨, ಕರ್ನಾಟಕ ದೇವಾಲಯ ಕೋಶ, ರಾಯಚೂರು ಜಿಲ್ಲೆ, ಪುಟ-೧೬.

೫೦. ದೇವರಕೊಂಡಾರೆಡ್ಡಿ, (ಸಂ) ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-xxxvi.

೫೧. ವಾಸುದೇವನ್ ಸಿ.ಎಸ್., ೨೦೧೨, ಕರ್ನಾಟಕ ದೇವಾಲಯ ಕೋಶ, ರಾಯಚೂರು ಜಿಲ್ಲೆ, ಪುಟ-೧೭.

೫೨. ಚನ್ನಬಸಪ್ಪ ಬಿ, ೨೦೦೫, ಬಳಗಾನೂರು ಅಪ್ರಕಟಿತ ಶಾಸನ, ಇತಿಹಾಸ ದರ್ಶನ-೨೦, ಪುಟ-೧೦೬.

೫೩. ಶಾಶ್ವತ ಸ್ವಾಮಿ ಮುಕ್ಕುಂದಿಮಠ, ೨೦೧೦, ಲಿಂಗಾಯತ ನಾಡಗೌಡ ಮನೆತನಗಳು ರಾಣಿಯರು, ರಾಯಚೂರು ಜಿಲ್ಲೆ ಪುಟ-೧೬.

೫೪. ಚನ್ನಬಸಪ್ಪ ಬಿ, ೨೦೦೫, ಬಳಗಾನೂರು ಅಪ್ರಕಟಿತ ಶಾಸನ, ಇತಿಹಾಸ ದರ್ಶನ, ಪುಟ-೧೦೬.

೫೫. ಕಪಟರಾಳ ಕೃಷ್ಣರಾಯರು, ೨೦೧೦, ಸುರಪುರ ನಾಯಕರ ಸಂಸ್ಥಾನದ ಇತಿಹಾಸ, ಪುಟ-೧೩೮.

೫೬. ಮಹಾಬಲೇಶ್ವರಪ್ಪ ಬಿ.ಸಿ., ೨೦೦೮, ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು, ಪುಟ-೧೨

೫೭. ಅದೇ, ಪುಟ-೧೪.

೫೮. ರಾಮಣ್ಣ ಹವಳೆ, ೨೦೧೦, ಹೈದರಾಬಾದ್ ಸಂಸ್ಥಾನ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆಯ ಹೋರಾಟ, ಪುಟ-೨೭೮.

೫೯. ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಪುಟ-೧.

೬೦. ಅದೇ, ಪುಟ-೩.

೬೧. ಅದೇ, ಪುಟ-೧.

೬೨. ಅದೇ, ಪುಟ-೨.

೬೩. ಅದೇ, ಪುಟ-೪.

೬೪. ಅದೇ, ಪುಟ-೪.

೬೫. ದೇವರಕೊಂಡಾರೆಡ್ಡಿ(ಸಂ), ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-xiii.

೬೬. ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಪುಟ-೪.

೬೭. ಅದೇ, ಪುಟ-೪.

೬೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-೪೦೬.

೬೯. ಅದೇ, ಪುಟ-೪೦೬.

೭೦. ಅದೇ, ಪುಟ-೪೦೨.

೭೧. ವಾಸುದೇವನ್ ಸಿ.ಎಸ್. ೨೦೧೨, ಕರ್ನಾಟಕ ದೇವಾಲಯ ಕೋಶ, ರಾಯಚೂರು ಜಿಲ್ಲೆ, ಪುಟ-೨೦.

೭೨. ಚನ್ನಬಸವ ಹಿರೇಮಠ, ೨೦೦೮, ಸತ್ಯದ ಹಾದಿ, ಪುಟ-೧೨೯.

೭೩. ಅದೇ, ಪುಟ-೧೨೧.

೭೪. ಅದೇ, ಪುಟ-೧೨೩.

೭೫. ಅದೇ, ಪುಟ-೧೨೩.

೭೬. ಅದೇ, ಪುಟ-೧೨೩.

೭೭. ಅದೇ, ಪುಟ-೧೨೪-೧೨೫.

೭೮. ಅದೇ, ಪುಟ-೧೨೬.

೭೯. ಅದೇ, ಪುಟ-೧೨೭.

೮೦. ಅದೇ, ಪುಟ-೧೨೩.

೮೧. ಅದೇ, ಪುಟ-೧೨೭.

೮೨. ಅದೇ, ಪುಟ-೧೩೮.

೮೩. ಅದೇ, ಪುಟ-೧೩೩.

೮೪. ಶಾಶ್ವತಸ್ವಾಮಿ ಮುಕ್ಕುಂದಿಮಠ, ೨೦೧೦, ಲಿಂಗಾಯತ ನಾಡಗೌಡ ಮನೆತನಗಳು ರಾಣಿಯರು, ರಾಯಚೂರು ಜಿಲ್ಲೆ, ಪುಟ-೧೮.

೮೫. ಅದೇ, ಪುಟ-೨೧.

೮೬. ಅದೇ, ಪುಟ-೨೨.

೮೭. ಅದೇ, ಪುಟ-೩೩.

□□□

# ಅಧ್ಯಾಯ : ಮೂರು

# ಸ್ಥಳನಾಮ ಮತ್ತು ಐತಿಹ್ಯಗಳು

# ಅಧ್ಯಾಯ : ಮೂರು

# ಸ್ಥಳನಾಮ ಮತ್ತು ಐತಿಹ್ಯಗಳು

ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯ ನಿರ್ಮಾಣದಲ್ಲಿ ಪ್ರಧಾನ ಮಾತ್ರ ವಹಿಸುವ ಅಂಶಗಳಲ್ಲಿ ಸ್ಥಳನಾಮ ಮತ್ತು ಐತಿಹ್ಯಗಳು ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ. ಆದ್ದರಿಂದ ಈ ಅಧ್ಯಾಯದಲ್ಲಿ ಬಳಗಾನೂರು ಹೋಬಳಿ ಪರಿಸರದಲ್ಲಿನ ಸ್ಥಳನಾಮ ಮತ್ತು ಐತಿಹ್ಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

## ೩.೧. ಸ್ಥಳನಾಮ

ಪ್ರಾರಂಭದಲ್ಲಿ ಅಲೆಮಾರಿ ಜೀವನದಿಂದ ಆರಂಭವಾದ ಮಾನವರ ಬದುಕು ಕ್ರಮೇಣ ಕೃಷಿಯ ಆರಂಭದೊಂದಿಗೆ ಒಂದೆಡೆ ನೆಲೆ ನಿಲ್ಲುವಂತಾಯಿತು. ಅಲೆಮಾರಿ ಸಮುದಾಯಗಳು ಭೌಗೋಳಿಕ ಪರಿಸರದ ಗವಿ, ಬಂಡೆ, ಬೆಟ್ಟದ ಅಂಚಿನಲ್ಲಿ ತಂಗುತ್ತಿದ್ದರು. ಕೆಲವು ಹಂತಗಳಲ್ಲಿ ಅಲೆಮಾರಿತನವನ್ನು ತೊರೆದ ಸಮುದಾಯಗಳು ಒಟ್ಟಿಗೆ ಬದುಕುವುದನ್ನು ಆರಂಭಿಸಿದವು. ಈ ಹಂತವನ್ನು ಸಮುದಾಯಗಳು ನೆಲೆಸುವಿಕೆಯ ಗ್ರಾಮ ಕಲ್ಪನೆಯ ಪೂರ್ವಸ್ಥಿತಿಯೆಂದು ತಿಳಿಯಬಹುದು. ಆರಂಭಿಕ ಹಂತದಲ್ಲಿ ಪ್ರಕೃತಿನಿಷ್ಠ ಗ್ರಾಮನಾಮಗಳು ಹುಟ್ಟಿಕೊಂಡರೂ ಕಾಲಾನಂತರದಲ್ಲಿ ವ್ಯಕ್ತಿವಾಚಕ, ಸಮುದಾಯವಾಚಕ ಮತ್ತು ವಸ್ತುವಾಚಕ ಮುಂತಾದವು ಗಳಿಂದ ಗ್ರಾಮನಾಮವನ್ನು ಹೆಸರಿಸಲಾಯಿತು. ಒಂದು ಗ್ರಾಮ ಸಮಾಜದ ಒಟ್ಟು ಸಂಸ್ಕೃತಿಯನ್ನು ಒಂದು ರೂಪುರೇಷೆಯ ಮಾದರಿಯಲ್ಲಿ ಹೆಸರುಗಳು ಒಳಗು ಮಾಡಿಕೊಂಡು ಪ್ರತಿನಿಧಿಸುತ್ತಿರುತ್ತವೆ. ಈ ಕಾರಣದಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಸ್ಥಳನಾಮಗಳು ಮಹತ್ವದ ಪಾತ್ರ ಪಡೆದುಕೊಳ್ಳುತ್ತವೆ.

ಸ್ಥಳನಾಮಾಧ್ಯಯನ ಮೊದಲು ಆರಂಭವಾದದ್ದು ಪಾಶ್ಚಾತ್ಯ ರಾಷ್ಟ್ರದಲ್ಲಿಯೆಂಬುದಂತೂ ಖಚಿತ ಸಂಗತಿ. ಕ್ರಿ.ಶ. ೧೭೬೮ರಲ್ಲಿ ಜರ್ಮನಿಯ ಗಾಟ್‌ಫ್ರೀಡ್ ವಿಲ್‌ಹೆಲ್ಮ್ ಲೀಬ್ನಿಜ್ ಆಂಗ್ಲ ಸ್ಥಳನಾಮಗಳ ಬಗೆಗೆ ಅಧ್ಯಯನ ನಡೆಸಿದ ಮೊದಲಿಗನಾದರೆ ಭಾರತದಲ್ಲಿ ಸ್ಥಳನಾಮ ಅಧ್ಯಯನಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟ ಕೀರ್ತಿ ಎಚ್.ಡಿ. ಸಂಕಾಲಿಯಾ ಅವರಿಗೆ ಸಲ್ಲುತ್ತದೆ.[೧]

ಸ್ಥಳನಾಮದ ಚರಿತ್ರೆಯೆಂದರೆ ಮಾನವ ಜೀವನಕ್ಕೆ ಯೋಗ್ಯವಾದ ಪರಿಸರವನ್ನು ಐಹಿಕ ಜೀವನದ ಸುಖ ಸಂತೃಪ್ತಿಗೆ ಸಾಧನವಾಗಬಲ್ಲ ಸನ್ನಿವೇಶವನ್ನು ಹುಡುಕುತ್ತಾ ಬಂದು ಅಂಥ ಕಡೆ ವಲಸೆ ಹೋಗಿ ನೆಲೆಸಿದ ಮಾನವ ಜನಾಂಗದ ಲಿಖಿತ ಇತಿಹಾಸವೇ ಆಗಿದೆ.[೨]

ಸಾವಿರಾರು ಪುಟಗಳುಳ್ಳ ದೊಡ್ಡ ಗ್ರಂಥದ ಸಾರ ಅದರ ಹತ್ತಾರು ಅಕ್ಷರಗಳ ಶಿರೋನಾಮೆಯಲ್ಲಿ ಅಡಗಿರುವಂತೆ ಒಂದು ಗ್ರಾಮದ ವಿಶೇಷತೆಯನ್ನು ಗ್ರಾಮಕ್ಕೊಂದು ಹೆಸರಿಡುವುದರ ಮೂಲಕ ಆ ವಿಶೇಷತೆಯನ್ನು ಕಾಣಬಹುದು. ಬಳಗಾನೂರು ಹೋಬಳಿ ಪರಿಸರದ ಸ್ಥಳನಾಮಗಳನ್ನು ಗಮನಿಸಿದಾಗ ಅವುಗಳ ಮೇಲೆ ಪ್ರಾಕೃತಿಕ ಹಾಗೂ ಭೌಗೋಳಿಕ ಅಂಶಗಳ ಪ್ರಭಾವವಾಗಿರುವುದನ್ನು ಕಾಣಬಹುದು.

ಈವರೆಗೆ ಸ್ಥಳನಾಮ ಅಧ್ಯಯನಕಾರರು ವರ್ಗೀಕರಣದ ಮಾದರಿಗಳನ್ನು ವಿವಿಧ ರೀತಿಯಲ್ಲಿ ಪಟ್ಟಿ ಮಾಡಿದ್ದಾರೆ. ಅಂತಹ ಕೆಲವು ಮಾದರಿಗಳನ್ನು ನೋಡುವ ಮೂಲಕ ಪ್ರಸ್ತುತ ಅಧ್ಯಾಯದ ಪ್ರಾದೇಶಿಕ ವರ್ಗೀಕರಣ ಮಾಡಿಕೊಳ್ಳಲಾಗಿದೆ.

I. ಎಚ್.ಡಿ. ಸಂಕಾಲಿಯಾ ಅವರ ವರ್ಗೀಕರಣ

೧. ವ್ಯಕ್ತಿಯಾಧಾರಿತ
೨. ಘಟನೆ ಆಧಾರಿತ
೩. ಸಂಪ್ರದಾಯ ಮತ್ತು ಮೌಢ್ಯಗಳಿಂದ
೪. ಭೌಗೋಳಿಕ ಲಕ್ಷಣಗಳಿಂದ
೫. ಹೂ, ಹಣ್ಣು, ಮರ, ಬೆಳೆಗಳಿಂದ
೬. ಪ್ರಾಣಿ ಪಕ್ಷಿಗಳಿಂದ
೭. ಹಳೆಯ ಹೆಸರುಗಳಿಂದ

II. ಎಂ ಎಂ ಕಲಬುರ್ಗಿ ಅವರ ನಾಮವಿಜ್ಞಾನ'ದಲ್ಲಿ

೧. ನಿಸರ್ಗವಾಚಿ ೨. ನಿರ್ಮಾಣವಾಚಿ ೩. ಜನಾಂಗವಾಚಿ ೪. ವ್ಯಕ್ತಿವಾಚಿ ೫. ಆದರ್ಶವಾಚಿ ಹೀಗೆ ಅನೇಕ ಮಂದಿ ವಿದ್ವಾಂಸರು ಸ್ಥಳನಾಮಗಳ ವರ್ಗೀಕರಣ ಮಾದರಿಗಳನ್ನು ನೀಡಿದ್ದಾರೆ. ಒಂದು ಪ್ರದೇಶದ ಸ್ಥಳನಾಮ ವರ್ಗೀಕರಣವು ಅದೇ ಪ್ರದೇಶಕ್ಕೆ ಹೊಂದುತ್ತದೆ. ಪ್ರಸ್ತುತ ಬಳಗಾನೂರು ಹೋಬಳಿ ಪರಿಸರದ ಗ್ರಾಮನಾಮಗಳನ್ನು ಪರಿಶೀಲಿಸಿ ಅವುಗಳನ್ನು ಹಟ್ಟಿವಾಚಕ, ಜಲವಾಚಕ, ವ್ಯಕ್ತಿವಾಚಕ, ವಂಶವಾಚಕ, ನಿಸರ್ಗವಾಚಕ, ಸಸ್ಯವಾಚಕ ಎಂದು ವರ್ಗೀಕರಿಸಲಾಗಿದೆ.

**ಹಟ್ಟಿವಾಚಕ :** ಪ್ರಾರಂಭದಲ್ಲಿ ಮಾನವರು ಒಂದೇ ಕಡೆ ಸೀಮಿತವಾಗಿ ನಿಲ್ಲುತ್ತಿರಲಿಲ್ಲ. ಈಗಿನ ಹಕ್ಕಿಪಿಕ್ಕಿಯವರಂತೆಯೋ ಕುರಿಗಾಹಿಗಳಂತೆಯೋ ನಾಲ್ಕಾರು ದಿನ ಒಂದೆಡೆಯಲ್ಲಿದ್ದು, ಮಡಿಕೆ ಕುಡಿಕೆ ತಟ್ಟೆ ಪುಟ್ಟಿಗಳನ್ನು ಹೊತ್ತುಕೊಂಡು, ದನ-ಕರು, ಕುರಿ, ನಾಯಿಗಳನ್ನು ಹಿಡಿದುಕೊಂಡು ಮುಂದೆ ಮುಂದೆ ಸಾಗುತ್ತಿದ್ದರು. ಅನುಕೂಲಕರ ಪರಿಸರದಲ್ಲಿ ಕಾಲಿಟ್ಟೊಡನೆಯೇ ಬೀಡು ಬಿಡುತ್ತಿದ್ದರು. ಕಾಲಾನಂತರದಲ್ಲಿ ಅವರ ಬೀಡುಗಳೇ ಹಟ್ಟಿಗಳಾಗುತ್ತಿದ್ದವು. ಕೊಪ್ಪಲುಗಳಾಗುತ್ತಿದ್ದವು. ಹಟ್ಟಿಗಳೇ ಆರಂಭಕಾಲದ ವಸತಿಗಳೆಂಬುದು ಶಂ.ಬಾ. ಜೋಶಿಯವರ ಊಹೆ.[೪]

ಬಳಗಾನೂರು ಪರಿಸರದಲ್ಲಿ ಕಾಣಬರುವ ಹಟ್ಟಿವಾಚಕ ಗ್ರಾಮನಾಮಗಳೆಂದರೆ ಮಸ್ಕಿಹಟ್ಟಿ, ಬೆಂಡಲಹಟ್ಟಿ, ನಾಗನಟ್ಟಿಗಳಾಗಿವೆ. ಇವೆಲ್ಲವುಗಳು ಬೇಚರಾಕು ಹಳ್ಳಿಗಳಾಗಿದ್ದರಿಂದ ಇವುಗಳ ಸ್ಪಷ್ಟ ಮಾಹಿತಿ ತಿಳಿದುಬಂದಿಲ್ಲ.

**ಜಲವಾಚಕ :** ಮಾನವಸಂಸ್ಕೃತಿಯ ವಿಕಾಸದ ಹಂತದಲ್ಲಿ 'ಜಲ'ಕ್ಕೆ ಅತಿ ಮುಖ್ಯಸ್ಥಾನವಿದೆ. ಬಹುತೇಕ ಸಂಸ್ಕೃತಿಗಳೆಲ್ಲವೂ ನೀರಿನ ಮೂಲವಿರುವ ಪ್ರದೇಶಗಳ ಬಳಿ ಜನ್ಮ ತಾಳಿವೆ ಎಂಬುದು ತಿಳಿಯುತ್ತದೆ. ಸದಾ

ಅಲೆಮಾರಿ ಜೀವನವನ್ನು ನಡೆಸುತ್ತಿದ್ದ ಆದಿಮಾನವರು ಒಂದೆಡೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡರು. ಆಗ 'ಜಲ' ಮುಖ್ಯವಾಗಿ ಬೇಕಿತ್ತು. ಈ ಕಾರಣಗಳಿಂದ ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡರು. ಸಹಜವಾಗಿ ಹರಿಯುವ ನೀರಿಗೆ ಕೆರೆ, ಕೊಳ, ಕುಂಟೆಗಳಂತಹ ಕೃತಕ ಜಲಸಂಗ್ರಾಹಕಗಳನ್ನು ನಿರ್ಮಿಸಿಕೊಂಡರು. ಈಗಲೂ ಗ್ರಾಮಗಳ ನಿರ್ಮಾಣ ನೀರನ್ನು ಅವಲಂಬಿಸಿ ರಚನೆಯಾಗುತ್ತಿವೆ. ಹೀಗೆ ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಆ ಜಲವನ್ನವಲಂಬಿಸಿಯೇ ಕೆಲವು ಗ್ರಾಮಗಳಿಗೆ ಹೆಸರು ಕರೆದುಕೊಳ್ಳುವ ರೂಢಿ ಆರಂಭವಾಗಿರಬೇಕು. ಅಂತಹ ಭೂಸ್ಥಿತಿಯನ್ನು ಹೇಳುವ ಸ್ಥಳನಾಮಗಳು ಈ ಪರಿಸರದಲ್ಲಿ ಕಂಡುಬರುತ್ತವೆ. ಅವು. ೧. ಜವಳಗೆರೆ ೨. ಜಾಲವಾಡಿಗಿ ೩. ದಿದ್ದಿಗಿ ಗ್ರಾಮಗಳು.

**ಜವಳಗೆರೆ :** ಈ ಗ್ರಾಮದ ಉತ್ತರದಿಕ್ಕಿನಲ್ಲಿರುವ ವಿಶಾಲವಾದ ಎರಡು ಕೆರೆಗಳಿಂದಾಗಿ ಈ ಸ್ಥಳಕ್ಕೆ ಜವಳಗೆರೆ ಎಂಬ ಹೆಸರು ಬಂದಿದೆ. ಇದನ್ನು ಮೊದಲು ಜವಳಿಕೆರೆ ಎಂದು ಕರೆಯಲಾಗುತ್ತಿತ್ತು. ಇಲ್ಲಿನ ಪೂರ್ವಪದವಾದ ಜವಳ ಎಂಬ ಪದಕ್ಕೆ ಜೊತೆ; ಜೋಡಿ; ಅವಳಿ ಎಂಬರ್ಥಗಳಿವೆ. ಇದು ಎರಡು ಸಂಖ್ಯೆಯನ್ನು ಸೂಚಿಸುತ್ತದೆ. ಉತ್ತರ ಪದ ಗೆರೆ ಕೆರೆಯಾಗಿ (ಜವಳ+ಕೆರೆ+ಗೆರೆ) = ಜವಳಗೆರೆಯಾಗಿದೆ.

**ಜಾಲವಾಡಿಗಿ :** ಇದನ್ನು ಶಾಸನಗಳಲ್ಲಿ ಜಲವಾಡಿ, ಜಲವಾಡಿಗೆ ಎಂದು ಹೆಸರಿಸಲಾಗಿದೆ.[೫] ಜಲ ಎಂಬ ಪದಕ್ಕೆ ನೀರು, ವಾಡಿ ಎಂಬ ಪದಕ್ಕೆ ಊರು, ಹಳ್ಳಿ, ಗ್ರಾಮ ಎಂದರ್ಥಗಳಿವೆ. ಈ ಪ್ರದೇಶ ಸುತ್ತಲೂ ನೀರಿನಿಂದ ಆವೃತವಾಗಿರುವುದರಿಂದ ಜಲವಾಡಿ ಎಂದು ಕರೆಯಲ್ಪಟ್ಟಿರಬೇಕೆನಿಸುತ್ತದೆ. ಕಾಲಾನಂತರದಲ್ಲಿ ಜನರ ಭಾಷೆಯ ಬಳಕೆಯಿಂದ ಪ್ರಸ್ತುತವಾಗಿ ಜಾಲವಾಡಿಗಿ ಎಂಬ ಗ್ರಾಮನಾಮವನ್ನು ಪಡೆದುಕೊಂಡಿದೆ.

**ದಿದ್ದಿಗಿ :** ದಿದ್ದಿಗಿಯಲ್ಲಿರುವ ಶಾಸನದಲ್ಲಿ ದಿಗ್ಘಿಗೆ ಎಂಬ ರೂಪ ಕಂಡುಬರುತ್ತದೆ. ಇದು ದೀರ್ಘಿಕೆ ಎಂಬುದರ ತದ್ಭವ ರೂಪ. ದೀರ್ಘಿಕೆಯೆಂದರೆ ಬಾವಿ ಎಂದು ಅರ್ಥ. ಆ ಊರಿನ ವೈಶಿಷ್ಟ್ಯವದು. ಬಾವಿಯಿಂದ ಊರಿಗೆ ಆ ಹೆಸರು ಬಂದಿದೆ. ದೀರ್ಘಿಕೆ, ದಿಗ್ಘಿಗೆಯಾಗಿ, ದಿಗ್ಗಿಗೆ, ದಿದ್ದಿಗೆ ಆಗಿ ಮಾರ್ಪಟ್ಟು ಈಗ ಗುರುತು ಸಿಕ್ಕದಂತೆ ದಿದ್ದಿಗಿ ಆಗಿದೆ. ಆ ಊರಿನ ಹಿರಿಯರು ''ಇಲ್ಲಿ ದೊಡ್ಡದೊಂದು ಬಾವಿ ಇತ್ತು ಅದರಲ್ಲಿ ಬಂಗಾರವು ಹೇರಳವಾಗಿ ಸಿಕ್ಕುತ್ತಿತ್ತು'' ಎಂದು ಪೂರ್ವಿಕರು ಹೇಳುತ್ತಿದ್ದರು.[೬]

**ವ್ಯಕ್ತಿವಾಚಕ :** ವ್ಯಕ್ತಿನಾಮಗಳಿಂದಾದ ಊರ ಹೆಸರುಗಳು ಅಧಿಕ ಪ್ರಮಾಣದಲ್ಲಿದ್ದರೂ ಅವು ಪ್ರಾಚೀನವಲ್ಲವೆಂದೂ ನಾಗರಿಕತೆಯ ಉಚ್ಛ್ರಾಯ ಸಮಯದಲ್ಲಿ ಅವು ರೂಢಿಗೆ ಬಂದುವೆಂದೂ ತಜ್ಞರು ಅಭಿಪ್ರಾಯಪಡುತ್ತಾರೆ.[೭] ಪ್ರಾರಂಭದಲ್ಲಿ ನಿರ್ದಿಷ್ಟ ಸ್ಥಳವನ್ನು ಪ್ರಕೃತಿದತ್ತವಾಗಿ ಗುರುತಿಸುತ್ತಿದ್ದರೂ ಕಾಲಾನಂತರದಲ್ಲಿ ಅಲ್ಲಿನ ಪ್ರಮುಖ ವ್ಯಕ್ತಿಯ ಮೂಲಕ ಸ್ಥಳವನ್ನು ಗುರುತಿಸುವ ರೂಢಿ ಮುಂದುವರಿದು ಕೊಂಡು ಬಂದಿತು. ಈ ರೀತಿಯಾಗಿ ವ್ಯಕ್ತಿವಾಚಿ ಸ್ಥಳನಾಮಗಳು ಹುಟ್ಟಿಕೊಂಡವು. ಇಂದೂ ಅಲ್ಲಲ್ಲಿ ಹುಟ್ಟಿಕೊಳ್ಳುತ್ತಿರುವ ಕ್ಯಾಂಪ್‌ಗಳು ಬಹುತೇಕವಾಗಿ ನಿರ್ದಿಷ್ಟ ಅಥವಾ ಪ್ರಮುಖ ವ್ಯಕ್ತಿಯನ್ನು ಹೆಸರಿಸುತ್ತವೆ. ಈ ಪರಿಸರದಲ್ಲಿ ಕಾಣಬರುವ ವ್ಯಕ್ತಿ ಸ್ಥಳನಾಮಗಳು ಹೀಗಿವೆ.

**ರಾಮುತ್ನಾಳ :** ರಾಮಾಯಣದ ಕಥೆಯಾಧಾರಿತ ರಾಮ ಲಕ್ಷ್ಮಣರು ಉತ್ತರದ ಕಡೆಯಿಂದ ದಕ್ಷಿಣದಲ್ಲಿರುವ ಲಂಕೆಗೆ ಈ ಪ್ರದೇಶದ ಮೂಲಕ ಹೋದರು. ರಾಮ ಲಕ್ಷ್ಮಣರು ನಡೆದು ಹೋಗುವಾಗ ರಾಮನು ಕೆಲವು ಹೆಜ್ಜೆಗಳಷ್ಟು ಮುಂದಾದನು. ಆಗ ಹಿಂದೆ ಬಿದ್ದ ಲಕ್ಷ್ಮಣನು 'ರಾಮ' ತಾಳು ನಾನು ಬರುವೆ ಎಂದು ಕೂಗಿದನು. ಈ ಹಿನ್ನೆಲೆಯಿಂದ ಮುಂದೆ ರಾಮ ತಾಳು ಎಂಬುದು ರಾಮುತ್ನಾಳ ಆಗಿ ಪರಿವರ್ತನೆಗೊಂಡಿದೆ.

ಇಲ್ಲಿನ ಶಾಸನವು 'ರಾಮನಾಥನಹಾಳು' ಎಂದು ಉಲ್ಲೇಖಿಸುತ್ತದೆ. ರಾಮನಾಥ ಎಂಬುದು ವ್ಯಕ್ತಿ ಸೂಚಕ ಪದ. ಉತ್ತರ ಪದವಾದ ಹಾಳು ಎಂಬುದಕ್ಕೆ ಶೂನ್ಯವಾದುದು, ಕೇಡು ಎಂಬರ್ಥಗಳು ಇವೆ. ಹೀಗಾಗಿ ರಾಮನಾಥನು ವಾಸವಾಗಿ ಬಿಟ್ಟು ಹೋಗಿದ್ದರಿಂದ ಈ ಪ್ರದೇಶವು ಹಾಳಾಗಿರಬೇಕೆನಿಸುತ್ತದೆ. ಮತ್ತೆ ಈ ಪ್ರದೇಶಕ್ಕೆ ಜನವಸತಿ ಬಂದು ನೆಲೆಸಿದ್ದರಿಂದ ಅದಕ್ಕೆ ಹಿಂದಿನ ರಾಮನಾಥನಹಾಳು ಎಂದು ಕರೆದುಕೊಳ್ಳಲಾಯಿತು. ಪ್ರಸ್ತುತ ಇಂದು ಭಾಷೆಯ ಬಳಕೆಯಿಂದಾಗಿ ಇದು (ರಾಮ+ ನಾಥನ+ ಹಾಳು =ರಾಮುತ್ನಾಳ) ರಾಮುತ್ನಾಳ ಆಗಿದೆ.

**ಗೌಡನಬಾವಿ :** ಉದ್ಬಾಳದ ನಾಡಗೌಡನು ಈ ಪ್ರದೇಶದ ಮೂಲಕ ಹೋಗುತ್ತಿರುವಾಗ ಬಾಯಾರಿಕೆಯಿಂದ ಬಳಲಿದನು. ಸುತ್ತ ಎಲ್ಲಿಯೂ ನೀರಿನ ಮೂಲಗಳು ಕಾಣಲಿಲ್ಲ. ಆಗ ಗೌಡನು ತನ್ನ ಆಳುಗಳಿಂದ ಒಂದು ವಿಶಾಲವಾದ ಬಾವಿಯನ್ನು ತೋಡಿಸಿ ಅಲ್ಲಿ ಒಬ್ಬ ಆಳನ್ನು ಕಾವಲಿಗಾಗಿ ನೇಮಕ ಮಾಡಿದನು. ಬಾವಿಯ ನೀರು ಸಾರ್ವಜನಿಕ ಅನುಕೂಲಕ್ಕೆ ಬಳಸಬೇಕು ಎಂದು ಹೇಳಿ ಹೋದನು. ಕಾಲಾನಂತರದಲ್ಲಿ ಈ ಪ್ರದೇಶಕ್ಕೆ ಜನವಸತಿ ಬಂದು ನೆಲೆಸಿತು. ಆಗ ಆ ಪ್ರದೇಶವನ್ನು ಗೌಡ ನಿರ್ಮಿಸಿದ ಬಾವಿಯ ಮುಖಾಂತರ ಗುರುತಿಸುವಂತಾಯಿತು. ಹೀಗೆ ಈ ಪ್ರದೇಶಕ್ಕೆ ಗೌಡನ ಬಾವಿ ಎಂಬ ಹೆಸರು ಬಂದಿತು. ಇದರಿಂದ ಐತಿಹಾಸಿಕ ಬಾವಿ ನಿರ್ಮಾಣದ ವಿಚಾರ ಸ್ಥಳನಾಮದ ಹಿನ್ನೆಲೆಯಿಂದ ತಿಳಿದುಬರುತ್ತದೆ.

**ಬಳಗಾನೂರು :** ಇಲ್ಲಿ ಈ ಹಿಂದೆ ಬಳೆಗಾರರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದರಿಂದ ಈ ಸ್ಥಳಕ್ಕೆ ಬಳಗಾನೂರು ಎಂಬ ಹೆಸರು ಬಂದಿದೆ. ಇದನ್ನು ಇಲ್ಲಿನ ಶಾಸನಗಳು 'ಬಳೆಗಾರನೂರ', ಹಿರಿಯ 'ಬಳೆಗಾರನೂರ', ಬಳಗನೂರ ಎಂದು ಹೆಸರಿಸುತ್ತವೆ.[8] ಬಳೆಗಾರನೂರ ಎಂಬುದು ಜನರ ಆಡುಭಾಷೆಯ ಬಳಕೆಯಿಂದ ಬದಲಾವಣೆಗೊಂಡು ಬಳಗಾನೂರು ಎಂದು ಹೆಸರನ್ನು ಪಡೆದುಕೊಂಡಿದೆ.

**ಬೆಳ್ಳಿಗನೂರು :** ಶಾಸನವು ಇದನ್ನು 'ಬೆಳಿಗನೂರ'[9] ಎಂದು ಉಲ್ಲೇಖಿಸುತ್ತದೆ. ಬೆಳಿಗ ಅಥವಾ ಬೆಳ್ಳಿಗ ಎಂಬ ವ್ಯಕ್ತಿಯು ಈ ಪ್ರದೇಶದಲ್ಲಿ ಇದ್ದು ಈತನು ಪ್ರಸಿದ್ಧನಾಗಿದ್ದನು. ಸ್ಥಳವನ್ನು ಗುರುತಿಸುವಾಗ ಆ ವ್ಯಕ್ತಿಯಿಂದ ಗುರುತಿಸುತ್ತಿದ್ದರಿಂದ ಇದು ಬೆಳಿಗನೂರು ಎಂದು ಸ್ಥಳನಾಮವನ್ನು ಪಡೆದುಕೊಂಡಿದೆ. ಬೆಳಿಗ ಎಂಬ ಹೆಸರುಗಳು ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇದು ಕಲ್ಯಾಣ ಚಾಲುಕ್ಯ ಮತ್ತು ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿತ್ತೆಂದು ಇದರಿಂದ ಊಹಿಸಬಹುದು.

**ಬನ್ನಿಗನೂರು:** ರಾಷ್ಟ್ರಕೂಟ ಕಾಲದ ಶಾಸನದಲ್ಲಿ ಇದನ್ನು ಬಲ್ಲನಮಗನೂರ ಎಂದು ಕರೆಯಲಾಗಿದೆ.[10] ಬಲ್ಲನೆಂಬ ಪ್ರಸಿದ್ಧ ವ್ಯಕ್ತಿಯ ಮಗನು ಇಲ್ಲಿ ವಾಸವಾಗಿದ್ದಿರಬೇಕೆನಿಸುತ್ತದೆ. ಆದ್ದರಿಂದ ಈ ಪ್ರದೇಶವನ್ನು

ಸೂಚಿಸುವಾಗ ಬಲ್ಲನಮಗನೂರ ಎಂದು ಕರೆಯಲಾಯಿತು. ಮುಂದೆ ಜನರ ಭಾಷೆಯ ಬಳಕೆಯಿಂದ ಬಲ್ಲನಮಗನೂರ ಎಂಬುದು ಬನ್ನಿಗನೂರು ಎಂದು ಹೆಸರನ್ನು ಪಡೆದುಕೊಂಡಿದೆ.

**ಶಂಕರಬಂಡಿ(ಬೆ) :** ಶಂಕರಬಂಡಿ ಎಂದರೆ, ಶಿವನಿಗೆ ಸಂಬಂಧಿಸಿದ ಚಕ್ಕಡಿ, ಬಂಡಿ, ತೇರುಗಳನ್ನು ತಯಾರಿಸುವುದು ಎಂಬುದಾಗಿದೆ. ಬಂಡಿಗಳನ್ನು ತಯಾರಿಸಲು ಹೆಸರಾಗಿದ್ದ ಈ ಪ್ರದೇಶವನ್ನು ಶಂಕರಬಂಡಿ ಎಂದು ಕರೆದಿರಬೇಕು.

**ಕ್ಯಾತನಹಟ್ಟಿ :** ಹಿಂದೆ ಈ ಸ್ಥಳದಲ್ಲಿ ಕ್ಯಾತಪ್ಪನೆಂಬ ವ್ಯಕ್ತಿಯು ಬಹಳ ದಿನಗಳಿಂದ ಹಟ್ಟಿಯನ್ನು ನಿರ್ಮಿಸಿಕೊಂಡು ವಾಸವಾಗಿದ್ದನು. ಹಟ್ಟಿ ಅಥವಾ ಸ್ಥಳವನ್ನು ಹಟ್ಟಿ ಮಾಲೀಕನಾದ ಕ್ಯಾತಪ್ಪನ ಹೆಸರಿನ ಮೂಲಕ ಹೆಸರಿಸುವುದು ರೂಢಿಗತವಾಗಿ ಬೆಳೆದುಕೊಂಡು ಬಂದಿತು. ಹೀಗೆ ಮುಂದುವರಿದು ಪ್ರಸ್ತುತ ಕ್ಯಾತನಹಟ್ಟಿ ಎಂದು ಹೆಸರು ಪಡೆದುಕೊಂಡಿದೆ.

**ಸುಲ್ತಾನಪುರ :** ಸುಲ್ತಾನ ಎಂಬುದು ವ್ಯಕ್ತಿ ಹೆಸರಾಗಿದ್ದು, ಮುಸ್ಲಿಮರನ್ನು ಪ್ರತಿನಿಧಿಸುತ್ತದೆ. ಬಿಜಾಪುರದ ಆದಿಲ್‌ಶಾಹಿಗಳು ಈ ಪ್ರದೇಶದಲ್ಲಿದ್ದುಕೊಂಡು ಸುತ್ತಮುತ್ತಲಿನ ಪ್ರದೇಶಗಳ ಆಡಳಿತವನ್ನು ನಿರ್ವಹಿಸುತ್ತಿದ್ದರು. ಆದಿಲ್‌ಶಾಹಿ ಸುಲ್ತಾನರು ಇಲ್ಲಿ ಹೆಚ್ಚಿನಸಂಖ್ಯೆಯಲ್ಲಿ ವಾಸವಾಗಿದ್ದರಿಂದ ಈ ಪ್ರದೇಶ ವನ್ನು ಸುಲ್ತಾನರಪುರ ಹಾಗೂ ಸುಲ್ತಾನಪುರ ಎಂದು ಕರೆಯಲಾಯಿತು. ಹೀಗೆ ಸುಲ್ತಾನಪುರ ಎಂಬ ಗ್ರಾಮನಾಮ ವನ್ನು ಪಡೆದುಕೊಂಡ ಈ ಪ್ರದೇಶದಲ್ಲಿ ಆದಿಲ್‌ಶಾಹಿ ಸುಲ್ತಾನರ ಪ್ರಭಾವವಿತ್ತೆಂದು ತಿಳಿದುಬರುತ್ತದೆ.

**ಗೋವಿಂದನಾಯಕನ ದೊಡ್ಡಿ(ಬೆ) :** ಗೋವಿಂದ ಎಂಬುದು ವ್ಯಕ್ತಿನಾಮ. ಉತ್ತರ ಪದವಾದ ದೊಡ್ಡಿ, ವಾಸ್ತವ್ಯವಾಚಿಯಾಗಿದ್ದು ಇದಕ್ಕೆ ಹಟ್ಟಿ, ಕೊಟ್ಟಿಗೆ, ದನ ಕರುಗಳನ್ನು ಕಟ್ಟುವ ಮನೆ, ಮೂಲದ ಮನೆ ಎಂಬರ್ಥವಿದೆ. ದೊಡ್ಡಿ ಎಂಬ ಪದ ಈ ಭಾಗದಲ್ಲಿ ಪ್ರಚಲಿತದಲ್ಲಿದೆ. ವಿಸ್ತಾರವಾದಂತಹ ದೊಡ್ಡಿಯನ್ನು ನೋಡಿಕೊಳ್ಳಲು ಗೋವಿಂದನಾಯಕ ಎಂಬ ವ್ಯಕ್ತಿಯನ್ನು ನೇಮಕ ಮಾಡಲಾಯಿತು. ಈ ದೊಡ್ಡಿಯನ್ನು ಗುರುತಿಸುವಾಗ ಸಾಮಾನ್ಯವಾಗಿ ಗೋವಿಂದನಾಯಕನ ದೊಡ್ಡಿ ಎಂದು ಕರೆಯುವುದು ರೂಢಿಯಲ್ಲಿ ಬಂದುದರಿಂದ ಮುಂದೆ ಅದು ಗೋವಿಂದನಾಯಕನ ದೊಡ್ಡಿ ಗ್ರಾಮನಾಮವನ್ನು ಪಡೆದುಕೊಂಡಿರಬಹುದಾಗಿದೆ.

**ನಿಸರ್ಗವಾಚಕ**

**ಬುದ್ದಿನ್ನಿ :** ಪ್ರಸ್ತುತ ಈ ಗ್ರಾಮವು ದಿನ್ನೆಯ ಮೇಲಿದೆ. ಇದರ ಹತ್ತಿರ ಎತ್ತರವಾದ ಹಾಗೂ ಉದ್ದವಾದ ಮಾಳಿಗಳಿವೆ. ಆದರೆ ಜನವಸತಿ ಇರುವ ಪ್ರದೇಶವು ಹಿಂದೆ ಬೂದಿಯಿಂದ ದಿನ್ನೆಯಾಗಿ ಮಾರ್ಪಟ್ಟಿರಬಹುದು. ಕಾಲಾನಂತರದಲ್ಲಿ ಬೇರೆ ಬೇರೆ ಭಾಗದಿಂದ ವಲಸೆ ಬಂದ ಜನರು ಇಲ್ಲಿ ವಾಸವಾಗಿ ಅದನ್ನು ತಾವುಗಳು ಬೂದಿದಿನ್ನೆಯೆಂಬುದು ಕರೆದುಕೊಂಡರು. ಹೀಗೆ ಬೂದಿದಿನ್ನೆಯೆಂದು ರೂಢಿಗತವಾಗಿ ಬಂದು ಪ್ರಸ್ತುತವಾಗಿ ಬುದ್ದಿನ್ನಿ ಎಂದು ಕರೆಯಲ್ಪಟ್ಟಿದೆ.

**ಹುಲ್ಲೂರು :** ಇದು ಹುಲ್ಲನ್ನು ಸೂಚಿಸುವ ಸ್ಥಳನಾಮ. ಈ ಪ್ರದೇಶದಲ್ಲಿ ಹೆಚ್ಚಾಗಿ ಹುಲ್ಲು ಬೆಳೆಯುತ್ತಿದ್ದರಿಂದ ಈ ಪ್ರದೇಶವನ್ನು ಹುಲ್ಲೂರು ಎಂದು ಕರೆಯಲಾಯಿತು. ಸ್ಥಳೀಯರು ಇದಕ್ಕೆ ತ್ರೋಣಾಪುರ ಎಂಬ ಹೆಸರಿತ್ತೆಂದು ಹೇಳುತ್ತಾರೆ. ಇದಕ್ಕೆ ಸ್ಪಷ್ಟ ಆಧಾರಗಳು ಲಭ್ಯವಾಗಿಲ್ಲ.

**ಸುಂಕನೂರು :** ಉದ್ಬಾಳ(ಉ) ನಾಡಗೌಡರು ಹೈದರಾಬಾದ್ ನಿಜಾಮನ ಅಧೀನದಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದರು. ನಿಜಾಮರ ಪರವಾಗಿ ನಾಡಗೌಡರು ತಮ್ಮ ಸಂಸ್ಥಾನದ ವ್ಯಾಪ್ತಿಯಲ್ಲಿನ ಹಳ್ಳಿಗಳ ಸುಂಕ(ತೆರಿಗೆ)ವನ್ನು ಸಂಗ್ರಹಿಸುವ ಅಧಿಕಾರ ಪಡೆದುಕೊಂಡಿದ್ದರು. ನಾಡಗೌಡರು ಸುಂಕ ಸಂಗ್ರಹಣೆಗಾಗಿ ಊರೂರು ಅಲೆದಾಡುವುದನ್ನು ನಿಲ್ಲಿಸಿ ನಿರ್ದಿಷ್ಟ ಸ್ಥಳವನ್ನು ಗುರುತಿಸಿದರು. ಆ ಸ್ಥಳ ಒಂದು ದೊಡ್ಡ ಕಟ್ಟೆಯಾಗಿತ್ತು. ಸುಂಕವನ್ನು ಸಂಗ್ರಹಿಸುತ್ತಿದ್ದ ಈ ಕಟ್ಟೆಯೂ ಮುಂದೆ ಸುಂಕದ ಕಟ್ಟೆಯಾಯಿತು. ಸುಂಕದ ಕಟ್ಟೆ ಸ್ಥಳಕ್ಕೆ ಹೆಚ್ಚಿನ ಜನವಸತಿ ಬಂದು ನೆಲೆಸಿತು. ಜನವಸತಿಯುಳ್ಳ ಪ್ರದೇಶವನ್ನು ಸುಂಕದ ಊರು ಎಂದು ಕರೆಯುವುದು ರೂಢಿಯಲ್ಲಿ ಬಂದು ಕ್ರಮೇಣ ಜನರ ಭಾಷೆಯ ಬಳಕೆಯಿಂದ ಇಂದು ಸುಂಕನೂರು ಎಂಬ ಹೆಸರು ಪಡೆದುಕೊಂಡಿದೆ.

**ಚಿಕ್ಕ ಕಡಬೂರು :** ಇದೊಂದು ಪ್ರಮಾಣವಾಚಿ. ಈ ಸ್ಥಳವನ್ನು ಕುರಿತು ಸುಂಕನೂರಿನ ಶಾಸನವು[೧೧] 'ಕಡಂಬೂರ' ಎಂದು ಹೆಸರಿಸುತ್ತದೆ. ಜನರ ಭಾಷೆಯ ಬಳಕೆಯಿಂದ ಕಾಲಾನಂತರದಲ್ಲಿ ಕಡಬೂರು ಎಂದಾಗಿದೆ. ಈ ಪ್ರದೇಶದಲ್ಲಿ ಕಡಬೂರು ಹೆಸರಿನ ಎರಡು ಗ್ರಾಮಗಳಿವೆ. ಅವುಗಳ ಜನಸಂಖ್ಯೆ ಮತ್ತು ವಿಸ್ತೀರ್ಣ ಆಧಾರದಿಂದ ಚಿಕ್ಕ ಮತ್ತು ದೊಡ್ಡ ಕಡಬೂರು ಎಂದು ವಿಂಗಡಿಸಿ ಕರೆಯಲಾಗುತ್ತಿದೆ.

**ಜಂಗಮರ ಹಟ್ಟಿ:** ಇದೊಂದು ಜನಾಂಗವಾಚಿ ಸ್ಥಳನಾಮವಾಗಿದೆ. ಜಂಗಮರು ಲಿಂಗಾಯತರಲ್ಲಿ ಪೂಜಾವೃತ್ತಿಯುಳ್ಳವರು. ಶೈವ ಸನ್ಯಾಸಿ ಚಲಿಸುವ ಶಕ್ತಿಯುಳ್ಳ ಈ ಸಮುದಾಯ ಹೆಚ್ಚಾಗಿ ನೆಲೆಸಿದ್ದಂತಹ ನೆಲೆಯಾಗಿರಬೇಕು.

**ಕಲ್ಯಾಣ ಹುಡೇವು :** ಕಲ್ಯಾಣ ಎಂಬುದು ಒಂದು ರಾಜವಂಶದ ಹೆಸರು. ಈ ವಂಶದವರು ತಮ್ಮ ಆಳ್ವಿಕೆಯ ಸಂದರ್ಭದಲ್ಲಿ ಧಾನ್ಯರಕ್ಷಣೆಗಾಗಿ ಇನ್ನಿತರ ಅಪಾಯವನ್ನು ತಪ್ಪಿಸಲು ಹುಡೇವುಗಳನ್ನು ನಿರ್ಮಿಸಿದರು. ಅವುಗಳಲ್ಲಿ ಒಂದು ಈಗ ಉಳಿದುಕೊಂಡುಬಂದಿದೆ. ಹುಡೇವು(ಬುರುಜು)ಗಳಿದ್ದ ಈ ಪ್ರದೇಶವನ್ನು ಕಲ್ಯಾಣ ಹುಡೇವು ಎಂದು ಕರೆಯುವುದು ರೂಢಿಗತವಾಗಿ ಬಂದಿತು. ಹೀಗೆ ಇದು ಕಲ್ಯಾಣ ಹುಡೇವು ಎಂಬ ಸ್ಥಳನಾಮವನ್ನು ಪಡೆದುಕೊಂಡಿದೆ.

**ಉದ್ಬಾಳ(ಉ) :** ಸಿಂಧನೂರು ತಾಲೂಕಿನಲ್ಲಿ ಉದ್ಬಾಳ ಹೆಸರಿನ ಎರಡು ಗ್ರಾಮಗಳಿವೆ. ಬಳಗಾನೂರು ಪರಿಸರದ ಈ ಗ್ರಾಮವನ್ನು ಉಂಬಳಿ(ಕಂದಾಯವಿಲ್ಲದ ಜಮೀನು) ಉದ್ಬಾಳ ಎಂದು ಕರೆಯಲಾಗುತ್ತಿದೆ. ಸ್ಥಳೀಯ ನಾಡಗೌಡರಿಗೆ ಹೈದರಾಬಾದ್ ನಿಜಾಮ ೩೨ ಹಳ್ಳಿಗಳನ್ನು ಹೆಚ್ಚುವರಿಯಾಗಿ ನೀಡಿದನು. ಇವುಗಳ ಕಂದಾಯ ಮಾತ್ರ ನಾಡಗೌಡರಿಗೆ ಸೇರುತ್ತಿತ್ತು. ಹೀಗಾಗಿ ಇಂದು ಉದ್ಬಾಳ(ಉ) ಎಂಬ ಸ್ಥಳನಾಮವನ್ನು ಪಡೆದುಕೊಂಡಿದೆ.

### ೩.೨. ಐತಿಹ್ಯಗಳು (Legends)

ಐತಿಹ್ಯವೆಂದರೆ ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದ ಜಾನಪದ ಪುರಾಣ. ಅಂದರೆ ಹಿಂದೆ ನಡೆದಿರಬಹುದಾದ ಘಟನೆಯೊಂದಕ್ಕೆ ಕಲಾತ್ಮಕತೆಯ ಬಣ್ಣ ಕೊಟ್ಟು ಹೆಣೆದಿರಬಹುದಾದ ಜನಪದ

ಸಾಹಿತ್ಯ ಪ್ರಕಾರವಿದು. ಐತಿಹ್ಯಗಳು ಇತಿಹಾಸದ ಸ್ಪರ್ಶದಿಂದ ಕೂಡಿರುತ್ತವೆ. ಜನಪದರು ಕಟ್ಟಿ ನಿರೂಪಿಸುತ್ತಾ ಬಂದಿರುವ ಕಥನಗಳೆನ್ನಬಹುದು.[೧೨] ಒಂದು ದೃಷ್ಟಿಯಿಂದ ಜನಪದ ಪ್ರಕಾರಗಳಾದ ಕಥೆ, ಪುರಾಣ, ಗಾದೆ, ನುಡಿಗಟ್ಟು ಕಾವ್ಯಗಳಂತೆಯೇ ಒಂದು ಒಳಪ್ರಭೇದವೂ ಹೌದು. ಇಲ್ಲಿ ಲಿಖಿತ ದಾಖಲೆಗಳಿರುವುದಿಲ್ಲ. ನಿರೂಪಕನಿಂದ ಕೇಳುಗ, ಆತನಿಂದ ಪ್ರಸಾದಕರಿಗೆ ಬಾಯಿಯಿಂದ ಬಾಯಿಗೆ ಹರಿದು ಬರುತ್ತದೆ. ಆದರೆ ಯಾವುದೇ ಆಧಾರಗಳಿಲ್ಲದೆ ಐತಿಹ್ಯಗಳು ಹುಟ್ಟಿರಲಾರವು. ಅವಶೇಷ, ಪಳೆಯುಳಿಕೆ, ವಸ್ತು, ವ್ಯಕ್ತಿ, ಘಟನೆ, ಸ್ಥಳ, ಕೆರೆ-ಕಟ್ಟೆ, ಗುಡ್ಡ-ಬೆಟ್ಟ, ನದಿ-ಹಳ್ಳ, ಬಂಡೆ-ದಿನ್ನೆ, ಉಡುಗೆ-ತೊಡುಗೆ, ಆಯುಧ, ಪ್ರಾಣಿ, ಸಸ್ಯ, ದೈವ, ದೆವ್ವ, ವ್ಯಕ್ತಿ ಹೀಗೆ ಯಾವುದು ಬೇಕಾದರೂ ಐತಿಹ್ಯಕ್ಕೆ ಒಳಗಾಗಬಹುದು.[೧೩] ಹೀಗೆ ಭೌತಿಕ ಆಧಾರಗಳ ಹಲವು ವಿಷಯಗಳನ್ನಾಧರಿಸಿ ಆಯಾ ಪರಿಸರದ ಸಂಸ್ಕೃತಿಗನುಸಾರವಾಗಿ ಐತಿಹ್ಯಗಳು ಹುಟ್ಟಿಕೊಂಡಿವೆ. ಇಂತಹ ಐತಿಹ್ಯಗಳು ನಿರೂಪಿಸುವ ನಿರೂಪಕನ ದೃಷ್ಟಿಯನ್ನು ಒಳಗೊಂಡಿರುತ್ತವೆ.

ಐತಿಹ್ಯ ಪದದ ಮೂಲಾರ್ಥ ಕಾಲದಿಂದ ಕಾಲಕ್ಕೆ ಬದಲಾಗುತ್ತ ಅದು ಇಂದು ಚರಿತ್ರೆಯ ಸ್ವರೂಪಕ್ಕೆ ತಿರುಗಿದೆ. ಚರಿತ್ರೆಯ ಬರವಣಿಗೆಯಲ್ಲಿ ಐತಿಹ್ಯದ ಪಾತ್ರ ಇದೆ ಎಂಬುದನ್ನು ಪರಿಗಣಿಸಬೇಕು.[೧೪] ಒಂದು ನಿರ್ದಿಷ್ಟ ವ್ಯಕ್ತಿ, ಸ್ಥಳ, ಘಟನೆ, ಚರಿತ್ರೆ, ಸಮಾಜ, ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕಥೆಯೇ ಐತಿಹ್ಯ. ಈ ಹಿನ್ನೆಲೆಯಿಂದ ಐತಿಹ್ಯಗಳನ್ನು ಮೂರು ಪ್ರಕಾರವಾಗಿ ವಿಂಗಡಿಸುತ್ತಾರೆ.

**೧. ವಿವರಣಾತ್ಮಕ ಐತಿಹ್ಯಗಳು :** ಇವು ಯಾವುದಾದರೊಂದು ನಂಬಿಕೆ, ಪದ್ಧತಿ, ವಸ್ತು, ವೈಶಿಷ್ಟ್ಯ ಅಥವಾ ವಿಶೇಷ ಗುಣದ ಹುಟ್ಟಿಗೆ ಕಾರಣವನ್ನು ವಿವರಿಸುತ್ತವೆ.[೧೫]

**೨. ಅತಿಮಾನುಷ ಜೀವಿಗಳ ಕುರಿತ ಐತಿಹ್ಯಗಳು :** ದೆವ್ವ, ಭೂತ, ಬ್ರಹ್ಮ, ಪಿಶಾಚಿ, ಮೋಹಿನಿ ಮುಂತಾದ ಜೀವಿಗಳು ಇಲ್ಲದಿದ್ದರೂ ಇದ್ದೇ ಇರುವವು ಎಂಬ ನಂಬಿಕೆಯ ಮೇಲೆ ಅನೇಕ ಕಲ್ಪನೆಗಳು ಕಥೆಗಳು ಹುಟ್ಟಿಕೊಂಡಿವೆ.

**೩. ಚಾರಿತ್ರಿಕ ಅಥವಾ ವ್ಯಕ್ತಿಗಳ ಘಟನೆಗಳನ್ನು ಕುರಿತ ಐತಿಹ್ಯಗಳು :** ವ್ಯಕ್ತಿಜೀವನದ ಸಾಧನೆಗಳು, ಸ್ವಾರಸ್ಯಕರ ಸಂಗತಿಗಳು, ಪ್ರವಾಹ, ಭೂಕಂಪ, ಸಿಡಿಲು, ಅಪಘಾತ ಮುಂತಾದ ಭೌಗೋಳಿಕ ವೈಪರೀತ್ಯಗಳಿಗೆ ಸಂಬಂಧಿಸಿದ ಘಟನೆಗಳ ಬಗ್ಗೆ ಐತಿಹ್ಯಗಳಿವೆ.[೧೬] ಈ ವಿಷಯಗಳು ಜನರಿಗೆ ತೀರ ಪ್ರಾಚೀನವೂ ಅಲ್ಲ, ಸಮಕಾಲೀನವೂ ಅಲ್ಲ, ವಿಷಯದ ನೇರ ಪರಿಚಯವೂ ಇರುವುದಿಲ್ಲ.

ಪ್ರಸಿದ್ಧ ವ್ಯಕ್ತಿಗಳ ಸಾಧನೆ, ಹಿರಿಮೆ, ಗರಿಮೆಗಳ ಬಗ್ಗೆ ಹುಟ್ಟಿಕೊಳ್ಳುವ ಐತಿಹ್ಯಗಳು ಬಹುತೇಕವಾಗಿ ಉತ್ಪ್ರೇಕ್ಷೆ, ಪ್ರಕ್ಷೇಪಗಳಿಂದ ಕೂಡಿರುತ್ತವೆ. ಈ ಪ್ರಸಿದ್ಧ ದೊರೆ, ರಾಜಕಾರಣಿಗಳು, ಸಾಧು, ಬಲಶಾಲಿ, ವಿದ್ವಾಂಸ, ದಾರ್ಶನಿಕ, ಕಲಾವಿದ, ವಿಜ್ಞಾನಿ ಮೊದಲಾದವರ ಬಗೆಗೆ ಹುಟ್ಟಿಕೊಳ್ಳುವ ಕಥೆಗಳನ್ನು ಈ ಗುಂಪಿಗೆ ಸೇರಿಸಬಹುದು.[೧೭]

ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಇಂತಹ ಅಂಶಗಳನ್ನೊಂದಿದ ಕೆಲವೊಂದು ಐತಿಹ್ಯಗಳನ್ನು ಕಾಣಬಹುದು. ಅವುಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

**ಬಳಗಾನೂರು ಗ್ರಾಮದ ಕುರಿತಾದ ಐತಿಹ್ಯಗಳು**

**ಬಳಗಾನೂರಿನ ಲಕ್ಷ್ಮೀನಾರಾಯಣ ದೇವಾಲಯ ಬಗೆಗಿರುವ ಐತಿಹ್ಯ :** ಪ್ರಸ್ತುತ ಊರ ಮಧ್ಯೆ ಇರುವ ಲಕ್ಷ್ಮೀನಾರಾಯಣ ದೇವಾಲಯದಿಂದ ಊರ ಹೊರಗಿನ ಎಲ್ಲಮ್ಮ ಗುಡಿಗೆ ಸುರಂಗ ಮಾರ್ಗವಿದೆ. ಅದು ಮುಂದೆ ಹಂಪೆಯ ಹೇಮಕೂಟಕ್ಕೆ ವಿಸ್ತರಿಸಿಕೊಂಡಿದೆ. ಈ ಸುರಂಗ ಮಾರ್ಗದಲ್ಲಿ ಏಳು ಹಂಡೆ ಬಂಗಾರವಿದೆ. ಅದನ್ನು ನಾಗರಹಾವು, ಕಾಡುಕೋಣ ಕಾಯುತ್ತಿವೆ ಎಂಬುದು ಅಲ್ಲಿನವರ ನಂಬಿಕೆ ಮತ್ತು ಐತಿಹ್ಯ. ಇತ್ತೀಚೆಗೆ ಲಕ್ಷ್ಮೀನಾರಾಯಣ ದೇವಾಲಯದ ಬಳಿ ಉಂಟಾದ ಭೂಕುಸಿತ ಅಚ್ಚರಿಗೆ ಕಾರಣವಾಯಿತು. ಭೂಕುಸಿತದಿಂದ ಉಂಟಾದ ಗುಂಡಿಯನ್ನು ಮುಚ್ಚಲು ೨೦-೩೦ ಟ್ರ್ಯಾಕ್ಟರ್ ಮರಳು ಮಣ್ಣನ್ನು ಹಾಕಿದರೂ ಮುಚ್ಚಲಿಲ್ಲ. ಇದೇ ಸುರಂಗ ಮಾರ್ಗದ ಗುರುತು ಇರಬೇಕು ಎಂದು ಹೇಳುತ್ತಾರೆ. ಲಕ್ಷ್ಮೀನಾರಾಯಣ ದೇವಾಲಯದ ಅರ್ಧಮಂಟಪದಲ್ಲಿ ದೊಡ್ಡ ಬಾವಿ ಇದೆ. ಈ ಬಾವಿ ಮೂಲಕ ಸುರಂಗ ಮಾರ್ಗವಿದೆ ಎಂಬುದು ಇಲ್ಲಿನ ನಂಬಿಕೆ.[೧೮]

**ಹನುಮಂತನ ಕುರಿತಾದ ಐತಿಹ್ಯ :** ಈ ಗ್ರಾಮದಲ್ಲಿ ಪೌರಾಣಿಕವಾಗಿ ಪ್ರಸಿದ್ಧಿ ಪಡೆದ ದೇವರೆಂದರೆ ಹನುಮಂತನಾಗಿದ್ದಾನೆ. ಈತನ ಬಗ್ಗೆ ಹುಟ್ಟಿಕೊಂಡಿರುವ ಐತಿಹ್ಯ ಈ ರೀತಿ ಇದೆ. ಒಮ್ಮೆ ನೆರೆಹಾವಳಿ ಸಂದರ್ಭದಲ್ಲಿ ಮಸ್ಕಿ ಹಿರೆಹಳ್ಳದ ಮೂಲಕವಾಗಿ ನೀರಿನೊಂದಿಗೆ ಹರಿದುಕೊಂಡು ಬಂದಂತಹ ಹನುಮಂತ ಬಳಗಾನೂರ ಬಳಿ ಹಳ್ಳದ ದಂಡೆಯಲ್ಲಿ ನೆಲೆ ನಿಂತನು. ಒಂದು ದಿನ ಅಗಸರ ಸ್ತ್ರೀಯೊಬ್ಬಳು ಬಟ್ಟೆ ತೊಳೆಯಲು ಹೋದಾಗ ಅಲ್ಲಿಯೇ ಬಿದ್ದಿದ್ದ ಹನುಮಂತನ ಮೂರ್ತಿಯನ್ನು ಗುರುತಿಸಿದಳು. ಅಲ್ಲದೆ ಆಶ್ಚರ್ಯಚಕಿತಳಾದಳು. ಹಳ್ಳದಲ್ಲಿ ಹನುಮಂತನ ಮೂರ್ತಿ ಇರುವ ವಿಚಾರವನ್ನು ಊರಿನ ಜನರಿಗೆಲ್ಲ ತಿಳಿಸಿದಳು. ಈ ವಿಚಾರ ತಿಳಿದ ಗ್ರಾಮಸ್ಥರೆಲ್ಲರೂ ಆ ಮೂರ್ತಿಯನ್ನು ವೀಕ್ಷಿಸಲು ಕುತೂಹಲದಿಂದ ಆಗಮಿಸಿದರು. ಹೀಗೆ ಹಳ್ಳದಲ್ಲಿ ಬಿದ್ದಂತಹ ಹನುಮಂತನ ಮೂರ್ತಿಯನ್ನು ಊರೊಳಕ್ಕೆ ತರಲು ಗ್ರಾಮಸ್ಥರೆಲ್ಲರೂ ಸಿದ್ಧರಾದರು. ಮೂರ್ತಿಗೆ ಹಗ್ಗವನ್ನು ಕಟ್ಟಿ ಊರಿನ ಹತ್ತಿರಕ್ಕೆ ಎಳೆದು ತಂದರು. ಪ್ರಸ್ತುತವಾಗಿರುವ ಜಾಗದ ತನಕ ಸುಲಭವಾಗಿ ಸಾಗಿ ಬಂದ ಮೂರ್ತಿಯನ್ನು ಮುಂದೆ ಸಾಗಿಸಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಆಗ ನೆಲೆ ನಿಂತ ಸ್ಥಳದಲ್ಲಿಯೇ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ಕಟ್ಟಿಸಲಾಯಿತು ಎಂಬುದು ಇಲ್ಲಿಯ ಐತಿಹ್ಯವಾಗಿದೆ.[೧೯] ಹೀಗೆ ವಲಸೆ ಬಂದ ಹನುಮಂತನನ್ನು ಬಂದು ಶತಪುರೇಶ್ವರ ಎಂದು ಕರೆಯಲಾಗುತ್ತಿದೆ.

ಪ್ರತಿವರ್ಷ ಜರುಗುವ ಪುರಾಣಪ್ರಸಿದ್ಧ ಹನುಮಂತ ದೇವರ ಜಾತ್ರೆಯ ದಿನದಂದು ಚಮ್ಮಾರರು (ನಿರ್ದಿಷ್ಟ ಮನೆತನ) ಸ್ವತಃ ಕೈಯಿಂದ ಹೊಲಿದು ಮಾಡಿದ ಚರ್ಮದ ಪಾದರಕ್ಷೆಗಳನ್ನು(ಜೋಡಿ) ಹನುಮಂತ ದೇವರಿಗೆ ಅರ್ಪಿಸುತ್ತಾರೆ. ಮರುವರ್ಷ ಜಾತ್ರೆ ಬರುವುದರೊಳಗಾಗಿ ಪಾದರಕ್ಷೆಗಳು ಸವೆದು ಹೋಗುತ್ತವೆ. ಏಕೆಂದರೆ ಹನುಮಂತ ರಾತ್ರಿ ಇಡೀ ಈ ಪಾದರಕ್ಷೆಗಳನ್ನು ತೊಟ್ಟು ಊರಿನಲ್ಲಿ ಸುತ್ತಾಡುತ್ತಾನೆಂಬುದು ಇಲ್ಲಿನ ನಂಬಿಕೆ ಮತ್ತು ಐತಿಹ್ಯವಾಗಿದೆ. ಇದನ್ನು ಜನರು ನಿಜವೆಂದು ಒಪ್ಪಿದ್ದಾರೆ.

ಇದೇ ಗ್ರಾಮದ ಇನ್ನೊಂದು ವಿಷಯದ ಕುರಿತು ಹೇಳುವ ಐತಿಹ್ಯ ಈ ರೀತಿಯಿದೆ. ಬಳಗಾನೂರು ಮೂಲತಃ ಗೊಲ್ಲರಹಟ್ಟಿ. ಇಲ್ಲಿ ಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದರು. ಇಂದಿನ ಗೌಡರ ಓಣಿ

ಮೂಲತಃ ಗೊಲ್ಲರ ಓಣಿ ಎಂದು ಹೇಳಲಾಗುತ್ತದೆ. ಪರಂಪರಾಗತವಾದ ಪಶುಪಾಲನೆಯನ್ನು ಅವಲಂಬಿಸಿದ್ದ ಅವರ ಪಶುಸಂಪತ್ತು ಎಷ್ಟಿತ್ತೆಂದರೆ ಮೊದಲಲ್ಲಿ ಬಿಟ್ಟ ಆಕಳುಗಳು ಅಗಸೆಯನ್ನು ದಾಟಿದರೂ ಕೂಡ ಇನ್ನೂ ಪೂರ್ತಿಯಾಗಿ ದನಗಳ ಕಣ್ಣಿ(ಹಗ್ಗ) ಬಿಚ್ಚಿಬಿಡುವುದು ಆಗಿರುತ್ತಿದ್ದಿಲ್ಲ ಎಂದು ಬಲ್ಲ ಹಿರಿಯರು ಹೇಳುತ್ತಾರೆ. ಅಷ್ಟೊಂದು ದನಕರುಗಳನ್ನು ಸಾಕಿದ ಗೊಲ್ಲರು ಇಲ್ಲಿದ್ದರು ಎಂದು ಹೇಳುತ್ತಾರೆ. ಇದು ಕೆಲಮಟ್ಟಿಗೆ ಉತ್ಪ್ರೇಕ್ಷೆಯೆನ್ನಿಸಬಹುದಾದರೂ ಗೊಲ್ಲರು ಇಲ್ಲಿರಲಿಕ್ಕಿಲ್ಲ ಎನ್ನುವಂತಿಲ್ಲ. ಅಧಿಕ ಸಂಖ್ಯೆಯಲ್ಲಿದ್ದ ಗೊಲ್ಲರು ಊರಿನ ಅಧಿಕಾರಿಗಳಾಗಿದ್ದರು. ಊರಿನ ಗೌಡಿಕೆ ಅವರಿಗೆ ಸೇರಿತ್ತು ಎನ್ನಲಾಗುತ್ತದೆ. ಮುಂದೆ ಇವರು ಬೇರೆಡೆಗೆ ವಲಸೆ ಹೋಗುವಾಗ ಸ್ವಾಮಿ(ಬ್ರಾಹ್ಮಣ)ಗಳೊಬ್ಬರಿಗೆ ಗೌಡಕಿಯನ್ನು ನೀಡಿದರೆಂದು ಹೇಳಲಾಗುತ್ತಿದೆ.[೨೦]

ಈ ಐತಿಹ್ಯ ಅಂಶವನ್ನು ಗಮನಿಸಿದಾಗ ಇದು ನಿಜವೆಂದು ತೋರುತ್ತಿದೆ. ಅದು ಹೇಗೆಂದರೆ ಇಲ್ಲಿಯ ಬಹುತೇಕ ವೀರಗಲ್ಲುಗಳು ಗೋಗ್ರಹಣ ಸನ್ನಿವೇಶಕ್ಕೆ ಸಂಬಂಧಪಟ್ಟಿವೆ. ಆಂಜನೇಯ (ಹನುಮಂತ) ದೇವಾಲಯದ ಆವರಣದಲ್ಲಿ ಬಿದ್ದಿರುವ ಸ್ಮಾರಕ ಶಿಲೆಯಲ್ಲಿ ಕೊಳಲನ್ನು ಊದುತ್ತಿರುವ ಶ್ರೀಕೃಷ್ಣ (ವೀಣಾವಾದಕ)ನ ಚಿತ್ರವಿದೆ. ಈ ಚಿತ್ರದ ಕೆಳಗಡೆ ಹಸುಗಳನ್ನು ಚಿತ್ರಿಸಲಾಗಿದೆ. ಈ ಹಸುಗಳು ಕೊರಳನ್ನೆತ್ತಿ ಕೊರಳ ದನಿಯನ್ನಾಲಿಸುವಂತೆ ತೋರಿಸಲಾಗಿದೆ. ಇದು ಚಾರಿತ್ರಿಕ ದೃಷ್ಟಿಯಿಂದ ತುಂಬಾ ಹತ್ತಿರವಾದ ವಿಚಾರ ವಾಗಿದೆ.

## ಉದ್ಬಾಳದ ಐತಿಹ್ಯಗಳು

**ಅಂಬಾದೇವಿಯನ್ನು ಸಂಸ್ಥಾನಕ್ಕೆ ಕರೆತಂದುದರ ಕುರಿತು :** ಉದ್ಬಾಳ (ಉ) ನಾಡಗೌಡ ಸಂಸ್ಥಾನದ ಪ್ರಮುಖರಾದ ಮಲಕೇಂದ್ರರಾವ್ ನಾಡಗೌಡರು ಒಮ್ಮೆ ಸಿಂಧನೂರು ತಾಲೂಕಿನ ಪ್ರಸಿದ್ಧ ಅಂಬಾದೇವಿ ಜಾತ್ರೆಗೆ ಹೋದರು. ಅತ್ತ ಪ್ರತಿವರ್ಷದಂತೆ ಜವಳಗೆರೆ ನಾಡಗೌಡರು ಅಲ್ಲಿಗೆ ಬಂದು ಸೇರಿದರು. ಇವರೀರ್ವರಲ್ಲಿ ದೇವಿಗೆ ತೆಂಗಿನ ಕಾಯಿಯನ್ನು ಮೊದಲು ಅರ್ಪಿಸುವುದರ ವಿಷಯವಾಗಿ ವ್ಯಾಜ್ಯ ಉಂಟಾಯಿತು. ಕೊನೆಗೆ ಜವಳಗೆರೆ ನಾಡಗೌಡರು ಮೊದಲಿಗರಾಗಿ ಕಾಯಿಯನ್ನು ದೇವಿಗೆ ಅರ್ಪಿಸಿದರು. ದೈವಶಕ್ತಿಯುಳ್ಳ ಮಲಕೇಂದ್ರರಾವ್ ನಾಡಗೌಡರು ಈ ಘಟನೆಯಿಂದ ನೊಂದು ತಾವು ತಂದ ತೆಂಗಿನ ಕಾಯಿಗಳನ್ನು ತಲೆಗೆ ಒಡೆದುಕೊಂಡು ಸಂಸ್ಥಾನಕ್ಕೆ ಮರಳಲು ತಯಾರಾದರು. ಸಂಸ್ಥಾನಕ್ಕೆ ಮರಳಿ ಹೋಗುವ ಸಮಯದಲ್ಲಿ ಅಂಬಾದೇವಿಯನ್ನು ಏಕವಚನದಿಂದ ಕರೆದು ನನಗೆ ಗೌರವ ಸಿಗದ ಈ ಸ್ಥಳದಲ್ಲಿ ನಾನಿರುವುದು ಸಾಧ್ಯವಿಲ್ಲ. ಆದ್ದರಿಂದ ನೀನೇ ನನ್ನ ಸಂಸ್ಥಾನಕ್ಕೆ ಬರಬೇಕು ಎಂದು ಹೇಳಿದರಂತೆ. ನಾಡಗೌಡರೊಂದಿಗೆ ಸಂಸ್ಥಾನಕ್ಕೆ ಹೊರಡಲು ದೇವಿ ಸನ್ನದ್ಧಳಾದಳು. ನಾಡಗೌಡರೊಂದಿಗೆ ಬಂಡಿಯಲ್ಲಿ ಹೊರಟ ದೇವಿ ಸೋಮಲಾಪುರದ ಹಳ್ಳದ ದಂಡೆಯಲ್ಲಿ ತಕ್ಷಣ ಕಾಣದಾದಳು. ಅದೇ ಸಮಯಕ್ಕೆ ಬಂಡಿಯು ಒಣಗಿದ ಭೂಮಿಯಲ್ಲಿ ಸಿಕ್ಕಿಕೊಂಡಿತು. ಎಷ್ಟೇ ಪ್ರಯತ್ನಿಸಿದರೂ ಬಂಡಿ ಹೊರಬರಲಿಲ್ಲ. ಅಲ್ಲಿದ್ದ ಜನರು ಉದ್ಬಾಳ ಸಂಸ್ಥಾನದ ನಾಡಗೌಡರನ್ನು ಗೌರವದಿಂದ ಕಂಡರು. ಪಕ್ಕದ ಹೊಲದಲ್ಲಿ ಉಳುಮೆ ಮಾಡುತ್ತಿದ್ದ ಎಂಟು ಜೋಡಿ ಎತ್ತುಗಳನ್ನು ತರಿಸಿ ಎಳೆಸುವಂತಹ ಪ್ರಯತ್ನ ಮಾಡಿದರೂ ಬಂಡಿ ಅಲ್ಲಿಂದ ಅಲುಗಾಡಲಿಲ್ಲ.

ಇದರಿಂದ ಚಿಂತೆಗೆ ಒಳಗಾದ ನಾಡಗೌಡರು ಮತ್ತೊಮ್ಮೆ ದೇವಿಯನ್ನು ಕರೆದು ನೀನು ನನ್ನ ಸಂಸ್ಥಾನಕ್ಕೆ ಬರುವುದು ಕಾಣಿಸಬೇಕು ಎಂದು ಹೇಳಿದಾಗ ಪ್ರತ್ಯಕ್ಷಳಾದ ದೇವಿ ನಾನು ಇರುವ ಕುರುಹಾಗಿ ತುಂಬಿದ ಕೊಡದ ಮೇಲೆ ತೆಂಗಿನ ಕಾಯಿಯನ್ನು ಇಟ್ಟು ಬಂಡಿಯಲ್ಲಿ ಇಡಿ. ಅದು ನಾನಿರುವ ಸಂಕೇತ. ಈ ಸಂಕೇತವಿದ್ದರೆ ನಾನಿದ್ದ ಹಾಗೆ ಎಂದು ನಾಡಗೌಡರಿಗೆ ತಿಳಿಸಿದಳು. ತಕ್ಷಣ ಕಾರ್ಯಸನ್ನದ್ಧರಾದ ನಾಡಗೌಡರು ದೇವಿ ಸಂಕೇತವಾದ ತುಂಬಿದ ಕೊಡ ಮತ್ತು ಕೊಡದ ಮೇಲೆ ತೆಂಗಿನಕಾಯಿಯನ್ನು ಇಟ್ಟು ಭಕ್ತಿಯಿಂದ ಪೂಜೆ ಮಾಡಿದರು. ಪೂಜಾ ಕಾರ್ಯಗಳನ್ನು ಮುಗಿಸಿ ಕೇವಲ ನಾಡಗೌಡ ಸಂಸ್ಥಾನದ ಎತ್ತುಗಳನ್ನು ಕಟ್ಟಿದಾಗ ಬಂಡಿಯು ಸುಲಭವಾಗಿ ಹೊರಬಂದಿತು. ಮುಂದೆ ಸಿಂಧನೂರು ಗೌಡನಬಾವಿ ಗ್ರಾಮಗಳ ಹಳ್ಳದ ಮಾರ್ಗವಾಗಿ ಬಂಡಿ ಸಾಗಿತು. ಕೊನೆಗೆ ಉದ್ಬಾಳ ಗ್ರಾಮದ ಪೂರ್ವ ದಿಕ್ಕಿನಲ್ಲಿರುವ ಹಳ್ಳದ ದಂಡೆಗೆ ಬಂದ ದೇವಿಯು ಅಲ್ಲಿಯೇ ನಿಂತಳು. ದೇವಿಯು ನಾಡಗೌಡರಿಗೆ ನಾನು ಊರೊಳಕ್ಕೆ ಪ್ರವೇಶಿಸಿ ಬೆಳಗಾಗುವುದರೊಳಗೆ ದೇವಸ್ಥಾನ ನಿರ್ಮಿಸಬೇಕು ಎಂದು ತಿಳಿಸಿದಳು. ದೇವಿಯ ಮಾತಿನಂತೆ ನಡೆದುಕೊಂಡ ನಾಡಗೌಡರು ದೇವಿ ಊರೊಳಕ್ಕೆ ಬಂದು ಬೆಳಗಾಗುವುದರೊಳಗೆ ದೇವಸ್ಥಾನವನ್ನು ಕಟ್ಟಿಸಿದರು ಎಂದು ಅಲ್ಲಿನವರು ಹೇಳುತ್ತಾರೆ.[೨೧] ಅಲ್ಲದೆ ಇದು ಬಹುಪ್ರಚಲಿತವಾಗಿದೆ.

ದೇವಿಯನ್ನು ಕರೆದುಕೊಂಡು ಬರಲು ಹೋದ ನಾಡಗೌಡರ ಶಿಷ್ಯ ಗೋವಿಂದಪ್ಪ ದೇವಿಗಿಂತ ಮುಂಚಿತವಾಗಿ ಸಂಸ್ಥಾನಕ್ಕೆ ಬಂದನು. ಅದಕ್ಕಾಗಿ ದೇವಿಯ ಜಾತ್ರೆಯ ದಿನದಂದು ಗೋವಿಂದಪ್ಪನಿಗೆ ಮೊದಲು ಪೂಜೆ ಮಾಡಿ ನಂತರ ದೇವಿಗೆ ಪೂಜೆ ಕಾರ್ಯಗಳನ್ನು ನಡೆಸುತ್ತಾರೆ. ಇದು ಹಾಗೆ ಮುಂದುವರಿದುಕೊಂಡು ಬಂದಿದೆ ಎಂದು ಅಲ್ಲಿನ ಮೌಖಿಕ ಆಕರಗಳು ತಿಳಿಸುತ್ತವೆ.

ಇದೇ ಗ್ರಾಮದಲ್ಲಿ ಇನ್ನೊಂದು ವಿಷಯದ ಕುರಿತು ಇರುವ ಐತಿಹ್ಯ ಉದ್ಬಾಳ(ಉ) ನಾಡಗೌಡ ಸಂಸ್ಥಾನದ ಪ್ರಮುಖ ರಾಜರಾದ ಮಲಕೇಂದ್ರರಾವ್ ನಾಡಗೌಡರು ದೈವಶಕ್ತಿಯುಳ್ಳವರು. ಇವರು ಬರಗಾಲ ಸಮಯದಲ್ಲಿ ಕಂಬಳಿಯನ್ನು ಮೇಲಕ್ಕೆ ತೂರಿ ಮಳೆಯನ್ನು ತರಿಸಿದ್ದಾರೆ. ಅಲ್ಲದೆ ಮುಂಡರಗಿ ಶಿವಗೇನಿಯಲ್ಲಿ ಕಬ್ಬಿಣದ ಗುಂಡಿಗೆ ಬರಿಗೈಯಿಂದ ಗೂಟವನ್ನು ಬಡಿದಿದ್ದಾರೆ ಎಂಬುದಾಗಿ ಅಲ್ಲಿನವರು ಹೇಳುತ್ತಾರೆ. ಈ ಎಲ್ಲಾ ಅಂಶಗಳು ಸತ್ಯವೆಂದು ಅಲ್ಲಿನವರು ಹೇಳುತ್ತಾರೆ ಅಲ್ಲದೆ ನಂಬಿದ್ದಾರೆ.[೨೨]

### ಚಿಕ್ಕಕಡಬೂರ ಗ್ರಾಮದ ಐತಿಹ್ಯಗಳು

ಈ ಗ್ರಾಮದ ಪೂರ್ವದಿಕ್ಕಿನಲ್ಲಿರುವ ಪ್ರಾಚೀನ ಕಾಲದ ಬಾವಿಯ ನೀರು ಔಷಧಿಗುಣವುಳ್ಳದ್ದು ಎಂದು ಹೇಳುತ್ತಾರೆ. ಈ ಬಾವಿಯ ನೀರನ್ನು ರೋಗಗ್ರಸ್ತ ಪಶುಗಳಿಗೆ ಕುಡಿಸಿದರೆ ರೋಗವು ಗುಣಮುಖವಾಗುತ್ತದೆ ಎಂಬುದು ಇಲ್ಲಿನವರ ನಂಬಿಕೆ ಆಗಿದೆ. ಇದು ಬಹುಕಾಲದಿಂದ ಉಳಿದುಕೊಂಡು ಬಂದಿರುವ ಐತಿಹ್ಯವಾಗಿದೆ. ಪ್ರಸ್ತುತ ದಿನಗಳಲ್ಲೂ ಸುತ್ತಮುತ್ತಲಿನ ಗ್ರಾಮದ ರೋಗಗ್ರಸ್ತ ಪಶುಗಳಿಗೆ ಕುಡಿಸಲು ಈ ಬಾವಿಯ ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಹೇಳುತ್ತದೆ ಅಲ್ಲಿನ ಐತಿಹ್ಯ.[೨೩]

**ನಂದಿ(ಬಸವಣ್ಣ)ಯನ್ನು ಕುರಿತಾದ ಐತಿಹ್ಯ:** ಚಿಕ್ಕಕಡಬೂರ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಸ್ಥಾಪಿಸಿರುವ ಬಸವಣ್ಣನಿಗೆ ತಳವಿಲ್ಲವೆಂದು ಹೇಳುತ್ತಾರೆ. ಸುಮಾರು ೨೦ ರಿಂದ ೨೨ ಅಡಿಗಳಿಗಿಂತ ಹೆಚ್ಚು ಆಳವಾಗಿ

ಅಗೆದರು ತಳ ಸಿಗಲಿಲ್ಲ. ಕೊನೆಗೆ ಮುಂದೆ ಅಗೆಯುವುದನ್ನು ಅಲ್ಲಿಗೆ ನಿಲ್ಲಿಸಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಯಿತೆಂದು ಹೇಳಲಾಗುತ್ತಿದೆ.

**ಜವಳಗೆರೆ ಗ್ರಾಮದ ಐತಿಹ್ಯಗಳು**

ಈ ಗ್ರಾಮದ ಬಹುತೇಕ ಐತಿಹ್ಯಗಳು ಇಲ್ಲಿನ ನಾಡಗೌಡ ಮನೆತನದ ಇತಿಹಾಸದೊಂದಿಗೆ ಬೆರೆತುಕೊಂಡಿವೆ.

**ರಾಜಾವೆಂಕಟಮಹಿಪಾಲ ನಾಡಗೌಡರ ಕುರಿತ ಐತಿಹ್ಯ :** ಬಳ್ಳಾರಿ ಜಿಲ್ಲೆಯ ಹಾವಿನಹಾಳ ಮರಿಸಿದ್ದಯ್ಯ ಅವಧೂತರು ಆಗಿನ ಕಾಲದಲ್ಲಿ ಪವಾಡ ಪುರುಷರಾಗಿ ಜನರಲ್ಲಿ ಭಕ್ತಿಯ ಪ್ರಭಾವ ಬೀರಿದ ಯೋಗಿ. ಅವರು ಕೊಟ್ಟರೆ ಶಾಪ; ಇಟ್ಟರೆ ವರ ಎಂಬ ಪ್ರಭಾವವಿದ್ದುದರಿಂದ ಜನ ಮರಿಸಿದ್ಧಯ್ಯನವರನ್ನು ಗೌರವದಿಂದ ಕಾಣುತ್ತಿದ್ದರು. ಮರಿಸಿದ್ಧಯ್ಯನವರು ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯಲ್ಲಿ ಹೆಸರುವಾಸಿಗಳು. ಆದವಾನಿ ತಾಲೂಕಿನ ಇಂದಿನ ಹೊಳಗುಂದಿಯ ರಾಜಾಪಂಪನಗೌಡ ಮತ್ತು ಜವಳಗೆರೆಯ ರಾಜಾವೆಂಕಟಮಹಿಪಾಲರು ಅಪಾರ ಗೌರವಾದರಗಳನ್ನು ಪಡೆದಿದ್ದು, ಆಗಾಗ ಅವರಲ್ಲಿಗೆ ಹೋಗಿಬರುತ್ತಿದ್ದುದು ವಾಡಿಕೆ. ಜವಳಗೆರೆಯಲ್ಲಿ ಮನೆ ಕಟ್ಟಿಸುತ್ತಿದ್ದ ಸಮಯದಲ್ಲಿ ಬಂದಿದ್ದ ಮರಿಸಿದ್ಧಯ್ಯನವರು ಕಟ್ಟಡದ ನಾಲ್ಕು ದಿಕ್ಕಿಗೆ ಮರವನ್ನು ನೆಟ್ಟು ಅವುಗಳನ್ನು ಸಂರಕ್ಷಿಸುವಂತೆ ನಾಡಗೌಡರಿಗೆ ತಿಳಿಸಿ ಮನೆಯ ತಲೆಬಾಗಿಲು ಇಡುವ ಮುಹೂರ್ತಕ್ಕೆ ಇಡುವಂತೆ ಅವರು ಹೇಳಿಹೋದರು.

ಮನೆಯ ಕಟ್ಟಡ ಪೂರ್ತಿಯಾಗಿ ತಲೆಬಾಗಿಲು ಇಡುವ ಮುಹೂರ್ತಕ್ಕೆ ನಾಡಗೌಡರು ಕಾದರು. ಮರಿಸಿದ್ಧಯ್ಯನವರು ನಿರ್ಧರಿಸಿದ ಮುಹೂರ್ತ ಬಂತು. ವೆಂಕಟಮಹಿಪಾಲ, ಊರಿನಗೌಡ, ಶಾನುಭೋಗ, ಶಾಸ್ತ್ರೀ, ಸ್ವಾಮಿಗಳೊಂದಿಗೆ ಮರಿಸಿದ್ಧಯ್ಯ ಸ್ವಾಮಿಗಳ ಬರುವಿಕೆಗಾಗಿ ಕಾದು ಕುಳಿತರು. ಅವರು ಹೇಳಿದ ಮುಹೂರ್ತ ಮೀರುತ್ತ ಬಂದರೂ ಮರಿಸಿದ್ಧಯ್ಯನವರು ಕಾಣಲಿಲ್ಲ. ನಾಡಗೌಡರಿಗೆ ಏನೂ ತೋಚದಾಯಿತು. ಆಗ ಅಲ್ಲಿ ನೆರೆದ ಹಿರಿಯರು ಮುಹೂರ್ತಕ್ಕೆ ಸರಿಯಾಗಿ ತಲೆಬಾಗಿಲು ಇಡುವಂತೆ ಸೂಚಿಸಿದರು. ಅದರಂತೆ ನಾಡಗೌಡರು ಮುಹೂರ್ತ ಮೀರಿ ಹೋಗುವ ಮೊದಲು ಸರಿಯಾದ ಸಮಯಕ್ಕೆ ಮನೆಯ ತಲೆಬಾಗಿಲನ್ನು ವಿಧಿ ವಿಧಾನಪೂರ್ವಕವಾಗಿ ಇಟ್ಟು ಪೂರ್ತಿಗೊಳಿಸುತ್ತಿದ್ದಂತೆ ಮರಿಸಿದ್ಧಯ್ಯನವರ ಕುದುರೆ ನಾಡಗೌಡರ ಕಟ್ಟಡದ ಮುಂದೆ ಬಂದು ನಿಂತಿತು. ಆದರೆ ತಲೆಬಾಗಿಲು ಇಡುವ ಎಲ್ಲ ಕಾರ್ಯಗಳು ಮುಗಿದು ಹೋಗಿದ್ದವು. ಮುಂದಿನ ಆಗುಹೋಗುಗಳನ್ನು ಅರಿತ ಮರಿಸಿದ್ಧಯ್ಯನವರು ನಾಡಗೌಡ ಮನೆತನ ಮೂರು ತಲೆಮಾರು ಮಾತ್ರ ನಡೆಯುತ್ತದೆಯೆಂದು ಭವಿಷ್ಯ ನುಡಿದರು. ರಾಜಾ ವೆಂಕಟಮಹಿಪಾಲ ನಾಡಗೌಡನನ್ನು ಕರೆದು "ಬೆಳಗುರ್ಕಿ ಬಿಡಬೇಡ, ತುರುಕಟ್ಟಿ ನಂಬಬೇಡ" ಎಂದು ಮಂತ್ರವಾಕ್ಯವನ್ನು ನುಡಿದು, ನಾಡಗೌಡಿಕೆ ಉಜ್ವಲವಾಗಿ ಬೆಳೆದು ಪ್ರಸಿದ್ಧಿಯಾಗುತ್ತದೆಯೆಂದು ಹಾರೈಸಿದರು. ಮರಿಸಿದ್ಧಯ್ಯನವರ ವಾಕ್ಯದಂತೆ ಜವಳಗೆರೆ ಸಂಸ್ಥಾನ ಮೂರು ತಲೆಮಾರಿನವರೆಗೆ ನಡೆದು ಮುಂದೆ ನಿಂತು ಹೋಯಿತು. ಮನೆಯ ನಾಲ್ಕು ದಿಕ್ಕಿಗೆ ನೆಟ್ಟ ಗಿಡಗಳಲ್ಲಿ ಮೂರು ಗಿಡಗಳು ಮಾತ್ರ ಬೆಳೆದು ದೊಡ್ಡವಾದವು. ಒಂದು ಗಿಡ ಒಣಗಿ ಹೋಯಿತು. ಮರಿಸಿದ್ಧಯ್ಯನವರ ಭವಿಷ್ಯವಾಣಿಗೆ ಈ ಗಿಡಗಳು ಸಾಕ್ಷಿಯಾಗಿವೆ" ಎಂಬ ಐತಿಹ್ಯವಿದೆ.

**ಹಂಪೆಯ ವಿರೂಪಾಕ್ಷ ದೇವಸ್ಥಾನದ ಗೋಪುರಕ್ಕೆ ಕಳಸಾರೋಹಣ ಮಾಡಿದ ಕುರಿತು:**

ಜವಳಗೆರೆ ನಾಡಗೌಡ ಸಂಸ್ಥಾನದ ರಾಜಾವೆಂಕಟಮಹಿಪಾಲ ಬಹದ್ದೂರ ನಾಡಗೌಡರು ಹಂಪೆಯ ವಿರೂಪಾಕ್ಷ ದೇವಸ್ಥಾನದ ಗೋಪುರಕ್ಕೆ ಸಂಸ್ಥಾನದ ಬಂಗಾರ ಕಳಸವನ್ನು ಆರೋಹಣ ಮಾಡುವ ನಿರ್ಧಾರ ಕೈಗೊಂಡರು. ಹಂಪೆಯ ಜಾತ್ರೆ ಸಮೀಪಿಸುತ್ತಿದ್ದಂತೆ ಸಕಲ ಸಿದ್ಧತೆಯನ್ನು ಮಾಡಿಕೊಂಡ ನಾಡಗೌಡರು ಪ್ರಯಾಣ ಮಾಡುವ ದಾರಿಯ ಮಧ್ಯೆ ಆಯ್ದ ಸ್ಥಳದಲ್ಲಿ ಪಳಗಿದ ಕುದುರೆಗಳನ್ನಿರಿಸಿ, ತನ್ನ ವಿಶ್ವಾಸಿಕ ನಾಲ್ಕು ಅಂಗರಕ್ಷಕರೊಂದಿಗೆ ಬಂಗಾರದ ಕಳಸದ ಸಮೇತ ಹಂಪೆಗೆ ತೆರಳಿದರು. ರಥೋತ್ಸವದ ದಿನ ಮಧ್ಯಾಹ್ನ ರಥದ ಸಿದ್ಧತೆ ನಡೆಯುತ್ತಿದ್ದಾಗ ಜವಳಗೆರೆಯ ಧೀರ ನಾಡಗೌಡ ಕಾವಲುಗಾರರ ಕಣ್ಣು ತಪ್ಪಿಸಿ ಗೋಪುರದ ಮೇಲೇರಿ ಸಂಸ್ಥಾನದ ಬಂಗಾರದ ಕಳಸವನ್ನು ವಿರೂಪಾಕ್ಷ ದೇವರ ಗೋಪುರದ ಮೇಲೆ ಆರೋಹಣ ಮಾಡಿಯೇ ಬಿಟ್ಟನು. ಜಾತ್ರೆಗೆ ನೆರೆದ ಜನಸಮೂಹ ಬೆರಗಾಗಿ ನೋಡುತ್ತಿದ್ದಂತೆ ರಾಜಾವೆಂಕಟ ಮಹಿಪಾಲ ಆಯಕಟ್ಟಿನ ಸ್ಥಳದಲ್ಲಿ ನಿಲ್ಲಿಸಿದ್ದ ಕುದುರೆಗಳನ್ನೇರಿ ಉಪ್ಪಳ, ಗಿಣಿವಾರ, ತಿಮ್ಮಾಪುರ ಮಾರ್ಗವಾಗಿ ಜವಳಗೆರೆಗೆ ಬಂದು ತಲುಪಿದನು.[೨೫] ಇದರಿಂದಾಗಿ ಸಂಸ್ಥಾನದ ಪತಾಕೆ ಹಂಪೆಯವರೆಗೆ ಹಬ್ಬಿತು ಎಂಬುದು ಇಲ್ಲಿನ ಪ್ರಮುಖ ಐತಿಹ್ಯವಾಗಿದೆ. ಹಂಪೆಯ ವಿರೂಪಾಕ್ಷ ದೇವಾಲಯದ ಗೋಪುರದ ಮೇಲೆ ಬಂಗಾರದ ಕಳಸವನ್ನು ಆರೋಹಣ ಮಾಡಿದ ಸಾಹಸ ಇಂದಿಗೂ ಜನಜನಿತವಾಗಿದೆ.

**ಅಂಬಾದೇವಿ ತೇರಿಗೆ ಕಳಸಾರೋಹಣ ಮಾಡಿದ್ದು :** ಸಿಂಧನೂರು ತಾಲೂಕಿನ ಅಂಬಾಮಠ ಈ ಭಾಗದ ಪ್ರಮುಖ ದೈವ ಕ್ಷೇತ್ರ. ರಾಣಿ ಉಮನಾಬಾಯಿ ಆಡಳಿತ ಕಾಲದಲ್ಲಿ ಅಂಬಾದೇವಿ ತೇರಿಗೆ ಕಳಸಾರೋಹಣ ಮಾಡಿದ ಪ್ರಸಂಗ ನಡೆಯಿತು. ಅಂಬಾದೇವಿ ದೇವಸ್ಥಾನ ತೇರಿಗೆ ಕಳಸಾರೋಹಣ ಹಕ್ಕಿಗಾಗಿ ಜವಳಗೆರೆ ಸಂಸ್ಥಾನ ಮತ್ತು ಸೋಮಲಾಪುರದ ದೇಸಾಯಿಯವರ ನಡುವೆ ಬಹುದಿನಗಳಿಂದ ವ್ಯಾಜ್ಯ ನಡೆದೇ ಇತ್ತು. ಸೋಮಲಾಪುರದ ದೇಸಾಯಿಯವರು ಈ ದೇವಸ್ಥಾನ ನಮ್ಮ ಸೀಮೆಗೆ ಒಳಪಡುವುದರಿಂದ ಅದರ ಹಕ್ಕುದಾರಿಕೆ ನಮ್ಮದೆಂದು ಹೇಳಿದರೆ ಜವಳಗೆರೆ ನಾಡಗೌಡ ಮನೆತನ ಒಂದು ಸಂಸ್ಥಾನ ಆದ್ದರಿಂದ ಅದರ ಹಕ್ಕುದಾರಿಕೆ ತಮ್ಮದೆಂಬುದು ರಾಣಿ ಉಮನಾಬಾಯಿಯವರ ವಾದ. ಕಳಸಾರೋಹಣವನ್ನು ಉಭಯರು ಪ್ರತಿಷ್ಠೆಯಾಗಿ ಸ್ವೀಕರಿಸಿದ್ದು ಅಪಾಯದ ಹಂತಕ್ಕೂ ಹೋಯಿತು. ಆ ವರ್ಷದ ಜಾತ್ರೆಯಲ್ಲಿ ತೇರಿಗೆ ಕಳಸಾರೋಹಣ ಮಾಡಿಯೇ ತೋರಿಸಬೇಕೆಂದು ಸೋಮಲಾಪುರದ ಸಿದ್ಧಪ್ಪ ದೇಸಾಯಿಯವರು ಸಕಲ ಶಸ್ತ್ರಗಳೊಂದಿಗೆ ನೂರಾರು ಜನರ ಜೊತೆ ಸಿದ್ಧರಾಗಿಯೇ ಬಂದರು. ಅತ್ತ ರಾಣಿ ಉಮನಾಬಾಯಿ ಪ್ರತಿ ವರ್ಷದಂತೆ ಕೆಲವೇ ಅಂಗರಕ್ಷಕರೊಂದಿಗೆ ಜಾತ್ರೆಗೆ ನಡೆದಳು. ಊರೊಳಗಿಂದ ಸಾಗುವ ದಾರಿಯ ಮಧ್ಯದಲ್ಲಿ ರಾಣಿಯನ್ನು ತಡೆದ ವೆಂಕಟರಾವ್ ನಾಡಗೌಡ ಹೆಸರಿನ ಯುವಕ ತನ್ನನ್ನು ಜಾತ್ರೆಗೆ ಕರೆದುಕೊಂಡು ಹೋಗುವಂತೆ ಕೇಳಿಕೊಂಡನು. ರಾಣಿ ಮನಸ್ಸಿಲ್ಲದಿದ್ದರೂ ಆತನ ಉತ್ಸಾಹವನ್ನು ಕಂಡು ಜಾತ್ರೆಗೆ ಕರೆದುಕೊಂಡು ಹೋದಳು.

ಜಾತ್ರೆಗೆ ಬಂದ ರಾಣಿ ನಾಡಗೌಡರಿಗೆ ಮೀಸಲಾದ ಮಂಟಪದಲ್ಲಿ ತನ್ನ ಪರಿವಾರದೊಂದಿಗೆ ಬಿಡಾರ ಹೂಡಿದಳು. ಸಂಜೆ ವೇಳೆಯಲ್ಲಿ ತೇರಿನ ಅಂತಿಮ ಸಿದ್ಧತೆ ನಡೆಯುವಾಗ ಸೋಮಲಾಪುರದ ದೇಸಾಯಿಯವರು

ತನ್ನ ಪರಿವಾರದೊಂದಿಗೆ ಕಳಸಾರೋಹಣ ಮಾಡಲು ಸಕಲ ಸಿದ್ಧತೆಯೊಂದಿಗೆ ತೇರಿನ ಹತ್ತಿರ ಸೇರಿದ್ದರು. ಕಳಸಾರೋಹಣ ಮುಹೂರ್ತಕ್ಕೆ ಸರಿಯಾಗಿ ರಾಣಿ ವಾಸವಾಗಿದ್ದ(ತಂಗಿದ್ದ) ಮಂಟಪದ ಮೇಲಿಂದ ಯುವಕ ವೆಂಕಟರಾವ್ ಕಳಸದೊಂದಿಗೆ ಕೆಳಗೆ ಜಿಗಿದು ಆರ್ಭಟಿಸುತ್ತ, ಕತ್ತಿ ಝಳಪಿಸುತ್ತ ಜನರ ನಡುವೆ ನುಗ್ಗಿ ತೇರಿನ ಹತ್ತಿರ ಬಂದನು. ಯುವಕನ ಆರ್ಭಟ ಅರಿತ ರಾಣಿಯ ಅಂಗರಕ್ಷಕ ಸೈಯದ್ ಶಂಶುದ್ದೀನ್ ಖಾದರಿ ಮುಲ್ಲಾ ತನ್ನ ಕೈಯಲ್ಲಿದ್ದ ಜೋಡು ನಳಿಕೆ ಬಂದೂಕಿನಿಂದ ಎರಡು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದ. ಅನಿರೀಕ್ಷಿತ ಘಟನೆಯಿಂದ ಜನ ಚೆಲ್ಲಾಪಿಲ್ಲಿಯಾಗಿ ಓಡಿದರು. ಜವಳಗೆರೆ ನಾಡಗೌಡ ಸಂಸ್ಥಾನದ ಆರ್ಭಟದಿಂದ ಸೋಮಲಾಪುರದ ಸಿದ್ಧಪ್ಪದೇಸಾಯಿಯವರು ಏನು ತೋಚದೆ ಸ್ತಬ್ಧರಾಗಿ ನಿಂತುಬಿಟ್ಟರು. ಅಷ್ಟರಲ್ಲಿ ಮೇಲ್ಗಿರಿ ಗಿರಿಯಪ್ಪ, ಚಿತ್ರಾಲಿ ಯಮನಪ್ಪ ಮತ್ತು ರಾಣಿಯ ಅಂಗರಕ್ಷಕರಾದ ನಾಯಕ ಜನಾಂಗದವರು ತಕ್ಷಣ ವೆಂಕಟರಾವ್ ನಾಡಗೌಡರನ್ನು ಸುತ್ತುವರಿದು ರಕ್ಷಣೆಗಾಗಿ ನಿಂತರು. ತಕ್ಷಣ ಕಾರ್ಯೋನ್ಮುಖರಾದ ವೆಂಕಟರಾವ್ ನಾಡಗೌಡರು ತೇರಿನ ಮೇಲೇರಿ ಕಳಸಾರೋಹಣ ಮಾಡಿದರೆಂಬುದು ಇಲ್ಲಿನ ಮತ್ತೊಂದು ಪ್ರಮುಖ ಐತಿಹ್ಯವಾಗಿದೆ.[೧೪]

ಈ ಮೇಲಿನ ಎಲ್ಲಾ ಐತಿಹ್ಯಗಳು ಅಲ್ಲಿನ ಸ್ಥಳೀಯ ಇತಿಹಾಸದೊಂದಿಗೆ ಬೆರೆತುಕೊಂಡಿವೆ. ಇವುಗಳನ್ನು ಜನರು ನಡೆದ ಸತ್ಯಘಟನೆಗಳೆಂದು ಹೇಳುತ್ತಾರೆ. ಆದರೆ ಇವುಗಳನ್ನು ಸತ್ಯ ಮತ್ತು ಸುಳ್ಳು ಎಂದು ನಿರೂಪಿಸುವುದು ಕಷ್ಟಸಾಧ್ಯ.

## ಅಡಿಟಿಪ್ಪಣಿಗಳು

೧. ಜಾಜಿ ದೇವೇಂದ್ರಪ್ಪ, ೨೦೦೪, ಆಂಧ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು, ಪುಟ-೧೪.

೨. ಸೋಮಶೇಖರ್ ಎಸ್.ವೈ., ೨೦೧೦, ಜಗಲೂರು, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಚರಿತ್ರೆ ಮಾಲೆ-೪, ಪುಟ-೧೬.

೩. ಜಾಜಿ ದೇವೇಂದ್ರಪ್ಪ, ೨೦೦೪, ಆಂಧ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು, ಪುಟ-೫೬.

೪. ದೇಜಗೌ, ೨೦೧೧, ಸ್ಥಳನಾಮ ವ್ಯಾಸಂಗ, ಪುಟ-೧೪.

೫. ದೇವರಕೊಂಡಾರೆಡ್ಡಿ (ಸಂ), ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ರಾಯಚೂರು ಜಿಲ್ಲೆ, ಪುಟ-೪೧೧.

೬. ಡಿ.ಕೆ. ಭೀಮಸೇನರಾವ್, ೧೯೭೦, ಸಾಹಿತ್ಯಾವಲೋಕನ, ಪುಟ-೫೪.

೭. ದೇಜಗೌ, ೨೦೧೧, ಸ್ಥಳನಾಮ ವ್ಯಾಸಂಗ, ಪುಟ-೫೪.

೮. ದೇವರಕೊಂಡಾರೆಡ್ಡಿ(ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭ ರಾಯಚೂರು ಜಿಲ್ಲೆ, ಪುಟ-೪೦೬.

೯. ಅದೇ, ಪುಟ-೪೦೪.

೧೦. ಅದೇ, ಪುಟ-೪೧೬.

೧೧. ದೇವರಕೊಂಡಾರೆಡ್ಡಿ(ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ರಾಯಚೂರು ಜಿಲ್ಲೆ, ಪುಟ-೩೯

೧೨. ಕರಿಬಸಪ್ಪ ಎ., ೨೦೦೯, ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಪುಟ-೭.

೧೩. ಅದೇ, ಪುಟ-೮.

೧೪. ಅದೇ, ಪುಟ-೯.

೧೫. ನಿಂಗಣ್ಣ ಟಿ.ಸಿ.(ಸಂ), ೨೦೧೦, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಪುಟ-೫೨೫.

೧೬. ಅದೇ, ಪುಟ-೫೨೬.

೧೭. ಅದೇ, ಪುಟ-೫೨೬.

೧೮. ವೀರೇಶ ಕುಲಕರ್ಣಿಯವರ ಮಾಹಿತಿ ಮತ್ತು ಉಲ್ಲೇಖ, ವಯಸ್ಸು-೭೦.

೧೯. ಹನುಮಂತ ಪೂಜಾರಿಯರ ಮಾಹಿತಿ ಮತ್ತು ಉಲ್ಲೇಖ, ವಯಸ್ಸು-೪೫.

೨೦. ಕೇದಾರನಾಥ ಹಿರೇಮಠ(ಸಂ), ೨೦೦೩, ಪಂಪಕಿರಣ, ಪುಟ-೨೧.

೨೧. ಅಂಬಮ್ಮ ಪೂಜಾರಿಯವರ ಮಾಹಿತಿ ಮತ್ತು ಉಲ್ಲೇಖ, ವಯಸ್ಸು-೮೩.

೨೨. ದಿನೇಶ ಮಾಹಿತಿ ಮತ್ತು ಉಲ್ಲೇಖ, ವಯಸ್ಸು-೩೫.

೨೩. ಶ್ರೀಧರ ಮಸ್ಕಿ ಮಾಹಿತಿ ಮತ್ತು ಉಲ್ಲೇಖ, ವಯಸ್ಸು-೩೮.

೨೪. ಶಾಶ್ವತಸ್ವಾಮಿ ಮುಕ್ಕುಂದಿಮಠ, ೨೦೧೦, ಲಿಂಗಾಯತ ನಾಡಗೌಡ ಮನೆತನಗಳು ರಾಣಿಯರು ರಾಯಚೂರು ಜಿಲ್ಲೆ, ಪುಟ-೨೦.

೨೫. ಅದೇ, ಪುಟ-೨೩.

೨೬. ಅದೇ, ಪುಟ-೨೭.

❑❑❑

# ಅಧ್ಯಾಯ : ನಾಲ್ಕು

# ಕಲೆ ಮತ್ತು ವಾಸ್ತುಶಿಲ್ಪ

---

## ಅಧ್ಯಾಯ : ನಾಲ್ಕು

# ಕಲೆ ಮತ್ತು ವಾಸ್ತುಶಿಲ್ಪ

ಅರವತ್ನಾಲ್ಕು ಕಲೆಗಳಲ್ಲಿ ಒಂದಾದ ಶಿಲ್ಪಕಲೆಯ ಒಂದು ಭಾಗವಾಗಿರುವುದೇ ವಾಸ್ತುಶಿಲ್ಪ ಕಲೆ.[೧] ವಾಸ್ತು ಎಂದರೆ ವಸ್ತುಗಳಿಂದ ನಿರ್ಮಿತವಾದುದು ಎಂಬ ಅರ್ಥವಿರುವಂತೆ ತೋರುತ್ತದೆ. ದೇವತೆ ಇಲ್ಲವೆ ಮಹಾತ್ಮರ ಸಂಕೇತ ಇಲ್ಲವೆ ಮೂರ್ತಿಗಳಿಗೋಸ್ಕರ ಮಾಡಿದ ಹಾಗೂ ಮನುಷ್ಯರು ವಾಸಿಸುವ ಸ್ಥಳ ಅಥವಾ ವಸತಿಯೇ ವಾಸ್ತು ಎನಿಸುತ್ತದೆ. ವಸ್ತುವಿನಿಂದ ರಚನೆಗೊಂಡ, ವಾಸ್ತುಯೋಗ್ಯವಾದ ವಸ್ತುವಿನ ಮೇಲೆ ರಚಿಸಲಾದ ಎಲ್ಲ ರಚನೆಗಳನ್ನು ವಾಸ್ತುರಚನೆ ಎನ್ನಬಹುದು. ಕೇವಲ ಕಟ್ಟಡದ ನಿರ್ಮಾಣಗಳಿಗೆ ಮಾತ್ರವಲ್ಲದೆ, ಪಟ್ಟಣ ನಿರ್ಮಾಣದ ಯೋಜನೆ, ಉದ್ಯಾನವನಗಳು, ರಸ್ತೆಗಳು, ಕೆರೆ, ಕೋಟೆ, ದೇವಾಲಯ, ಕೊನೆಗೆ ಪೀಠೋಪಕರಣಗಳ ನಿರ್ಮಾಣವೂ ಸಹ ಈ ಪದದ ವ್ಯಾಪ್ತಿಯಲ್ಲಿ ಸೇರುತ್ತಿತ್ತು. ಈ ಶಾಸ್ತ್ರಕ್ಕೆ ಪ್ರಮಾಣಭೂತವೂ ಅಧಿಕೃತವೂ ಆದ 'ಮಾನಸಾರ' ಎಂಬ ಗ್ರಂಥ ಈ ಎಲ್ಲ ಅಂಶಗಳನ್ನು ಹೇಳುತ್ತದೆ. ಆದರೆ ಮುಂದೆ ಈ ಪದದ ವ್ಯಾಪ್ತಿ ಪರಿಮಿತಗೊಂಡು ''ವಾಸ್ತುಶಿಲ್ಪ'' ಎಂದರೆ ಕಟ್ಟಡಗಳ ನಿರ್ಮಾಣ ಮತ್ತು ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥ ಬೆಳೆದುಬಂದಿತು.[೨] ವಾಸ್ತುಶಿಲ್ಪವೆಂದರೇನು ಎಂಬುದನ್ನು ಅನೇಕರು ಸೂತ್ರರೂಪದಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ''The art of organising space'' ಎಂದು ಅದನ್ನು ಹೇಳಿರುವ ಸೂತ್ರ ಒಂದಿದೆ.[೩] ಚಿತ್ರ, ಶಿಲ್ಪ, ಕಾವ್ಯ, ನಾಟಕ ಮೊದಲಾದ ಕಲೆಗಳು ಜೀವನದ ವಿವಿಧ ಅನುಭವಗಳಿಗೆ ರೂಪಧಾರಣೆ ಮಾಡಲು ಪ್ರಯತ್ನಿಸಿದರೆ, ವಾಸ್ತುಶಿಲ್ಪ ನಿರಾಕಾರವಾದ ಆಕಾಶವನ್ನೇ ವ್ಯವಸ್ಥೆಗೊಳಿಸಿ ಅದಕ್ಕೊಂದು ರೂಪುಕೊಡುವ ಕಲೆ. ಗೋಡೆಗಳನ್ನು ಹಾಕಿ, ಮೇಲೆ ಛಾವಣಿಗಳನ್ನು ನಿರ್ಮಿಸಿ ಅನಂತವಾದ ಆಕಾಶವನ್ನು ಸಾಂತಗೊಳಿಸಿ ಅದನ್ನು ಉಪಯೋಗಕ್ಕಾಗಿ ಹಿಡಿದಿಡುತ್ತದೆ; ಮತ್ತು ಆ ಮೂಲಕ ಸಂಪೂರ್ಣವಾಗಿ ಹೊಸ ರೂಪಗಳನ್ನು ಸೃಷ್ಟಿಸುತ್ತದೆ. ವಾಸ್ತುಶಿಲ್ಪಿ ತನ್ನ ಕಲಾರೂಪಗಳ ನಿರ್ಮಾಣಕ್ಕೆ ತಾನೇ ಕಾರಣನಾದ ಸಾಮ್ರಾಟ.[೪]

ಅನೇಕ ಕಲೆಗಳಂತೆಯೇ ವಾಸ್ತುಶಿಲ್ಪವೂ ಆಯಾ ಕಾಲದ ಮತ್ತು ಆಯಾ ಜನಾಂಗದ ಆಂತರಿಕ ಆಕಾಂಕ್ಷೆ, ಅನುಭವಗಳಿಗೆ ಕನ್ನಡಿಯನ್ನು ಹಿಡಿಯಬಲ್ಲುದೆಂಬುದು ''Architecture is the Matrix of Civilization''[೫] ಎಂಬ ಹೇಳಿಕೆಯಲ್ಲಿ ಈ ಅಭಿಪ್ರಾಯ ಸೂಚಿತವಾಗಿದೆ. ವಾಸ್ತುಶಿಲ್ಪವು ನಾಗರಿಕತೆಯನ್ನು ರೂಪಿಸುವ ಮಾತೃಕೆ. ತನ್ನ ಗರ್ಭದಲ್ಲಿಟ್ಟು ನಾಗರಿಕತೆಯ ಶಿಶುವನ್ನು ಇದು ಬೆಳೆಸುತ್ತದೆ. ಮಾನವ ಜನಾಂಗದ ವಿಕಾಸವನ್ನು ಗುರುತಿಸುವ ವಿವಿಧ ಹಂತಗಳನ್ನು ವಾಸ್ತುಶಿಲ್ಪದ ಬೆಳವಣಿಗೆಯಲ್ಲಿ ಕಂಡುಕೊಳ್ಳಬಹುದು.

ಇತಿಹಾಸಜ್ಞರಿಗೆ ವಾಸ್ತುವನ್ನು ಚರಿತ್ರೆಯ ನಿರ್ಮಾಣ ಕಾರ್ಯದಲ್ಲಿ ಮೂಲಾಧಾರವಾಗಿ ಬಳಸಿಕೊಳ್ಳಬೇಕಾದರೆ, ಆ ಕಾಲಮಾನದ ಪ್ರದೇಶದ ಎಲ್ಲ ರೀತಿಯ ವಾಸ್ತುಶಿಲ್ಪ ಲಭ್ಯವಾಗಬೇಕು.[೬] ಸ್ಥೂಲವಾಗಿ ವಾಸ್ತುಶಿಲ್ಪವನ್ನು ಧಾರ್ಮಿಕ ಮತ್ತು ಲೌಕಿಕ ಎಂದು ವಿಭಾಗಿಸಬಹುದು. ಧಾರ್ಮಿಕ ವಾಸ್ತುಶಿಲ್ಪದಲ್ಲಿ ಆರಾಧನಾ ಸ್ಥಳಗಳ ಸೇರ್ಪಡೆಯಾದರೆ, ಲೌಕಿಕ ವಾಸ್ತುವಿನಲ್ಲಿ ಅಣೆಕಟ್ಟು, ಅರಮನೆ, ನಗರ, ಕೆರೆ ಮುಂತಾದವುಗಳು ಸೇರುತ್ತವೆ. ಒಂದು ಪ್ರದೇಶದ ಚರಿತ್ರೆಯನ್ನು ವಾಸ್ತುಶಿಲ್ಪದ ಮೂಲಕ ಪುನಾರಚಿಸಲು ತೊಡಗುವುದಕ್ಕೆ ಈ ಎರಡೂ ವಿಭಾಗಗಳ ಕಟ್ಟಡಗಳು ಅಥವಾ ಗುರುತಿಸಬಹುದಾದಂತಹ ಅವುಗಳ ಪಳೆಯುಳಿಕೆಗಳು ಬೇಕಾಗುತ್ತವೆ.

ವಾಸ್ತುಶಿಲ್ಪಕಲೆಯ ಐತಿಹಾಸಿಕ ಅಧ್ಯಯನಕ್ಕೆ ದೊರಕುವ ವಿಶಿಷ್ಟವಾದ ಸಾಮಗ್ರಿಗಳೆಂದರೆ ದೇವಾಲಯ, ಮಸೀದಿ, ಗೋರಿ, ಕೋಟೆ-ಕೊತ್ತಲಗಳು ಇತ್ಯಾದಿ. ಏಕೆಂದರೆ ವಾಸದ ಮನೆಗಳಿಗಿಂತ ಹೆಚ್ಚು ಕಾಲ ಉಳಿಯುವಂತಹ ರೀತಿಯಲ್ಲಿ ಅವುಗಳನ್ನು ಕಟ್ಟಿದರು ಮತ್ತು ಉಳಿಸಿಕೊಂಡು ಬಂದರು. ಅಂದರೆ ವಾಸ್ತುಶಿಲ್ಪ ಪ್ರಧಾನವಾಗಿ ಉಳಿದು ಬೆಳೆದುಬಂದುದು ಧಾರ್ಮಿಕ ತಳಹದಿಯ ಮೇಲೆನ್ನಬಹುದು. ಇದರ ಜೊತೆಗೆ ಇನ್ನೂ ಕೆಲವು ಶಕ್ತಿಗಳು ಇದರ ಬೆಳವಣಿಗೆಯ ಮೇಲೆ ಪ್ರಭಾವವನ್ನು ಬೀರಿದುವೆನ್ನುವುದರಲ್ಲಿ ಸಂದೇಹವಿಲ್ಲ. ಭೌಗೋಳಿಕ ಸನ್ನಿವೇಶಗಳು, ಸಾಮಾಜಿಕ ಮತ್ತು ರಾಜಕೀಯ ಪರಿವರ್ತನೆಗಳು, ಐತಿಹಾಸಿಕ ಘಟನೆಗಳು ಮೊದಲಾದವು ಇವುಗಳಲ್ಲಿ ಮುಖ್ಯವಾದವು. ಇವುಗಳ ಪ್ರಭಾವದಿಂದ ಬದಲಾವಣೆಗೊಂಡ ಅಭಿರುಚಿಗೆ ತಕ್ಕಂತೆ ವಾಸ್ತುಶಿಲ್ಪ ಬೆಳೆದುಬಂದಿತು. ಆದುದರಿಂದ ವಾಸ್ತುಶಿಲ್ಪದ ಚರಿತ್ರೆಯೆಂದರೆ ಒಂದು ಜನಾಂಗದ ಅಭಿರುಚಿಯ ಚರಿತ್ರೆ. ಇಂಡಿಯಾ ದೇಶದ ವಾಸ್ತುಶಿಲ್ಪವೂ ಇದಕ್ಕೆ ಹೊರತಾಗಿಲ್ಲ. ಇಲ್ಲಿ ಕಾಲಕಾಲಕ್ಕೆ ಆದ ಧಾರ್ಮಿಕ, ಸಾಮಾಜಿಕ, ರಾಜಕೀಯ ಬದಲಾವಣೆಗಳಿಗೆ ಅನುಗುಣವಾಗಿ ವಾಸ್ತುಶಿಲ್ಪ ಬೆಳೆದುಬಂದಿದೆ. ಮೂಲಭೂತವಾದ ಆಶಯ ಮತ್ತು ಆದರ್ಶ ಒಂದೇ ಆಗಿದ್ದರೂ ಅದು ಅಭಿವ್ಯಕ್ತಗೊಂಡಿರುವ ರೂಪ ಮತ್ತು ಸ್ವರೂಪಗಳು ಕಾಲಕಾಲಕ್ಕೆ ಬದಲಾಗುತ್ತ ಬಂದಿವೆ. ಈ ಮಾತು ಶಿಲ್ಪಕಲೆಗೂ ಅನ್ವಯಿಸುತ್ತದೆ.[೭] ವಿಪುಲವೂ ವೈವಿಧ್ಯಮಯವೂ, ಸಾಹಸಪೂರ್ಣವೂ ಆದ ಚರಿತ್ರೆಯನ್ನು ಭರತಖಂಡದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳು ಪಡೆದಿವೆ.

ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದಂತೆ ಬಳಗಾನೂರು ಹೋಬಳಿ ಪರಿಸರದಲ್ಲಿ ಅನೇಕ ಅರಸು ಮನೆತನಗಳು ಮತ್ತು ಅರಸರು ಆಳ್ವಿಕೆ ಮಾಡಿದ್ದಾರೆ ಎಂಬುದು ತಿಳಿದುಬಂದಿದೆ. ಈ ಅರಸು ಮನೆತನಗಳು ಕೇವಲ ರಾಜಕೀಯವಾಗಿ ಆಳ್ವಿಕೆಯನ್ನು ನಡೆಸದೇ ತಮ್ಮ ಮನೆತನದ ಸಾಂಸ್ಕೃತಿಕ ಹಿರಿಮೆಯನ್ನು ವಾಸ್ತುಶಿಲ್ಪಕಲೆಗಳಲ್ಲಿ ನಿರ್ಮಿಸಿ ಬಿಟ್ಟುಹೋಗಿದ್ದಾರೆ. ಆದ್ದರಿಂದ ಪ್ರಸ್ತುತ ಕಲೆ ಮತ್ತು ವಾಸ್ತುಶಿಲ್ಪ ಎಂಬ ಅಧ್ಯಾಯದಲ್ಲಿ ದೇವಾಲಯ ವಾಸ್ತುಶಿಲ್ಪ, ಲೌಕಿಕ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಶಾಸನಶಿಲ್ಪಗಳ ಕುರಿತು ಚರ್ಚಿಸಲಾಗುತ್ತಿದೆ.

### ೪.೧. ದೇವಾಲಯ ವಾಸ್ತುಶಿಲ್ಪ

ಭಾರತದ ಉದ್ದಗಲಕ್ಕೂ ಇರುವ ಸಾವಿರಾರು ಮಹತ್ವದ ಐತಿಹಾಸಿಕ ನಿರ್ಮಿತಿಗಳಲ್ಲಿ ಧಾರ್ಮಿಕ ಸ್ಮಾರಕಗಳೇ ಅತ್ಯಧಿಕ. ಇವು ಬೌದ್ಧಸ್ತೂಪ, ಚೈತ್ಯ, ವಿಹಾರ, ಜೈನ ಬಸದಿ, ಜಿನಾಲಯ, ಅರ್ಹದಾಲಯ ಮತ್ತು ದೇವಾಲಯ. ಇವಲ್ಲದೆ ಇಂಡೋ ಇಸ್ಲಾಂ ಮತ್ತು ಐರೋಪ್ಯ ವಸಾಹತುಶಾಹಿಯ ಕ್ರೈಸ್ತಪಂಥದ

ವಿವಿಧ ಚರ್ಚ್ ಹಾಗೂ ಕ್ರೈಸ್ತ ಸನ್ಯಾಸಿನಿಯರ ಅಧ್ಯಯನ ವಸತಿ ಶಾಲೆಗಳು ಅಲ್ಲಲ್ಲಿ ಇವೆ.[೮] ಇಡೀ ಭಾರತವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ, ಗುಪ್ತರ ಕಾಲದಲ್ಲಿ ಅಂದರೆ ಸುಮಾರು ೪ನೇ ಶತಮಾನದಿಂದ ೬ನೇ ಶತಮಾನದವರೆಗೆ ದೇವಾಲಯಗಳ ನಿರ್ಮಾಣದ ಕಲೆ ಗಮನಾರ್ಹವಾದ ರೀತಿಯಲ್ಲಿ ವಿಕಾಸವನ್ನು ಪಡೆಯಿತು.[೯] ಈ ಆಧಾರದ ಮೇಲೆ ಭಾರತೀಯ ದೇವಾಲಯ ವಾಸ್ತುಶಿಲ್ಪ ಅಧ್ಯಯನ ಪ್ರಾರಂಭವಾಗುವುದು ಗುಪ್ತರ ಕಾಲದ ದೇವಾಲಯಗಳ ಪಳೆಯುಳಿಕೆಯಿಂದ ಎಂದು ಹೇಳಬಹುದು. ತಿಗುವಾ ಮತ್ತು ಸಾಂಚಿ ದೇವಾಲಯಗಳ ನಂತರ ಗುಪ್ತರ ಕಾಲದ ದೇವಘುರ್‌ನಲ್ಲಿರುವ ವಿಷ್ಣುದೇವಾಲಯ, ಭೂಮಾರದಲ್ಲಿರುವ ಶಿವಾಲಯ, ನಾಚ್ನಕುಟಾರದಲ್ಲಿರುವ ಪಾರ್ವತಿ ದೇವಾಲಯ ಇವುಗಳಲ್ಲಿ ಗರ್ಭಗೃಹವು ಮಧ್ಯದ ಪ್ರದೇಶವನ್ನು ಆಕ್ರಮಿಸಿದೆ. ಈ ರಚನೆಗಳನ್ನು ವಿದ್ವಾಂಸರು ಐದನೆಯ ಶತಮಾನದ್ದೆಂದು ನಿರ್ಣಯಿಸಿದ್ದಾರೆ. ಇದೇ ಹಾದಿಯಲ್ಲಿ ಕರ್ನಾಟಕದಲ್ಲಿ ಲಭ್ಯವಿರುವ ದೇವಾಲಯಗಳನ್ನು ಪರಿಶೀಲಿಸಬಹುದು.[೧೦]

ವಾಸ್ತುಶಿಲ್ಪದಲ್ಲಿ ಕರ್ಣಾಟಕದಲ್ಲಿರುವಷ್ಟು ವೈವಿಧ್ಯ ಬಹುಶಃ ಭರತ ಖಂಡದ ಇನ್ನಾವ ಭಾಗದಲ್ಲಿಯೂ ಇಲ್ಲವೆನ್ನಬಹುದು. ದೇವಾಲಯಗಳ ನಿರ್ಮಾಣದಲ್ಲಿ ಕರ್ಣಾಟಕ ತೋರಿಸಿದ ಉದಾತ್ತವಾದ ಅಭಿರುಚಿ ಮತ್ತು ಅದನ್ನು ಬೆಳೆಸಿಕೊಂಡು ಬಂದ ಬಗೆ ವಿಶಿಷ್ಟವಾದವು. ಭರತಖಂಡದ ಎಲ್ಲ ಭಾಗಗಳ ಉತ್ತಮ ಅಂಶಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳಲು ಕರ್ಣಾಟಕ ಪ್ರಯತ್ನಪಟ್ಟಿದೆ.[೧೧] ಕರ್ನಾಟಕದಲ್ಲಿ ಕ್ರಿಸ್ತಶಕದ ಆರಂಭದಲ್ಲಿ ಕಟ್ಟಿದ ದೇವಾಲಯಗಳು ಉಳಿದಿಲ್ಲವಾದರೂ ಕ್ರಿ.ಶ. ೧೫೦ರ ಕದಂಬರ ಪ್ರಾಕೃತ ಶಾಸನವು ದೇವಾಲಯಗಳು ರಚನೆಗೊಂಡಿರುವುದನ್ನು ದೃಢೀಕರಿಸುತ್ತದೆ. ಕರ್ನಾಟಕದ ಅತಿ ಪ್ರಾಚೀನ ಎನಿಸಿರುವ ಕ್ರಿ.ಶ. ೪೫೦ರ ತಾಳಗುಂದದ ದೇವಾಲಯವು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿರುವುದರಿಂದ ದೇವಾಲಯವಿತ್ತೆಂಬ ದಾಖಲೆಯಾಗಿ ಉಳಿಯುತ್ತದೆ.[೧೨] ಇದು ದೇವಾಲಯದ ಸ್ವರೂಪದ ಬಗ್ಗೆ ಮಾಹಿತಿ ನೀಡುವುದಿಲ್ಲ. ಆದ್ದರಿಂದ ದೇವಾಲಯಗಳ ಉಗಮ ವಿಕಾಸವನ್ನು ಗುರುತಿಸುವ ಸಲುವಾಗಿ ಐಹೊಳೆ, ಬಾದಾಮಿ, ಪಟ್ಟದಕಲ್ಲು ಮತ್ತು ಮಹಾಕೂಟಗಳಲ್ಲಿರುವ ರಚನೆಗಳನ್ನು ಪರಿಶೀಲಿಸಬೇಕು. ಕನಿಷ್ಠ ಅವಶ್ಯಕತೆಯೊಡನೆ ನಿಂತ ಹಲವಾರು ರಚನೆಗಳನ್ನು ಮಹಾಕೂಟೇಶ್ವರ ದೇವಾಲಯದ ಆವರಣದಲ್ಲಿ ಬಾದಾಮಿಯ ಭೂತನಾಥ ಗುಡಿಯ ಗುಂಪುಗಳಲ್ಲಿ ಹಾಗೂ ಐಹೊಳೆಯ ಪರಿಸರದಲ್ಲಿ ಕಾಣಬಹುದಾಗಿದೆ.[೧೩] ಇಲ್ಲಿರುವ ದೇವಾಲಯಗಳ ಸಮೂಹವನ್ನು ವಿದ್ವಾಂಸರು ಈಗಾಗಲೇ ''ದೇವಾಲಯಗಳ ತೊಟ್ಟಿಲು'' ಎಂದು ಹೆಸರಿಸಿದ್ದಾರೆ. ಇಲ್ಲಿರುವ ಪ್ರಾಚೀನ ದೇವಾಲಯಗಳ ಕುರಿತು ಒಮ್ಮತ ಅಭಿಪ್ರಾಯವಿಲ್ಲ. ವಿದ್ವಾಂಸ ಪರ್ಸಿಬ್ರೌನ್ ಅವರು ವಾಸ್ತು ಮೂಲವನ್ನಾಧರಿಸಿ ಲಾಡ್‌ಖಾನ್ ದೇವಾಲಯವನ್ನು ಅತಿ ಪ್ರಾಚೀನ ರಚನೆಯೆಂದು ಗುರುತಿಸಿದರೆ, ಕೆ.ವಿ. ಸೌಂದರ ರಾಜನ್ ಅವರು ಐಹೊಳೆಯ ಜ್ಯೋತಿರ್ಲಿಂಗ ಗುಡಿಯ ನಾಲ್ಕು ಸ್ತಂಭಗಳ ರಚನೆಯನ್ನು ದೇವಾಲಯದ ಮೂಲವೆಂದು ವಿವರಿಸಿದರು.[೧೪] ಉತ್ತರ ಭಾರತದಲ್ಲಿ ಗುಪ್ತರ ಪೋಷಣೆಯಲ್ಲಿ ದೇವಾಲಯಗಳ ನಿರ್ಮಾಣ ನಡೆಯುತ್ತಿರುವ ಕಾಲದಲ್ಲಿಯೇ ದಕ್ಷಿಣದಲ್ಲಿ ಒಂದು ಹೊಸ ಪರಂಪರೆ ಪ್ರಾರಂಭವಾಯಿತು. ಚಾಲುಕ್ಯರ ನೇತೃತ್ವದಲ್ಲಿ ಕರ್ನಾಟಕ ಮುನ್ನಡೆಯ ಕೇಂದ್ರವಾಯಿತು.[೧೫]

ಕಲೆಯು ಜ್ಞಾನ, ಆಕಾರಗಳ ಶಬ್ದಕೋಶ ಮತ್ತು ಅವುಗಳನ್ನು ಮಾಡುವ ಮಾದರಿ ಇವು ಸಾಂಪ್ರದಾಯಿಕವಾಗಿ ಗುರುಶಿಷ್ಯ, ತಂದೆ, ಮಗ ಹಾಗೂ ಒಂದು ರಾಜವಂಶದಿಂದ ಇನ್ನೊಂದು ರಾಜವಂಶಕ್ಕೆ ಹರಿದುಬಂದಿದೆ. ಕರ್ನಾಟಕದಲ್ಲಿ ಅಪರಿಮಿತ ಸಂಖ್ಯೆಯಲ್ಲಿ ದೇವಾಲಯಗಳ ನಿರ್ಮಾಣವಾದರೂ ಒಂದೊಂದು ಪ್ರಮುಖ

ರಾಜವಂಶದ ದೇವಾಲಯಗಳು ಒಂದೊಂದು ಪ್ರದೇಶದಲ್ಲಿ ಕೇಂದ್ರೀಕೃತಗೊಂಡಂತೆಯೇ ಇತರ ಪ್ರದೇಶಗಳಲ್ಲಿ ಬಿಡಿಬಿಡಿಯಾಗಿಯೂ ನಿರ್ಮಿಸಲ್ಪಟ್ಟವು. ಅಂದರೆ ಕಲ್ಯಾಣ ಚಾಲುಕ್ಯರ ದೇವಾಲಯಗಳು ಕುರುವತ್ತಿ, ಗದಗ ಮತ್ತು ಲಕ್ಕುಂಡಿಯಲ್ಲಿರುವಂತೆಯೇ ಉತ್ತರ ಕರ್ನಾಟಕದ ಇನ್ನಿತರ ಸ್ಥಳಗಳಲ್ಲೂ ಕಾಣಸಿಗುತ್ತವೆ.[೧೬] ಈ ಕಾರಣದಿಂದಾಗಿ ದೇವಾಲಯದ ಬಗ್ಗೆ ಹೇಳುವಾಗ ಪ್ರದೇಶ, ರಾಜವಂಶ, ಕಾಲ ಯಾವುದನ್ನು ಉಲ್ಲೇಖಿಸಿದರೂ ಉಳಿದೆರಡು ಅಂಶಗಳು ಸಹಜವಾಗಿಯೇ ಹಿಂಬಾಲಿಸುತ್ತವೆ. ಜೊತೆಗೆ ಕಾಲದಿಂದ ಕಾಲಕ್ಕೆ ರಚನಾತ್ಮಕವಾಗಿ ಪ್ರತ್ಯೇಕ ಶೈಲಿ ಪ್ರಭೇದಗಳು ಬಂದರೂ ದೇವಾಲಯಗಳ ಮೂಲ ಸ್ವರೂಪ ಮತ್ತು ಪ್ರಧಾನ ಅಂಗಗಳು ಸ್ಥೂಲವಾಗಿ ಒಂದೇ ಆಗಿವೆ.

ಈ ಹಿನ್ನೆಲೆಯಿಂದ ಗಮನಿಸಿದಾಗ ಬಳಗಾನೂರು ಹೋಬಳಿ ಪರಿಸರದ ರಾಜಕೀಯ ಇತಿಹಾಸ ಮೌರ್ಯರಿಂದ ಆರಂಭವಾದರೂ, ಕಲ್ಯಾಣ ಚಾಲುಕ್ಯರ ಕಾಲದವರೆಗೆ ಇಲ್ಲಿ ಯಾವುದೇ ದೇವಾಲಯಗಳು ಕಾಣಸಿಗುವುದಿಲ್ಲ. ಇಲ್ಲಿನ ಪ್ರಾಚೀನ ದೇವಾಲಯಗಳ ಅಧ್ಯಯನ ಕಲ್ಯಾಣ ಚಾಲುಕ್ಯರ ಕಾಲದಿಂದ ಪ್ರಾರಂಭವಾಗಿ ಕ್ರಮೇಣ ವಿಜಯನಗರೋತ್ತರ ಕಾಲದವರೆಗೆ ವಿಸ್ತರಿಸಿಕೊಂಡಿದೆ. ಈ ಭಾಗದಲ್ಲಿ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳು ಕಂಡುಬರುತ್ತವೆ. ಇಲ್ಲಿ ಏಕಕೂಟ, ದ್ವಿಕೂಟ ಮತ್ತು ತ್ರಿಕೂಟ ಮಾದರಿಯ ದೇವಾಲಯಗಳಿವೆ. ಇಲ್ಲಿನ ದೇವಾಲಯಗಳು ಸಾಮಾನ್ಯವಾಗಿ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಮಂಟಪ, ನವರಂಗ ಭಾಗಗಳನ್ನು ಹೊಂದಿವೆ.

### ಶೈವ ದೇವಾಲಯಗಳು

#### ೧. ಆದಯ್ಯ-ಅಮರಯ್ಯ ದೇವಾಲಯ

ಈ ದೇವಾಲಯ ಬಳಗಾನೂರು ಗ್ರಾಮದ ಹನುಮಂತನ ಗುಡಿಯ ಮುಂಭಾಗದಲ್ಲಿದೆ. ದೇವಾಲಯವು ಉತ್ತರಾಭಿಮುಖವಾಗಿದ್ದು, ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೊಂದಿದೆ. ಇದರ ಕಾಲವನ್ನು ಕ್ರಿ.ಶ. ೧೧-೧೨ನೇ ಶತಮಾನ ಎಂದು ನಿರ್ಧರಿಸಲಾಗಿದೆ.[೧೭] ಸ್ಥಿತಿಯು ಮಧ್ಯಮವಾಗಿದೆ. ಈ ದೇವಾಲಯವು ದ್ವಿಕೂಟ ಮಾದರಿಯನ್ನು ಹೊಂದಿದೆ. ಎತ್ತರದ ಕಟ್ಟೆಯ ಮೇಲೆ ನಿರ್ಮಿಸಲಾಗಿರುವ ಈ ದೇವಾಲಯದಲ್ಲಿ ಎರಡು ಗರ್ಭಗೃಹ ಮತ್ತು ಎರಡು ಪ್ರತ್ಯೇಕ ಅಂತರಾಳಗಳಿವೆ. ಎರಡೂ ಕೂಟಗಳ ನಡುವೆ ಒಂದು ಸಣ್ಣ ಕೋಣೆಯಿದೆ. ಈ ಕೋಣೆಯಲ್ಲಿ ಪೂಜಾರಿಗಳು ವಾಸಿಸುತ್ತಿದ್ದರು. ಅಲ್ಲದೆ ಈಗಲೂ ಇಲ್ಲಿ ಪೂಜಾರಿಗಳು ವಾಸವಾಗಿದ್ದಾರೆ. ಚೌಕಾಕಾರದ ಗರ್ಭಗೃಹದಲ್ಲಿ ನಾಲ್ಕು ಅಡಿಗಳಷ್ಟು ಎತ್ತರವಿರುವ ಶಿವಲಿಂಗವಿದೆ. ವೃತ್ತಾಕಾರದ ಪಾಣಿವಟ್ಟವಿರುವ ಲಿಂಗದ ಜಲಹರಿಯು ಬಲಭಾಗಕ್ಕಿದೆ. ಇದು ವಿಶೇಷವೆಂದು ಹೇಳಬಹುದು. ಗರ್ಭಗೃಹದ ಪೂರ್ವಭಾಗದ ಭಿತ್ತಿಯಲ್ಲಿ ಕಲ್ಲಿನ ಮುಂಚಾಚು ಇದೆ. ಇಲ್ಲಿ ಪೂಜಾಸಾಮಗ್ರಿಗಳನ್ನು ಇಡಲಾಗುತ್ತಿದೆ. ಗರ್ಭಗೃಹದ ಸೂರಿನಲ್ಲಿ ಭುವನೇಶ್ವರವನ್ನು ರಚಿಸಲಾಗಿದೆ. ಇದು ಅಷ್ಟಕೋನಾಕಾರವಾಗಿದ್ದು, ಮಧ್ಯದ ಭಾಗ ವೃತ್ತಾಕಾರವಾಗಿದೆ. ಮುಖ್ಯವಾಗಿ ಗರ್ಭಗೃಹವು ನಾಲ್ಕು ಅರೆಗಂಭಗಳಿಂದ ಕೂಡಿದೆ. ಗರ್ಭಗೃಹದ ಬಾಗಿಲವಾಡವು ಪಂಚ ಶಾಖೆಗಳಿಂದ ಕೂಡಿದ್ದು, ಸೂಕ್ಷ್ಮ ಕೆತ್ತನೆಗಳಿಂದ ಕೂಡಿದೆ. ಬಾಗಿಲವಾಡದ ಶಾಖೆಗಳು ಗೋಡೆಯ ಅರೆಗಂಭದವರೆಗೆ ವಿಸ್ತರಿಸಿಕೊಂಡಿವೆ. ಬಾಗಿಲವಾಡದ ಒಂದೊಂದು ಶಾಖೆಯು ವಿವಿಧ ಅಲಂಕರಣೆಯನ್ನು ಹೊಂದಿವೆ. ಮೊದಲ ಶಾಖೆಯು ವಜ್ರಾಕೃತಿಯ ರಚನೆ ಮತ್ತು ಪದ್ಮದಳವನ್ನು

ಹೊಂದಿದ್ದರೆ, ಎರಡನೆಯದು ಲತಾಬಳ್ಳಿಯ ರಚನೆಯನ್ನು ಹೊಂದಿದೆ. ಮೂರನೆಯ ಶಾಖೆಯು ಅರ್ಧಗಂಭ ರಚನೆಯನ್ನು ಹೊಂದಿದೆ. ಈ ಕಂಭವು ಪೀಠ, ಚೌಕ, ವೃತ್ತ, ಅಷ್ಟಪಟ್ಟಿಕೆ, ಚೌಕ, ಘಂಟಾ, ವೃತ್ತ, ಕುಂಭ, ಬೋದಿಗೆಗಳಿಂದ ಕೂಡಿದೆ. ಈ ಕಂಭವು ದೇವಾಲಯ ವಾಸ್ತುವನ್ನು ಹೊಂದಿದೆ. ನಾಲ್ಕನೆಯ ಶಾಖೆಯಲ್ಲಿ ಕುದುರೆಯ ಉಬ್ಬುಶಿಲ್ಪಗಳಿವೆ. ಕುದುರೆಗಳನ್ನು ಒಂದೇ ಕಡೆ ಮುಖ ಮಾಡಿ ಕೆತ್ತಿಲ್ಲ. ಕುದುರೆಗಳು ಒಂದು ಕಾಲನ್ನು ಮೇಲೆತ್ತಿದ್ದು ಹಿಂದಕ್ಕೆ ತಿರುಗಿ ನೋಡುವಂತಿವೆ. ಕುದುರೆಗಳ ನಂತರ ಕೆಳಭಾಗದಲ್ಲಿ ಆನೆಯ ಉಬ್ಬುಶಿಲ್ಪಗಳಿವೆ. ಕೊನೆಯ ಹಾಗೂ ಐದನೆಯ ಶಾಖೆಯು ಸರಳವಾಗಿದೆ. ಬಾಗಿಲವಾಡಕ್ಕೆ ತಾಗಿಕೊಂಡಿರುವ ಅರ್ಧಗಂಭವು ಸೂಕ್ಷ್ಮಕೆತ್ತನೆಯಿಂದ ಕೂಡಿದೆ. ಇದು ಪೀಠ, ಚೌಕ, ಚತುರ್ಪಟ್ಟಿಕೆ (ನಾಲ್ಕು ಕೋನ), ದಂಡ ಘಂಟಾ, ಘಟ, ಫಲಕ ಭಾಗಗಳನ್ನು ಹೊಂದಿದೆ. ಇದು ಒಂದು ಪ್ರಕಾರದ ಕಂಬವಾಗಿದೆ. ಬಾಗಿಲವಾಡದ ಕೆಳಭಾಗದಲ್ಲಿ ದ್ವಾರಪಾಲಕ ಮತ್ತು ಅವನ ಪರಿವಾರ ದೇವತೆಗಳ ಉಬ್ಬುಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮೇಲ್ಭಾಗದಲ್ಲಿ ಪಟ್ಟಿಕೆಗಳನ್ನು ಕೆತ್ತಲಾಗಿದೆ. ಪಟ್ಟಿಕೆ ರಚನೆಯುಳ್ಳ ಈ ಭಾಗವು ಮುಂಚಾಚಿಕೊಂಡಿದೆ. ಡೆಂಟಿಲ್ ಮಾದರಿಯ ರಚನೆಯನ್ನು ಇಲ್ಲಿ ಕಾಣಬಹುದು. ಈ ರಚನೆಯ ಮೇಲ್ಭಾಗದಲ್ಲಿ ರೇಖಾನಾಗರ ಮಾದರಿಯ ೫ ಶಿಖರಗಳ ರಚನೆಯಿದೆ. ಶಿಖರಗಳ ಮಧ್ಯ, ಮಧ್ಯದಲ್ಲಿ ಪದ್ಮಗಳಿವೆ.

ಪೂರ್ವಕ್ಕಿರುವ ಆದಯ್ಯನ ಗುಡಿಯು(ಇನ್ನೊಂದು ಕೂಟ) ಮೇಲೆ ವಿವರಿಸಿದ ಲಕ್ಷಣಗಳನ್ನು ಹೊಂದಿದ್ದರೂ ಕೆಲವೊಂದು ಮಾರ್ಪಾಡುಗಳನ್ನು ಗಮನಿಸಲಾಗಿದೆ. ಬಾಗಿಲವಾಡದ ಮೂರು ಮತ್ತು ನಾಲ್ಕನೆಯ ಶಾಖೆಯಲ್ಲಿ ಕ್ರಮವಾಗಿ ಅರ್ಧಗಂಭ, ಸಿಂಹ, ಉಬ್ಬುಶಿಲ್ಪಗಳಿವೆ. ಕಂಭದ ರಚನೆಯಲ್ಲಿ ಬದಲಾವಣೆಯನ್ನು ಕಾಣುತ್ತೇವೆ. ಇದು ಚೌಕ, ನಾಲ್ಕು, ಎಂಟು, ಹದಿನಾರು ಕೋನ, ಫಲಕ, ಪುಷ್ಪ ಬೋದಿಗೆಯನ್ನು ಹೊಂದಿದೆ.

ಅರ್ಧಮಂಟಪವೂ ನಾಲ್ಕು ಅರ್ಧಗಂಭಗಳಿಂದ ಕೂಡಿದ್ದು ಇಲ್ಲಿನ ಭಿತ್ತಿಯ ಭಾಗದಲ್ಲಿ (ಎರಡರಲ್ಲಿ) ಶಾಸನಗಳಿವೆ. ಅರ್ಧಮಂಟಪದಲ್ಲಿ ಭುವನೇಶ್ವರವಿದೆ.

ದೇವಾಲಯಕ್ಕೆ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಶಿಖರ ಭಾಗಗಳಿವೆ. ಹೊರಭಿತ್ತಿಯು ಪೂರ್ಣಗೊಂಡಿಲ್ಲದಿರುವುದರಿಂದ ಒರಟುಕಲ್ಲುಗಳ ರಚನೆಯು ಕಂಡುಬರುತ್ತದೆ. ಶಿಖರ ಭಾಗವು ಕೂಡ ಒರಟುಕಲ್ಲಿನಿಂದ ಕೂಡಿದೆ. ಈ ಆಧಾರದ ಮೇಲೆ ದೇವಾಲಯವನ್ನು ಪೂರ್ಣಗೊಳಿಸಿಲ್ಲ ಎಂದು ತಿಳಿದುಬರುತ್ತದೆ.

ದೇವಾಲಯದ ಎರಡು ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಇವುಗಳನ್ನು ಆದಯ್ಯ(ಪೂರ್ವ ಭಾಗದ್ದು), ಅಮರಯ್ಯ(ಪಶ್ಚಿಮ ಭಾಗದ್ದು) ಎಂಬ ಹೆಸರಿನಿಂದ ಪೂಜಿಸಲಾಗುತ್ತಿದೆ.

**೨. ನಗರೇಶ್ವರ ಸಂಗಮೇಶ್ವರ ದೇವಾಲಯ**

ಈ ದೇವಾಲಯವು ಬಳಗಾನೂರು ಗ್ರಾಮದ ಮಧ್ಯಭಾಗದಲ್ಲಿದೆ. ಇದರ ಸಮೀಪದಲ್ಲಿ ಲಕ್ಷ್ಮಿನಾರಾಯಣ ದೇವಾಲಯ ಕಂಡುಬರುತ್ತದೆ. ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯವು ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೊಂದಿದೆ. ಇದರ ಕಾಲವನ್ನು ಕ್ರಿ.ಶ. ೧೨-೧೩ನೇ ಶತಮಾನ ಎಂದು ಹೇಳಬಹುದು.[೧೮] ಇದು ಮೂಲತಃ ತ್ರಿಕೂಟ ಮಾದರಿಯದ್ದಾಗಿದೆ. ದೇವಾಲಯದ ಒಂದು ಕೂಟವು ಸಂಪೂರ್ಣವಾಗಿ ನಾಶವಾಗಿದ್ದು

ಎರಡು ಕೂಟಗಳು ಮಾತ್ರ ಉಳಿದುಬಂದಿವೆ. ಇದು ಮಧ್ಯಮಸ್ಥಿತಿಯಲ್ಲಿದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು, ಮೆಟ್ಟಿಲುಗಳ ಮೂಲಕ ನವರಂಗ ಭಾಗವನ್ನು ಪ್ರವೇಶಿಸಬಹುದಾಗಿದೆ. ಉಳಿದಿರುವ ಎರಡು ಕೂಟಗಳು ಗರ್ಭಗೃಹ ಹಾಗೂ ಪ್ರತ್ಯೇಕ ಅಂತರಾಳವನ್ನು ಹೊಂದಿವೆ.

ಪೂರ್ವಾಭಿಮುಖವಾಗಿರುವ ಚೌಕಾಕಾರ ಗರ್ಭಗೃಹದಲ್ಲಿ ಲಿಂಗವಿದ್ದು ಅದನ್ನು ನಗರೇಶ್ವರನೆಂದು ಪೂಜಿಸಲಾಗುತ್ತಿದೆ. ಗರ್ಭಗೃಹದ ಪಶ್ಚಿಮ ಭಾಗದ ಒಳಭಿತ್ತಿಯು ಮುಂಚಾಚಿಕೊಂಡಿದ್ದು, ಅದನ್ನು ಪೂಜಾ ಸಾಮಗ್ರಿಗಳನ್ನು ಇಡಲು ಬಳಸಲಾಗುತ್ತಿದೆ. ಲಿಂಗವು ಸುಮಾರು ೩ ಅಡಿ ಎತ್ತರವುಳ್ಳದ್ದಾಗಿದೆ. ವೃತ್ತಾಕಾರದ ಪಾಣಿವಟ್ಟವಿರುವ ಲಿಂಗದ ಜಲಹರಿಯು ಎಡಕ್ಕಿದೆ. ಗರ್ಭಗೃಹದ ಮುಂಬದಿಯ ಅಂತರಾಳದಲ್ಲಿ ಲಿಂಗಕ್ಕೆ ಅಭಿಮುಖವಾಗಿ ಸುಮಾರು ಎರಡು ಅಡಿ ಎತ್ತರದ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಬಾಗಿಲವಾಡವು ಪಂಚಶಾಖೆಗಳಿಂದ ಕೂಡಿದೆ. ಈ ಶಾಖೆಯಲ್ಲಿ ಕ್ರಮವಾಗಿ ವೃತ್ತ, ಪದ್ಮ, ಲತಾಬಳ್ಳಿ, ಕಂಭ, ಕುದುರೆಗಳ ಉಬ್ಬುಶಿಲ್ಪಗಳ ರಚನೆಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮೇಲ್ಭಾಗದಲ್ಲಿ ಪಟ್ಟಿಕೆಯಾಕಾರದ ರಚನೆ ಕಂಡುಬರುತ್ತದೆ. ಕೊನೆಯ ಹಂತದಲ್ಲಿ ಐದು ರೇಖಾನಾಗರ ಮಾದರಿಯ ಶಿಖರಗಳಿವೆ. ಈ ಶಿಖರಗಳ ನಡುವೆ ಪದ್ಮದಳದ ರಚನೆಯನ್ನು ಕಾಣಬಹುದು. ಇಂತಹದೇ ವಾಸ್ತುಶೈಲಿ ಮತ್ತು ವಿನ್ಯಾಸವನ್ನು ಹೊಂದಿರುವ ಮತ್ತೊಂದು ಕೂಟದಲ್ಲಿ ಶಿವಲಿಂಗವಿದೆ. ಲಿಂಗವನ್ನು ಸಂಗಮೇಶ್ವರ ಹೆಸರಿನಿಂದ ಪೂಜಿಸಲಾಗುತ್ತಿದೆ. ಇದು ದಕ್ಷಿಣಾಭಿಮುಖವಾಗಿದೆ. ಈ ಕೂಟದ ಬಾಗಿಲವಾಡವು ಪಂಚಶಾಖೆಗಳಿಂದ ಕೂಡಿದೆ. ಶಾಖೆಯ ಕೆಳಭಾಗದಲ್ಲಿ ಚಾಮರ ಧಾರಣೆಯರ ಮತ್ತು ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮೇಲ್ಭಾಗದಲ್ಲಿ ಐದು ರೇಖಾನಾಗರ ಮಾದರಿಯ ಶಿಖರಗಳಿವೆ. ಶಿಖರಗಳ ಮಧ್ಯದಲ್ಲಿ ಪದ್ಮದ ಉಬ್ಬುರಚನೆಯಿದೆ. ಎರಡು ಕೂಟಗಳ ಗರ್ಭಗೃಹ ಮತ್ತು ಅಂತರಾಳದಲ್ಲಿ ವೃತ್ತಾಕಾರದ ಭುವನೇಶ್ವರಗಳಿವೆ. ಈ ಕೂಟಗಳ ಭಿತ್ತಿಯಲ್ಲಿ ಅಂದರೆ ನವರಂಗ ಭಾಗದ ಕಡೆಗೆ ಮೂರು ದೇವಕೋಷ್ಟಗಳಿವೆ. ದೇವಕೋಷ್ಟಕಗಳನ್ನು ದೇವಾಲಯದ ವಾಸ್ತುಭಾಗಗಳನ್ನು ಒಳಗೊಂಡಿರುವಂತೆ ರಚಿಸಲಾಗಿದೆ. ಕೋಷ್ಟಕದ ಎರಡು ಬದಿಯಲ್ಲಿನ ಅರ್ಧಗಂಭಗಳು ಉತ್ತಮ ಕೆತ್ತನೆಗಳಿಂದ ಕೂಡಿವೆ. ಬಹುಶಃ ಇದೇ ರೀತಿಯ ರಚನೆಯನ್ನು ಹೊಂದಿರುವ ಕಂಭಗಳು ನವರಂಗ ಭಾಗದಲ್ಲಿರಬೇಕು. ನಾಶವಾಗಿರುವ ಇನ್ನೊಂದು ಕೂಟದ ಜಾಗದಲ್ಲಿ ಪ್ರಸ್ತುತವಾಗಿ ನವಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಮೂರು ದೇವಾಲಯ ಅಥವಾ ಕೂಟಕ್ಕೆ ಒಂದು ನವರಂಗವಿತ್ತು. ಇಂದು ನವರಂಗ ಮಧ್ಯದ ವೇದಿಕೆ ಭಾಗವು ಉಳಿದಿದೆ. ನವರಂಗಕ್ಕೆ ಎದುರಾಗಿ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.

ದೇವಾಲಯವನ್ನು ಎತ್ತರದ ವೇದಿಕೆಯ ಮೇಲೆ ನಿರ್ಮಿಸಲಾಗಿದ್ದು, ದೇವಾಲಯಕ್ಕೆ ಅಧಿಷ್ಠಾನ ಭಾಗವಿದೆ. ಅಧಿಷ್ಠಾನದಲ್ಲಿ ಉಪಾನ, ಕಂಠ, ಪದ್ಮ, ಕುಮುದ, ಗಳಪೀಠ, ವೇದಿಕೆ ಭಾಗಗಳು ಕಂಡುಬರುತ್ತವೆ. ಅಧಿಷ್ಠಾನದ ನಂತರ ಸರಳವಾದ ಭಿತ್ತಿಯ ಭಾಗವಿದೆ. ಇದರ ಮೇಲ್ಭಾಗದಲ್ಲಿ ಪ್ರಸ್ತರ, ಶಿಖರ ಭಾಗವಿದೆ. ಶಿಖರದಲ್ಲಿ ಗ್ರೀವ, ಸ್ಥೂಪಿ ಕಳಸಗಳಿವೆ. ಶಿಖರ ಮೆಟ್ಟಿಲು ಆಕಾರದ ರಚನೆ ಹೊಂದಿದೆ. ಸ್ಥೂಪಿ ಭಾಗವು ಕಮಲದ ದಳಗಳಿಂದ ಕೂಡಿದೆ.

ದೇವಾಲಯ ಸಮುಚ್ಚಯದ ಮುಂಭಾಗದಲ್ಲಿನ ವೇದಿಕೆಯ ಮೇಲೆ ಏಕ ಕೋಣೆಯ ಗಣಪತಿ ದೇವಾಲಯವಿದೆ. ಇದು ನಾಲ್ಕು ಅರ್ಧಗಂಭಗಳಿಂದ ಕೂಡಿದೆ. ಇದರಲ್ಲಿ ಮೂರು ಅಡಿ ಎತ್ತರವುಳ್ಳ ಗಣೇಶನ ಮೂರ್ತಿಶಿಲ್ಪವಿದೆ. ಮೇಲ್ಛಾವಣೆಯಲ್ಲಿ ಭುವನೇಶ್ವರದ ರಚನೆಯಿದ್ದು ಇದು ಅಷ್ಟಪದ್ಮದಳದ ಆಕಾರದಲ್ಲಿದೆ. ದೇವಾಲಯದ ಹೊರಭಿತ್ತಿಯು ಒರಟುಕಲ್ಲುಗಳಿಂದ ಕೂಡಿದೆ. ಪ್ರಸ್ತರದ ಮೇಲ್ಭಾಗದಲ್ಲಿ ಶಿಖರ ರಚನೆಯಿದ್ದು, ಅದಕ್ಕೆ ಕಲ್ಲುಹಾಸುಗಳನ್ನು ಹಾಕಲಾಗಿದೆ. ಉತ್ತರಾಭಿಮುಖವಾಗಿರುವ ದೇವಾಲಯವು ಮಧ್ಯಮ ಸ್ಥಿತಿಯಲ್ಲಿದೆ.

**೩. ನಾಗಭೂಷಣ ದೇವಾಲಯ**

ಬಳಗಾನೂರು ಗ್ರಾಮದ ಸಂತೆ ಬಜಾರಿನಲ್ಲಿರುವ ಈ ದೇವಾಲಯವು ಉತ್ತರಾಭಿಮುಖವಾಗಿದೆ. ಇದು ವಿಜಯನಗರ ವಾಸ್ತುಶೈಲಿಯನ್ನು ಹೊಂದಿದ್ದು ಇದರ ಕಾಲವನ್ನು ಕ್ರಿ.ಶ. ೧೪-೧೫ನೇ ಶತಮಾನವೆಂದು ಹೇಳಬಹುದು.[೧೯] ಇದು ಮಧ್ಯಮ ಸ್ಥಿತಿಯಲ್ಲಿದೆ. ಈ ದೇವಾಲಯವನ್ನು ಎತ್ತರದ ವೇದಿಕೆಯ ಮೇಲೆ ನಿರ್ಮಿಸಿರುವುದರಿಂದ ದೇವಾಲಯವು ಎತ್ತರವಾಗಿ ಕಂಡುಬರುತ್ತದೆ. ಎತ್ತರದ ಕಟ್ಟೆಯ ಮೇಲೆ ವಿಶಿಷ್ಟ ಅಧಿಷ್ಠಾನ ಭಾಗಗಳನ್ನು ಹೊಂದಿರುವ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ದೇವಾಲಯದ ನವರಂಗ ಭಾಗವನ್ನು ಪ್ರವೇಶಿಸಬೇಕಾದರೆ ಏಳು ಮೆಟ್ಟಿಲುಗಳನ್ನು ಹತ್ತಬೇಕು.

ದೇವಾಲಯದ ಚೌಕಾಕಾರ ಗರ್ಭಗೃಹದಲ್ಲಿ ಸುಮಾರು ೪ ಅಡಿ ಎತ್ತರವುಳ್ಳ ಶಿವಲಿಂಗವಿದೆ. ಸುಮಾರು ಮೂರು ಅಡಿ ಪಾನವಟ್ಟದ ಮೇಲೆ ಶಿವಲಿಂಗವಿದೆ. ಇದನ್ನು ನಾಗಭೂಷಣ ಹೆಸರಿನಿಂದ ಪೂಜಿಸಲಾಗುತ್ತಿದೆ. ಗರ್ಭಗೃಹದ ಮೇಲ್ಛಾವಣೆಯಲ್ಲಿ ಅಷ್ಟಕೋನಾಕಾರದ ಭುವನೇಶ್ವರವಿದೆ. ಇದು ಪದ್ಮದಳವನ್ನು ಹೊಂದಿದ್ದು ಮಧ್ಯದ ಭಾಗವು ಇಳಿಬಿಟ್ಟ ಬಾಳೆಹೂವಿನ ಮೊಗ್ಗುವಿನಂತಹ ರಚನೆಯನ್ನು ಹೊಂದಿದೆ. ಗರ್ಭಗೃಹದ ಬಾಗಿಲವಾಡವು ತ್ರಿಶಾಖೆಗಳಿಂದ ಕೂಡಿದೆ. ಇದು ವಜ್ರ, ಲತಾ ಹಾಗೂ ಸರಳ ಶಾಖೆಯನ್ನು ಹೊಂದಿದ ತ್ರಿಶಾಖೆಗಳಿಂದ ಕೂಡಿದೆ. ದ್ವಾರಶಾಖೆಯ ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ದ್ವಾರಪಾಲಕರು ಬಲಗೈಯಲ್ಲಿ ಗದೆಯನ್ನು, ಎಡಗೈಯನ್ನು ಟೊಂಕದ ಮೇಲಿಟ್ಟು ಕಾಲನ್ನು ಕತ್ತರಿಯ ರೀತಿಯಲ್ಲಿಟ್ಟುಕೊಂಡು ನಿಂತಿದ್ದಾರೆ. ಲಲಾಟಬಿಂಬದಲ್ಲಿ ಗಣಪತಿಯ ಉಬ್ಬುಶಿಲ್ಪವಿದೆ. ಅಂತರಾಳ ಭಾಗದಲ್ಲಿ ನಂದಿಯನ್ನು ಗರ್ಭಗೃಹದ ಶಿವಲಿಂಗಕ್ಕೆ ಎದುರಾಗಿ ಪ್ರತಿಷ್ಠಾಪಿಸಲಾಗಿದೆ. ನಂದಿಯು ಮಲಗಿದ್ದು ೧.೦೫ ಅಡಿ ಎತ್ತರವನ್ನು ಹೊಂದಿದೆ. ಇದರ ಇಕ್ಕೆಲಗಳಲ್ಲಿ ತ್ರಿಶಂಖುವಿನ ರಚನೆಯಿತ್ತು. ಅಂತರಾಳ ನಾಲ್ಕು ಅರ್ಧಗಂಭಗಳಿಂದ ಕೂಡಿದ್ದು, ನವರಂಗ ಭಾಗಕ್ಕೆ ತೆರೆದುಕೊಂಡಿದೆ.

ನವರಂಗ ಭಾಗವು ತೆರೆದುಕೊಂಡಿದ್ದು, ಹೆಚ್ಚಿನ ಗಾಳಿ, ಬೆಳಕಿನಿಂದ ಕೂಡಿದೆ. ಆದ್ದರಿಂದ ಇದನ್ನು ತೆರೆದ ನವರಂಗ ಎನ್ನಬಹುದು. ನವರಂಗದ ಪ್ರವೇಶಕ್ಕೆ ಉತ್ತರ ಮತ್ತು ಪೂರ್ವಾಭಿಮುಖವಾಗಿ ಮೆಟ್ಟಿಲುಗಳಿವೆ. ನವರಂಗ ಭಾಗವು ನಾಲ್ಕು ಸ್ವತಂತ್ರಗಂಭಗಳಿಂದ ಕೂಡಿದ್ದು ಸರಳವಾದ ರಚನೆಯಿಂದ ಕೂಡಿವೆ. ಕಂಭ, ಪೀಠ, ಚೌಕ, ಹದಿನಾರು-ಎಂಟು-ಹದಿನಾರು ಕೋನ, ಚೌಕ, ವೃತ್ತ, ಪುಷ್ಪಬೋದಿಗೆಗಳಿಂದ ಕೂಡಿದೆ. ನವರಂಗ ಮಧ್ಯಭಾಗದಲ್ಲಿ ವೇದಿಕೆ ರಚನೆಯಿದೆ. ವೇದಿಕೆಯ ಮೇಲ್ಛಾವಣಿ ಮತ್ತು ಗರ್ಭಗೃಹದಲ್ಲಿ

ಭುವನೇಶ್ವರಗಳಿವೆ. ಗರ್ಭಗೃಹದ ಭುವನೇಶ್ವರವು ಪದ್ಮದಳದಿಂದ ಕೂಡಿದ್ದರೆ, ನವರಂಗದ ಭುವನೇಶ್ವರವು ವೃತ್ತಾಕಾರವಾಗಿದೆ. ನವರಂಗದ ಕಂಭಗಳಿಗೆ ಹೋಲಿಸಿದರೆ ಜಗಲಿ ಮೇಲಿನ ಕಂಭಗಳು ಸರಳವಾಗಿವೆ. ಇವು ಪೀಠ, ಚೌಕ, ಪಟ್ಟಿಕೆ, ಕಮಾನಿನ ರಚನೆಯನ್ನು ಹೊಂದಿವೆ.

ನವರಂಗ ಭಾಗದಲ್ಲಿ ಎರಡು ದೇವಕೋಷ್ಟಕಗಳಿವೆ. ಕೋಷ್ಟಕಗಳ ಎರಡು ಬದಿಯಲ್ಲಿ ಕಂಭ ರಚನೆಯಿದೆ. ಕೋಷ್ಟಕದ ಕಂಭಗಳು ಜಗಲಿಯ ಮೇಲಿರುವ ಕಂಭಗಳನ್ನೆ ಹೋಲುತ್ತಿವೆ. ದೇವಕೋಷ್ಟಕದ ಮೇಲ್ಭಾಗದಲ್ಲಿ ದಶಪದ್ಮದಳವಿದೆ. ದೇವಾಲಯವು ಒಟ್ಟು ೧೬ ಸ್ವತಂತ್ರಗಂಭ, ೮ ಅರೆಗಂಬಗಳನ್ನು ಹೊಂದಿದೆ. ದೇವಾಲಯದ ಅರೆಗಂಭ ಮತ್ತು ಸ್ವತಂತ್ರಗಂಭಗಳಲ್ಲಿ ಆಂಜನೇಯ, ಕಾಳಿಂಗಮರ್ದನ, ಕೃಷ್ಣ, ದರ್ಪಣ ಸುಂದರಿ, ಸಿಂಹ, ಆನೆ, ಗರುಡ, ನರ್ತಕ-ನರ್ತಕಿಯರ ಉಬ್ಬುಶಿಲ್ಪಗಳಿವೆ. ಪ್ರಸ್ತರದ ಮೇಲ್ಭಾವಣಿ ಯಲ್ಲಿ ಅಷ್ಟಪದ್ಮದ ಸುತ್ತ ಸ್ತ್ರೀಯರು ತಮ್ಮ ಒಂದು ಕಾಲನ್ನು ಪರಸ್ಪರವಾಗಿ ಹಿಡಿದುಕೊಂಡಿದ್ದು ಸರಪಳಿ ಯಂತೆ ಕಂಡುಬರುತ್ತದೆ.

ಪಾರ್ಶ್ವನೋಟದಲ್ಲಿ ನವರಂಗದ ಅಧಿಷ್ಠಾನವು ವಿಶಿಷ್ಟವಾಗಿ ಕಂಡುಬರುತ್ತದೆ. ಇದನ್ನು ಎತ್ತರಿಸಿ ನಿರ್ಮಿಸಲಾಗಿದೆ. ಗರ್ಭಗೃಹದ ಹೊರಭಾಗದ ಭಿತ್ತಿಯು ಸರಳವಾಗಿದ್ದು, ಅಲ್ಲಲ್ಲಿ ಉಬ್ಬುಶಿಲ್ಪಗಳು ಕಂಡುಬರುತ್ತವೆ. ನಂದಿ, ಹಂಸ, ಅಷ್ಟಪದ್ಮ, ಕೈಮುಗಿದು ಕುಳಿತಿರುವ ಸ್ತ್ರೀಯ ಉಬ್ಬುಶಿಲ್ಪಗಳಿವೆ. ನವರಂಗದ ಮೇಲ್ಭಾಗದಲ್ಲಿ ಮುಂಚಾಚಿದ ಪ್ರಸ್ತರವಿದೆ. ಇದರ ಮೇಲೆ ಅಷ್ಟಪದ್ಮ ರಚನೆಯಿದೆ. ಪ್ರಸ್ತರದ ಮೇಲೆ ಆಧುನಿಕವಾದ ಎರಡು ನಂದಿ(ಬಸವ) ಮೂರ್ತಿಶಿಲ್ಪವನ್ನು ಇಡಲಾಗಿದೆ. ಮಧ್ಯದಲ್ಲಿ ಶಿವ-ಪಾರ್ವತಿಯರು ಪದ್ಮಾಸನದಲ್ಲಿ ಕುಳಿತಿರುವ ಮೂರ್ತಿಶಿಲ್ಪವಿದೆ. ಮೇಲ್ಭಾಗದಲ್ಲಿದ್ದ ಪ್ರಾಚೀನ ಕಾಲದ ಶಿಖರ ಹಾಳಾಗಿರುವುದ ರಿಂದ ಆ ಭಾಗದಲ್ಲಿ ಆಧುನಿಕವಾಗಿ ಶಿಖರವನ್ನು ನಿರ್ಮಿಸಲಾಗುತ್ತಿದೆ.

**೪. ರಾಮಲಿಂಗ-ಚೌಡೇಶ್ವರಿ ದೇವಾಲಯ**

ಬಳಗಾನೂರು ಗ್ರಾಮದಲ್ಲಿ ವೆಂಕಟೇಶ್ವರ ಟಾಕೀಸ್‌ನ ಎದುರಿಗೆ ಈ ದೇವಾಲಯವಿದೆ. ಇದು ಉತ್ತರಾಭಿಮುಖವಾಗಿದ್ದು ಉತ್ತಮ ಸ್ಥಿತಿಯಲ್ಲಿದೆ. ದೇವಾಲಯವು ದ್ವಿಕೂಟ ಮಾದರಿಯದ್ದಾಗಿದೆ. ಇಲ್ಲಿನ ಗರ್ಭಗೃಹ, ಕಂಭಗಳ ಶೈಲಿ, ವಾಸ್ತುವನ್ನು ಗುರುತಿಸಿ ವಿಜಯನಗರೋತ್ತರ ಕಾಲದ್ದೆಂದು ನಿರ್ಧರಿಸಲಾಗಿದೆ. ಆಧುನಿಕ ಶೈಲಿಯನ್ನು ಹೊಂದಿರುವ ದೇವಾಲಯದ ಕಾಲವನ್ನು ಕ್ರಿ.ಶ. ೧೯-೨೦ನೇ ಶತಮಾನದ್ದೆಂದು ಹೇಳಬಹುದು.[೨೨] ದೇವಾಲಯವು ಮೂರು ಅಡಿ ಎತ್ತರದಲ್ಲಿದ್ದು, ಐದು ಮೆಟ್ಟಿಲುಗಳ ಮೂಲಕ ಮಂಟಪವನ್ನು ಪ್ರವೇಶಿಸಬೇಕು.

ಚೌಕಾಕಾರವಾಗಿರುವ ಎರಡು ಗರ್ಭಗೃಹದಲ್ಲಿ ಲಿಂಗ ಮತ್ತು ಚೌಡೇಶ್ವರಿಯನ್ನು ಪ್ರತಿಷ್ಠಾಪಿಸಲಾಗಿದೆ. ಲಿಂಗವು ಪ್ರಾಚೀನ ಕಾಲದ್ದಾಗಿದೆ. ಇದರ ಪಾಣಿವಟ್ಟದ ಜಲಹರಿವು ಎಡಕ್ಕಿದೆ. ಇನ್ನೊಂದು ಗರ್ಭಗೃಹದಲ್ಲಿರುವ ಚೌಡೇಶ್ವರಿ ಮೂರ್ತಿಶಿಲ್ಪವು ಸುಮಾರು ಎರಡೂವರೆ ಅಡಿ ಎತ್ತರವಾಗಿದೆ. ಈ ಮೂರ್ತಿಶಿಲ್ಪವು ಕತ್ತಿ, ಡಮರು, ತ್ರಿಶೂಲ ಮತ್ತು ಅಭಯಮುದ್ರೆಯನ್ನು ಹೊಂದಿದೆ. ಎರಡೂ ಗರ್ಭಗೃಹದಲ್ಲಿ ಒಂದೇ ರೀತಿಯ ಭುವನೇಶ್ವರ ರಚನೆಗಳಿವೆ. ಇವು ವೃತ್ತಾಕಾರ ರಚನೆಯನ್ನು ಹೊಂದಿವೆ. ಗರ್ಭಗೃಹದ ಬಾಗಿಲವಾಡವು

ದ್ವಿಶಾಖೆಗಳಿಂದ ಕೂಡಿದೆ. ಗರ್ಭಗೃಹದ ಮುಂಭಾಗದಲ್ಲಿ ಆಯತಾಕಾರದ ತೆರೆದ ಮಂಟಪವಿದೆ. ಇದರಲ್ಲಿ ಸರಳವಾದ ಎಂಟು ಸ್ವತಂತ್ರಗಂಭಗಳನ್ನು ನಿಲ್ಲಿಸಲಾಗಿದೆ. ಇವು ಪೀಠ, ಚೌಕ, ವೃತ್ತ, ಪುಷ್ಪಬೋದಿಗೆಯನ್ನು ಹೊಂದಿವೆ. ಮಂಟಪದಲ್ಲಿ ಕೂರ್ಮವನ್ನು ರಚಿಸಲಾಗಿದೆ.

ದೇವಾಲಯವು ಸರಳವಾದ ಅಧಿಷ್ಠಾನ ಮತ್ತು ಭಿತ್ತಿಯ ಭಾಗವನ್ನು ಹೊಂದಿದೆ. ದೇವಾಲಯದ ಮುಂಭಾಗದಲ್ಲಿ ಕಪೋತವಿದ್ದು ಅದು ಒಂದು ಅಡಿಯಷ್ಟು ಮುಂಚಾಚಿಕೊಂಡಿದೆ. ಆಧುನಿಕವಾದ ಶಿಖರ ಭಾಗವಿದೆ. ದೇವಾಲಯದ ಎಡಬಲಭಾಗದಲ್ಲಿ ಮೂರು ಅಡಿ ಎತ್ತರದ ಎರಡು ಕಟ್ಟೆಗಳಿವೆ. ಮುಂಭಾಗದ ವೇದಿಕೆಯ ಮೇಲೆ ದೀಪಸ್ತಂಭವಿದೆ.

**೫. ವೀರಭದ್ರೇಶ್ವರ ದೇವಾಲಯ**

ಈ ದೇವಾಲಯವು ಬಳಗಾನೂರು ಗ್ರಾಮದಲ್ಲಿ ಆದಯ್ಯ-ಅಮರಯ್ಯ ದೇವಾಲಯದ ಎಡಭಾಗದಲ್ಲಿದೆ. ದೇವಾಲಯವು ಪ್ರಾಚೀನ ಕಾಲದ್ದಾಗಿದ್ದು ಇತ್ತೀಚಿಗೆ ಜೀರ್ಣೋದ್ಧಾರ ಮಾಡಲಾಗಿದೆ. ಇದು ಉತ್ತರಾಭಿಮುಖ ವಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದ ಹಕ್ಕುಪತ್ರ ದೊರೆತಿರುವ ಪ್ರಕಾರ ಇದರ ಕಾಲವನ್ನು ಕ್ರಿ.ಶ. ೧೪೫೮ ಎಂದು ಹೇಳಬಹುದು. ಪ್ರಾಚೀನ ದೇವಾಲಯದ ಅವಶೇಷಗಳು ಮುಂಭಾಗದಲ್ಲಿದ್ದು ಇವು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿವೆ. ಕಲ್ಯಾಣ ಚಾಲುಕ್ಯ ಶೈಲಿಯ ಕಂಭಗಳನ್ನು ಪ್ರಸ್ತುತ ಮೆಟ್ಟಿಲುಗಳ ಎರಡು ಬದಿಯಲ್ಲಿ ನಿಲ್ಲಿಸಲಾಗಿದೆ. ಇವು ಚೌಕ, ವೃತ್ತ, ಅಷ್ಟಕೋನ, ಕುಂಭ, ವೃತ್ತ ಭಾಗವನ್ನು ಹೊಂದಿವೆ.

**೬. ಬಾವಿ ಬಸವೇಶ್ವರ**

ಈ ದೇವಾಲಯವು ಗೌಡನಬಾವಿ ಗ್ರಾಮದ ಊರ ಅಗಸೆ ಒಳಗೆ ಇದೆ. ಇದು ಪೂರ್ವಾಭಿಮುಖ ವಾಗಿದ್ದು, ಮಧ್ಯಮ ಸ್ಥಿತಿಯಲ್ಲಿದೆ. ಇದು ವಿಜಯನಗರೋತ್ತರ ಶೈಲಿಯನ್ನು ಹೊಂದಿದೆ. ಇದರ ಕಾಲವನ್ನು ಕ್ರಿ.ಶ. ೧೬-೧೭ನೇ ಶತಮಾನವೆಂದು ಹೇಳಬಹುದು. ದೇವಾಲಯದ ತಲವಿನ್ಯಾಸವು ಗರ್ಭಗೃಹ, ನವರಂಗ ಅಥವಾ ಮಂಟಪವನ್ನು ಹೊಂದಿದ್ದು, ನವರಂಗದ ಮುಂಭಾಗವು ತೆರೆದುಕೊಂಡಿದೆ.

ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಮಲಗಿರುವ ನಂದಿ ಶಿಲ್ಪವಿದೆ. ಇದು ಸುಮಾರು ಒಂದು ಅಡಿ ಎತ್ತರವಿದೆ. ನಂದಿಯ ಪಕ್ಕದಲ್ಲಿ ಶಿವಲಿಂಗಗಳಿವೆ. ಗರ್ಭಗೃಹದಲ್ಲಿ ವೃತ್ತಾಕಾರವಾದ ಭುವನೇಶ್ವರವಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದ್ದು ಲಲಾಟಬಿಂಬದಲ್ಲಿ ಪದ್ಮಾಸನದಲ್ಲಿರುವ ಗಣೇಶನ ಉಬ್ಬುಶಿಲ್ಪವಿದೆ. ಶಿಲ್ಪದ ಮೇಲ್ಭಾಗದಲ್ಲಿ ಚಲಿಸುತ್ತಿರುವ ಎಂಟು ಆನೆಗಳ ಉಬ್ಬುಶಿಲ್ಪಗಳಿವೆ. ಎಲ್ಲಾ ಆನೆಗಳು ತಮ್ಮ ಬಲಗಾಲನ್ನು ಎತ್ತಿ ಇಡುವಂತೆ ತೋರಿಸಲಾಗಿದೆ. ಇನ್ನುಳಿದಂತೆ ಬಾಗಿಲವಾಡದ ಶಾಖೆಗಳು ಸರಳವಾಗಿವೆ. ಗರ್ಭಗೃಹದ ಮುಂಭಾಗದಲ್ಲಿ ನವರಂಗ ಅಥವಾ ಮಂಟಪವಿದೆ. ಮಂಟಪದಲ್ಲಿ ಆರು ಸ್ವತಂತ್ರಗಂಭಗಳಿವೆ. ಈ ಕಂಭಗಳು ಒಂದಕ್ಕೊಂದು ಭಿನ್ನವಾಗಿರುವುದನ್ನು ಗಮನಿಸಬಹುದು. ಇಲ್ಲಿನ ಎರಡು ಕಂಭಗಳು(ಮುಂಭಾಗ) ಪೀಠ, ಚೌಕ, ನಾಲ್ಕುಕೋನ, ವೃತ್ತ, ಅಷ್ಟಕೋನ, ಕುಂಭ, ಘಟ, ಪುಷ್ಪಬೋದಿಗೆಯನ್ನು ಹೊಂದಿವೆ. ಹಿಂಭಾಗದ ಒಂದು ಕಂಭವು(ಬಲ) ಉತ್ತಮವಾದ ಕೆತ್ತನೆಯಿಂದ ಕೂಡಿದೆ. ಇದು ಪೀಠ, ಚೌಕ, ಅಷ್ಟಕೋನ(ಪಟ್ಟಿಕೆ), ಸಣ್ಣ-ದೊಡ್ಡ ವೃತ್ತ, ಘಂಟಾ, ವೃತ್ತ, ಕುಂಭ, ಪುಷ್ಪಬೋದಿಗೆಯನ್ನು

ಹೊಂದಿದೆ. ಇದರ ಪಕ್ಕದ ಇನ್ನೊಂದು ಕಂಬವು ಪೀಠ, ನಾಲ್ಕುಕೋನ, ವೃತ್ತ, ಅಷ್ಟಕೋನ, ಚೌಕ, ಪುಷ್ಪಬೋದಿಗೆಯನ್ನು ಹೊಂದಿದೆ. ನವರಂಗದ ಒಳಭಿತ್ತಿಯಲ್ಲಿ ವೀರನ ಶಿಲ್ಪ, ಕಮಲ, ಆಂಜನೇಯನನ್ನು ಕೊರೆಯಲಾಗಿದೆ. ಕಂಭ ಮತ್ತು ಒಳ ಭಿತ್ತಿಯ ಭಾಗಕ್ಕೆ ಹೆಚ್ಚಿನ ರೀತಿಯಲ್ಲಿ ಬಣ್ಣವನ್ನು ಬಳಿಯಲಾಗಿದೆ. ಇವು ಹೆಚ್ಚಿನದಾಗಿ ಆಧುನೀಕರಣಗೊಳಿಸುತ್ತ ಬರಲಾಗಿದ್ದರಿಂದ ಕೊರೆದಿರುವ ಚಿತ್ರಗಳು ಅಸ್ಪಷ್ಟವಾಗಿ ಕಾಣುತ್ತವೆ. ನವರಂಗ ಭಾಗದ ಕಂಭಗಳು ಕಲ್ಯಾಣ ಚಾಲುಕ್ಯ ಶೈಲಿಯ ಅವನತಿಯ ಹಂತವುಗಳಾಗಿವೆ. ನವರಂಗ ಭಾಗವು ಎತ್ತರದಲ್ಲಿದ್ದು, ಮೂರು ಮೆಟ್ಟಿಲುಗಳ ಮೂಲಕ ಪ್ರವೇಶಿಸಬೇಕು. ದೇವಾಲಯ ಮುಂಭಾಗದಲ್ಲಿ ಸುಮಾರು ೨೦ ಅಡಿ ಎತ್ತರವುಳ್ಳ ಗರುಡಸ್ತಂಭವಿದೆ. ದೇವಾಲಯದ ಬಲಬದಿಯಲ್ಲಿ ನಾಗಶಿಲ್ಪಗಳಿವೆ.

ದೇವಾಲಯದ ಹೊರಭಿತ್ತಿಯಲ್ಲಿ ಆನೆ, ಸಿಂಹ, ಈಶ್ವರನ ಉಬ್ಬುಶಿಲ್ಪಗಳನ್ನು ಅಲ್ಲಲ್ಲಿ ಕೆತ್ತಲಾಗಿದೆ. ಅಧಿಷ್ಠಾನ ಭಾಗ ಕಾಣಿಸುವುದಿಲ್ಲ. ಎತ್ತರದ ಕಟ್ಟೆಯ ಮೇಲೆ ದೇವಾಲಯವನ್ನು ನಿರ್ಮಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿನ ಕಪೋತ ಭಾಗವು ಒಂದು ಅಡಿಯಷ್ಟು ಮುಂಚಾಚಿಕೊಂಡಿದೆ. ದೇವಾಲಯಕ್ಕೆ ಆಧುನಿಕ ಶಿಖರ ಭಾಗವಿದೆ. ಇದರಲ್ಲಿ ತಲಗಳು, ಶಿಖರ ಮತ್ತು ಸ್ತೂಪಿ ಭಾಗಗಳಿವೆ.

**೭. ವೀರಭದ್ರೇಶ್ವರ ದೇವಾಲಯ**

ದಿದ್ದಿಗಿ ಗ್ರಾಮದಲ್ಲಿ ಊರ ಮಧ್ಯವಿರುವ ಹನುಮಂತ ದೇವಾಲಯದ ಮುಂಭಾಗದಲ್ಲಿ ಈ ದೇವಾಲಯವಿದೆ. ದೇವಾಲಯವು ಉತ್ತರಾಭಿಮುಖವಾಗಿದೆ. ಗರ್ಭಗೃಹದಲ್ಲಿನ ಮೂರ್ತಿಶಿಲ್ಪ ಮತ್ತು ಬಾಗಿಲವಾಡಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿವೆ. ಇಂದು ಈ ದೇವಾಲಯವನ್ನು ಸಂಪೂರ್ಣವಾಗಿ ಆಧುನೀಕರಿಸಲಾಗಿದೆ. ಚೌಕಾಕಾರವಾಗಿರುವ ಗರ್ಭಗೃಹದಲ್ಲಿನ ಲಿಂಗ, ವೀರಭದ್ರನ ಮೂರ್ತಿಶಿಲ್ಪಗಳು ಪ್ರಾಚೀನ ಕಾಲದವು. ಗರ್ಭಗೃಹದಲ್ಲಿರುವ ಸಿಂಹಪೀಠದ ಮೇಲ್ಭಾಗದಲ್ಲಿ ಎರಡು ಅಡಿ ಎತ್ತರದ ವೀರಭದ್ರನ ಮೂರ್ತಿಶಿಲ್ಪವಿದೆ. ವೀರಭದ್ರನ ಕೈಯಲ್ಲಿ ಗದೆ, ಬಿಲ್ಲು, ಬಾಣಗಳಿವೆ. ಈ ಮೂರ್ತಿಶಿಲ್ಪದ ಹಿಂಭಾಗದಲ್ಲಿ ಶಿವಲಿಂಗವಿದೆ. ಇದು ಸುಮಾರು ಮೂರು ಅಡಿ ಎತ್ತರ ಇದೆ. ಇದರ ಪಕ್ಕದಲ್ಲಿ ಭಗ್ನಗೊಂಡಿರುವ ನಂದಿ ಶಿಲ್ಪವಿದೆ. ಇವು ಪ್ರಾಚೀನ ಕಾಲದ ಮೂರ್ತಿಶಿಲ್ಪಗಳಾಗಿವೆ. ಗರ್ಭಗೃಹದ ಬಾಗಿಲವಾಡವು ಪದ್ಮ, ಲತಾಬಳ್ಳಿ, ಕಂಭಶಾಖೆಯನ್ನೊಳಗೊಂಡು ತ್ರಿಶಾಖೆಯಿಂದ ಕೂಡಿದೆ. ಮೂರನೇ ಶಾಖೆಯಲ್ಲಿರುವ ಕಂಭದ ರಚನೆಯು ಕಲಾತ್ಮಕತೆಯಿಂದ ಕೂಡಿದೆ. ಇದು ಪೀಠ, ಚೌಕ, ವೃತ್ತ, ಅಷ್ಟಕೋನ, ಚೌಕ, ಘಂಟಾ, ಫಲಕ, ವೃತ್ತದಿಂದ ಕೂಡಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ದೇವಾಲಯಕ್ಕೆ ಆಧುನಿಕ ಶಿಖರಭಾಗವಿದ್ದು, ಭಿತ್ತಿ, ಅಧಿಷ್ಠಾನ ಭಾಗವು ಸರಳವಾಗಿದೆ.

**೮. ರಾಮಲಿಂಗ ದೇವಾಲಯ**

ಅಪೂರ್ಣಗೊಂಡಿರುವ ಈ ದೇವಾಲಯವು ದಿದ್ದಿಗಿ ಗ್ರಾಮದ ಊರ ಹೊರಗೆ ಇದೆ. ಕಲ್ಯಾಣ ಚಾಲುಕ್ಯ ಶೈಲಿಯಲ್ಲಿರುವ ದೇವಾಲಯವು ಉತ್ತರಾಭಿಮುಖವಾಗಿದೆ. ಇದರ ಸ್ಥಿತಿಯು ಕನಿಷ್ಠಮಟ್ಟದ್ದಾಗಿದ್ದು ಕ್ರಿ.ಶ. ೧೬-೧೭ನೇ ಕಾಲದ್ದೆಂದು ಹೇಳಬಹುದು. ಕೇವಲ ಏಕಕೋಣೆಯ ಗರ್ಭಗೃಹವನ್ನು ಹೊಂದಿರುವ ಈ

ದೇವಾಲಯವು ನಾಲ್ಕು ಅರ್ಧಗಂಭಗಳಿಂದ ಕೂಡಿದೆ. ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಅಥವಾ ಕೋಣೆಯಲ್ಲಿ ಮೂರು ಅಡಿ ಎತ್ತರವುಳ್ಳ ಶಿವಲಿಂಗವಿದೆ. ಇದರ ಪಾಣಿವಟ್ಟದ ಜಲಹರಿವು ಬಲಭಾಗಕ್ಕಿದೆ. ಇದರ ಮೇಲೆ ಒಂದು ಅಡಿ ಎತ್ತರದ ಲಿಂಗವಿದೆ. ಶಿವಲಿಂಗದ ಹಿಂಭಾಗದಲ್ಲಿ ಪದ್ಮಾಸನದಲ್ಲಿರುವ ಸುಮಾರು ಎರಡು ಅಡಿ ಎತ್ತರದ ಗಣೇಶನ ಶಿಲ್ಪವಿದೆ. ಇದು ಶಂಖ, ಚಕ್ರ, ಅಭಯಮುದ್ರೆಯನ್ನು ಹೊಂದಿದೆ. ಗರ್ಭಗೃಹದ ಪೂರ್ವ ಮತ್ತು ದಕ್ಷಿಣ ಭಾಗದ ಒಳಭಿತ್ತಿಯು ಮುಂಚಾಚಿಕೊಂಡಿದೆ. ಇದನ್ನು ಪೂಜಾ ಸಾಮಗ್ರಿಗಳನ್ನು ಇಡಲು ಬಳಸುತ್ತಿದ್ದರು. ಗರ್ಭಗೃಹದ ಮೇಲ್ಛಾವಣಿಯಲ್ಲಿ ಅಷ್ಟಕೋನಾಕಾರವಾದ ರಚನೆಯಿದ್ದು, ಇದರ ಮಧ್ಯದಲ್ಲಿ ವೃತ್ತಾಕಾರವಾದ ಭುವನೇಶ್ವರವಿದೆ. ವೃತ್ತಾಕಾರ ರಚನೆಯ ಮಧ್ಯದಲ್ಲಿ ಉಬ್ಬಿದ ರಚನೆಯಿದೆ.

ಗರ್ಭಗೃಹದ ಬಾಗಿಲವಾಡವು ಅತ್ಯಂತ ಸರಳವಾಗಿದೆ. ಕೇವಲ ಕಲ್ಲುಕಂಭಗಳನ್ನು ಮಾತ್ರ ನಿಲ್ಲಿಸಲಾಗಿದೆ. ದೇವಾಲಯಕ್ಕೆ ಸರಳ ಅಧಿಷ್ಠಾನವಿದೆ. ಭಿತ್ತಿಯನ್ನು ಮೂರು ಒರಟು ಕಲ್ಲುಗಳಿಂದ ಕಟ್ಟಲಾಗಿದೆ. ಪ್ರಸ್ತರ ಮೇಲ್ಭಾಗದಲ್ಲಿ ತಲಗಳನ್ನು ನಿರ್ಮಿಸಲಾಗಿದೆ. ಅವು ಒರಟಾಗಿದ್ದು ಶಿಥಿಲಾವಸ್ಥೆಯಲ್ಲಿವೆ.

**೯. ಸೋಮನಾಥೇಶ್ವರ ದೇವಾಲಯ**

ಸೋಮನಾಥೇಶ್ವರ ದೇವಾಲಯವು ದಿದ್ದಿಗಿ ಗ್ರಾಮದ ಉತ್ತರ ದಿಕ್ಕಿನ ಊರ ಹೊರಗೆ ಇದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಕನಿಷ್ಠ ಸ್ಥಿತಿಯಲ್ಲಿದೆ. ಇದು ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೊಂದಿದೆ. ಇದರ ಕಾಲವನ್ನು ಕ್ರಿ.ಶ. ೧೫-೧೬ನೇ ಶತಮಾನ ಎಂದು ನಿರ್ಧರಿಸಬಹುದು. ಎರಡು ಅಡಿ ಎತ್ತರದ ಕಟ್ಟೆಯ ಮೇಲೆ ನಿರ್ಮಾಣವಾಗಿರುವ ದೇವಾಲಯವು ಸದ್ಯ ಕಟ್ಟೆಯ ಮೇಲಿಂದ ನಾಲ್ಕು ಅಡಿ ಎತ್ತರದ ಗೋಡೆಯ ಭಾಗ ಮಾತ್ರ ಉಳಿದುಕೊಂಡಿದೆ. ಬಹುತೇಕವಾಗಿ ನಾಶವಾಗಿರುವ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಮಂಟಪಗಳಿವೆ. ಚೌಕಾಕಾರ ಗರ್ಭಗೃಹದಲ್ಲಿ ವೀರಗಲ್ಲುಗಳಿವೆ ಹಾಗೂ ಶಿವ, ಪಾರ್ವತಿಯರ ಮೂರ್ತಿಶಿಲ್ಪಗಳಿವೆ. ಈ ಶಿಲ್ಪಗಳೆಲ್ಲವೂ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿವೆ. ಶಿವನ ಒಂದು ಕೈ ಭಗ್ನಗೊಂಡಿದೆ. ಉಳಿದ ಕೈಗಳಲ್ಲಿ ಡಮರು, ಪಾನಪಾತ್ರೆಗಳಿವೆ. ಪಾರ್ವತಿಯು ಡಮರು, ಪಾಶ, ಖಡ್ಗ, ಅಭಯಮುದ್ರೆಯನ್ನು ಹೊಂದಿದ್ದಾಳೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದೆ. ಪ್ರಸ್ತುತ ಬಾಗಿಲವಾಡದ ತೋಲೆಗಳು ಮಾತ್ರ ಉಳಿದುಬಂದಿವೆ. ಬಾಗಿಲಿನ ಮೇಲ್ಭಾಗದ ರಚನೆಯು ಕಾಣಿಸುವುದಿಲ್ಲ. ಮಂಪಟವು ವಿಸ್ತಾರವಾಗಿದ್ದು, ಯಾವುದೇ ರೀತಿಯ ಕಂಭಗಳು ಇಲ್ಲಿ ಕಾಣುವುದಿಲ್ಲ.

ಪ್ರಾಚೀನ ದೇವಾಲಯದ ಬಿದ್ದುಹೋದ ಅವಶೇಷಗಳನ್ನು ತೆಗೆದುಕೊಂಡು ಭಿತ್ತಿಯ ಭಾಗದಲ್ಲಿರಿಸಿ ಕಟ್ಟಲಾಗಿದೆ. ಇವುಗಳಿಂದ ಈ ನಿರ್ಮಿತಿಯು ನಂತರದ ರಚನೆಯೆಂದು ಪರಿಗಣಿಸಬಹುದು. ದೇವಾಲಯಕ್ಕೆ ಸರಿಯಾದ ಅಧಿಷ್ಠಾನ ಭಾಗವಿಲ್ಲ. ಭಿತ್ತಿಯು ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿದೆ.

**೧೦. ಈಶ್ವರ ದೇವಾಲಯ**

ದಿದ್ದಿಗಿ ಗ್ರಾಮದ ಉತ್ತರ ದಿಕ್ಕಿನಲ್ಲಿರುವ ಈ ದೇವಾಲಯವು ಹಳ್ಳದ ದಂಡೆಯ ಮೇಲಿದೆ. ದೇವಾಲಯ ಪೂರ್ವಾಭಿಮುಖವಾಗಿದ್ದು ಅತ್ಯಂತ ಶಿಥಿಲಾವಸ್ಥೆಯಲ್ಲಿದೆ. ಪ್ರಸ್ತುತ ದೇವಾಲಯದ ತಲವಿನ್ಯಾಸದಲ್ಲಿ

ಗರ್ಭಗೃಹ, ಅಂತರಾಳ ಭಾಗ ಕಂಡುಬರುತ್ತದೆ. ವಾಸ್ತುಶೈಲಿ, ಮೂರ್ತಿಶಿಲ್ಪಗಳು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿವೆ. ಇದರ ಕಾಲಮಾನವನ್ನು ಕ್ರಿ.ಶ. ೧೫-೧೬ನೇ ಶತಮಾನವೆಂದು ಹೇಳಬಹುದು.

ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಶಿವಲಿಂಗವಿದೆ. ಕೇವಲ ಮೇಲ್ಭಾಗದ ಒಂದು ಅಡಿಯ ಲಿಂಗ ಮಾತ್ರ ಕಾಣಿಸುತ್ತಿದ್ದು, ಉಳಿದ ಭಾಗ ಮಣ್ಣಿನಲ್ಲಿ ಹೂತುಹೋಗಿದೆ. ಅಸ್ಪಷ್ಟವಾಗಿ ಪೂರ್ಣ ಪ್ರಮಾಣವಲ್ಲದ ಪಾಣಿವಟ್ಟ ಕಾಣಿಸುತ್ತದೆ. ಪಕ್ಕದಲ್ಲಿರುವ ಹಳ್ಳದ ಪ್ರವಾಹದಿಂದ ಇದು ಮುಚ್ಚಿಹೋಗಿರುವುದಂತು ಸ್ಪಷ್ಟವಾಗಿದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ವೃತ್ತಾಕಾರವಾದ ಭುವನೇಶ್ವರವಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದೆ. ಬಾಗಿಲವಾಡವು ಮೂರು ಶಾಖೆಗಳನ್ನು ಹೊಂದಿದೆಯಾದರೂ ಯಾವುದೇ ಅಲಂಕರಣೆಗಳು ಕಂಡುಬರುವುದಿಲ್ಲ. ಲಲಾಟಬಿಂಬದಲ್ಲಿ ಯಾವುದೇ ಉಬ್ಬುಶಿಲ್ಪಗಳಿಲ್ಲ. ಅಂತರಾಳ ಭಾಗದಲ್ಲಿ ಗರ್ಭಗೃಹದಲ್ಲಿನ ಲಿಂಗಕ್ಕೆ ಎದುರಾಗಿ ಸುಮಾರು ಒಂದು ಅಡಿ ಎತ್ತರವಾದ ನಂದಿಶಿಲ್ಪವನ್ನು ಪ್ರತಿಷ್ಠಾಪಿಸ ಲಾಗಿದೆ. ಗರ್ಭಗೃಹ ಮತ್ತು ಅಂತರಾಳ ಭಾಗವು ನಾಲ್ಕು ಅರ್ಧಗಂಭಗಳಿಂದ ಕೂಡಿದೆ. ಅಂತರಾಳದಲ್ಲಿದ್ದಂತಹ ಬಾಗಿಲವಾಡವು ನಾಶವಾಗಿದೆ. ದೇವಾಲಯದ ಮುಂಭಾಗದಲ್ಲಿ ಲಲಾಟಬಿಂಬದ ಗಜಲಕ್ಷ್ಮಿಯ ಚಿತ್ರಣ ಬಿದ್ದಿದೆ. ದ್ವಾರದ ಅಥವಾ ಬಾಗಿಲಿನ ಇಕ್ಕೆಲಗಳಲ್ಲಿ ಜಾಲಂದ್ರ ಉಳಿದುಬಂದಿದೆ. ಜಾಲಂದ್ರವು ಪದ್ಮದಳದ ಆಕಾರವನ್ನು ಹೊಂದಿದೆ. ಪದ್ಮದಳದ ಬದಿಯಲ್ಲಿ ಬೆಳಕು ಹಾದುಹೋಗುವಂತೆ ಅನುಕೂಲಕರ ರೀತಿಯಲ್ಲಿ ಕಿಂಡಿಯನ್ನು ಬಿಡಲಾಗಿದೆ. ಅರ್ಧಗಂಭದ ಕಲ್ಲಿನಲ್ಲಿಯೇ ಜಾಲಂದ್ರವನ್ನು ನಿರ್ಮಿಸಿದಂತೆ ತೋರುತ್ತದೆ. ಅರ್ಧಗಂಭವು ಪೀಠ, ಅಷ್ಟಕೋನ, ಚೌಕ ಭಾಗವನ್ನು ಹೊಂದಿದೆ. ಕೆಳಭಾಗದಲ್ಲಿ ಕುಂಭ ರಚನೆಯಿದೆ. ದೇವಾಲಯದ ಕಟ್ಟಡವು ಮುಂದುವರಿದಿದ್ದು ಅದು ಇಂದು ಇಲ್ಲವಾಗಿದೆ. ಅಂತರಾಳ ಬಾಗಿಲವಾಡದ ಕೆಳಭಾಗದ ಕಲ್ಲುತುಂಡುಗಳು ಮುಂಚಾಚಿಕೊಂಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

ದೇವಾಲಯಕ್ಕೆ ಅಧಿಷ್ಠಾನ ಭಾಗವಿದೆ. ಆದರೆ ಅಧಿಷ್ಠಾನದಲ್ಲಿ ಯಾವುದೇ ರಚನೆಗಳು ಕಾಣಿಸುವುದಿಲ್ಲ. ಭಿತ್ತಿಯ ಭಾಗವು ಒರಟುಕಲ್ಲುಗಳಿಂದ ಕೂಡಿದೆ. ಪ್ರಸ್ತರದ ಮೇಲ್ಭಾಗದಲ್ಲಿ ಒರಟಾದ ಕಲ್ಲುಗಳಿಂದ ಕೂಡಿದ ಅಪೂರ್ಣ ಶಿಖರ ಭಾಗವಿದೆ.

## ವೈಷ್ಣವ ದೇವಾಲಯಗಳು

ಬಳಗಾನೂರು ಪರಿಸರದಲ್ಲಿ ವೈಷ್ಣವ ಧರ್ಮದ ಪ್ರಾಚೀನತೆಯನ್ನು ಗುರುತಿಸುವುದು ಕಷ್ಟಸಾಧ್ಯವಾದರೂ ಕ್ರಿ.ಶ. ೧೧೭೫-೧೧೯೧ರ ಸಮಯದಲ್ಲಿ ವೈಷ್ಣವ ಧರ್ಮ ಪ್ರಬಲಗೊಂಡಿರುವುದು ಅಲ್ಲಿನ ಶಾಸನ ಮತ್ತು ಸ್ಮಾರಕ ಅವಶೇಷಗಳಿಂದ ತಿಳಿಯಬಹುದಾಗಿದೆ. ಕ್ರಿ.ಶ. ೧೦-೧೧ನೇ ಶತಮಾನದಲ್ಲಿ ವೈಷ್ಣವ ದೇವಾಲಯಗಳು ಬಳಗಾನೂರು ಪರಿಸರದಲ್ಲಿ ನಿರ್ಮಾಣಗೊಂಡಿವೆ.

### ೧. ಲಕ್ಷ್ಮೀನಾರಾಯಣ ದೇವಾಲಯ

ಉತ್ತಮವಾದ ವಾಸ್ತುಶೈಲಿ, ವಿಶಿಷ್ಟ ತಲವಿನ್ಯಾಸ ಮತ್ತು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಈ ದೇವಾಲಯವು ಬಳಗಾನೂರು ಗ್ರಾಮದ ಮಧ್ಯಭಾಗದಲ್ಲಿದೆ. ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಉತ್ತಮ ಸ್ಥಿತಿಯಲ್ಲಿದೆ. ಕಲ್ಯಾಣ ಚಾಲುಕ್ಯ ವಾಸ್ತುಶೈಲಿಯನ್ನು ಹೊಂದಿರುವ ಈ ದೇವಾಲಯದ ಕಾಲಮಾನ

ಕ್ರಿ.ಶ. ೧೧೭೫ ಎಂದು ಹೇಳಬಹುದು. ಇದು ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಸಂರಕ್ಷಣೆಗೆ ಒಳಪಟ್ಟಿದೆ.[೨೧] ಹಿರಿಯ ಬಳಗಾನೂರಿನ ಅಗ್ರಹಾರದಲ್ಲಿ ಸಬ್ಬದೇವಸೆಟ್ಟಿ, ಅವನ ತಮ್ಮ ಮಹೇಶ್ವರ, ವಿರೂಪಾಕ್ಷ ಶೆಟ್ಟಿಯವರು ಲಕ್ಷ್ಮೀನಾರಾಯಣ ದೇವಾಲಯವನ್ನು ಕಟ್ಟಿಸಿದರೆಂದು ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಚಾಲುಕ್ಯ ವಂಶದ ಅರಸ ಸೋಮೇಶ್ವರನು ಆಳುತ್ತಿದ್ದಾಗ ಅವನ ಸಾಮಂತನಾದ ಹೊಲ್ಲರಸನು ಇಲ್ಲಿದ್ದನೆಂದು ಹಾಗೂ ಈತನು ಅನೇಕರ ಸಮ್ಮುಖದಲ್ಲಿ ಈ ದೇವಾಲಯಕ್ಕೆ ದಾನ ನೀಡುತ್ತಾನೆಂದು ಅಲ್ಲಿನ ಶಾಸನ ತಿಳಿಸುತ್ತದೆ. ಹೀಗೆ ಅನೇಕರು ದೇವಾಲಯಕ್ಕೆ ದಾನ ನೀಡಿದಂತಹ ವಿವರ ಇಲ್ಲಿನ ಶಾಸನಗಳಲ್ಲಿದೆ.

ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಆಯತಾಕಾರ ಅರ್ಧಮಂಟಪ, ನವರಂಗ ಅಥವಾ ಸಭಾಮಂಟಪ ಮತ್ತು ದಕ್ಷಿಣ, ಪಶ್ಚಿಮಾಭಿಮುಖವಾಗಿ ಎರಡು ಪ್ರವೇಶ ಮಂಟಪಗಳನ್ನು ಒಳಗೊಂಡಿದೆ. ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ. ಆದರೂ ಕೆಲವು ವಾಸ್ತು ಭಾಗಗಳಾದ ಕಂಬ, ಬಾಗಿಲವಾಡ, ಜಾಲಂದ್ರಗಳನ್ನು ಸಿಸ್ಟ್‌ಶಿಲೆ(Soap Stone)ಯಿಂದ ನಿರ್ಮಿಸಲಾಗಿದೆ.

ದೇವಾಲಯದ ಪ್ರಧಾನ ಅಂಗವಾಗಿರುವ ಚೌಕಾಕಾರ ಗರ್ಭಗೃಹವು ೭x೭ ಅಡಿ, ಉದ್ದxಅಗಲ ವಿಸ್ತೀರ್ಣವನ್ನು ಹೊಂದಿದೆ. ಗರ್ಭಗೃಹದಲ್ಲಿರುವ ಆಯತಾಕಾರ ಪೀಠದ ಮೇಲೆ ಲಕ್ಷ್ಮೀನಾರಾಯಣ ಮೂರ್ತಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಮೂರ್ತಿಶಿಲ್ಪವಿರುವ ಪೀಠ ಭಾಗವು ಸುಮಾರು ಎರಡು ಅಡಿಯಷ್ಟು ಎತ್ತರವಾಗಿದೆ. ಚೌಕಾಕಾರವಾಗಿರುವ ಪೀಠ ಅಥವಾ ಪಾಣಿವಟ್ಟದ ಜಲಹರಿವು ಎಡಭಾಗಕ್ಕಿದೆ. ಇದರ ಮೇಲೆ ಲಕ್ಷ್ಮೀನಾರಾಯಣ ಮೂರ್ತಿಯು ಎರಡು ಅಡಿಯಷ್ಟು ಎತ್ತರವಾಗಿದೆ. ಪೀಠ ಭಾಗದ ಮೇಲಿರುವ ಲಕ್ಷ್ಮೀನಾರಾಯಣಮೂರ್ತಿಯು ಆಸೀನ ಭಂಗಿಯಲ್ಲಿಯಲ್ಲಿದೆ. ನಾರಾಯಣ ಶಂಖ, ಚಕ್ರವನ್ನು ಮೇಲಿನ ಎರಡು ಕೈಗಳಲ್ಲಿ ಹಿಡಿದಿರುವನು. ಒಂದು ಕೈ ತನ್ನ ತೊಡೆಯ ಮೇಲಿಟ್ಟುಕೊಂಡಿದ್ದು, ಇನ್ನೊಂದು ಕೈಯಲ್ಲಿ ಎಡ ತೊಡೆಯ ಮೇಲೆ ಕುಳಿತಿರುವ ಲಕ್ಷ್ಮಿಯನ್ನು ಹಿಡಿದಿದ್ದಾನೆ. ಗರ್ಭಗೃಹದಲ್ಲಿರುವ ಈ ಮೂರ್ತಿಯು ಅತ್ಯಂತ ಸರಳ ಸುಂದರವಾಗಿದ್ದು, ದೇವಾಲಯದ ಆಕರ್ಷಣೆಯ ಕೇಂದ್ರವಾಗಿದೆ. ಗರ್ಭಗೃಹವು ನಾಲ್ಕು ಅರ್ಧಗಂಭಗಳಿಂದ ಕೂಡಿದೆ. ಗರ್ಭಗೃಹದ ಪೂರ್ವಭಿತ್ತಿಯಲ್ಲಿ ಕಲ್ಲಿನ ಮುಂಚಾಚು ಇದೆ. ಇದು ಪೂಜಾ ಸಾಮಗ್ರಿಗಳನ್ನು ಇಡಲು ಉಪಯೋಗವಾಗುತ್ತಿದೆ.

ಗರ್ಭಗೃಹದ ಬಾಗಿಲವಾಡವು ಶಾಖೆಗಳಿಂದ ಕೂಡಿದೆ. ಮೂರು ಶಾಖೆಗಳು ಸರಳವಾಗಿದ್ದು ಒಂದು ಶಾಖೆಯು ಮಾತ್ರ ಕಂಭದ ರಚನೆಯನ್ನು ಹೊಂದಿದೆ(ಮೂರನೇ ಶಾಖೆ). ದ್ವಾರಶಾಖೆಯ ಕೆಳಭಾಗದಲ್ಲಿ ಚತುರ್ಭುಜಧಾರಿ ವೈಷ್ಣವ ಮತ್ತು ವೀಣಾವಾದಕನ ಉಬ್ಬುಶಿಲ್ಪಗಳಿವೆ. ಚತುರ್ಭುಜಧಾರಿ ವಿಷ್ಣುವಿನ ಕೈಗಳಲ್ಲಿ ಗದೆ, ಚಕ್ರ, ಶಂಖಗಳಿವೆ. ಇನ್ನೊಂದು ಕೈ ಅಭಯ ಮುದ್ರೆಯಲ್ಲಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಲಲಾಟಬಿಂಬದ ಮೇಲಿನ ಶಾಖೆಯು ಅನೇಕ ಪಟ್ಟಿಕೆಗಳಿಂದ ಕೂಡಿದೆ. ಈ ಪಟ್ಟಿಕೆಗಳ ಮೇಲ್ಭಾಗದಲ್ಲಿ ಐದು ರೇಖಾನಾಗರ ಮಾದರಿಯ ಶಿಖರಗಳಿವೆ. ಶಿಖರಗಳ ನಡುವೆ ಸಿಂಹ ಮತ್ತು ಹಾರವನ್ನು ಹಿಡಿದಿರುವ ವ್ಯಕ್ತಿಯ ಉಬ್ಬುಶಿಲ್ಪಗಳಿವೆ.

ಗರ್ಭಗೃಹದ ಮುಂಭಾಗದಲ್ಲಿ ಚೌಕಾಕಾರದ ಅಂತರಾಳವಿದೆ. ಇಲ್ಲಿ ಯಾವುದೇ ರೀತಿಯ ಕೆತ್ತನೆ, ಮೂರ್ತಿಶಿಲ್ಪಗಳಿಲ್ಲ. ಇದು ನಾಲ್ಕು ಅರ್ಧಗಂಭಗಳಿಂದ ಕೂಡಿದೆ. ಅಂತರಾಳ ಮುಂಭಾಗದಲ್ಲಿ ಆಯತಾಕಾರ

ವುಳ್ಳ ಅರ್ಧಮಂಟಪವಿದೆ. ಇದು ನವರಂಗ ಭಾಗದ ಅಗಲವನ್ನೇ ಹೊಂದಿದೆ. ಈ ಅರ್ಧ ಮಂಟಪದಲ್ಲಿ ದಕ್ಷಿಣ, ಪೂರ್ವ, ಪಶ್ಚಿಮಾಭಿಮುಖವಾಗಿ ನಾಲ್ಕು ದೇವಕೋಷ್ಟಕಗಳಿವೆ. ಮಂಟಪದ ಎಡಭಾಗದಲ್ಲಿನ ಉತ್ತರ ಭಿತ್ತಿಯಲ್ಲಿನ ದೇವಕೋಷ್ಟಕದಲ್ಲಿ ಶೇಷಶಾಯಿ ವಿಷ್ಣುವಿನ ಭಗ್ನಶಿಲ್ಪವಿದೆ. ಇದರ ಪಕ್ಕದ ಪೂರ್ವಭಿತ್ತಿಯಲ್ಲಿನ ದೇವಕೋಷ್ಟಕದಲ್ಲಿ ನಾಗಶಿಲ್ಪವಿದೆ. ದೇವಕೋಷ್ಟಕಗಳು ದೇವಾಲಯದ ವಾಸ್ತುಭಾಗವನ್ನು ಹೊಂದಿವೆ. ಕೋಷ್ಟಕದ ಕಂಭಗಳು ಪೀಠ, ಚೌಕ, ವೃತ್ತ, ಅಷ್ಟಪಟ್ಟಿಕೆ, ಕುಂಭ, ಪುಷ್ಪಬೋದಿಗೆಯನ್ನು ಹೊಂದಿವೆ. ಕೋಷ್ಟಕದ ಮೇಲ್ಭಾಗದಲ್ಲಿ ಕಪೋತದ ರಚನೆಯಿದೆ.

ಅರ್ಧಮಂಟಪದ ಬಾಗಿಲವಾಡವು ಅತ್ಯಂತ ವಿಶಾಲವಾದ ಹಾಗೂ ಸೂಕ್ಷ್ಮ ಕೆತ್ತನೆಯಿಂದ ಕೂಡಿದೆ. ಈ ಬಾಗಿಲವಾಡವು ಪಂಚಶಾಖೆಗಳಿಂದ ಕೂಡಿದೆ. ಪಂಚಶಾಖೆಗಳಲ್ಲಿ ಕ್ರಮವಾಗಿ ಮೊದಲನೇ ಶಾಖೆ ವಜ್ರ ಮತ್ತು ಪದ್ಮಗಳಿಂದ ಕೂಡಿದೆ. ಎರಡನೇ ಶಾಖೆಯು ಲತಾಬಳ್ಳಿಯಿಂದ ಕೂಡಿದೆ. ಮೂರನೇ ಶಾಖೆಯು ಕಂಭ ರಚನೆಯಲ್ಲಿದೆ. ಈ ಕಂಭವು ಚೌಕ, ವೃತ್ತ, ಎಂಟು ಹದಿನಾರು ಕೋನ ದಂಡ, ಘಂಟಾ, ವೃತ್ತ, ಪುಷ್ಪಬೋದಿಗೆ ಭಾಗಗಳನ್ನು ಹೊಂದಿದೆ. ನಾಲ್ಕನೆಯ ಶಾಖೆಯಲ್ಲಿ ಸಿಂಹಗಳು ಒಂದು ಕಾಲನ್ನು ಮೇಲೆತ್ತಿರುವ ಉಬ್ಬುರಚನೆಯಿದೆ. ಪತ್ರಶಾಖೆಯನ್ನು ಕೊನೆಯ ಭಾಗದಲ್ಲಿ ನೋಡಬಹುದು. ಈ ಪಂಚಶಾಖೆಗಳು ಅರ್ಧಗಂಭದವರೆಗೂ ವಿಸ್ತರಿಸಿಕೊಂಡಿವೆ. ದ್ವಾರಶಾಖೆಯ ಕೆಳಭಾಗದಲ್ಲಿ ಚತುರ್ಭುಜಧಾರಿ ವೈಷ್ಣವ ಶಿಲ್ಪವಿದೆ(ವಿಷ್ಣುಶಿಲ್ಪ). ಇದು ಶಂಖ, ಚಕ್ರ, ಅಭಯಮುದ್ರೆ, ಗದೆಯನ್ನು ಹಿಡಿದಿದೆ. ಇದರ ಇಕ್ಕೆಲಗಳಲ್ಲಿ ಚಾಮರಧಾರಣಿಯರ ಉಬ್ಬುಶಿಲ್ಪಗಳಿವೆ. ಇವುಗಳ ಮೇಲ್ಭಾಗದಲ್ಲಿ ಬಳ್ಳಿಗಳು ಒಂದಕ್ಕೊಂದು ಬೆರೆತು ಕೊಂಡಂತಿರುವ ರಚನೆಯಿದೆ. ಲಲಾಟಬಿಂಬದಲ್ಲಿ ಲಕ್ಷ್ಮೀನಾರಾಯಣನ ಉಬ್ಬುಶಿಲ್ಪವಿದೆ. ಇಕ್ಕೆಲಗಳಲ್ಲಿ ಎರಗುತ್ತಿರುವ ಸಿಂಹ, ಲತಾಬಳ್ಳಿಯ ಅಲಂಕರಣೆಗಳಿವೆ. ಲಲಾಟಬಿಂಬದ ಮೇಲ್ಭಾಗವು ಇಳಿಮುಖವಾದ ಮೆಟ್ಟಿಲಾಕಾರ ಪಟ್ಟಿಕೆಯನ್ನು ಹೊಂದಿದೆ. ಈ ಪಟ್ಟಿಕೆಯ ಮೇಲ್ಭಾಗದಲ್ಲಿ ಉಗ್ರನರಸಿಂಹನು ಹಿರಣ್ಯಕಶ್ಯಪನನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಸಂಹರಿಸುತ್ತಿರುವ ಸುಂದರವಾದ ಕೆತ್ತನೆಯಿದೆ. ನರಸಿಂಹನ ಇಕ್ಕೆಲಗಳಲ್ಲಿ ಪ್ರಹ್ಲಾದ ಮತ್ತು ಗರುಡನ ಉಬ್ಬುಶಿಲ್ಪಗಳಿವೆ. ಇಲ್ಲಿ ರಾಮಾಯಣದ ಕಥಾಪ್ರಸಂಗ ನಿರೂಪಿಸುವ ದೃಶ್ಯಾವಳಿಗಳನ್ನು ಬಿಡಿಸಲಾಗಿದೆ. ಉಗ್ರನರಸಿಂಹನ ಇಕ್ಕೆಲಗಳಲ್ಲಿ ನಾಲ್ಕು ರೇಖಾನಾಗರ ಮಾದರಿಯ ಶಿಖರ ಭಾಗಗಳಿವೆ.

ಈ ದ್ವಾರಶಾಖೆಯ ಎಡಬಲ ಭಾಗದಲ್ಲಿ ಎರಡು ಸುಂದರವಾದ ಜಾಲಂದ್ರಗಳಿವೆ. ಜಾಲಂದ್ರ ರಚನೆಯು ಮಂಟಪದ ರಚನೆಯನ್ನು ಹೊಂದಿದೆ. ಜಾಲಂದ್ರದ ಮೇಲ್ಭಾಗದಲ್ಲಿ ಮೂರು ರೇಖಾನಾಗರ ಮಾದರಿಯ ಶಿಖರಗಳಿವೆ. ಇವುಗಳ ಮಧ್ಯದಲ್ಲಿ ಸಿಂಹಗಳು ತಮ್ಮ ಎರಡು ಕಾಲನ್ನು ಮೇಲಕ್ಕೆತ್ತಿಕೊಂಡು ಹಿಂದಿರುಗಿ ನೋಡುವಂತೆ ಕೆತ್ತಲಾಗಿದೆ. ಇನ್ನೂ ಅಡಿಪಟ್ಟಿಯಲ್ಲಿ ಆನೆಯನ್ನು ಬೆದರಿಸುತ್ತಿರುವ ಧನುಸ್ಸುಧಾರಿಯ ಚಿತ್ರಣ ವಿದೆ. ಆನೆಯ ಮೇಲೆ ಸೈನಿಕ ಕುಳಿತಿರುವುದನ್ನು ಕಾಣಬಹುದು.

ಅರ್ಧಮಂಟಪದ ಮುಂಭಾಗದಲ್ಲಿ ವಿಶಾಲವಾದ ನವರಂಗ ಅಥವಾ ಸಭಾಮಂಟಪವಿದೆ. ಈ ನವರಂಗ ಭಾಗವು ದಕ್ಷಿಣ ಮತ್ತು ಪೂರ್ವ ದಿಕ್ಕಿನ ಭಾಗಕ್ಕೆ ತೆರೆದುಕೊಂಡಿದೆ. ನವರಂಗದ ಮಧ್ಯಭಾಗದಲ್ಲಿ ನಾಲ್ಕು ಸ್ವತಂತ್ರ ಗಂಭಗಳಿವೆ. ಈ ಕಂಭಗಳು ಅರ್ಧ ಅಡಿ ಎತ್ತರದ ವೇದಿಕೆಯ ಮೇಲೆ ನಿಂತಿವೆ. ಕಂಭಗಳು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು ನೋಡುಗರನ್ನು ಆಕರ್ಷಿಸುತ್ತವೆ. ಸೂಕ್ಷ್ಮ ಕೆತ್ತನೆಗಳಿಂದ ಕೂಡಿರುವ ಈ

ಕಂಭಗಳು ಪೀಠ, ಪಾದ ಅಥವಾ ಚೌಕ, ಅಷ್ಟಪಟ್ಟಿಕೆ, ದಂಡ, ವೃತ್ತ, ಮೆಡಲ್, ಘಂಟಾ, ತಾಟಿಕಾ, ಘಟ, ವೃತ್ತ, ಫಲಕ, ಪುಷ್ಪಬೋದಿಗೆ, ಗ್ರೀವ, ಶಿರ ಭಾಗಗಳನ್ನು ಹೊಂದಿವೆ.

ಕಂಭದಲ್ಲಿನ ಚೌಕ ಅಥವಾ ಪಾದ ಭಾಗದ ನಾಲ್ಕು ಪಟ್ಟಿಕೆಗಳಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಪ್ರಮುಖವಾಗಿ ವಿಷ್ಣು, ಗಣೇಶ, ವೀಣಾವಾದಕ, ಧ್ಯಾನಮಗ್ನನಾದ ಶಿವ, ವರಾಹ, ಗಂಧರ್ವ ಕನ್ಯೆಯರು, ವಾದ್ಯಸ್ತ್ರೀಯರು, ಚತುರ್ಭುಜಧಾರಿ ವಿಷ್ಣು, ಮಹಿಷಾಸುರನನ್ನು ಸಂಹರಿಸುತ್ತಿರುವ ದುರ್ಗಿ, ಅಂಬೆಗಾಲಿ ನಲ್ಲಿರುವ ಗರುಡ, ನೃತ್ಯನಿರತ ಸ್ತ್ರೀಯರು, ಕಾಳಿಂಗಮರ್ದಿನಿ, ಕನ್ನಡಿಯನ್ನು ನೋಡಿಕೊಳ್ಳುತ್ತಿರುವ ಸ್ತ್ರೀಯರು, ತ್ರಿಮೂರ್ತಿ ಶಿವ, ಯೋಧನು ಆನೆಯ ಮೇಲೆ ಕುಳಿತು ಕೆಳಗಿರುವ ವ್ಯಕ್ತಿಯನ್ನು ಭರ್ಜಿಯಿಂದ ಕೊಲ್ಲುತ್ತಿರುವ ಚಿತ್ರಣ ಹೀಗೆ ಅನೇಕ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಉಬ್ಬುಶಿಲ್ಪಗಳ ಸುತ್ತ ಮಕರ ತೋರಣ, ಲತಾಬಳ್ಳಿ, ವರಾಹ ಹಾರ, ತೋರಣ, ಕಂಭದ ರಚನೆಗಳಿವೆ.

ನವರಂಗ ಭಾಗದಲ್ಲಿ ಮೂರು ಅಡಿ ಎತ್ತರವುಳ್ಳ ಕಕ್ಷಾಸನ ಅಥವಾ ಜಗತಿ ಇದೆ. ಜಗತಿಯ ಮೇಲೆ ೭ ಸ್ವತಂತ್ರಗಂಭಗಳನ್ನು ನಿಲ್ಲಿಸಲಾಗಿದೆ. ಈ ಕಂಭಗಳು ಗಿಡ್ಡವಾಗಿದ್ದು ಅವುಗಳು ಒಂದಕ್ಕೊಂದು ಭಿನ್ನವಾಗಿವೆ. ಅಷ್ಟಪಟ್ಟಿಕೆ, ದಂಡ, ಚೌಕ, ಘಂಟಾ, ತಾಟಿಕಾ, ವೃತ್ತ, ಘಟ, ಫಲಕ, ವೀರಕಂಠ, ಗ್ರೀವ, ಪುಷ್ಪಬೋದಿಗೆ ರಚನೆಯ ಭಾಗಗಳನ್ನು ಈ ಕಂಭಗಳಲ್ಲಿ ಕಾಣಬಹುದು.

ದೇವಾಲಯದಲ್ಲಿ ಒಟ್ಟು ೫ ಭುವನೇಶ್ವರಿಗಳಿವೆ. ಇವುಗಳಲ್ಲಿ ಭಿನ್ನತೆಯನ್ನು ಕಾಣಬಹುದು. ವೃತ್ತಾಕಾರ, ನಕ್ಷತ್ರಾಕಾರ, ಅಷ್ಟಕೋನಾಕಾರ, ಅಷ್ಟಪದ್ಮದಳದ ಆಕಾರದಲ್ಲಿವೆ. ಈ ಭುವನೇಶ್ವರಗಳು ಗರ್ಭಗೃಹ, ಮಂಟಪ, ನವರಂಗ, ಸಭಾಮಂಟಪ ಮುಖಮಂಟಪಗಳಲ್ಲಿವೆ.

ಪಾರ್ಶ್ವನೋಟದಲ್ಲಿ ದೇವಾಲಯಕ್ಕೆ ಉತ್ತಮವಾದ ಅಧಿಷ್ಠಾನ ಭಾಗವಿದೆ. ಅಧಿಷ್ಠಾನ ಭಾಗದಲ್ಲಿ ಉಪಾನ, ಪದ್ಮ, ಕುಮುದ, ಗಳಪೀಠ, ವೇದಿಕೆ, ಹಲ್ಲಿನ ಮಾದರಿ(Dentill Heads) ರಚನೆಗಳನ್ನು ಕಾಣಬಹುದಾಗಿದೆ. ಅಧಿಷ್ಠಾನ ಮೇಲ್ಭಾಗದ ಭಿತ್ತಿಯ ಭಾಗವು ಸರಳ ಸುಂದರವಾಗಿದೆ. ಬೃಹದಾಕಾರದ ಮೂರು ದೊಡ್ಡ ಕಲ್ಲಿನ ತೊಲೆಗಳನ್ನು ಇಟ್ಟು ಭಿತ್ತಿಯನ್ನು ರಚಿಸಲಾಗಿದೆ. ಭಿತ್ತಿಯ ನಂತರದಲ್ಲಿ ಮುಂಚಾಚಿದ ಪ್ರಸ್ತರ ಭಾಗವಿದೆ. ಇಲ್ಲಿಯೂ ಡೆಂಟಿಲ್ ರಚನೆ ಇದೆ. ಮೇಲ್ಭಾಗದಲ್ಲಿ ಆಧುನಿಕವಾಗಿ ನಿರ್ಮಿಸಿದ ಗುಮ್ಮಟಾಕಾರದ ಶಿಖರ ಭಾಗಗಳಿವೆ. ಹಿಂದೆ ಉತ್ತಮವಾದ ಶಿಖರವಿದ್ದು ಅದು ಹಾಳಾಗಿರುವ ಕಾರಣ ದೇವಾಲಯದ ರಕ್ಷಣೆಗಾಗಿ ಈ ರೀತಿಯಾಗಿ ಆಧುನಿಕ ಶಿಖರವನ್ನು ನಿರ್ಮಿಸಲಾಗಿದೆ.

**೨. ಹನುಮಂತ ದೇವಾಲಯ**

ಪ್ರಸ್ತುತ ಬಳಗಾನೂರು ಪರಿಸರದಲ್ಲಿ ಹನುಮಂತ ದೇವರು ಹೆಸರುವಾಸಿಯಾಗಿದೆ. ಬಳಗಾನೂರು ಗ್ರಾಮದಲ್ಲಿನ ಆದಯ್ಯ-ಅಮರಯ್ಯ ದೇವಾಲಯದ ಮುಂಭಾಗದಲ್ಲಿರುವ ದೇವಾಲಯವು ದಕ್ಷಿಣಾಭಿಮುಖ ವಾಗಿದೆ. ಗರ್ಭಗೃಹ, ನವರಂಗ ಭಾಗಗಳು ತಲವಿನ್ಯಾಸದಲ್ಲಿ ಕಂಡುಬರುತ್ತವೆ. ದೇವಾಲಯದ ವಾಸ್ತುಶೈಲಿಯು ವಿಜಯನಗರೋತ್ತರ ಕಾಲದ್ದಾಗಿದೆ. ಇದು ಕ್ರಿ.ಶ. ೧೬-೧೭ನೇ ಶತಮಾನಕ್ಕೆ ಸೇರಿದ್ದಾಗಿದೆ.[೨] ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ.

ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಸುಮಾರು ಐದು ಅಡಿ ಎತ್ತರವುಳ್ಳ ಹನುಮಂತನ ಮೂರ್ತಿಶಿಲ್ಪವಿದೆ. ಶಿಲ್ಪದ ಮುಖಭಾಗವು ಎಡಕ್ಕೆ ತಿರುಗಿದ್ದು ಕೆಳಭಾಗದಲ್ಲಿ ಶನೀಶ್ವರನಿದ್ದಾನೆ. ಭಾವಪೂರ್ಣವಾಗಿರುವ ಈ ಮೂರ್ತಿಶಿಲ್ಪವು ದೇವಾಲಯದ ಆಕರ್ಷಣೀಯ ಬಿಂದುವಾಗಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದೆ.

ಗರ್ಭಗೃಹದ ಮುಂಭಾಗದಲ್ಲಿನ ನವರಂಗ ಅಥವಾ ಮಂಟಪವು ಮುಂಭಾಗಕ್ಕೆ ತೆರೆದುಕೊಂಡಿದೆ. ಇಲ್ಲಿ ಆರು ಸ್ವತಂತ್ರಗಂಭಗಳು ಕಂಡುಬರುತ್ತವೆ. ಪ್ರಸ್ತುತ ನವರಂಗ ಭಾಗದಲ್ಲಿ ಆಧುನಿಕ ಕಂಭಗಳನ್ನು ಇರಿಸಲಾಗಿದೆ. ಪ್ರಾಚೀನ ಕಾಲದ ಕಂಭಗಳನ್ನು ತೆಗೆದು ಅವುಗಳನ್ನು ದೇವಾಲಯದ ಮುಂಭಾಗದಲ್ಲಿ ಇಡಲಾಗಿದೆ. ಈ ಕಂಭಗಳು ಕಲ್ಯಾಣ ಚಾಲುಕ್ಯ ಶೈಲಿಯ ಅವನತಿ ಕಾಲದವು ಮತ್ತು ವಿಜಯನಗರೋತ್ತರ ಕಾಲದವುಗಳಾಗಿವೆ. ಕಲ್ಯಾಣ ಚಾಲುಕ್ಯ ಶೈಲಿಯ ಕಂಭಗಳಲ್ಲಿ ಪೀಠ, ಚೌಕ, ವೃತ್ತ, ಘಂಟಾ, ಕುಂಭ ಭಾಗಗಳು ಕಂಡುಬರುತ್ತವೆ. ಇದರಿಂದ ಈ ದೇವಾಲಯವನ್ನು ಕಾಲಕಾಲಕ್ಕೆ ಜೀರ್ಣೋದ್ಧಾರಗೊಳಿಸುತ್ತ ಬರಲಾಗಿದೆ ಎಂಬುದು ತಿಳಿದುಬರುತ್ತದೆ. ದೇವಾಲಯದ ಮುಂಭಾಗದಲ್ಲಿ ಏಳು ಅಡಿ ಎತ್ತರವುಳ್ಳ ದೀಪಸ್ತಂಭವಿದೆ. ದೇವಾಲಯಕ್ಕೆ ಸರಳ ಅಧಿಷ್ಠಾನ, ಭಿತ್ತಿಯ ಭಾಗವಿದೆ. ಕಪೋತ ಭಾಗವು ಮುಂಚಾಚಿ ಕೊಂಡಿದ್ದು ಆಧುನಿಕ ಶಿಖರವಿದೆ.

ದೇವಾಲಯದ ಎಡಭಾಗದಲ್ಲಿ ಪರಿವಾರ ದೇವರಾದ ಮಲ್ಲಯ್ಯನ ಸಣ್ಣ ಗುಡಿಯಿದೆ. ಇದು ಏಕಕೋಣೆಯನ್ನು ಹೊಂದಿದೆ. ಏಕಕೋಣೆಯ ಗರ್ಭಗೃಹದಲ್ಲಿ ಕಲ್ಲನ್ನು ಪ್ರತಿಷ್ಠಾಪಿಸಿ ಮಲ್ಲಯ್ಯ ಹೆಸರಿನಿಂದ ಪೂಜಿಸಲಾಗುತ್ತಿದೆ. ಗರ್ಭಗೃಹಕ್ಕೆ ಎದುರಾಗಿ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಇಕ್ಕೆಲಗಳಲ್ಲಿ ಗಣೇಶ, ನಾಗಶಿಲ್ಪ, ಗರುಡ, ಸೂರ್ಯ ಇನ್ನಿತರ ಮೂರ್ತಿಶಿಲ್ಪಗಳಿವೆ. ಈ ಸಮುಚ್ಚಯಗಳಿಗೆ ವಿಶಾಲವಾದ ಪ್ರಾಕಾರ ಗೋಡೆಯಿದೆ. ಇದು ಸುಮಾರು ೫೦ ಅಡಿ ಅಗಲ ಮತ್ತು ಉದ್ದವಾದ ವಿಸ್ತೀರ್ಣವನ್ನು ಹೊಂದಿದೆ. ಪ್ರಾಕಾರ ಗೋಡೆಯಲ್ಲಿ ದಕ್ಷಿಣಕ್ಕೆ ಪ್ರಮುಖ ಪ್ರವೇಶದ್ವಾರವಿದ್ದರೆ, ಪೂರ್ವಭಾಗದಲ್ಲಿ ಇನ್ನೊಂದು ಸಣ್ಣ ಪ್ರವೇಶದ್ವಾರವಿದೆ.

**೩. ಕಮತರಾಯ ದೇವಾಲಯ**

ಈ ದೇವಾಲಯವು ದಿದ್ದಿಗಿ ಗ್ರಾಮದ ಬಸವೇಶ್ವರ ನಗರದಲ್ಲಿದೆ. ದೇವಾಲಯವು ಪೂರ್ವಾಭಿಮುಖ ವಾಗಿದ್ದು, ಕನಿಷ್ಠ ಸ್ಥಿತಿಯನ್ನು ಹೊಂದಿದೆ. ಇದು ವಿಜಯನಗರೋತ್ತರ ಶೈಲಿಯನ್ನು ಹೊಂದಿದೆ. ಇದರ ಕಾಲವನ್ನು ಕ್ರಿ.ಶ. ೧೭-೧೮ನೇ ಶತಮಾನದ್ದೆಂದು ನಿರ್ಧರಿಸಬಹುದು. ತಲವಿನ್ಯಾಸದಲ್ಲಿ ಗರ್ಭಗೃಹ, ಅರ್ಧಮಂಟಪ, ಮತ್ತು ಮುಖಮಂಟಪ ಭಾಗಗಳನ್ನು ಕಾಣಬಹುದು. ಚೌಕಾಕಾರವಾದ ಗರ್ಭಗೃಹದಲ್ಲಿ ಎತ್ತರವಾದ ಕಲ್ಲನ್ನು ಪ್ರತಿಷ್ಠಾಪಿಸಲಾಗಿದೆ. ಇದನ್ನು ಕಮತರಾಯ ಹೆಸರಿನಿಂದ ಪೂಜಿಸಲಾಗುತ್ತಿದೆ. ಗರ್ಭಗೃಹದ ಬಾಗಿಲವಾಡವು ಏಕಶಾಖೆಯನ್ನು ಹೊಂದಿದ್ದು ಸರಳವಾಗಿದೆ. ದ್ವಾರಶಾಖೆಯ ಮೇಲ್ಭಾಗದಲ್ಲಿ ಮೂರು ರೇಖಾನಾಗರ ಮಾದರಿಯ ಶಿಖರಗಳನ್ನು ರಚಿಸಲಾಗಿದೆ. ಇವುಗಳ ನಡುವೆ ನಾಲ್ಕು ದಳವನ್ನುಳ್ಳ ಪದ್ಮಗಳಿವೆ. ದೇವಾಲಯದ ಭಿತ್ತಿಯ ಭಾಗವನ್ನು ಗಾರೆಗಳಿಲ್ಲದೆ ಸಣ್ಣಕಲ್ಲುಗಳಿಂದ ಕಟ್ಟಲಾಗಿದೆ. ಭಿತ್ತಿಯ

ಭಾಗವು ನಾಶವಾಗಿದ್ದು, ಬಾಗಿಲವಾಡದ ಎತ್ತರದಷ್ಟು ಮಾತ್ರ ಉಳಿದುಬಂದಿದೆ. ದೇವಾಲಯದ ಮುಂಭಾಗದಲ್ಲಿ ದೀಪಸ್ತಂಭವಿದೆ. ಇದು ಸುಮಾರು ೧೫ ಅಡಿಗಳಷ್ಟು ಎತ್ತರವಾಗಿದೆ.

**೪. ವೆಂಕಟರಮಣ ದೇವಾಲಯ**

ಜವಳಗೆರೆ ಗ್ರಾಮದ ನಾಡಗೌಡರ ಮನೆಯ ಆವರಣದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖ ವಾಗಿದೆ. ವಿಜಯನಗರೋತ್ತರ ಶೈಲಿಯನ್ನು ಹೊಂದಿರುವ ದೇವಾಲಯ ಉತ್ತಮ ಸ್ಥಿತಿಯಲ್ಲಿದೆ. ಇದರ ಕಾಲಮಾನವನ್ನು ಕ್ರಿ.ಶ. ೧೮-೧೯ನೇ ಶತಮಾನವೆಂದು ಹೇಳಬಹುದು. ದೇವಾಲಯವು ವಿಸ್ತಾರವಾಗಿದ್ದು ಎರಡು ಅಡಿ ಎತ್ತರದಲ್ಲಿದೆ. ಇದರ ತಲವಿನ್ಯಾಸದಲ್ಲಿ ಗರ್ಭಗೃಹ ಮಂಟಪ, ಮುಖಮಂಟಪಗಳಿವೆ.

ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರವುಳ್ಳ ಕಲ್ಲನ್ನು ಪ್ರತಿಷ್ಠಾಪಿಸಲಾಗಿದೆ. ಇದನ್ನು ವೆಂಕಟರಮಣನೆಂದು ಪೂಜಿಸಲಾಗುತ್ತಿದೆ. ಗರ್ಭಗೃಹದ ಮೇಲ್ಛಾವಣಿಯು ಕಮಾನಿನ ಆಕಾರದಲ್ಲಿದೆ. ಗರ್ಭಗೃಹದ ಬಾಗಿಲವಾಡವು ದ್ವಿಶಾಖೆಯನ್ನು ಹೊಂದಿದ್ದು ಅತ್ಯಂತ ಸರಳವಾಗಿದೆ. ದ್ವಾರಶಾಖೆಯ ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ದ್ವಾರಪಾಲಕರ ಕೈಯಲ್ಲಿ ಭರ್ಚಿಯ ಆಯುಧವಿದೆ. ಇವರು ತಮ್ಮ ಎರಡು ಕಾಲನ್ನು ಕತ್ತರಿಯ ಅಲಗುಗಳ ರೀತಿಯಲ್ಲಿರಿಸಿಕೊಂಡು ನಿಂತಿದ್ದಾರೆ. ಲಲಾಟಬಿಂಬದಲ್ಲಿ ಅಷ್ಟಪದ್ಮದ ಉಬ್ಬು ರಚನೆಯಿದೆ.

ಗರ್ಭಗೃಹದ ಮುಂದಿರುವ ಮಂಟಪದ ಮಧ್ಯದಲ್ಲಿ ಸಾಲಾಗಿ ನಾಲ್ಕು ಕಂಭಗಳನ್ನು ನಿಲ್ಲಿಸಲಾಗಿದೆ. ಇವು ತೆಳುವಾದ ರಚನೆಯನ್ನು ಹೊಂದಿದ್ದು, ಮೇಲ್ಭಾಗವು ಕಮಾನಿನ ಆಕಾರವನ್ನು ಹೊಂದಿವೆ. ಮಂಟಪದ ಎಡಬಲ ಭಾಗದಲ್ಲಿ ಎರಡು ಬಾಗಿಲುಗಳಿವೆ. ಬಹುಶಃ ಇವುಗಳನ್ನು ಪ್ರದಕ್ಷಿಣೆ ಸುತ್ತು ಹಾಕಲು ನಿರ್ಮಿಸಿರ ಬಹುದು. ಆದರೆ ಇಂದು ಅವುಗಳನ್ನು ಮುಚ್ಚಲಾಗಿದೆ. ಮಂಟಪದ ಬಾಗಿಲವಾಡವು ಏಕಶಾಖೆಯನ್ನು ಹೊಂದಿದೆ. ಇದರಲ್ಲಿ ಅಷ್ಟಪದ್ಮವನ್ನು ಬಿಟ್ಟರೆ ಪ್ರಮುಖವಾಗಿ ಯಾವುದೇ ಉಬ್ಬುರಚನೆಗಳಿಲ್ಲ.

ಮುಖಮಂಟಪವು ಆಯತಾಕಾರವನ್ನು ಹೊಂದಿದೆ. ದೇವಾಲಯವು ಅರ್ಧ ಮತ್ತು ಸ್ವತಂತ್ರಗಂಭ ಸೇರಿ ಒಟ್ಟು ೬೪ ಕಂಭಗಳನ್ನು ಹೊಂದಿದೆ. ಈ ಕಂಭಗಳೆಲ್ಲವೂ ತೆಳುವಾಗಿ ಎತ್ತರವಾಗಿದ್ದು ಮೇಲ್ಭಾಗದಲ್ಲಿ ಕಮಾನಿನ ಆಕಾರವನ್ನು ಹೊಂದಿವೆ.

ಪ್ರದಕ್ಷಿಣಾಪಥವು ಹೊರಭಾಗಕ್ಕೆ ತೆರೆದುಕೊಂಡಿದೆ. ಪ್ರದಕ್ಷಿಣಾಪಥದ ಬಲಭಾಗದಲ್ಲಿ ಏಳು ಕಮಾನಿನ ರಚನೆಗಳಿವೆ. ಗರ್ಭಗೃಹದ ಹಿಂಭಾಗ ಮತ್ತು ಎಡಭಾಗವು ಮುಚ್ಚಿಕೊಂಡಿದೆ. ದೇವಾಲಯದ ಬಹುತೇಕ ಭಾಗಗಳಲ್ಲಿ ಕಮಾನಿನ ರಚನೆ ಇರುವುದರಿಂದ ಮುಸ್ಲಿಮರ ಪ್ರಭಾವ ಇದರ ಮೇಲೆ ಉಂಟಾಗಿದೆ ಎಂದು ಗೊತ್ತಾಗುತ್ತದೆ.

ದೇವಾಲಯದ ಪಾರ್ಶ್ವನೋಟದಲ್ಲಿ ಅಧಿಷ್ಠಾನ ಭಾಗ ಕಾಣಿಸುವುದಿಲ್ಲ. ಭಿತ್ತಿಯು ಸರಳವಾಗಿದ್ದು ಇದನ್ನು ಅನೇಕ ಬಾರಿ ನವೀಕರಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಕಪೋತ ಭಾಗವು ಎರಡು ಅಡಿಗಳಷ್ಟು ಮುಂಚಾಚಿಕೊಂಡಿದೆ. ಕಪೋತ ಭಾಗದ ಮೇಲೆ ಗಾರೆಯಿಂದ ಮಾಡಿದ ಪದ್ಮದಳ, ಸ್ತ್ರೀಯ ಶಿಲ್ಪಗಳು, ಕಮಾನಿನ ರಚನೆಯ ಅನೇಕ ಅಲಂಕಾರವನ್ನು ಕಾಣಬಹುದು. ಆಧುನಿಕ ಶಿಖರಭಾಗವಿದ್ದು ಇದು

ಎತ್ತರವಾಗಿಲ್ಲ. ಮುಂಭಾಗದ ಎತ್ತರ ಕಟ್ಟೆಯ ಮೇಲೆ ಸುಮಾರು ೨೦ ಅಡಿ ಎತ್ತರವುಳ್ಳ ಧ್ವಜಸ್ತಂಭವಿದೆ. ಇದರ ಕೆಳಭಾಗದಲ್ಲಿ ಹನುಮಂತನ ಉಬ್ಬುಶಿಲ್ಪವಿದೆ. ಧ್ವಜಸ್ತಂಭದ ಪಕ್ಕದಲ್ಲಿ ಒಂದು ಬಾವಿ ಇದೆ. ದೇವಾಲಯಕ್ಕೆ ಸಂಬಂಧಿಸಿದ ಪಾಕಶಾಲೆಯೂ ಹಿಂಭಾಗದಲ್ಲಿದೆ.

### ಶಾಕ್ತ ದೇವಾಲಯ

### ೧. ಯಲ್ಲಮ್ಮ ಗುಡಿ

ಈ ದೇವಾಲಯವು ಬಳಗಾನೂರು ಗ್ರಾಮದ ಹೊರಭಾಗದಲ್ಲಿದೆ. ದೇವಾಲಯವು ಪೂರ್ವಾಭಿಮುಖ ವಾಗಿದ್ದು ಕನಿಷ್ಠ ಸ್ಥಿತಿಯಲ್ಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮಂಟಪ ಭಾಗಗಳು ಕಂಡುಬರುತ್ತವೆ. ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೊಂದಿದ ದೇವಾಲಯದ ಕಾಲವನ್ನು ಕ್ರಿ.ಶ. ೧೨-೧೩ನೇ ಶತಮಾನವೆಂದು ಹೇಳಬಹುದು.

ಗರ್ಭಗೃಹವು ಚೌಕಾಕಾರವಾಗಿದ್ದು ಇದರಲ್ಲಿ ವೀರಭದ್ರನ ಮೂರ್ತಿಶಿಲ್ಪವಿದೆ. ಶಿಲ್ಪವು ಸುಮಾರು ಎರಡು ಅಡಿ ಎತ್ತರದಲ್ಲಿದೆ. ಗರ್ಭಗೃಹದ ಮುಂಭಾಗದಲ್ಲಿ ತೆರೆದ ಮಂಟಪವಿದೆ. ಮಂಟಪವು ನಾಲ್ಕು ಸ್ವತಂತ್ರಗಂಭಗಳಿಂದ ಕೂಡಿದೆ. ಕಂಭಗಳು, ಪೀಠ, ಚೌಕ, ವೃತ್ತ, ಅಷ್ಟಕೋನ, ಚೌಕ, ದಂಡ, ಘಟ ಮತ್ತು ಪುಷ್ಪಬೋದಿಗೆಯನ್ನು ಹೊಂದಿವೆ. ಸ್ವತಂತ್ರವಾದ ಈ ಕಂಭಗಳ ಮೇಲೆ ಕಲ್ಲುಚಪ್ಪಡಿಗಳನ್ನು ಹಾಕಲಾಗಿದೆ. ಇವು ಒರಟು ರಚನೆಯಿಂದ ಕೂಡಿವೆ. ಗರ್ಭಗೃಹದ ಭಿತ್ತಿಯ ಭಾಗವು ಸರಳವಾಗಿದೆ. ಮೇಲ್ಭಾಗದಲ್ಲಿ ಆಧುನಿಕವಾಗಿ ನಿರ್ಮಿಸಿರುವ ಶಿಖರ ಭಾಗವಿದೆ. ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ.

## ೪.೨. ಲೌಕಿಕ ವಾಸ್ತುಶಿಲ್ಪ

ಭಾರತದಲ್ಲಿ ನಗರಜೀವನ ಮತ್ತು ಅರಸೊತ್ತಿಗೆಯಲ್ಲದವರ ವಾಸ್ತುಶಿಲ್ಪದ ಪರಿಚಯವಾಗುವುದು ಹರಪ್ಪ ನಾಗರಿಕತೆಯ ಪುರಗಳ ಪಳೆಯುಳಿಕೆಗಳಿಂದ. ಇದರ ನಂತರ ಅನೇಕ ಏಳುಬೀಳುಗಳ ನಡುವೆ ಕ್ರಮೇಣವಾಗಿ ಲೌಕಿಕ ವಾಸ್ತುಶಿಲ್ಪ ಬೆಳೆದುಕೊಂಡು ಬಂದಿದೆ ಎಂದು ಹೇಳಬಹುದು. ಕರ್ನಾಟಕದಲ್ಲಿ ಕೂಡ ಈ ರೀತಿಯ ಲೌಕಿಕ ವಾಸ್ತುಶಿಲ್ಪ ಕಾಣಬರುತ್ತದೆ. ಪ್ರಾಚೀನ ಕಾಲದ ಸಾವಿರಾರು ವರ್ಷಗಳ ದೇವಾಲಯ ಗಳಿರುವಾಗ ಸಾಮಾನ್ಯ ಜನಜೀವನದ ವಾಸ್ತುಬಿಂಬಗಳೇಕಿಲ್ಲ ಎಂಬ ಗೊಂದಲಕ್ಕೆ ನೇರ ಉತ್ತರ ಕಷ್ಟಸಾಧ್ಯ. ದೈವತ್ವ ಮತ್ತು ಧರ್ಮಕ್ಕೆ ಸಂಬಂಧಪಟ್ಟ ವಾಸ್ತುಶಿಲ್ಪವೆಲ್ಲವನ್ನೂ ಕೂಡ ಇಟ್ಟಿಗೆ, ಮಣ್ಣು, ಮರಗಳಿಂದ ನಿರ್ಮಿಸಬಹುದು ಎಂಬುದು ಒಂದು ಅಂದಾಜು. ಆದ್ದರಿಂದ ಆರಾಧನಾ ಸ್ಥಳಗಳ ದೀರ್ಘವಿಶ್ಲೇಷಣೆ ಬಹು ಸುಲಭವಾಗಿ ಸಾಧ್ಯವಾದರೆ, ಲೌಕಿಕ ವಾಸ್ತುಶಿಲ್ಪದ ಅಧ್ಯಯನವನ್ನು ಕೋಟೆ, ಕೆರೆ, ಬಾವಿ, ಅರಮನೆಗಳಿಗೆ ಸೀಮಿತಗೊಳಿಸಿಕೊಳ್ಳಬೇಕು.[೨] ಕರ್ನಾಟಕದ ಅನೇಕ ಅರಸು ಮನೆತನಗಳಲ್ಲಿ ಇಂತಹ ಧಾರ್ಮಿಕ ಮತ್ತು ಲೌಕಿಕ ವಾಸ್ತುಶಿಲ್ಪಗಳ ನಿರ್ಮಾಣವನ್ನು ನೋಡುತ್ತೇವೆ. ಅರಸುಮನೆತನಗಳ ಅರಸರು ಧಾರ್ಮಿಕ ವಾಸ್ತುಶಿಲ್ಪಕ್ಕೆ ಎಷ್ಟು ಪ್ರಾಮುಖ್ಯತೆ ನೀಡಿದರೋ ಅಷ್ಟೇ ಪ್ರಾಮುಖ್ಯತೆಯನ್ನು ಲೌಕಿಕ ವಾಸ್ತುಶಿಲ್ಪ ನಿರ್ಮಾಣದ ಕಡೆಗೂ ನೀಡಿದರು.

**ಕೋಟೆ-ಕೊತ್ತಲಗಳು**

''ದುರ್ಗಹಿನೋ ಪ್ರಜಾಪತಿಃ ವಾತಾಭ್ರಮಿವ...'' ದುರ್ಗಗಳಿಲ್ಲದ ರಾಜನು ಬಿರುಗಾಳಿಗೆ ಸಿಲುಕಿದ ಮೋಡವಾಗಿ ಚದುರಿಸಲ್ಪಡುತ್ತಾನೆ[೨೪] ಎಂದು ಅಭಿಲಷಿತಾರ್ಥ ಚಿಂತಾಮಣಿ ಗ್ರಂಥವು ರಾಜನ ವಾಸ್ತವ್ಯಕ್ಕೆ ದುರ್ಗದ ಮಾಹಿತಿಯನ್ನು ಹೇಳುತ್ತದೆ. ರಕ್ಷಣಾ ವ್ಯವಸ್ಥೆಯ ಈ ಪ್ರಾಚೀನ ಸೂತ್ರಕ್ಕೆ ಅನುಗುಣವಾಗಿ ಕರ್ನಾಟಕದ ರಾಜರು ಕೂಡ ಇನ್ನುಳಿದ ಅರಸರಂತೆ ರಾಜ್ಯ ಕಟ್ಟುವ ಹವ್ಯಾಸದಲ್ಲಿ ಘೋರಯುದ್ಧಗಳನ್ನೆಸಗಿ ಜಯಿಸಿದ ನಾಡ ನೆಲದ ರಕ್ಷಣೆಗಾಗಿ ಹಾಗೂ ಅಲ್ಲಿಯ ಜನರ ರಕ್ಷಣೆಗಾಗಿ ಮತ್ತು ಸ್ವರಕ್ಷಣೆಗಾಗಿ ಅಲ್ಲಲ್ಲಿ ಕೋಟೆ-ಕೊತ್ತಲಗಳನ್ನು ಕಟ್ಟಿದರು. ಆ ರಕ್ಷಣಾ ಗೋಡೆಗಳು ನೆಲದ ಹಾಗೂ ಜನರ ರಕ್ಷಣೆ ಮಾಡಿದುವಲ್ಲದೆ ಮಾನವ ಜೀವನದ ಗುಣಮೌಲ್ಯಗಳನ್ನು ತನ್ನ ರಕ್ಷಣಾ ರೆಕ್ಕೆಗಳಲ್ಲಿ ತಬ್ಬಿಕೊಂಡವು ಹಾಗೂ ಅವುಗಳನ್ನು ಉಳಿಸಿ ಬೆಳೆಸಿಕೊಂಡು ಬಂದವು.

ಕಾಲದಿಂದ ಕಾಲಕ್ಕೆ ಯುದ್ಧ ಅಥವಾ ಆಕ್ರಮಣಗಳಲ್ಲಿಯ ತಂತ್ರಗಳಿಗೆ ಹೊಸದಾಗಿ ಹಾಗೂ ಆವಿಷ್ಕಾರಗೊಂಡ ಆಯುಧಗಳಿಗೆ ತಕ್ಕಂತೆ ಕೋಟೆಗಳ ರಚನೆಯ ವಿಧಾನದಲ್ಲಿ ಮಾರ್ಪಾಡುಗಳಾದವು.[೨೫] ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಲ್ಲಿ ತಾವು ವಾಸಿಸುವ ನೆಲೆಯ ಸುತ್ತಲೂ ರಕ್ಷಣೆಯ ಬೇಲಿ ಅಥವಾ ಕಿರುಗಾತ್ರದ ಗೋಡೆಯನ್ನು ನಿರ್ಮಿಸಿದ ಉದಾಹರಣೆಗಳಿವೆ. ಹರಪ್ಪ ಸಂಸ್ಕೃತಿಯ ಪ್ರಮುಖ ನಗರಗಳು ರಕ್ಷಣಾ ಗೋಡೆಗಳನ್ನು ಹೊಂದಿದ್ದವು. ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಹಾಗೂ ಪುರಾಣಗಳಲ್ಲಿ ಕೋಟೆಗಳಿಂದ ಕೂಡಿದ ನಗರಗಳ ಉಲ್ಲೇಖಗಳಿವೆ. ರಾಮಾಯಣದಲ್ಲಿ ಉಲ್ಲೇಖಿಸಿ ದಂತೆ ಲಂಕಾ ಪಟ್ಟಣ ಬಲವಾದ ಕೋಟೆಯಿಂದ ಸುತ್ತುವರೆದಿತ್ತು. ಕೋಟೆಗಳ ರಚನೆಯ ವಿಷಯವಾಗಿ ಕೌಟಿಲ್ಯ ನೈಸರ್ಗಿಕ ಸನ್ನಿವೇಶಗಳಿಗನುಗುಣವಾಗಿ ಕೋಟೆಗಳನ್ನು ಜಲದುರ್ಗ, ವನದುರ್ಗ, ಸ್ಥಳದುರ್ಗ, ಗಿರಿದುರ್ಗ ಇತ್ಯಾದಿಯಾಗಿ ವರ್ಗೀಕರಿಸಿ ಅವುಗಳ ರಚನೆಯ ವಿಧಾನವನ್ನು ವಿವರಿಸಿದ್ದಾನೆ.[೨೬] ರಾಜ್ಯದ ಅತ್ಯಾವಶ್ಯಕವಾದ ಸಪ್ತಾಂಗಗಳಲ್ಲಿ ದುರ್ಗವೂ ಒಂದು ಎಂದು ರಾಜನೀತಿ ಹೇಳುತ್ತದೆ. ಮನುಸ್ಮೃತಿ, ಶುಕ್ರನೀತಿಸಾರ, ಮಾನಸಾರ, ಪಂಚತಂತ್ರ, ಮಾನಸೋಲ್ಲಾಸಗಳಲ್ಲಿ ಕೋಟೆಗಳ ವರ್ಗೀಕರಣ ಕಟ್ಟಲು ಉಪಯೋಗಿಸುವ ಸಾಮಗ್ರಿ, ಸಂರಕ್ಷಣಾ ವಿಧಾನ ಇವುಗಳ ದೀರ್ಘ ಪರಿಚಯವಿದೆ.[೨೭]

ಕ್ರಿ.ಶ. ೧೮೦೦ರ ಅವಧಿಯಲ್ಲಿ ಕರ್ನಲ್ ಮೆಕೆಂಜಿ ಮೈಸೂರು ಪ್ರಾಂತ್ಯದ ಸಂರಕ್ಷಣೆ ಮಾಡಿ ರಚಿಸಿದ ನಕ್ಷೆಯಲ್ಲಿ ಅಸ್ತಿತ್ವದಲ್ಲಿದ್ದ ಕೋಟೆಗಳನ್ನು ದಾಖಲಿಸಲಾಗಿದೆ. ಆ ನಕ್ಷೆಯ ಪ್ರಕಾರ ಸಾಮಾನ್ಯವಾಗಿ ಪ್ರತಿ ಹೋಬಳಿಯೂ ಕೋಟೆಗಳಿಂದ ಕೂಡಿದ್ದವು. ಈ ಕೋಟೆಗಳು ನಿರ್ದಿಷ್ಟ ಅಂತರದಲ್ಲಿದ್ದು, ಕೇವಲ ಒಂದು ದಿನದ ಅವಧಿಯಲ್ಲಿ ಒಂದು ಕೋಟೆಯಿಂದ ಇನ್ನೊಂದು ಕೋಟೆಗೆ ಎತ್ತಿನ ಗಾಡಿಯ ಮೂಲಕ ತಲುಪುವ ಸಮಯದ ಅಂತರದಲ್ಲಿರುತ್ತಿದ್ದವು. ಅಲ್ಲದೇ ಈ ಕೋಟೆಗಳನ್ನು ಹೆದ್ದಾರಿ ಅಥವಾ ವಾಣಿಜ್ಯ ಮಾರ್ಗಗಳ ಆಯಕಟ್ಟಿನಲ್ಲಿ ನಿರ್ಮಿಸಿರುವುದು ನಕ್ಷೆಗಳಿಂದ ತಿಳಿದುಬರುವುದು.[೨೮]

ಕೋಟೆಗಳು ಕೇವಲ ರಾಜಕೀಯ ಸೈನಿಕ ಕೇಂದ್ರಗಳಾಗಿರದೆ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಮನರಂಜನೆ ಗಾಗಿ ಹಬ್ಬ-ಹರಿದಿನಗಳು, ಉತ್ಸವಗಳು, ಕ್ರೀಡಾಕೂಟಗಳು ಆಗಾಗ್ಗೆ ಕೋಟೆಯೊಳಗೆ ನಡೆಯುತ್ತಿದ್ದವು.

ಹಾಗೆಯೇ ಕೋಟೆಯೊಳಗೆ ಅನೇಕ ಕೈಗಾರಿಕಾ ಕೇಂದ್ರಗಳು, ಗುಡಿ ಕೈಗಾರಿಕೆಗಳು ಅಸ್ತಿತ್ವದಲ್ಲಿರುತ್ತಿದ್ದವು. ಪ್ರಸ್ತುತ ಬಳಗಾನೂರು ಪರಿಸರದಲ್ಲಿ ಕೋಟೆ ಮತ್ತು ವಾಡೆಗಳು ಕಾಣಸಿಗುತ್ತವೆ.

**ದಿದ್ದಿಗಿ ಕೋಟೆ**

ದಿದ್ದಿಗಿ ಗ್ರಾಮವು ಬಳಗಾನೂರು ಕೇಂದ್ರ ಭಾಗದಿಂದ ೮ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದಲ್ಲಿ ಪಾಳೆಯಗಾರರ ಕಾಲದಲ್ಲಿ ಕಟ್ಟಲಾದ ಕೋಟೆ ಇದೆ. ಪಾಳೆಯಗಾರರೆಂದರೆ ಸುರಪುರ ಪಾಳೆಯಗಾರರು ಇರಬಹುದು. ಕೋಟೆಯನ್ನು ಅನಿಯಮಿತಾಕಾರಾದ ಕಲ್ಲುಗಳಿಂದ ಗಾರೆಯನ್ನು ಬಳಸದೆ ಕಟ್ಟಲಾಗಿದೆ. ಕೋಟೆಯ ದಕ್ಷಿಣ ಮತ್ತು ಪಶ್ಚಿಮ ಗೋಡೆಗಳು ನಾಶವಾಗಿವೆ. ಉತ್ತರ ಮತ್ತು ಪೂರ್ವ ಭಾಗದಲ್ಲಿ ಗೋಡೆಗಳ ಭಾಗಗಳು ಮಾತ್ರ ಕಂಡುಬರುತ್ತವೆ. ಈ ಗೋಡೆಗಳು ೩ ರಿಂದ ೪ ಅಡಿಗಳಷ್ಟು ಅಗಲವಾಗಿವೆ. ಕೋಟೆಯ ಪ್ರವೇಶ ದ್ವಾರವು ಉತ್ತರಾಭಿಮುಖವಾಗಿದ್ದು, ಸುಮಾರು ೧೫ ಅಡಿಗಳಷ್ಟು ಎತ್ತರದ ಗೋಡೆಯ ಭಾಗ ಉಳಿದುಕೊಂಡು ಬಂದಿದೆ. ಇದು ಶಿಥಿಲಾವಸ್ಥೆಯಲ್ಲಿದೆ. ಪ್ರವೇಶ ದ್ವಾರದಲ್ಲಿ ಕಮಾನಿನ ರಚನೆ ಇರುವುದರಿಂದ ಕೋಟೆಯ ಮೇಲೆ ಮುಸ್ಲಿಂ ಪ್ರಭಾವವನ್ನು ಕಾಣಬಹುದು. ಪ್ರವೇಶ ದ್ವಾರದ ಮುಂಭಾಗದಲ್ಲಿ ಎರಡು ವಿಶಾಲವಾದ ಕಟ್ಟೆಗಳಿವೆ. ಪ್ರವೇಶದ್ವಾರದ ಮಧ್ಯಭಾಗದಲ್ಲಿ ಎರಡು ಕೋಣೆ ರಚನೆಗಳಿವೆ. ದ್ವಾರದ ಎರಡು ಭಾಗದಲ್ಲಿ ಸರಳವಾದ ಕಮಾನಿನ ರಚನೆಯುಳ್ಳ ಕಂಬಗಳನ್ನು ನಿಲ್ಲಿಸಲಾಗಿದೆ. ಈ ಕಂಬದ ಪಕ್ಕದಲ್ಲಿ ಈಶ್ವರನ ಉಬ್ಬುಶಿಲ್ಪವಿದೆ.

ಕೋಟೆಯ ಒಳಭಾಗದಲ್ಲಿ ದೇವಿ ಗುಡಿಯ ಹಿಂಭಾಗದಲ್ಲಿ ಬುರುಜಿನ ಅವಶೇಷಗಳು ಕಂಡುಬರುತ್ತವೆ. ಇನ್ನುಳಿದ ಮೂರು ಭಾಗಗಳಲ್ಲಿ ಬುರುಜುಗಳಿದ್ದವು ಎಂದು ಸ್ಥಳೀಯರು ಹೇಳುತ್ತಾರೆ. ಆದರೆ ಅವುಗಳ ಅವಶೇಷಗಳು ಕಾಣಿಸುವುದಿಲ್ಲ. ಕೋಟೆಯ ಒಳಭಾಗದಲ್ಲಿ ಬಿದ್ದಿರುವ ಮನೆಯ ಅವಶೇಷಗಳು ಕಂಡುಬರುತ್ತವೆ. ಇವು ಬ್ರಾಹ್ಮಣರ ಮನೆಗಳಾಗಿರಬೇಕು. ಕಾರಣ ಇದೊಂದು ಪ್ರಾಚೀನ ಕಾಲದ ಶ್ರೇಷ್ಠ ಅಗ್ರಹಾರ ಕೇಂದ್ರವಾಗಿತ್ತು. ಪ್ರವೇಶದ್ವಾರದ ಒಳಭಾಗದಲ್ಲಿ ಕೋಟೆ ಗೋಡೆಗೆ ತಾಗಿಕೊಂಡಿರುವಂತಹ ಕೋಣೆಯ ರಚನೆಗಳಿವೆ. ಇವು ಸೈನಿಕರ ಕೋಣೆಗಳಾಗಿರಬಹುದು. ಕೋಟೆಯ ಒಳಗೆ ದೇವಿಗುಡಿ, ಬಾವಿ, ಶಿವಲಿಂಗ, ವೀರಗಲ್ಲು ಮತ್ತು ನಾಗಶಿಲ್ಪಗಳು ಕಂಡುಬರುತ್ತವೆ. ಕೋಟೆಯ ಹೊರಭಾಗದಲ್ಲಿ ಪಶ್ಚಿಮಕ್ಕೆ ಅರ್ಧ ಮುಚ್ಚಿಹೋಗಿರುವ ಕಂದಕವಿದೆ.

**ಜವಳಗೆರೆ ಕೋಟೆ**

ಜವಳಗೆರೆ ಗ್ರಾಮವು ಬಳಗಾನೂರು ಕೇಂದ್ರಭಾಗದಿಂದ ೧೨ ಕಿ.ಮೀ. ಅಂತರದಲ್ಲಿದೆ. ಇಲ್ಲಿನ ನಾಡಗೌಡರು ತಮ್ಮ ಆಡಳಿತಾವಧಿಯಲ್ಲಿ ತಮ್ಮ ಮನೆಯನ್ನೊಳಗೊಂಡಂತೆ ಆಗಿನ ಗ್ರಾಮದ ಸುತ್ತ ರಕ್ಷಣಾ ಗೋಡೆಯನ್ನು ನಿರ್ಮಿಸಿಕೊಂಡಿದ್ದರು. ಇಂದು ಆ ರಕ್ಷಣಾ ಗೋಡೆಯು ಉಳಿದುಕೊಂಡು ಬಂದಿದ್ದು ಸುಮಾರು ೧೫ ಅಡಿಯಷ್ಟು ಎತ್ತರವಾಗಿದೆ. ಇದನ್ನು ಅಲ್ಲಿನವರು ಕಿಲ್ಲೆ ಎಂದು ಕರೆಯುತ್ತಾರೆ. ಕಿಲ್ಲೆ ಎಂದರೆ ದುರ್ಗ, ಕೋಟೆ ಎಂಬರ್ಥಗಳಿವೆ. ಕೋಟೆಯ ಪ್ರವೇಶದ್ವಾರವು ಪೂರ್ವಾಭಿಮುಖವಾಗಿದೆ. ಕೋಟೆ ಗೋಡೆಯನ್ನು ಅನಿಯಮಿತಾಕಾರದ ಕಲ್ಲುಗಳಿಂದ ಗಾರೆಯನ್ನು ಬಳಸದೆ ಕಟ್ಟಲಾಗಿದೆ. ಹೊರಭಾಗದಲ್ಲಿ ಮಣ್ಣು ಇದ್ದು ಒಳಭಾಗದಲ್ಲಿ ಮಾತ್ರ ಕಲ್ಲಿನಿಂದ ಕಟ್ಟಲಾಗಿದೆ. ಕೋಟೆಯ ಒಳಭಾಗದಲ್ಲಿ ಅಂದರೆ ಪಾಕಶಾಲೆಯ

ಹಿಂಭಾಗದಲ್ಲಿ ಮೂರು ಅಡಿ ಎತ್ತರದ ಬುರುಜಿನ ತಳಭಾಗ ಕಂಡುಬರುತ್ತಿದೆ. ಇದು ವೃತ್ತಾಕಾರವಾಗಿದ್ದು, ಚೌಕಾಕಾರದ ಕಪ್ಪುಕಲ್ಲನ್ನು ಬಳಸಿ ಕಟ್ಟಲಾಗಿದೆ. ಇದರ ಪಕ್ಕದಲ್ಲಿ ಮನೆಯ ತಳಪಾಯದ ಅವಶೇಷಗಳು ಕಾಣಸಿಗುತ್ತವೆ. ಇವು ಬಹುಶಃ ಕಾವಲುಗಾರರ ಮನೆಗಳಿರಬೇಕು.

ಕೋಟೆಯ ಒಳಭಾಗದಲ್ಲಿ ವಿಶಾಲವಾದ ನಾಡಗೌಡರ ಮನೆಯಿದೆ. ಇಂದು ಮನೆಯ ಹಳೇ ಕಟ್ಟಡವನ್ನು ಸಂಪೂರ್ಣವಾಗಿ ಆಧುನೀಕರಿಸಲಾಗಿದೆ. ಇಲ್ಲಿ ವೆಂಕಟರಮಣ ದೇವಾಲಯ, ಎರಡು ಬಾವಿಗಳು ಮತ್ತು ಇನ್ನಿತರ ಮನೆಗಳು ಇವೆ.

**ಉದ್ಬಾಳ(ಉ) ವಾಡೆ**

ಉದ್ಬಾಳ(ಉ) ಗ್ರಾಮ ಬಳಗಾನೂರು ಕೇಂದ್ರ ಭಾಗದಿಂದ ೫ ಕಿ.ಮೀ. ಅಂತರದಲ್ಲಿದೆ. ಇದು ನಾಡಗೌಡಿಕೆ ಸಂಸ್ಥಾನದ ಆಡಳಿತ ಕೇಂದ್ರವಾಗಿತ್ತು. ಅಲ್ಲದೇ ವಿಸ್ತಾರವಾದ ಆಡಳಿತ ಪ್ರದೇಶವನ್ನು ಹೊಂದಿತ್ತು. ಆದ್ದರಿಂದ ತಮ್ಮ ಆಡಳಿತದ ಅನುಕೂಲ ದೃಷ್ಟಿಯಿಂದ ಉದ್ಬಾಳದಲ್ಲಿ ವಾಡೆಯನ್ನು ನಿರ್ಮಿಸಿಕೊಂಡರು. ಈ ವಾಡೆಯು ಸುಮಾರು ೪ ಎಕರೆಯಷ್ಟು ವಿಸ್ತಾರವನ್ನು ಹೊಂದಿದ್ದು, ಇದು ೧೦೧ ಬಾಗಿಲುಗಳಿಂದ ಕೂಡಿದೆ. ವಾಡೆಯಲ್ಲಿ ಸಾಹಿತ್ಯ ಸಂಗೀತ ಮತ್ತು ಗೋಷ್ಠಿಗಳನ್ನು ನಾಡಗೌಡರು ನಡೆಸುತ್ತಿದ್ದರು. ವಾಡೆಯಲ್ಲಿ ಗೌಡರ ಮಕ್ಕಳಿಗೆ ಬಳಗಾನೂರು ಹನುಮವ್ವ ಸಂಗೀತವನ್ನು ಹೇಳಿಕೊಡುತ್ತಿದ್ದಳು. ವಿಸ್ತಾರವಾದ ವಾಡೆಯನ್ನು ಎತ್ತರದ ಕಟ್ಟೆಯ ಮೇಲೆ ನಿರ್ಮಿಸಿದಂತೆ ಕಾಣುತ್ತದೆ. ವಾಡೆಯಲ್ಲಿ ಸಭಾಂಗಣ, ಭೋಜನಾಲಯ, ಅತಿಥಿಗಳ ಕೊಠಡಿಗಳು, ದೇವರ ಕೊಠಡಿ, ವಾಸ್ತವ್ಯದ ಕೊಠಡಿ, ಸ್ನಾನಗೃಹ, ಪಡಸಾಲೆ ಇನ್ನೂ ಮುಂತಾದ ಕೊಠಡಿಗಳನ್ನು ಕಾಣಬಹುದು. ವಾಡೆಯಲ್ಲಿನ ಕಂಬಗಳನ್ನು ಕಟ್ಟಿಗೆಯಿಂದ ನಿರ್ಮಿಸಲಾಗಿದ್ದು ಸೂಕ್ಷ್ಮ ಕೆತ್ತನೆಗಳಿಂದ ಕೂಡಿವೆ. ವಾಡೆಯ ಮುಂಭಾಗದಲ್ಲಿ ವಿಶಾಲವಾದ ದರ್ಬಾರ್ ಹಾಲ್ ಇದೆ. ನಾಡಗೌಡರು ಕುಳಿತುಕೊಳ್ಳುತ್ತಿದ್ದ ಆಸನ ಎತ್ತರದಲ್ಲಿದೆ. ದರ್ಬಾರ್ ಹಾಲ್‌ನ ಪಕ್ಕದಲ್ಲಿ ಸಂಸ್ಥಾನದ ಏಳು ಕುದುರೆಗಳಿಗೆ ಮತ್ತು ಎರಡು ಆನೆಗಳಿಗೆ ಪ್ರತ್ಯೇಕ ಕೊಠಡಿಗಳು ಇರುವುದನ್ನು ಕಾಣಬಹುದು. ಇವುಗಳನ್ನು 'ಲಾಯ' ಎಂದು ಕರೆಯಬಹುದು. ಇದಕ್ಕೆ ಅಂಟಿಕೊಂಡಿರುವಂತೆ ೨೪ ಎತ್ತಿನ ಅಂಕಣವಿದೆ. ಇದರ ಪಕ್ಕದಲ್ಲಿ ದಾಸ್ತಾನು ಕೊಠಡಿಯಿದೆ. ಆಯುಧ ಕೋಣೆ, ವಿಶೇಷ ದಿನಗಳಲ್ಲಿ ಬಳಸುತ್ತಿದ್ದ ಪಲ್ಲಕ್ಕಿ ಹಾಗೂ ಇನ್ನೂ ಮುಂತಾದ ಸಲಕರಣೆಗಳನ್ನು ಇಡಲು ಬಳಸುತ್ತಿದ್ದ ಕೋಣೆಗಳಿವೆ.

ವಾಡೆಯನ್ನು ಒಂದಸ್ತಿನಲ್ಲಿ ಗಟ್ಟಿಯಾದ ಗ್ರಾನೈಟ್ ಕಲ್ಲುಗಳಿಂದ ಕಟ್ಟಲಾಗಿದೆ. ವಾಡೆಯ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಮುಂಭಾಗದಲ್ಲಿ ಸುಮಾರು ೨೦ ಅಡಿಯಷ್ಟು ಎತ್ತರದ ಧ್ವಜಸ್ತಂಭವಿತ್ತು. ಇಂದು ಅದನ್ನು ಅಲ್ಲಿಯೇ ತೆಗೆದಿಡಲಾಗಿದೆ. ಈ ಎಲ್ಲಾ ವಾಡೆಯ ಸಮುಚ್ಚಾಯಗಳ ಸುತ್ತ ಮಣ್ಣಿನ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿತ್ತು. ಇದು ಸುಮಾರು ೨೦ ಅಡಿಗಳಷ್ಟು ಎತ್ತರದಲ್ಲಿತ್ತು ಎಂದು ಕ್ಷೇತ್ರಾಧ್ಯಯನ ಮಾಹಿತಿಯಿಂದ ತಿಳಿದುಬಂದಿದೆ. ಪ್ರವೇಶ ದ್ವಾರವನ್ನು ಮಾತ್ರ ಕಲ್ಲಿನಿಂದ ಕಟ್ಟಲಾಗಿದೆ. ಗೋಡೆಯ ಉತ್ತರಭಾಗದಲ್ಲಿ ಕಂದಕವಿದೆ. ಇಂದು ಅದನ್ನು ಒಳಚರಂಡಿಯಂತೆ ಮುಚ್ಚಲಾಗಿದೆ.

**ಬೆಳ್ಳಿಗನೂರು ವಾಡೆ :** ಬೆಳ್ಳಿಗನೂರು ಗ್ರಾಮವು ಬಳಗಾನೂರು ಕೇಂದ್ರಭಾಗದಿಂದ ೪ ಕಿ.ಮೀ. ಅಂತರದಲ್ಲಿದೆ. ಇದು ನಾಡಗೌಡಿಕೆ ಆಳ್ವಿಕೆಗೆ ಒಳಪಟ್ಟ ಗ್ರಾಮ. ನಾಡಗೌಡರು ತಮ್ಮ ಗ್ರಾಮದ ಸುತ್ತ ಸುತ್ತುಗೋಡೆಯನ್ನು ನಿರ್ಮಿಸಿಕೊಂಡಿದ್ದರು. ಸುತ್ತುಗೋಡೆಯು ಇಂದು ನಾಶವಾಗಿದ್ದು ಅವುಗಳ ಅವಶೇಷಗಳು ಮಾತ್ರ ಕಾಣಸಿಗುತ್ತವೆ. ಸುತ್ತುಗೋಡೆಯ ಮಧ್ಯದಲ್ಲಿ ನಾಡಗೌಡರ ಮನೆಯಿದೆ. ಮನೆಯ ಬಲಭಾಗದಲ್ಲಿ ಕುದುರೆ ಕಟ್ಟುವ ಮತ್ತು ರಕ್ಷಕರ ಕೊಠಡಿಗಳ ಅವಶೇಷಗಳು ಕಾಣಸಿಗುತ್ತವೆ.

**ಕಲ್ಯಾಣ ಹುಡೇವು :** ಕಲ್ಯಾಣ ಹುಡೇವು ಗ್ರಾಮದಲ್ಲಿ ಪ್ರಾಚೀನ ಕಾಲದ ಹುಡೇವು ಇದೆ. ಇದರ ಹೆಸರಿನಿಂದಲೇ ಗ್ರಾಮವನ್ನು ಗುರುತಿಸಲಾಗುತ್ತಿದೆ. ಹುಡೇವುಗಳನ್ನು ಪ್ರಾಚೀನ ಕಾಲದಲ್ಲಿ ಶತ್ರು, ಕಾಡು ಪ್ರಾಣಿ, ಪ್ರವಾಹ ಮುಂತಾದ ಆಪತ್ತುಗಳಿಂದ ಧಾನ್ಯ ಸಂಗ್ರಹಣೆ ಮತ್ತು ಸಂರಕ್ಷಣೆ ಮಾಡಲು ನಿರ್ಮಿಸಿ ಕೊಳ್ಳುತ್ತಿದ್ದರು. ಇಂತಹ ಉದ್ದೇಶವನ್ನಿಟ್ಟುಕೊಂಡು ನಿರ್ಮಾಣಗೊಂಡಿದ್ದ ಹುಡೇವು ಇಂದು ಅರ್ಧಕ್ಕಿಂತ ಹೆಚ್ಚು ಭಾಗ ನಾಶವಾಗಿದೆ. ಕೇವಲ ೧೦ ಅಡಿ ಎತ್ತರ ಮಾತ್ರ ಉಳಿದಿರುವ ಈ ಹುಡೇವುವನ್ನು ಅನಿಯಮಿತಾಕಾರದ ಕಲ್ಲುಗಳಿಂದ ಕಟ್ಟಲಾಗಿದೆ.

**ಕೆರೆ ಮತ್ತು ಬಾವಿಗಳು**

ನೀರು ಭೂಮಿಯ ಮೇಲಿನ ಜೀವಿಗಳಿಗೆ ಅತ್ಯಂತ ಅಮೂಲ್ಯವಾದ ವಸ್ತು. ನೀರಿಲ್ಲದೆ ಪ್ರಪಂಚದ ಯಾವ ಜೀವಜಂತುಗಳು ಬದುಕುಳಿಯಲು ಸಾಧ್ಯವಿಲ್ಲ. ಹಾಗಾಗಿ ನೀರನ್ನು ಪಂಚಭೂತಗಳಲ್ಲಿ ಒಂದೆಂದು ಹೇಳಲಾಗುತ್ತದೆ. ಮಾನವನು ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಅವನು ಹೆಚ್ಚಾಗಿ ನೀರಿನ ಆಸರೆಗಳಲ್ಲಿ ಬಾಳಿ ಬದುಕಿದ್ದಾನೆ. ಇದಕ್ಕೆ ಆ ಭಾಗದಲ್ಲಿ ದೊರೆತಿರುವ ಮಾನವ ನೆಲೆಯ ಕುರುಹುಗಳೇ ಸಾಕ್ಷಿಗಳಾಗಿವೆ. ನೂತನ ಶಿಲಾಯುಗದ ಮಾನವನು ಮಳೆಯ ನೀರಿನ ಉಪಯೋಗವನ್ನು ಮಾಡಲು ಮೊದಲಿಗೆ ಅರಿತನು. ಭೂಮಿಯ ಮೇಲೆ ಉಂಟಾದ ತಗ್ಗುಗಳಲ್ಲಿ ಮಳೆಗಾಲದಲ್ಲಿ ನೀರು ನಿಲ್ಲುವುದನ್ನು ಕಂಡ ಮಾನವನು ಮಳೆ ಇಲ್ಲದ ಸಮಯದಲ್ಲಿ ಅದನ್ನು ಉಪಯೋಗಿಸಲು ಪ್ರಾರಂಭಿಸಿದನು. ಹೀಗೆ ನೀರಿನ ಬಳಕೆ ತಂತ್ರವನ್ನು ಅರಿತ ಇವನು ತಾಮ್ರಯುಗ ಹಾಗೂ ಬೃಹತ್ ಶಿಲಾಯುಗದಲ್ಲಿ ಪ್ರಾಕೃತಿಕವಾಗಿ ಬೆಟ್ಟಗುಡ್ಡಗಳಿಂದ ಬರುವ ಮಳೆಯ ನೀರಿಗೆ ಕೆಳಭಾಗದಲ್ಲಿ ಅಡ್ಡಗಟ್ಟಿ ನೀರನ್ನು ಸಂಗ್ರಹಿಸಿ ನಿತ್ಯ ಬಳಕೆಗೆ ಹಾಗೂ ವ್ಯವಸಾಯಕ್ಕೆ ಬಳಸಿರುವ ಹಲವಾರು ಉದಾಹರಣೆಗಳು ದಕ್ಷಿಣ ಭಾರತದಲ್ಲಿ ಉತ್ಖನನಗೊಂಡ ಬೃಹತ್ ಶಿಲಾಯುಗದ ನೆಲೆಗಳಲ್ಲಿ ಪತ್ತೆಯಾಗಿವೆ.[೨೯]

ಚರಿತ್ರೆಯ ಆರಂಭ ಕಾಲದಿಂದಲೂ ಸಮಾಜದ ಏಳಿಗೆಗೆ ಬೆನ್ನೆಲುಬಾದ ಬೇಸಾಯಕ್ಕೆ ನೀರಾವರಿಯು ಅನಿವಾರ್ಯ ಎಂದು ತಿಳಿದಿದ್ದರಿಂದ ಅದರ ವಿಕಾಸಕ್ಕೆ ಸಕಲ ಪ್ರಯತ್ನಗಳನ್ನು ಕೈಗೊಂಡಿರುವುದು ತಿಳಿದುಬರುತ್ತದೆ. ಆಗಿನ ಕಾಲದ ರಾಜರು, ಸಾಮಂತರು, ಅಧಿಕಾರಿಗಳು ಮತ್ತು ಶ್ರೀಮಂತರು, ಮಹಿಳೆಯರು ಹಾಗೂ ಪ್ರಜೆಗಳು ಸಹ ಕೆರೆ, ಬಾವಿ, ಕಾಲುವೆಗಳ ನಿರ್ಮಾಣಕ್ಕೆ ಮುಂದಾಗುತ್ತಿದ್ದರು. ಪ್ರಾಚೀನ ಶಾಸನಗಳು ಮತ್ತು ಗ್ರಂಥಗಳು ನೀರಾವರಿಗೆ ಸಂಬಂಧಿಸಿದ ಕೆರೆ, ಕಾಲುವೆ, ಬಾವಿಗಳ ನಿರ್ಮಾಣದ ಬಗ್ಗೆ ಹಾಗೂ ಅಂತಹವುಗಳ ನಿರ್ಮಾಣದ ಪ್ರಾಮುಖ್ಯತೆ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ. ಕ್ರಿ.ಶ. ೩೪೫ರ ಕದಂಬ ಮಯೂರವರ್ಮನ ಚಂದ್ರವಳ್ಳಿ ಶಾಸನವು ಅವನು ನಿರ್ಮಿಸಿದ ಸಾವಿರ ಅಡಿಗಳ ಅಗಲ ಮತ್ತು

ಆಳದ ಹುಲಿಗೊಂದಿ ಕೆರೆಯ ಬಗೆಗೆ ತಿಳಿಸುತ್ತದೆ. ಇದು ಬಹುಶಃ ಕನ್ನಡ ನಾಡಿನ ಶಾಸನಾಧಾರಿತ ಪ್ರಾಚೀನ ಕೆರೆ ಎಂದರೆ ತಪ್ಪಾಗಲಾರದು.[೨೦]

ನದಿ ಮತ್ತು ಕೆರೆಯ ನೀರು ಎಟುಕದ ಭೂಮಿಯಲ್ಲಿ ಕೃಷಿ ಅಭಿವೃದ್ಧಿಗಾಗಿ ಬಾವಿಗಳನ್ನು ತೋಡುತ್ತಿದ್ದರು. ಈ ಬಾವಿಗಳಿಗೆ ಸಾಮಾಜಿಕ ಮತ್ತು ಧಾರ್ಮಿಕವಾಗಿ ತಮ್ಮದೇ ಆದ ಸ್ಥಾನವಿದೆ. ವಿಷ್ಣುಧರ್ಮೋತ್ತರ ಪುರಾಣದಲ್ಲಿ ಸಾರ್ವಜನಿಕ ಹಿತಕ್ಕಾಗಿ ಬಾವಿ ಅಗೆಸಿದವನು ವರುಣ ಲೋಕದಲ್ಲಿ ಸ್ಥಾನ ಪಡೆಯುತ್ತಾನೆಂದು ತಿಳಿಸಿದೆ. ಪುರಾತನ ಕಾಲದಲ್ಲಿ ಬಾವಿಗಳನ್ನು ಕೃಷಿಗೆ ಮಾತ್ರವಲ್ಲದೆ ಧಾರ್ಮಿಕ ಜೀವನದ ವಿವಿಧ ಕಾರ್ಯಗಳಿಗಾಗಿ ನಿರ್ಮಿಸಲಾಗುತ್ತಿತ್ತು. ನೀರು ಸಿಗುವ ಜಾಗವನ್ನು ಜಲಸಂಶೋಧಕರು ತಮ್ಮದೇ ಆದ ವಿಧಾನಗಳಿಂದ ಗುರುತಿಸುತ್ತಿದ್ದರು. 'ಲೋಕೋಪಕಾರ'[೨೧] ಕೃತಿಯು ಜಲಸಂಶೋಧನೆಯ ಕುರಿತು ಒಂದು ಅಧ್ಯಾಯವನ್ನೇ ಹೊಂದಿದೆ. ವಾಸಸ್ಥಳಗಳಲ್ಲಿರುವ ಬಾವಿಗಳು ಕುಡಿಯಲು, ನಿತ್ಯಕರ್ಮ ಮತ್ತು ಕೈತೋಟಗಳಿಗೆ ನೀರುಣಿಸುತ್ತಿದ್ದರೆ, ದೇವಾಲಯಗಳ ಬಾವಿಗಳು ಧಾರ್ಮಿಕ ಕಾರ್ಯಗಳಿಗಾಗಿ ಉಪಯೋಗ ವಾಗುತ್ತಿದ್ದವು.

ವಿಜಯನಗರದ ಪ್ರೌಢ ಪ್ರತಾಪದೇವರಾಯನ ಕಾಲದಲ್ಲಿ ರಚಿತವಾದ(ಕ್ರಿ.ಶ.ಸು. ೧೪೧೧) ಹಂಪೆಯ ಶಾಸನದಲ್ಲಿ ಬರುವ ಒಂದು ಪದ್ಯದಲ್ಲಿ ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷನನ್ನು ರಕ್ಷಿಸು ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಹಾಕಿದಳಂತೆ.[೨೨] ಇದು ಆ ಕಾಲದಲ್ಲಿ ಕೆರೆಯನ್ನು ಕಟ್ಟಿಸುವುದು ಮತ್ತು ಬಾವಿಗಳನ್ನು ತೋಡಿಸುವುದು ಅತಿ ಮುಖ್ಯವಾದ ಕೆಲಸವಾಗಿತ್ತೆಂದು ಸ್ಪಷ್ಟಪಡಿಸುತ್ತದೆ.

ಪ್ರಸ್ತುತ ಅಧ್ಯಯನ ವ್ಯಾಪ್ತಿಯಲ್ಲಿ ಕಂಡುಬಂದಿರುವ ಕೆರೆಗಳು ಮತ್ತು ಬಾವಿಗಳು ಸಾರ್ವಜನಿಕ ಮತ್ತು ಧಾರ್ಮಿಕ ಕಾರ್ಯಗಳಿಗೆ ಬಳಸುವಂತಹವುಗಳಾಗಿವೆ.

**ಕೆರೆ**

೧. **ಜವಳಗೆರೆ :** ಈ ಅಧ್ಯಯನ ಸಂದರ್ಭದಲ್ಲಿ ಕೆರೆಗಳ ಬಗ್ಗೆ ಸಿಕ್ಕಿರುವ ಕುರುಹುಗಳೆಂದರೆ ಜವಳಗೆರೆಯಲ್ಲಿರುವ ಜೋಡುಕೆರೆಗಳು ಮಾತ್ರ. ಜವಳಗೆರೆ ಗ್ರಾಮದಲ್ಲಿ ಕಾಣಬರುವ ಈ ಜೋಡು ಕೆರೆಗಳು ಸುಮಾರು ೨೦ ಎಕರೆಗಳಷ್ಟು ವಿಸ್ತೀರ್ಣವನ್ನು ಹೊಂದಿವೆ. ಇಂದು ಕೆರೆಗಳ ಬದುಗಳು ಬಹುತೇಕವಾಗಿ ನಾಶವಾಗಿವೆ ಅಥವಾ ಕೆಳಗೆ ಇಳಿದಿವೆ. ಸದ್ಯ ಈ ಕೆರೆಯು ಕೃಷಿಗೆ ಬಳಕೆಯಾಗುತ್ತಿದೆ. ಸ್ವಾತಂತ್ರ್ಯಪೂರ್ವದಲ್ಲಿ ಮಳೆಯ ಅಭಾವದಿಂದ ಜೋಡುಕೆರೆಗಳನ್ನು ನಿರ್ಮಿಸಲಾಗಿತ್ತು. ಕೆರೆಗಳು ಸಂಪೂರ್ಣ ಮಳೆಯಾಧಾರಿತ ವಾಗಿದ್ದವು. ವರ್ಷದ ಮಳೆಗಾಲದಲ್ಲಿ ತುಂಬಿದ ಕೆರೆ ನೀರು ಮರುವರ್ಷ ಮಳೆಗಾಲ ಬರುವವರೆಗೂ ನೀರು ಇರುತ್ತಿತ್ತು ಎಂಬ ಮಾಹಿತಿ ಕ್ಷೇತ್ರಾಧ್ಯಯನದಿಂದ ತಿಳಿದುಬಂದಿದೆ. ಈ ಕೆರೆಯ ನೀರು ಸಾರ್ವಜನಿಕರಿಗೆ ಮತ್ತು ಪಶುಗಳಿಗೆ ಬಳಕೆಯಾಗುತ್ತಿತ್ತು.

**ಬಾವಿಗಳು**

೧. **ಜಾಲವಾಡಿಗೆ :** ಜಾಲವಾಡಿಗಿ ಗ್ರಾಮದ ಊರ ಅಗಸಿಯೊಳಗೆ ವಿಜಯನಗರ ಕಾಲದ ಒಂದು ಬಾವಿಯಿದೆ. ಇದು ಕ್ರಿ.ಶ. ೧೪-೧೫ನೇ ಶತಮಾನದಲ್ಲಿ ನಿರ್ಮಾಣಗೊಂಡಿರಬೇಕು. ಈ ಬಾವಿಯನ್ನು

ಚೌಕಾಕಾರ ಮತ್ತು ಚಪ್ಪಟೆಯಾಕಾರದ ಗ್ರಾನೈಟ್ ಕಲ್ಲಿನಿಂದ ಕಟ್ಟಲಾಗಿದೆ. ಬಾವಿಯು ಸುಮಾರು ೧೮ ಅಡಿ ಉದ್ದ ಮತ್ತು ಅಗಲವನ್ನು ಹೊಂದಿದ್ದು ಚೌಕಾಕಾರವಾಗಿದೆ. ಬಾವಿಯ ಗೋಡೆಯಲ್ಲಿ ಯಾವುದೇ ಉಬ್ಬುಶಿಲ್ಪಗಳು ಇಲ್ಲ. ಬಾವಿಯೊಳಕ್ಕೆ ಇಳಿಯಲು ಪೂರ್ವದಿಕ್ಕಿನಲ್ಲಿ ಮೆಟ್ಟಿಲುಗಳಿವೆ. ಸುಮಾರು ಆರು ಮೆಟ್ಟಿಲುಗಳು ಮಾತ್ರ ಹೊರಕಾಣುತ್ತಿದ್ದು ಉಳಿದ ಮೆಟ್ಟಿಲುಗಳು ನೀರಿನಲ್ಲಿ ಮುಳುಗಿವೆ. ಮೆಟ್ಟಿಲುಗಳ ಮುಂಬದಿಯಲ್ಲಿ ಅರ್ಧಭಾಗ ಮುರಿದ ಕಂಬಗಳಿವೆ. ಇವು ಗೆರೆ ಪಟ್ಟಿಯ ಅಲಂಕಾರವನ್ನು ಹೊಂದಿವೆ. ಬಾವಿಯ ಸುತ್ತುಗೋಡೆಗಳು ಉತ್ತಮವಾಗಿವೆ. ಆದರೆ ಬಾವಿಯ ನೀರನ್ನು ಮಾತ್ರ ಬಳಸದೆ ಬಿಟ್ಟಿರುವ ಕಾರಣ ನೀರು ಮಲೀನಗೊಂಡಿದೆ. ಬಾವಿಯ ನೀರು ಹಿಂದೆ ಧಾರ್ಮಿಕ ಕಾರ್ಯಗಳಿಗೆ ಹೆಚ್ಚಾಗಿ ಬಳಕೆಯಾಗುತ್ತಿತ್ತು.

**೨. ಚಿಕ್ಕ ಕಡಬೂರು :** ಚಿಕ್ಕ ಕಡಬೂರು ಗ್ರಾಮದ ಪಶ್ಚಿಮ ದಿಕ್ಕಿಗೆ ಆದಿ ಬಸವೇಶ್ವರ ದೇವಾಲಯವಿದೆ. ಈ ದೇವಾಲಯದ ಪಕ್ಕದಲ್ಲಿ ಪಾಳೇಗಾರರ ಕಾಲದ ಬಾವಿಯಿದೆ. ಬಾವಿಯ ನಿರ್ಮಾಣ ಶೈಲಿಯನ್ನಾಧರಿಸಿ ಇದರ ಕಾಲ ಕ್ರಿ.ಶ. ೧೬-೧೭ನೇ ಶತಮಾನದ್ದೆಂದು ಹೇಳಬಹುದು. ಬಾವಿಯನ್ನು ಆಯತಾಕಾರವಾಗಿರುವ ಒಂದು ರೀತಿಯ ಕೆಂಪುಶಿಲೆಯನ್ನು ಬಳಸಿ ಕಟ್ಟಲಾಗಿದೆ. ಬಾವಿಯು ಸುಮಾರು ೧೫ ಅಡಿ ಉದ್ದ, ೧೫ ಅಡಿ ಅಗಲವನ್ನು ಹೊಂದಿದ್ದು ಚೌಕಾಕಾರವಾಗಿದೆ. ಉತ್ತರ ದಿಕ್ಕಿನಿಂದ ಬಾವಿಯೊಳಕ್ಕೆ ಇಳಿಯಲು ೧೨ ಮೆಟ್ಟಿಲುಗಳಿವೆ. ಮೇಲಿನಿಂದ ಆರು ಮೆಟ್ಟಿಲುಗಳನ್ನು ಇಳಿದ ನಂತರ ಎಡಬಲ ಬದಿಯಲ್ಲಿ ಗರ್ಭಗೃಹವನ್ನು ಹೋಲುವ ಎರಡು ಸಣ್ಣ ಕೋಣೆಗಳಿವೆ. ಈ ಕೋಣೆಗಳಲ್ಲಿ ನಂದಿ ಮತ್ತು ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಕೋಣೆಗಳ ಲಲಾಟಬಿಂಬದಲ್ಲಿ ಗಣೇಶ ಮತ್ತು ಕೀರ್ತಿಮುಖದ ಉಬ್ಬುಶಿಲ್ಪಗಳಿವೆ. ಉಳಿದ ಆರು ಮೆಟ್ಟಿಲುಗಳನ್ನು ಇಳಿದ ನಂತರದಲ್ಲಿ ಬಾಳೆ ಹೂವಿನ ಮೊಗ್ಗಿವಿನಾಕಾರದ ರಚನೆಯಿದೆ. ಬಾವಿಯ ವಾಸ್ತುವಿನಲ್ಲಿ ಕಾಣಬರುವ ವಿಶೇಷ ಭಾಗ ಇದಾಗಿದೆ. ಇದು ಪ್ರವೇಶದ್ವಾರದಂತೆ ಕಾಣುತ್ತದೆ. ಬಾಳೆಹೂವಿನ ಮೊಗ್ಗಿ ವಿನಾಕಾರದ ರಚನೆಯುಳ್ಳ ಕಲ್ಲಿನ ತುಂಡಿನ ಮೇಲೆ ಕೀರ್ತಿಮುಖದ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಇದು ಸ್ಪಷ್ಟವಾದ ರಚನೆಯನ್ನು ಹೊಂದಿದ್ದು ನೀರಿರುವ ಕಡೆಗಿದೆ.

ಬಾವಿಯ ಎರಡು ಗೋಡೆಗಳು ಹಾಳಾಗಿದ್ದು, ಉಳಿದ ಎರಡು ಗೋಡೆಗಳು ಮಾತ್ರ ಉತ್ತಮ ರೀತಿಯಲ್ಲಿವೆ. ಈ ಗೋಡೆಗಳಲ್ಲಿ ತಾಳ, ಮದ್ದಲೆ, ನಗಾರಿ ಹಿಡಿದು ಬಾರಿಸುವ ಪುರುಷರ ಹಾಗೂ ನೃತ್ಯನಿರತ ಸ್ತ್ರೀಯ ಉಬ್ಬುಶಿಲ್ಪಗಳಿವೆ. ಬಾವಿಯ ಬಲಗಡೆಯ ಗೋಡೆಯಲ್ಲಿ ನೃತ್ಯನಿರತ ಸ್ತ್ರೀ, ಪದ್ಮದ ಉಬ್ಬುಶಿಲ್ಪಗಳಿವೆ. ಸವಾರಿ ನಿರತ ಕುದುರೆ, ಆನೆಯ ಮೇಲೆ ಮಾವುತನಿರುವ ಉಬ್ಬುಶಿಲ್ಪಗಳಲ್ಲದೆ ಇನ್ನೂ ಮುಂತಾದ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಬಾವಿಯ ದಂಡೆಯ ಮೇಲೆ ಸಪ್ತಮಾತೃಕೆಯರ ಮೂರ್ತಿಶಿಲ್ಪಗಳಿವೆ.

ಈ ಎಲ್ಲಾ ಅಂಶಗಳು ಆಗಿನ ಕಾಲದ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳ ಬಗ್ಗೆ ಚಿತ್ರಣವನ್ನು ನೀಡುತ್ತವೆ.

**೩. ಉದ್ಬಾಳ(ಉ) :** ಉದ್ಬಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದಲ್ಲಿ ವಿಜಯನಗರೋತ್ತರ ಕಾಲದ ಬಾವಿಯಿದೆ. ಇದು ಅಧ್ಯಯನ ಕ್ಷೇತ್ರದ ವ್ಯಾಪ್ತಿಯಲ್ಲಿ ಸಿಕ್ಕಿರುವ ವಿಶಿಷ್ಟ

ಬಾವಿಯಾಗಿದೆ. ಈ ಬಾವಿಯನ್ನು ಸ್ಥಳೀಯವಾಗಿ 'ಚೌಕಿ ಬಾವಿ' ಎಂದು ಕರೆಯುತ್ತಾರೆ. ಬಾವಿಯನ್ನು ನಿರ್ದಿಷ್ಟ ಆಕಾರದ ಕಲ್ಲುಗಳಿಂದ ಕಟ್ಟಲಾಗಿದೆ. ಬಾವಿಯನ್ನು ಎರಡು ಭಾಗವಾಗಿ ವಿಂಗಡಿಸಲಾಗಿದೆ. ಈ ಎರಡು ಭಾಗವನ್ನು ಸೇರಿಸಿದಾಗ ಇದು ಆಯತಾಕಾರವಾಗಿ ಕಾಣುತ್ತದೆ. ಬಾವಿಯು ಸುಮಾರು ೧೫ ಅಡಿ ಉದ್ದ, ೮ ಅಡಿ ಅಗಲವನ್ನು ಹೊಂದಿದೆ. ಪೂರ್ವ ದಿಕ್ಕಿನಿಂದ ಇಳಿಯಲು ೫ ಮೆಟ್ಟಿಲುಗಳಿವೆ. ಮೆಟ್ಟಿಲುಗಳನ್ನು ಇಳಿದ ನಂತರ ಮೊದಲಿಗೆ ಆಯತಾಕಾರವಾದ ಕೋಣೆಯ ಭಾಗ ಕಂಡುಬರುತ್ತದೆ. ಕೋಣೆಯಲ್ಲಿ ದೇವಕೋಷ್ಟಗಳಿವೆ. ಕೋಷ್ಟಗಳಲ್ಲಿ ನಂದಿ ಮತ್ತು ಶಿವಲಿಂಗ ಮೂರ್ತಿಶಿಲ್ಪಗಳನ್ನು ಕಾಣಬಹುದು. ಒಟ್ಟಾರೆ ಬಾವಿಯಲ್ಲಿ ೧೧ ಲಿಂಗಗಳಿವೆ ಎಂದು ಅಲ್ಲಿನವರು ಹೇಳಿದರೂ ಅಧ್ಯಯನ ಸಮಯದಲ್ಲಿ ಎರಡು ಲಿಂಗ, ನಂದಿಮೂರ್ತಿಶಿಲ್ಪಗಳು ಕಂಡು ಬಂದಿವೆ. ಕೋಣೆಯ ಮೇಲ್ಭಾಗವನ್ನು ಇಟ್ಟಿಗೆ ಮತ್ತು ಗಾರೆಗಳಿಂದ ಕಟ್ಟಲಾಗಿದೆ. ಇದು ಮೇಲ್ಛಾವಣಿಯಂತೆ ಕಾಣಿಸುತ್ತದೆ. ಕೋಣೆಯ ಮುಂಭಾಗದಲ್ಲಿ ನೀರು ತುಂಬಿರುವ ಆಳವಾದ ಬಾವಿಯಿದೆ.

ಇದೇ ಗ್ರಾಮದಲ್ಲಿ ನಾಡಗೌಡರ ತೋಟದ ಮನೆಯ ಹತ್ತಿರ ಇನ್ನೊಂದು ಬಾವಿಯಿದೆ. ಇದನ್ನು ಅನಿಯಮಿತ ಆಕಾರದ ಕಲ್ಲುಗಳನ್ನು ಉಪಯೋಗಿಸಿ ಕಟ್ಟಲಾಗಿದೆ. ದಕ್ಷಿಣ ದಿಕ್ಕಿನಿಂದ ಇಳಿಯಲು ಮೆಟ್ಟಿಲು ವ್ಯವಸ್ಥೆಯಿದೆ. ಇಂದು ಬಾವಿಯ ಅರ್ಧ ಭಾಗ ಮುಚ್ಚಿದೆ.

೪. **ಗೌಡನಬಾವಿ :** ಗೌಡನಬಾವಿ ಗ್ರಾಮದಲ್ಲಿ ಕ್ರಿ.ಶ. ೧೭-೧೮ನೇ ಶತಮಾನದ ಬಾವಿಯೊಂದಿದೆ. ಈ ಬಾವಿಯು ಸುಮಾರು ೫೦ ಅಡಿ ಉದ್ದ ೫೦ ಅಡಿ ಅಗಲವನ್ನು ಹೊಂದಿದ್ದು ಚೌಕಾಕಾರವಾಗಿದೆ. ಬಾವಿಯನ್ನು ಕಟ್ಟಲು ಆಯತಾಕಾರವಾಗಿರುವ ಕಪ್ಪುಶಿಲೆಯನ್ನು ಬಳಸಲಾಗಿದೆ. ಬಾವಿಯನ್ನು ಸುಸ್ಥಿಯಲ್ಲಿಡಲು ಎತ್ತರವಾದ ಕಟ್ಟೆಯನ್ನು ಕಟ್ಟಲಾಗಿದೆ. ಬಾವಿಯೊಳಕ್ಕೆ ಇಳಿಯಲು ಆಗ್ನೇಯ ದಿಕ್ಕಿನಲ್ಲಿ ಸುಮಾರು ೨೦ ಮೆಟ್ಟಿಲುಗಳಿವೆ. ಬಾವಿಯ ದಕ್ಷಿಣ ಗೋಡೆಯೊಳಗೆ ಕೋಣೆಯಾಕಾರದ ರಚನೆಯಿದೆ. ಇಲ್ಲಿ ನಂದಿ ಮತ್ತು ಶಿವಲಿಂಗಗಳನ್ನು ಕಾಣಬಹುದು. ಹಾಗೆಯೇ ಬಾಳೆ ಹೂವಿನ ಮೊಗ್ಗಿನಾಕಾರದಲ್ಲಿ ಇಳಿಬಿಟ್ಟ ರಚನೆಯಿದೆ. ಈಗ ಪ್ರಸ್ತುತವಾಗಿರುವ ಮೆಟ್ಟಿಲುಗಳು ನಿರ್ಮಾಣಗೊಳ್ಳುವುದಕ್ಕಿಂತ ಮುಂಚೆ ಇಲ್ಲಿಂದಲೇ ಮೆಟ್ಟಿಲುಗಳು ಇದ್ದವು. ಇಂದು ಆ ಭಾಗವನ್ನು ಕಲ್ಲು ಮಣ್ಣುಗಳಿಂದ ಮುಚ್ಚಲಾಗಿದೆ. ಬಾವಿಯ ಪೂರ್ವಭಾಗದ ಗೋಡೆಯಲ್ಲಿ ಮುಂಚಾಚಿದ ಜಗಲಿ ಮತ್ತು ಕೈಸಾಲೆಗಳಿವೆ. ಬಾವಿಯ ಗೋಡೆಯಲ್ಲಿ ನಾಗ, ನಂದಿ, ಮೀನು, ಸಿಂಹದ ಉಬ್ಬುಶಿಲ್ಪಗಳು ಇವೆ.

ಈ ಬಾವಿಯ ನೀರನ್ನು ಹಿಂದಿನಿಂದಲೂ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಿಗೆ ಬಳಸುತ್ತ ಬರಲಾಗಿದೆ. ಈ ಬಾವಿಯಲ್ಲಿ ಬಸವಣ್ಣ ಇದ್ದಾನೆ ಎಂದು ಅಲ್ಲಿನವರು ಹೇಳುತ್ತಾರೆ. ಆದ್ದರಿಂದ ಈ ಬಾವಿಯನ್ನು 'ಬಸವಣ್ಣ ಬಾವಿ' ಎಂದು ಸ್ಥಳೀಯವಾಗಿ ಕರೆಯುತ್ತಾರೆ.

೫. **ಜವಳಗೆರೆ :** ಜವಳಗೆರೆ ಗ್ರಾಮದಲ್ಲಿ ಸ್ವತಂತ್ರ ಪೂರ್ವಕಾಲದಲ್ಲಿ ನಿರ್ಮಿಸಲಾದ ಮೂರು ಬಾವಿಗಳಿವೆ. ನಾಡಗೌಡರ ಹೊಲದಲ್ಲಿ ಒಂದು ಬಾವಿಯಿದೆ. ಇದನ್ನು ಸ್ಥಳೀಯವಾಗಿ 'ಇಮಾಮ್ ಸಾಹೇಬ್ ಬಾವಿ' ಎಂದು ಕರೆಯುತ್ತಾರೆ. ಬಾವಿಯು ೨೦ ಅಡಿ ಉದ್ದ ೨೦ ಅಡಿ ಅಗಲವನ್ನು ಹೊಂದಿದ್ದು ಚೌಕಾಕಾರವಾಗಿದೆ.

ಸರಳವಾಗಿರುವ ಈ ಬಾವಿಯು ಜೀರ್ಣೋದ್ಧಾರಗೊಂಡಿದೆ. ಬಾವಿಯ ಗೋಡೆಯಲ್ಲಿ ಯಾವುದೇ ಉಬ್ಬುಶಿಲ್ಪ, ಮೆಟ್ಟಿಲುಗಳಾಗಲಿ ಇಲ್ಲ. ಬಾವಿಯ ನೀರನ್ನು ಮೇಲೆತ್ತಲು ಕಬ್ಬಿಣದ ತುಂಡು ಇಟ್ಟಿರುವುದನ್ನು ಕಾಣಬಹುದು.

ಇನ್ನೆರಡು ಬಾವಿಗಳು ನಾಡಗೌಡರ ಮನೆಯ ಆವರಣದಲ್ಲಿ ಕಾಣಸಿಗುತ್ತವೆ. ಈ ಬಾವಿಗಳು ಸುಮಾರು ಮೂರು ಅಡಿ ಸುತ್ತಳತೆ ಹೊಂದಿದ್ದು ವೃತ್ತಾಕಾರವಾಗಿವೆ. ನಾಡಗೌಡರ ಮನೆಯ ಎಡಭಾಗದಲ್ಲಿರುವ ಬಾವಿಯನ್ನು ಸ್ಥಳೀಯವಾಗಿ 'ಚೆನ್ನಮ್ಮನ ಬಾವಿ' ಎಂದು ಕರೆಯುತ್ತಾರೆ. ಈ ಬಾವಿಯ ಸುತ್ತ ಎರಡು ಅಡಿ ಎತ್ತರವಿರುವ ಕಟ್ಟೆಯನ್ನು ಕಟ್ಟಲಾಗಿದೆ. ಕಟ್ಟೆಯ ಮಧ್ಯದಲ್ಲಿರುವ ಬಾವಿಗೆ ಮತ್ತೆ ಮೂರು ಅಡಿ ಎತ್ತರದ ಕಟ್ಟೆಯನ್ನು ಕಟ್ಟಲಾಗಿದೆ. ಇದನ್ನು ಬಾವಿಯ ಸಂರಕ್ಷಣೆಯ ಉದ್ದೇಶದಿಂದ ನಿರ್ಮಿಸಿರುವುದು ಕಂಡುಬರುತ್ತದೆ. ಬಾವಿಯ ಪಕ್ಕದಲ್ಲಿಯೇ ಸುಮಾರು ೧೦ ಅಡಿ ಉದ್ದದ ಕಲ್ಲಿನ ತೊಟ್ಟಿಯಿದೆ. ಈ ತೊಟ್ಟಿಯನ್ನು ಪಶುಗಳಿಗೆ ನೀರು ಕುಡಿಸಲು ಬಳಸುತ್ತಿದ್ದಿರಬೇಕು.

ಇದೇ ಸುತ್ತಳತೆಯನ್ನು ಹೊಂದಿರುವ ಇನ್ನೊಂದು ಬಾವಿ ವೆಂಕಟರಮಣ ದೇವಾಲಯದ ಮುಂಭಾಗ ದಲ್ಲಿದೆ. ಬಾವಿಯನ್ನು ವಿಶೇಷ ಧಾರ್ಮಿಕ ಕಾರ್ಯಗಳಿಗಾಗಿ ಬಳಸಲು ನಿರ್ಮಿಸಲಾಗಿದೆ.

### ೪.೩. ಮೂರ್ತಿಶಿಲ್ಪ

ಭಾರತದಲ್ಲಿ ದೇವತಾರಾಧನೆ ಮತ್ತು ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೋ ಅಂದಿನಿಂದಲೇ ದೇವತಾಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆಯುತ್ತ ಬಂದಿದೆ. ಯಾವುದೇ ಮತಪಂಥಗಳ ದೇವಾಲಯವನ್ನು ಅವಲೋಕಿಸಿದರೆ ಆ ದೇವಾಲಯಕ್ಕೊಂದು ಸಾಂಸ್ಕೃತಿಕ ದೇವತಾಮೂರ್ತಿ ಇದ್ದೇ ಇರುತ್ತದೆ. ಈ ಮೂರ್ತಿ ಅಥವಾ ಶಿಲ್ಪಗಳನ್ನು ಕುರಿತ ಶಾಸ್ತ್ರೀಯ ಅಧ್ಯಯನವೇ ಶಿಲ್ಪಶಾಸ್ತ್ರವಾಗಿದೆ. ಮೂರ್ತಿಶಿಲ್ಪ ವಾಸ್ತುಶಿಲ್ಪದ ಜೊತೆಯಲ್ಲಿ ಬೆಳೆದುಬಂದಿದೆ ಎನ್ನುವುದು ಹಲವು ವಿದ್ವಾಂಸರ ವಾದ. ಆದರೆ ಮೂರ್ತಿಶಿಲ್ಪವು ವಾಸ್ತುಶಿಲ್ಪಕ್ಕಿಂತ ಪ್ರಾಚೀನತೆಯನ್ನು ಹೊಂದಿದೆ ಎಂದು ಹೇಳಬಹುದು.

ಪ್ರಾಗಿತಿಹಾಸ ಕಾಲದಿಂದ ಆರಂಭವಾದ ಮೂರ್ತಿಶಿಲ್ಪದ ರಚನೆ ಮತ್ತು ಆರಾಧನೆ ಚಾರಿತ್ರಿಕ ಕಾಲದಲ್ಲಿ ಉತ್ತಮವಾದ ಬೆಳವಣಿಗೆಯನ್ನು ಕಂಡಿತು. ಮೌರ್ಯರ ಕಾಲದಲ್ಲಿ ಸಾರನಾಥ, ಲೋಮಋಷಿ ಮುಂತಾದ ಗುಹಾಲಯಗಳಲ್ಲಿರುವ ಕಲೆಯು ಭಾರತೀಯ ಶಿಲ್ಪಕಲಾ ಬೆಳವಣಿಗೆಯಲ್ಲಿ ಪ್ರಮುಖ ಹಂತವೆನ್ನಬಹುದು. ಅದು ಗುಪ್ತರ ಕಾಲದಲ್ಲಿ ಅರಸರ ಪ್ರೋತ್ಸಾಹದೊಂದಿಗೆ ಭಾರತೀಯ ಮೂರ್ತಿಶಿಲ್ಪ ಉನ್ನತವಾದ ಸ್ಥಾನ ಪಡೆಯಿತು. ಕರ್ನಾಟಕದಲ್ಲಿಯೂ ಸಹ ಮೂರ್ತಿಶಿಲ್ಪಕ್ಕೆ ಇತಿಹಾಸಪೂರ್ವ ಕಾಲದಿಂದಲೂ ಮಹತ್ತರವಾದ ಸ್ಥಾನವಿದೆ. ಆದರೆ ಅದು ವಿಸ್ತಾರಗೊಂಡಿದ್ದು ಮಾತ್ರ ಚಾರಿತ್ರಿಕ ಕಾಲಘಟ್ಟದಲ್ಲಿ. ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮೂರ್ತಿಶಿಲ್ಪಗಳು ಉತ್ತಮ ಸ್ಥಿತಿಯನ್ನು ತಲುಪಿ ಹೊಯ್ಸಳರ ಕಾಲಕ್ಕೆ ಅತ್ಯಂತ ಸುಂದರ ರೂಪವನ್ನು ಪಡೆಯಿತು. ನಂತರ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಕೆಲವು ಬದಲಾವಣೆಗಳು ಉಂಟಾದವು. ಕಾಲ ಕಾಲಕ್ಕೆ ಉಂಟಾದ ಶೈಲಿ, ರೂಪ ಮತ್ತು ಭಾವಗಳಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು.

ಶಿಲ್ಪಶಾಸ್ತ್ರ ಮೂರ್ತಿಗಳ ರಚನೆಯ ಲಕ್ಷಣಗಳನ್ನು ನಿರ್ದಿಷ್ಟವಾಗಿ ತಿಳಿಸುತ್ತದೆ. ಶಿಲ್ಪಶಾಸ್ತ್ರದಲ್ಲಿ ಪ್ರತಿಮೆಗಳನ್ನು ರಚಿಸುವ ಮೊದಲು ಶಿಲ್ಪಿಯು ಆ ದೇವರ ರೂಪವನ್ನು ಮನನ ಮಾಡಿಕೊಳ್ಳಲು ಆ ದೇವರ ಧ್ಯಾನ ಮತ್ತು ಶ್ಲೋಕವನ್ನು ಜಪಿಸುತ್ತಾನೆ. ಹೀಗೆ ಧ್ಯಾನದ ಮೂಲಕ ಮನಸ್ಸಿನಲ್ಲಿ ಮೂಡಿದ ಶಿಲ್ಪವನ್ನು ಭಾವಶಿಲ್ಪ ಎನ್ನುವರು.[೩೩] ಶಿಲ್ಪಿಗಳು ತಾವು ಕಂಡ ರೂಪವನ್ನು ಮರ, ಶಿಲೆ, ಮೇಣದಲ್ಲಿ ರೂಪಿಸುತ್ತಾರೆ. ಹೀಗೆ ನಿರ್ಮಿಸಿದ ಮೂರ್ತಿಯನ್ನು ಸುಮುಹೂರ್ತದಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡಲಾಗುತ್ತದೆ. ಹೀಗೆ ಶಿಲೆಯ ಆಯ್ಕೆಯಿಂದ ಹಿಡಿದು ಮೂರ್ತಿ ಪ್ರತಿಷ್ಠಾಪನೆಯ ಹಂತದವರೆಗಿನ ಶಾಸ್ತ್ರನಿಯಮಗಳನ್ನು ಹಲವಾರು ಮೂರ್ತಿವಿಜ್ಞಾನ ಗ್ರಂಥಗಳಲ್ಲಿ ಸವಿಸ್ತಾರವಾಗಿ ವಿವರಿಸಿದೆ. ಇವುಗಳಲ್ಲಿ ಮಾನಸಾರ, ಮಯಮತ, ಅಪರಾಜಿತಪೃಚ್ಛ, ಸಮರಾಂಗಣ ಸೂತ್ರದಾರ, ೨೭ ಶೈವ, ವೈಖಾನಸ, ವೈಷ್ಣವ, ಶಾಕ್ತ, ಜೈನ, ಬೌದ್ಧ ಆಗಮಗಳು, ಪುರಾಣಗಳು ಮೊದಲಾದವು ಪ್ರಮುಖವಾಗಿವೆ.[೩೪]

ದೇವಾಲಯದ ಗರ್ಭಗೃಹದಲ್ಲಿ ಮೂರ್ತಿಯನ್ನು ಒಮ್ಮೆ ಪ್ರತಿಷ್ಠಾಪನೆ ಮಾಡಿದರೆ ಮತ್ತೆ ಆ ಸ್ಥಳದಿಂದ ತೆಗೆಯಲಾಗದು. ಇದನ್ನು ಅಚಲಬಿಂಬ, ಧ್ರುವಭೇದ, ಮೂಲಭೇದ ಎನ್ನುವರು. ಬಿಂಬಗಳ ಕೆತ್ತನೆಯ ರೂಪವನ್ನು ಗಮನಿಸಿ ಮತ್ತೊಂದು ರೀತಿಯಲ್ಲಿ ಮೂರ್ತಿಗಳನ್ನು ವಿಂಗಡಿಸಬಹುದು. ಬಿಂಬದ ಪ್ರತಿಯೊಂದು ಭಾಗವನ್ನು ಕೆತ್ತಿದ್ದರೆ ಅದನ್ನು ದುಂಡುಶಿಲ್ಪವೆಂದೂ, ಮುಂಭಾಗವನ್ನು ಮಾತ್ರ ಕಾಣುವಂತೆ ಕೆತ್ತಿದ್ದರೆ ಉಬ್ಬುಶಿಲ್ಪವೆಂದೂ ಬಟ್ಟೆ ಅಥವಾ ಗೋಡೆಯ ಮರದ ಫಲಕಗಳ ಮೇಲೆ ಬಿಡಿಸಿದ್ದ ಶಿಲ್ಪ, ಚಿತ್ರವಾದರೆ ಚಿತ್ರಾಭಾಸವೆಂದೂ ಕರೆಯುವರು. ಹೀಗೆಯೇ ಶಿಲ್ಪದ ಆಕಾರವನ್ನು ಗಮನಿಸಿ ಮೂರ್ತಿಯನ್ನು ಅಡಿಯಿಂದ ಮುಡಿಯವರೆಗೆ ಕೆತ್ತಿರುವ ಬಿಂಬವು ವ್ಯಕ್ತಬಿಂಬ, ಎದೆಯವರೆಗೆ ಮಾತ್ರ ಕೆತ್ತಿರುವ ಬಿಂಬವು ವ್ಯಕ್ತಾವ್ಯಕ್ತಬಿಂಬ, ಆಕಾರರಹಿತವಾದ ಪೂಜಾರ್ಹವಸ್ತುವು ಅವ್ಯಕ್ತ ಬಿಂಬವೆನ್ನಿಸಿದೆ. ಮೂರ್ತಿಶಿಲ್ಪದಲ್ಲಿ ಗಮನಿಸಬೇಕಾದ ಮುಖ್ಯವಾದ ವಿವರಗಳು ಮೂರು ಭಂಗಿ, ಮುದ್ರೆ ಮತ್ತು ಆಯುಧಗಳು. ದೇವಾಲಯದ ಮೂಲಭೇದಗಳಲ್ಲಿ ಬಿಂಬದ ಸ್ಥಿತಿಯನ್ನು ಗಮನಿಸಿ ಸ್ಥಾನಕ, ಆಸೀನ ಮತ್ತು ಶಯನ ಬಿಂಬಗಳೆಂದು ಮೂರು ಬಗೆಗಳನ್ನು ಗುರುತಿಸಲಾಗಿದೆ. ಈ ಬಿಂಬಗಳನ್ನು ಅವುಗಳ ಕ್ರಿಯೆಗನುಗುಣವಾಗಿ ಯೋಗಮೂರ್ತಿ, ಭೋಗಮೂರ್ತಿ, ವೀರ ಮತ್ತು ಅಭಿಚಾರಿಕಾ ಮೂರ್ತಿಗಳೆನ್ನುವರು.[೩೫]

ಅಧ್ಯಯನ ಕ್ಷೇತ್ರವಾದ ಬಳಗಾನೂರು ಹೋಬಳಿ ಪರಿಸರದಲ್ಲಿ ಸಿಕ್ಕಿರುವ ಮೂರ್ತಿಶಿಲ್ಪಗಳನ್ನಾಧರಿಸಿ ಅವುಗಳನ್ನು ಶೈವ, ವೈಷ್ಣವ ಮತ್ತು ಶಾಕ್ತಶಿಲ್ಪಗಳೆಂದು ವಿಭಾಗಿಸಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯವು ದೇವಾಲಯ ಮತ್ತು ದೇವಾಲಯಕ್ಕೆ ಹೊರತಾಗಿರುವ ಮೂರ್ತಿಶಿಲ್ಪಗಳ ವಿವರಣೆಯನ್ನು ಒಳಗೊಂಡಿದೆ.

### ಶೈವ ಶಿಲ್ಪಗಳು

ಈ ಪ್ರದೇಶದ ಶೈವ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬರುವ ಮೂರ್ತಿಶಿಲ್ಪಗಳೆಂದರೆ ಶಿವಲಿಂಗ, ನಂದಿ, ಶಿವ, ವೀರಭದ್ರ, ಗಣೇಶ ಶಿಲ್ಪಗಳು.

೧. **ಶಿವಲಿಂಗಗಳು :** ಪ್ರಸ್ತುತ ಬಳಗಾನೂರು ಹೋಬಳಿ ಪರಿಸರದಲ್ಲಿನ ಆದಯ್ಯ-ಅಮರಯ್ಯ, ನಗರೇಶ್ವರ, ನಾಗಭೂಷಣ, ರಾಮಲಿಂಗ ಚೌಡೇಶ್ವರಿ(ಬಳಗಾನೂರು) ರಾಮಲಿಂಗ, ಈಶ್ವರ(ದಿದ್ದಿಗಿ)

ದೇವಾಲಯಗಳಲ್ಲಿ ಶಿವಲಿಂಗಗಳಿವೆ. ಆದರೆ ಇವುಗಳ ನಡುವೆ ಗಾತ್ರ, ಆಕಾರ, ರೂಪಗಳಲ್ಲಿ ಭಿನ್ನತೆಗಳಿರುವುದನ್ನು ಕಾಣಬಹುದು. ರಾಮಲಿಂಗ ಚೌಡೇಶ್ವರಿ ದೇವಾಲಯದ ಲಿಂಗವು ಪಾನವಟ್ಟ ಅಥವಾ ಜಲಹರಿವನ್ನು ಮಾತ್ರ ಹೊಂದಿದ್ದು, ಬಿಳಿಶಿಲೆಯಲ್ಲಿದೆ. ಉಳಿದ ಶಿವಲಿಂಗಗಳು ಕಪ್ಪು ಶಿಲೆಯಿಂದ ಕೂಡಿದ್ದು, ಬ್ರಹ್ಮಪೀಠ, ವಿಷ್ಣುಪೀಠ, ಜಲಹರಿವು, ಲಿಂಗವನ್ನು ಹೊಂದಿವೆ. ಆದರೆ ಆದಯ್ಯ-ಅಮರಯ್ಯ ದೇವಾಲಯದಲ್ಲಿನ ಲಿಂಗಗಳ ಜಲಹರಿವು ಬಲಭಾಗಕ್ಕಿದೆ.

**೨. ನಂದಿಶಿಲ್ಪಗಳು :** ದೇವಾಲಯದ ಅಂತರಾಳ ಭಾಗದಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿನ ನಂದಿಶಿಲ್ಪಗಳು ಶಯನ ಸ್ಥಿತಿಯಲ್ಲಿವೆ. ಸಾಮಾನ್ಯವಾಗಿ ನಂದಿಶಿಲ್ಪಗಳು ತಮ್ಮ ಎಡಗಾಲನ್ನು ಮುಂಚಾಚಿಕೊಂಡಿದ್ದು ಕೊರಳಹಾರ, ಗಂಟೆ, ಗೆಜ್ಜೆಯನ್ನು ಹೊಂದಿವೆ. ಒಂದಕ್ಕೊಂದು ಆಕಾರ ಮತ್ತು ಗಾತ್ರಗಳಲ್ಲಿ ಭಿನ್ನತೆಗಳಿರುವುದನ್ನು ಗಮನಿಸಬಹುದು.

**೩. ಗಣೇಶಶಿಲ್ಪಗಳು :** ದಿದ್ದಿಗಿ ಗ್ರಾಮದಲ್ಲಿನ ರಾಮಲಿಂಗ ದೇವಾಲಯದ ಗರ್ಭಗೃಹದಲ್ಲಿ ಗಣೇಶನ ಮೂರ್ತಿಶಿಲ್ಪವಿದೆ. ಇದು ಪದ್ಮಾಸನದಲ್ಲಿದ್ದು ನಾಲ್ಕು ಕೈಗಳನ್ನು ಹೊಂದಿದೆ. ಶಿಲ್ಪದ ಎರಡು ಕೈಗಳಲ್ಲಿ ಶಂಖ, ಪಾಶಗಳಿವೆ. ಒಂದು ಕೈ ಅಭಯಮುದ್ರಾ, ಇನ್ನೊಂದು ಕೈಯಲ್ಲಿ ಫಲವಿದೆ. ಮೂರ್ತಿಯ ಸುತ್ತಲಿನ ಭಾಗವು ತ್ರುಟಿತಗೊಂಡಿದೆ.

ಬಳಗಾನೂರು ಗ್ರಾಮದ ನಗರೇಶ್ವರ-ಸಂಗಮೇಶ್ವರ ದೇವಾಲಯದ ಮುಂಭಾಗದಲ್ಲಿನ ಏಕಕೋಣೆಯಲ್ಲಿ ಸ್ಥಾನಿಕ ಸ್ಥಿತಿಯಲ್ಲಿರುವ ಗಣೇಶ ಮೂರ್ತಿಶಿಲ್ಪವಿದೆ. ಇದು ಕಪ್ಪುಶಿಲೆಯಿಂದ ನಿರ್ಮಾಣಗೊಂಡಿದ್ದು, ಮೂರು ಅಡಿ ಎತ್ತರದಲ್ಲಿದೆ. ಕೈಯಲ್ಲಿ ಶಂಖ, ಚಕ್ರ, ಗದೆಯನ್ನು ಹಿಡಿದಿದ್ದು ಇನ್ನೊಂದು ಕೈಯನ್ನು ಕೆಳಗೆ ಇಳಿಬಿಟ್ಟಿದ್ದಾನೆ. ಕೊರಳಲ್ಲಿ ಹಾರ, ತಲೆಯ ಮೇಲೆ ಮೂರು ಹಂತದ ಕಿರೀಟವಿದೆ. ಮೇಲ್ಭಾಗದಲ್ಲಿ ಪ್ರಭಾವಳಿ ರಚನೆಯಿದೆ. ಶಿಲ್ಪದಲ್ಲಿ ಸ್ವಸ್ತಿಕ ಚಿಹ್ನೆಯನ್ನು ಕಾಣಬಹುದು. ಇಂತಹದೇ ಇನ್ನೊಂದು ಶಿಲ್ಪವು ಹನುಮಂತ ದೇವರ ಮುಂಭಾಗದಲ್ಲಿದೆ.

**೪. ವೀರಭದ್ರ ಶಿಲ್ಪಗಳು :** ದಿದ್ದಿಗಿ ಮತ್ತು ಬಳಗಾನೂರು ಗ್ರಾಮದ ವೀರಭದ್ರೇಶ್ವರ ದೇವಾಲಯದ ಗರ್ಭಗೃಹದಲ್ಲಿ ವೀರಭದ್ರನ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ವೀರಭದ್ರನ ಕೈಯಲ್ಲಿ ಬಿಲ್ಲು, ಬಾಣ, ಖಡ್ಗಗಳಿದ್ದು ಒಂದು ಕೈಯನ್ನು ಖೇಟದ ಮೇಲೆ ಇಟ್ಟು ನಿಂತಿದ್ದಾನೆ. ಕೆಳಭಾಗದಲ್ಲಿ ದಕ್ಷಾಸುರನ ಉಬ್ಬು ಶಿಲ್ಪವಿದೆ. ವೀರಭದ್ರನು ಕಪಾಲಭೂಷಿತ ಕಿರೀಟವನ್ನು ತೊಟ್ಟಿದ್ದಾನೆ. ಕೊರಳಲ್ಲಿ ಹಾರವಿದೆ. ಕಾಲು ಮತ್ತು ಕೈಗಳಲ್ಲಿ ಕಡಗಗಳಿವೆ. ತೋಳುಬಂದಿಯಲ್ಲಿ ಪಟ್ಟಿಕೆಗಳಿವೆ. ಮೇಲ್ಭಾಗದಲ್ಲಿ ಎರಡು ನಾಗಶಿಲ್ಪಗಳು ಇವೆ. ಎರಡು ಕಪ್ಪುಶಿಲೆಯಿಂದ ನಿರ್ಮಾಣಗೊಂಡಿವೆ.

## ವೈಷ್ಣವ ಶಿಲ್ಪಗಳು

ವೈಷ್ಣವ ಶಿಲ್ಪಗಳಲ್ಲಿ ಪ್ರಮುಖವಾಗಿ ಲಕ್ಷ್ಮೀನಾರಾಯಣ, ಹನುಮಂತ, ಗರುಡ, ಸೂರ್ಯ ಶಿಲ್ಪಗಳು ಕಂಡುಬರುತ್ತವೆ.

**೧. ಲಕ್ಷ್ಮೀನಾರಾಯಣ ಮೂರ್ತಿಶಿಲ್ಪ :** ಬಳಗಾನೂರಿನ ಲಕ್ಷ್ಮೀನಾರಾಯಣ ದೇವಾಲಯದ ಗರ್ಭಗೃಹದಲ್ಲಿರುವ ಮೂರ್ತಿಶಿಲ್ಪವನ್ನು ಕಪ್ಪುಶಿಲೆಯಿಂದ ಕಂಡರಿಸಲ್ಪಟ್ಟಿದೆ. ಈ ಶಿಲ್ಪವನ್ನು ಎತ್ತರದ

ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಪದ್ಮಾಸನದಲ್ಲಿ ಕುಳಿತಿರುವ ನಾರಾಯಣ ಚತುರ್ಭುಜನಾಗಿದ್ದು, ಹಿಂದಿನ ಕೈಗಳಲ್ಲಿ ಶಂಖ, ಚಕ್ರಗಳಿವೆ. ಮುಂದಿನ ಒಂದು ಕೈ ಅಭಯಹಸ್ತದಲ್ಲಿದ್ದರೆ ಇನ್ನೊಂದು ಕೈಯಿಂದ ತನ್ನ ತೊಡೆಯ ಮೇಲೆ ಕುಳಿತಿರುವ ಲಕ್ಷ್ಮಿಯನ್ನು ಹಿಡಿದಿದ್ದಾನೆ. ಕಿರೀಟ, ಮಕುಟ, ಕರ್ಣಮಂಡಲ, ಕಂಠಹಾರ, ಮಣಿಸರ, ಯಜ್ಞೋಪವೀತ ಕಟೀಸೂತ್ರ, ತೋಳುಬಂದಿ, ಕೈಕಡಗ, ಕಾಲಕಡಗ ಮೊದಲಾದ ವಸ್ತ್ರಾಭರಣಗಳನ್ನು ಧರಿಸಿದ್ದಾನೆ. ಹಣೆಯಲ್ಲಿ ತ್ರಿನಾಮ ತಿಲಕ, ಕಿವಿಯಲ್ಲಿ ವರ್ತುಲಾಕಾರದ ಓಲೆಗಳಿವೆ. ತಲೆಯ ಮೇಲೆ ಮೂರು ಹಂತದ ಕಿರೀಟವಿದೆ. ನಡುವಿನಲ್ಲಿ ಅನೇಕ ವಸ್ತ್ರಾಭರಣಗಳಿವೆ. ಲಕ್ಷ್ಮಿಯು ಅನೇಕ ಅಲಂಕಾರಗಳನ್ನು ಹೊಂದಿದ್ದಾಳೆ. ತಲೆ ಮೇಲೆ ಸಣ್ಣ ಕಿರೀಟ, ಕೊರಳಲ್ಲಿ ಹಾರ, ತೋಳುಬಂದಿ, ಕೈಬಳೆ, ಕಾಲಕಡಗವನ್ನು ಧರಿಸಿದ್ದಾಳೆ. ಹಾಗೂ ನಡುಪಟ್ಟಿಯನ್ನು ತೊಟ್ಟಿದ್ದಾಳೆ. ಈ ಮೂರ್ತಿಯ ಮೇಲ್ಭಾಗದಲ್ಲಿ ಅನೇಕ ರೀತಿಯ ಅಲಂಕರಣೆಗಳನ್ನು ನೋಡಬಹುದು.

**೨. ಹನುಮಂತ ಶಿಲ್ಪ :** ಬಳಗಾನೂರು ಗ್ರಾಮದಲ್ಲಿನ ಹನುಮಂತ ದೇವಾಲಯದ ಗರ್ಭಗೃಹದಲ್ಲಿರುವ ಈ ಮೂರ್ತಿಶಿಲ್ಪವು ವಿಜಯನಗರ ಕಾಲದ್ದಾಗಿರಬೇಕು. ಈ ಹನುಮಂತನ ಮೂರ್ತಿಯನ್ನು ಕಪ್ಪುಶಿಲೆಯಲ್ಲಿ ಕಂಡರಿಸಲಾಗಿದೆ. ಹನುಮಂತನು ಸ್ಥಾನಿಕ ಭಂಗಿಯಲ್ಲಿದ್ದು, ಇದು ೫ ಅಡಿ ಎತ್ತರವನ್ನು ಹೊಂದಿದೆ. ಹನುಮಂತನ ಬಲಗೈ ಅಭಯ ಹಸ್ತದಲ್ಲಿದ್ದರೆ ಎಡಗೈ ಸೊಂಟದ ಮೇಲಿದೆ. ಕೈಗಳಲ್ಲಿ ಆಯುಧಗಳಿಲ್ಲ. ಕಿವಿಯಲ್ಲಿ ಕರ್ಣಕುಂಡಲ, ಕಂಠಹಾರ, ಯಜ್ಞೋಪವೀತ ಜಪಮಾಲೆ, ಉದರಬಂಧ, ಕಟೀಸೂತ್ರ, ತೋಳುಬಂದಿ, ಕೈಕಡಗ, ಕಾಲ್ಗಡಗ ಧರಿಸಿದ್ದಾನೆ. ಹನುಮಂತನ ಬಾಲ ಹಿಂಭಾಗದಿಂದ ಸುತ್ತಿ ಮೊಣಕಾಲಿನವರೆಗೂ ವಿಸ್ತರಿಸಿಕೊಂಡಿದೆ. ಈ ಮೂರ್ತಿಯ ಎರಡು ಕಾಲುಗಳ ಮಧ್ಯದಲ್ಲಿ ಸಣ್ಣದಾದ ಹನುಮಂತನ ಉಬ್ಬುಶಿಲ್ಪವಿದೆ. ಇದು ಮೂಲಮೂರ್ತಿಯ ಆಕಾರವನ್ನು ಹೊಂದಿದೆ.

**೩. ಗರುಡ ಶಿಲ್ಪ:** ವೈದಿಕ ಸಾಹಿತ್ಯದಲ್ಲಿ ಸುಂದರವಾದ ರೆಕ್ಕೆಗಳುಳ್ಳ ಗರುಡ ಪಕ್ಷಿಗೂ ವಿಷ್ಣುವಿಗೂ ಸಮೀಕರಿಸಲಾಗಿದೆ. ಹಾಗಾಗಿ ವಿಷ್ಣು ಪಕ್ಷಿವಾಹನ, ಗರುಡಧ್ವಜನಾದನು ಸಾಮಾನ್ಯವಾಗಿ ವಿಷ್ಣುವಿನ ದೇಗುಲದ ಮುಂದೆ ಇಲ್ಲವೆ ಭಿತ್ತಿಗಳ ಮೇಲೆ ಹಾಗೂ ವಿಷ್ಣುವಿನ ಶಿಲ್ಪಗಳ ಪಾರ್ಶ್ವಗಳಲ್ಲಿ ಗರುಡನನ್ನು ಚಿತ್ರಿಸಲಾಗಿರುತ್ತದೆ. ಕರ್ನಾಟಕದಲ್ಲಿ ಹೊಯ್ಸಳರ ಮನೆತನದ ಕಾಲಾವಧಿಯ ಉತ್ತರದಿಂದ ಈಚೆಗೆ ವಿಷ್ಣುವಿನ ದೇವಾಲಯದ ದೇವಕೋಷ್ಟಕದಲ್ಲಿ ಅಂಜಲಿ ಮುದ್ರಾಸಕ್ತನಾಗಿ ನಿಂತಿರುವ ಗರುಡ ಶಿಲ್ಪವನ್ನು ರಚಿಸುವ ಪರಂಪರೆ ಬೆಳೆದುಬಂದಿದೆ. ವೀರಾಸನದಲ್ಲಿ ಆಸೀನನಾಗಿ ಇಲ್ಲವೆ ಸ್ಥಾನಿಕ ಗರುಡ ಅಂಜಲಿ ಮುದ್ರಾಸಕ್ತನಾಗಿರುತ್ತಾನೆ. ದೇಹ ಮತ್ತು ಮುಖ ಮನುಷ್ಯನ ಆಕಾರ ಇರುತ್ತದೆ. ಬೆನ್ನ ಹಿಂದೆ ಜೋಡಿ ರೆಕ್ಕೆಗಳು ಇರುತ್ತವೆ.[೬೬]

ಬಳಗಾನೂರು ಗ್ರಾಮದ ಹನುಮಂತ ಗುಡಿಯ ಪ್ರಾಕಾರದಲ್ಲಿ ಗರುಡ ಶಿಲ್ಪವಿದೆ. ಇದನ್ನು ಕಣಶಿಲೆಯಿಂದ ಕಂಡರಿಸಲ್ಪಟ್ಟಿದೆ. ಈ ಮೂರ್ತಿಶಿಲ್ಪವು ಸ್ಥಾನಿಕ ಭಂಗಿಯಲ್ಲಿದೆ. ಗರುಡನು ಬಲಗಾಲನ್ನು ಮೇಲೆತ್ತಿದ್ದಾನೆ. ಬಲಗೈಯಲ್ಲಿ ಗದೆಯನ್ನು ಹಿಡಿದಿದ್ದು, ಎಡಗೈಯಿಂದ ಬೆಟ್ಟವನ್ನು ಮೇಲೆತ್ತಿದ್ದಾನೆ. ಮುಕುಟ, ಓಲೆ, ಕೊರಳಲ್ಲಿ ನಾಗಬಂದಿ, ತೋಳುಬಂದಿ, ಕೈಗಡಗ, ಕಾಲ್ಗಡಗ, ಕಟೀಸೂತ್ರ ಧರಿಸಿದ್ದಾನೆ. ಮೇಲ್ಪುಟಿಯು ದಪ್ಪವಾಗಿದೆ. ಬೆನ್ನ ಹಿಂದೆ ಗರುಡ ರೆಕ್ಕೆಗಳು ಕಂಡುಬರುತ್ತವೆ. ಹಿಂಭಾಗದಲ್ಲಿ ಬಾಲ ರಚನೆಯಿದೆ. ಇದು ಸುಮಾರು ಮೂರು ಅಡಿ ಎತ್ತರವಿದೆ.

೪. **ಸೂರ್ಯಶಿಲ್ಪ :** ಗರುಡಶಿಲ್ಪದ ಪಕ್ಕದಲ್ಲಿಯೇ ಸೂರ್ಯಶಿಲ್ಪವಿದೆ. ಇದನ್ನು ಕಣಶಿಲೆಯಿಂದ ಕಂಡರಿಸಲಾಗಿದೆ. ಸೂರ್ಯನು ವೀರಾಸನದಲ್ಲಿ ಅಸೀನನಾಗಿದ್ದಾನೆ. ಸೂರ್ಯ ಮುಕುಟ, ಕಿವಿಯೋಲೆ, ಕೊರಳಹಾರ, ತೋಳುಬಂದಿ, ಕೈಗಡಗ, ಕಾಲ್ಗಡಗ, ನಾಗಬಂದಿ, ಉದರ ಧರಿಸಿದ್ದಾನೆ. ತನ್ನ ಎರಡು ಕೈಗಳಿಂದ ಎದೆಯನ್ನು ಬಗೆದುಕೊಂಡಿದ್ದು ಅಲ್ಲಿ ಮೂಲಮೂರ್ತಿಯ ಪ್ರತಿರೂಪ ಮೂಡಿದೆ. ತಲೆಯ ಹಿಂಭಾಗದಲ್ಲಿ ರೆಕ್ಕೆಯ ರಚನೆಯಿದೆ. ಇದರ ಮೆಲ್ಪುಟಿಯು ದಪ್ಪವಾಗಿದೆ. ಕಾಲಿನ ಪಕ್ಕದಲ್ಲಿ ಗದೆ ಇಟ್ಟುಕೊಂಡಿದ್ದಾನೆ. ಇದು ಸುಮಾರು ಮೂರು ಅಡಿ ಎತ್ತರವಿದೆ.

೫. **ನಾಗ ಮತ್ತು ನಾಗಿಣಿ ಶಿಲ್ಪಗಳು :** ನಾಗಾರಾಧನೆ ಪ್ರಾಗೈತಿಹಾಸಿಕ ಕಾಲದಿಂದಲೂ ರೂಢಿಗತವಾಗಿದೆ. ಜನಪದ ಧರ್ಮವಾಗಿ ಬೆಳೆದುಬಂದ ನಾಗಾರಾಧನೆಯನ್ನು ಶೈವ, ಬೌದ್ಧ, ವೈಷ್ಣವ, ಜೈನ ಎಲ್ಲಾ ಧರ್ಮಗಳು ತಮ್ಮಲ್ಲಿ ಅಳವಡಿಸಿಕೊಂಡಿವೆ. ಈ ಆರಾಧನೆ ಸಂತಾನ ಮತ್ತು ಸಮೃದ್ಧಿಯ ಮಳೆ ಆಗಲು ಮತ್ತು ಕ್ಷಾಮ ನಿವಾರಣೆಗಾಗಿ ಆಚರಿಸಲಾಗುತ್ತಿದೆ.

ಬಳಗಾನೂರು ಪರಿಸರದಲ್ಲಿ ಸುಮಾರು ೨೦ ನಾಗಶಿಲ್ಪಗಳು ಹಾಗೂ ಒಂದು ನಾಗಿಣಿ ಶಿಲ್ಪ ಕಂಡುಬಂದಿದೆ. ಈ ಗ್ರಾಮದ ಹನುಮಂತನ ಗುಡಿಯ ಮುಂಭಾಗದಲ್ಲಿರುವ ನಾಗಶಿಲ್ಪಗಳು ಉತ್ತಮ ರಚನೆಯಿಂದ ಕೂಡಿವೆ. ಇದೇ ಗ್ರಾಮದ ಯಲ್ಲಮ್ಮ ಗುಡಿಯ ಮುಂಭಾಗದಲ್ಲಿ ನಾಗಿಣಿ ಶಿಲ್ಪವಿದೆ. ದೇಹದ ಕೆಳಭಾಗ ಹಾವಿನ ರೂಪ, ಮೇಲ್ಭಾಗ ಮನುಷ್ಯ ರೂಪವಿದೆ. ಬಲಗೈ ಅಭಯಮುದ್ರಾ, ಎಡಗೈಯಲ್ಲಿ ಭಿಕ್ಷಾಪಾತ್ರೆ, ಮುಕುಟ, ಓಲೆ ಧರಿಸಿದ್ದಾಳೆ.

### ೪.೩.೩ ಶಾಕ್ತಪಂಥದ ಶಿಲ್ಪಗಳು

**ಸಪ್ತಮಾತೃಕೆಯರು :** ಶೈವ ಇಲ್ಲವೇ ವೈಷ್ಣವ ದೇವಾಲಯಗಳಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಕಂಡುಬರುತ್ತವೆ. ಸಪ್ತಮಾತೃಕೆಯರು ಊರ ಹೆಸರನ್ನು ಪಡೆದು ದೇವತೆಗಳಾಗಿ ಎಲ್ಲಾ ವರ್ಗದ ಜನರಿಂದ ಪೂಜೆಗೊಳ್ಳುವವರಾಗಿರುತ್ತಾರೆ. ಅನೇಕ ವೇಳೆ ಶಿವದೇವಾಲಯಗಳ ಪರಿವಾರ ದೇವತೆಗಳಾಗಿ ಕೆಲವೊಮ್ಮೆ ಸ್ವತಂತ್ರವಾಗಿಯೂ ಪೂಜೆಗೊಳ್ಳುತ್ತಾರೆ. ಇವರನ್ನು ಕನ್ಯೆಯರೆಂದು, ಅಮ್ಮನವರೆಂದು ಕರೆಯುವುದು ವಾಡಿಕೆ. ಈ ಮೂರ್ತಿಗಳ ಗಾತ್ರ ಮತ್ತು ಅಂಗಾಂಗಗಳ ವಿನ್ಯಾಸವು ಕಲ್ಲಿನ ಅಳತೆ, ಆಕಾರವನ್ನು ಅವಲಂಬಿಸಿರುತ್ತದೆ.

ಕೌಶಿಕ ದುರ್ಗಿ ರಕ್ತಬೀಜಾಸುರನೊಡನೆ ಹೋರಾಡುತ್ತಿರುವಾಗ ಅಸುರನ ರಕ್ತ ನೆಲಕ್ಕೆ ಬಿದ್ದ ತಕ್ಷಣ ಮತ್ತೊಬ್ಬ ರಕ್ತಬೀಜಾಸುರ ಜನಿಸಿ ದೇವಿಯೊಡನೆ ಹೋರಾಟಕ್ಕಿಳಿಯುತ್ತಿದ್ದ. ಈ ಸಂದರ್ಭದಲ್ಲಿ ದೇವಿಯು ತನ್ನ ಸಹಾಯಕ್ಕಾಗಿ ಏಳು ಜನ ದೇವತೆಯರನ್ನು ಸೃಷ್ಟಿಸಿದಳು. ಈ ದೇವತೆಗಳೇ ಸಪ್ತಮಾತೃಕೆಯರು. ದುರ್ಗ ಸಪ್ತಾಸತಿ ಗ್ರಂಥವು ಇದೇ ವಿವರಣೆ ನೀಡುತ್ತದೆ.[೬೬]

ಬಳಗಾನೂರು, ಚಿಕ್ಕಕಡಬೂರು, ಬನ್ನಿಗನೂರು ಗ್ರಾಮಗಳಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಕಂಡು ಬರುತ್ತವೆ. ಚಿಕ್ಕಕಡಬೂರು ಮತ್ತು ಬನ್ನಿಗನೂರು ಗ್ರಾಮಗಳಲ್ಲಿರುವ ಮೂರ್ತಿಶಿಲ್ಪವು ತ್ರುಟಿತಗೊಂಡಿ ರುವುದರಿಂದ ಬಳಗಾನೂರಿನ ಯಲ್ಲಮ್ಮಗುಡಿಯ ಮುಂಭಾಗದಲ್ಲಿರುವ ಪೂರ್ಣಶಿಲ್ಪದ ಲಕ್ಷಣಗಳನ್ನು ನೋಡಲಾಗಿದೆ.

ಪೀಠದ ಮೇಲೆ ಲಲಿತಾಸನದಲ್ಲಿ ಕ್ರಮವಾಗಿ ಬ್ರಾಹ್ಮೀ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡೇಶ್ವರಿ ಮೂರ್ತಿಗಳು ಕಿರೀಟಧಾರಿಗಳಾಗಿವೆ. ಇವರ ಕೈಯಲ್ಲಿ ಕುಂಡಲಗಳಿವೆ. ಮೂರ್ತಿಶಿಲ್ಪಗಳ ಕೊನೆಯ ಭಾಗದಲ್ಲಿ ವೀರಭದ್ರ, ಗಣೇಶ ಶಿಲ್ಪಗಳಿವೆ. ಚತುರ್ಭುಜಧಾರಿಯಾದ ವೀರಭದ್ರನ ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರು ಕೆಳಗಿನ ಬಲಗೈ ವರದ ಮುದ್ರೆಯಲ್ಲಿದೆ. ಎಡಗೈಯಲ್ಲಿ ಫಲವಿದೆ. ಬ್ರಾಹ್ಮಿಯು ಮೂರು ಮುಖಗಳನ್ನು ಹೊಂದಿದ್ದು, ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು ಎಡಗೈಯಲ್ಲಿ ಪುಸ್ತಕವಿದೆ. ಮಹೇಶ್ವರಿಯ ಮೇಲಿನ ಕೈಗಳಲ್ಲಿ ತ್ರಿಶೂಲ ಮತ್ತು ಡಮರುಗಳಿದ್ದು, ಕೆಳಗಿನ ಬಲಗೈ ವರದ ಮುದ್ರೆಯಲ್ಲಿಯೂ ಹಾಗೂ ಎಡಗೈಯಲ್ಲಿ ಫಲವಿದೆ. ವೈಷ್ಣವಿಯ ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು ಎಡಗೈಯಲ್ಲಿ ಫಲವಿದೆ. ಕೌಮಾರಿಯು ಮೂರು ಮುಖಗಳನ್ನು ಹೊಂದಿದ್ದು ಮೇಲಿನ ಕೈಗಳಲ್ಲಿ ಬಾಣವನ್ನು ಕೆಳಗಿನ ಬಲಗೈಯಲ್ಲಿ ಪದ್ಮ ಎಡಗೈಯಲ್ಲಿ ಫಲವಿದೆ. ವರಾಹಿಯ ಮೇಲಿನ ಕೈಗಳಲ್ಲಿ ಬಣಗಳು, ಕೆಳಗಿನ ಕೈಗಳಲ್ಲಿ ವಜ್ರ ಮತ್ತು ಫಲಗಳಿವೆ. ಚಾಮುಂಡಿ ಮೂರ್ತಿಯ ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರು, ಕೈಗಳಲ್ಲಿ ಖಡ್ಗ ಮತ್ತು ಕಪಾಲಗಳಿವೆ. ಚಾಮುಂಡಿಗೆ ರುಂಡಮಾಲೆಯ ಯಜ್ಞೋಪವೀತ ಇದೆ. ಈ ಎಲ್ಲಾ ಮೂರ್ತಿಗಳಿಗೆ ಕಟಿಬಂಧವಿದ್ದು ಇಳಿವಸ್ತ್ರ ಎರಡು ಕಾಲಿನ ಮಧ್ಯದಿಂದ ಇಳಿಬಿದ್ದಿದೆ. ಪಾದಗಳಲ್ಲಿ ಕಡಗಗಳಿವೆ. ಕಾಲಿನ ಬಳಿ ಅವರವರ ವಾಹನಗಳನ್ನು ಕೆತ್ತಲಾಗಿದೆ. ಈ ಸಪ್ತಮಾತೃಕೆಯರ ಮೂರ್ತಿಶಿಲ್ಪಗಳು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದವುಗಳಾಗಿವೆ.

**ಚೌಡೇಶ್ವರಿ ಶಿಲ್ಪ :** ರಾಮಲಿಂಗ ಚೌಡೇಶ್ವರಿ ದೇವಾಲಯದ ಗರ್ಭಗೃಹದಲ್ಲಿರುವ ಚೌಡೇಶ್ವರಿ ಮೂರ್ತಿಯು ನಾಲ್ಕು ಅಡಿ ಎತ್ತರವಿದೆ. ಚೌಡೇಶ್ವರಿ ದೇವಿಯ ಕೈಗಳಲ್ಲಿ ತ್ರಿಶೂಲ, ಖಡ್ಗ, ಡಮರು, ಪದ್ಮಗಳಿವೆ. ತಲೆಯ ಮೇಲೆ ಉದ್ದವಾದ ಕಿರೀಟ, ಹಣೆಯಲ್ಲಿ ತಿಲಕವಿದೆ. ಮೂಗುತಿ, ಕೋರೆಹಲ್ಲುಗಳಿವೆ. ಕಿವಿಗಳಲ್ಲಿ ಓಲೆಯನ್ನು ಧರಿಸಿದ್ದಾಳೆ. ನಡುಪಟ್ಟಿ, ಕೈಕಡಗ, ತೋಳುಬಂದಿ, ಕಾಲ್ಗಡಗವನ್ನು ಧರಿಸಿದ್ದಾಳೆ.

**ಪಾರ್ವತಿ, ಶಿವ, ದುರ್ಗಿ:** ದಿದ್ದಿಗಿ ಗ್ರಾಮದ ಸೋಮನಾಥ ದೇವಾಲಯದ ಗರ್ಭಗೃಹದಲ್ಲಿರುವ ಈ ಮೂರು ಮೂರ್ತಿಶಿಲ್ಪಗಳನ್ನು ಬೇರೆಡೆಯಿಂದ ತಂದು ಇಲ್ಲಿರಿಸಲಾಗಿದೆ. ಕಲ್ಯಾಣ ಚಾಲುಕ್ಯರ ಕಾಲದ ಈ ಮೂರ್ತಿಶಿಲ್ಪಗಳನ್ನು ಒಬ್ಬ ಶಿಲ್ಪಿ ಕಂಡರಿಸಿದ್ದಾನೆ.

ಪಾರ್ವತಿಯು ಪದ್ಮಾಸನದಲ್ಲಿ ಕುಳಿತಿದ್ದಾಳೆ. ಎರಡು ಕೈಗಳಲ್ಲಿ ತ್ರಿಶೂಲ, ಡಮರುಗಳನ್ನು ಹಿಡದಿದ್ದರೆ, ಒಂದು ಕೈಯಲ್ಲಿ ಪಾನಪಾತ್ರೆಯಿದೆ. ಇನ್ನೊಂದು ಕೈಯನ್ನು ತೊಡೆಯ ಮೇಲಿಟ್ಟು ಕೊಂಡಿದ್ದಾಳೆ. ಕೊರಳಲ್ಲಿ ಮಣಿಸರ, ಕಿವಿಯಲ್ಲಿ ಓಲೆ, ನಡುಪಟ್ಟಿ, ಕೈ ಕಡಗ, ತೋಳುಬಂದಿಯನ್ನು ಧರಿಸಿದ್ದಾಳೆ.

ಶಿವ ಪದ್ಮಾಸನದಲ್ಲಿ ಕುಳಿತಿದ್ದು ನಾಲ್ಕು ಕೈಗಳಲ್ಲಿ ಮೂರು ಕೈಗಳು ಮಾತ್ರ ಉಳಿದಿವೆ. ಇನ್ನೊಂದು ಕೈ ಭಗ್ನಗೊಂಡಿದೆ. ಮುಂದಿನ ಒಂದು ಕೈಯಲ್ಲಿ ಪಾನಪಾತ್ರೆಯನ್ನು ಹಿಡಿದಿದ್ದು ಇನ್ನೊಂದು ಕೈಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡಿದ್ದಾನೆ. ಹಿಂದಿನ ಒಂದು ಕೈಯಲ್ಲಿ ಡಮರು ಇದೆ. ತಲೆಯ ಮೇಲೆ ಮೂರು ಹಂತದ ಕಿರೀಟ, ಕಿವಿಗಳಲ್ಲಿ ಓಲೆ, ಕೊರಳಲ್ಲಿ ಹಾರಗಳಿವೆ.

ದುರ್ಗಿ ಅಥವಾ ಕಾಳಿಯ ಮೂರ್ತಿಶಿಲ್ಪವು ಅಂಬೆಗಾಲಿನ ಸ್ಥಿತಿಯಲ್ಲಿದೆ. ದುರ್ಗಿಯು ಆರು ಕೈಗಳನ್ನು ಹೊಂದಿದ್ದಾಳೆ. ಕೈಗಳಲ್ಲಿ ಖಡ್ಗ, ಡಮರು, ಪಾಶ, ತ್ರಿಶೂಲ, ಪಾನಪಾತ್ರೆಗಳಿವೆ. ಕಿವಿಯಲ್ಲಿ ಓಲೆ, ಕೊರಳಲ್ಲಿ ಸರಗಳಿವೆ. ಕೈಗಳಲ್ಲಿ ಕಡಗ, ತೋಳುಬಂದಿಯನ್ನು ತೊಟ್ಟಿದ್ದಾಳೆ.

**೪.೪. ಶಾಸನ ಶಿಲ್ಪ**

ಶಿಲ್ಪ ಮತ್ತು ಶಾಸನಶಿಲ್ಪಗಳನ್ನು ನಿರ್ಮಿಸುವ ತಂತ್ರ ಒಂದೇ ರೀತಿಯಾಗಿರುವುದಿಲ್ಲ. ಶಿಲ್ಪವನ್ನು ನಾಲ್ಕು ಕಡೆಗಳಲ್ಲಿ ಕೆತ್ತಿದರೆ ಶಾಸನ ಶಿಲ್ಪವನ್ನು ಮುಂದೆ ನಿಂತು ನೋಡುವಂತೆ ನಿರ್ಮಿಸಬೇಕು. ಶಿಲ್ಪ ಮೂಲತಃ ಒಂದು ಆಕೃತಿ. ಆದರೆ ಶಾಸನಶಿಲ್ಪ ಒಂದು ಮೂಲಾರ್ಥವನ್ನೊಳಗೊಂಡ ಘಟನೆಗೆ ಭಾವನೆಗಳನ್ನು ನಿರೂಪಿಸಲು ಪ್ರಯತ್ನಿಸುತ್ತದೆ. ಶಿಲ್ಪಗಳಲ್ಲಿ ಒಂದು ಘಟನೆ, ಒಂದು ಭಂಗಿಯನ್ನು ಚಿತ್ರಿಸಿದ್ದರೆ ಶಾಸನ ಶಿಲ್ಪದಲ್ಲಿ ಏಕಕಾಲಕ್ಕೆ ಹಲವು ಘಟನೆಗಳನ್ನು ಚಿತ್ರಿಸಬಹುದು. ವೀರಗಲ್ಲು ಮತ್ತು ಮಾಸ್ತಿಗಲ್ಲುಗಳ ಶಿಲ್ಪಗಳಲ್ಲಿ ಈ ತಂತ್ರವನ್ನೇ ನಾವು ಪ್ರಧಾನವಾಗಿ ಕಾಣಬಹುದಾಗಿದೆ. ಶಿಲ್ಪಕಲೆಯು ಮನಸ್ಸಿನಿಂದ ಹುಟ್ಟಿ, ಧಾರ್ಮಿಕ ಚೌಕಟ್ಟಿನಲ್ಲಿ ಬೆಳೆದು, ಭಕ್ತಿಯನ್ನು ಉದ್ದೀಪನಗೊಳಿಸುವ ಕಲೆಗಾರಿಕೆ ಶಿಲ್ಪದ್ದಾಗಿದೆ. ಶಾಸನಶಿಲ್ಪವು ಸಾಮಾಜಿಕ ಜೀವನರಂಗದ ಕಳಕಳಿಯಿಂದ ಹುಟ್ಟಿದಂತಹುದು.

ಶಾಸನಶಿಲ್ಪದ ಬೆಳವಣಿಗೆಯನ್ನು ಗುರುತಿಸುವಲ್ಲಿ ದಾನಶಾಸನಗಳಿಗಿಂತಲೂ ಸ್ಮಾರಕ ಶಾಸನಗಳು ಹೆಚ್ಚು ನೆರವಾಗುತ್ತವೆ. ಶಾಸನಶಿಲ್ಪಗಳು ಜನ್ಮ ತಾಳಿದ್ದು ಯಾವುದಾದರೂ ಒಂದು ಘಟನೆ, ಜನರ ರೀತಿ ನೀತಿಗಳನ್ನು ತಿಳಿಸಲು ನೆರವಾಗುತ್ತವೆ. ಇವು ನಮ್ಮ ನಾಡಿನ ಅನೇಕ ಕಡೆ ಪೂಜಾಮೂರ್ತಿಗಳಾಗಿಯೂ ಕಂಡುಬರುತ್ತವೆ. ಕ್ರಿ.ಶ. ಐದರಿಂದ ಒಂಬತ್ತನೇ ಶತಮಾನದವರೆಗೂ ಅಂಬೆಗಾಲಿಟ್ಟು, ಹತ್ತನೇ ಶತಮಾನದಿಂದ ಕ್ರಿ.ಶ. ಹದಿನಾಲ್ಕನೇ ಶತಮಾನದವರೆಗೆ ತಲೆ ಎತ್ತಿ ನಡೆದ ಶಾಸನಶಿಲ್ಪ ಕಲೆಯು ಕ್ರಿ.ಶ. ಹದಿನೈದನೇ ಶತಮಾನದಿಂದ ಅವನತಿ ಹಾದಿ ಹಿಡಿಯಿತು.[೩೮]

ಪ್ರಸ್ತುತ ಅಧ್ಯಾಯವನ್ನು ಸ್ಮಾರಕಶಾಸನಶಿಲ್ಪ ಮತ್ತು ಇತರೆ ಶಾಸನಶಿಲ್ಪಗಳೆಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

**ಸ್ಮಾರಕ ಶಾಸನಶಿಲ್ಪ**

ಸ್ಮಾರಕಗಳು ಸತ್ತ ವ್ಯಕ್ತಿಯ ನೆನಪನ್ನುಂಟು ಮಾಡಲು ಇರುವ ಸಂಕೇತಗಳು; ಸತ್ತ ವ್ಯಕ್ತಿಯ ನೆನಪನ್ನು ಘನೀಭವಿಸಿ ಅಭಿವ್ಯಕ್ತಿಗೊಳಿಸುವ ಸಾಧನಗಳು. ಇದಕ್ಕೆ ಕಾರಣವೆಂದರೆ ಎಲ್ಲಾ ಸಾಧನೆಗಳು ಆಯಾ ವರ್ಗಕ್ಕನು ಗುಣವಾಗಿ ಮಾಡಿಕೊಂಡ ನಿರ್ದಿಷ್ಟವಾದ ಸಂಕೇತಗಳಾಗಿದ್ದು, ಅವು ಪರಂಪರಾಗತವಾಗಿ ಒಪ್ಪಿಕೊಂಡಂತವು ಎಂಬುದು. ಸ್ಮಾರಕಗಳಲ್ಲಿ ಮುಖ್ಯವಾಗಿ ಮಹಾಸತಿಗಲ್ಲು, ನಿಸಿದಿಕಲ್ಲು ಮತ್ತು ವೀರಗಲ್ಲು ಕಂಡು ಬರುತ್ತವೆ(ಇವುಗಳಲ್ಲಿ ವೀರಗಲ್ಲು, ಮಹಾಸತಿಗಲ್ಲುಗಳು ಮಾತ್ರ ಬಳಗಾನೂರು ಪರಿಸರದಲ್ಲಿ ಕಂಡು ಬಂದಿವೆ).

**ವೀರಗಲ್ಲುಗಳು**

ವೀರಗಲ್ಲುಗಳು ಕನ್ನಡ ನಾಡಿನ ಶಾಸನಗಳ ಒಂದು ವೈಶಿಷ್ಟ್ಯ. ಕನ್ನಡ ನಾಡಿನ ಜನ ಸಾಮಾನ್ಯವಾಗಿ ಶೂರರಾಗಿದ್ದರೆಂಬುದಕ್ಕೆ ನಾಡಿನ ಇತಿಹಾಸವೇ ಸ್ಪಷ್ಟವಾದ ಸಾಕ್ಷಿಯಾಗಿದೆ. ಊರಿನ ಹಿತಕ್ಕಾಗಿಯೋ, ದುಷ್ಟ

ಶಿಕ್ಷಣಕ್ಕಾಗಿಯೋ, ಸ್ವಾಮಿನಿಷ್ಠೆಯಿಂದಲೋ ಹೋರಾಡಿ ಮಡಿದ ವೀರಪುರುಷರ ಸ್ಮಾರಕಕ್ಕಾಗಿ ರಚಿತವಾದ ಶಾಸನವುಳ್ಳ ಮತ್ತು ಶಾಸನವಿಲ್ಲದಿರುವಂತಹವು ವೀರಗಲ್ಲುಗಳು. ಯುದ್ಧದಲ್ಲಿ ಜಯಶಾಲಿಯಾದರೆ ಲಕ್ಷ್ಮೀ ಲಭಿಸುತ್ತಾಳೆ. ಮೃತನಾದರೆ ಸುರಾಂಗನೆಯರು. ನಿಮಿಷದಲ್ಲಿ ಅಳಿಯುವ ಈ ದೇಹಕ್ಕೆ ಕಾಳಗದಲ್ಲಿ ಅಳಿವೆನೆಂಬ ಕೊರಗೇಕೆ? ಇದು ಕನ್ನಡ ನಾಡಿನ ವೀರರ ಮಂತ್ರವಾಗಿತ್ತು. ಅಂತಹ ವೀರರ ವೀರಮರಣವನ್ನು ಘೋಷಿಸುತ್ತವೆ ವೀರಗಲ್ಲುಗಳು.[೩೯] ವೀರಗಲ್ಲನ್ನು ನಿಲ್ಲಿಸುವ ಪ್ರಮುಖ ಉದ್ದೇಶ ವೀರನ ಪರಾಕ್ರಮ ಲೋಕಕ್ಕೆ ತಿಳಿಯುವಂತೆ, ಅದರಿಂದ ಮುಂದಿನ ತಲೆಮಾರಿನ ವೀರರು ಉತ್ತೇಜನಗೊಳ್ಳುವಂತೆ, ಆ ವೀರನನ್ನು ತಮ್ಮ ಆದರ್ಶ ಪುರುಷನನ್ನಾಗಿ ಮಾಡಿಕೊಳ್ಳುವಂತೆ ಮಾಡುವುದೇ ಆಗಿತ್ತೆಂಬುದು ಸ್ಪಷ್ಟವಾಗುತ್ತದೆ.

ವೀರಗಲ್ಲುಗಳನ್ನು ಎಲ್ಲಿ ನಿಲ್ಲಿಸುತ್ತಿದ್ದರು ಎಂಬುದನ್ನು ತಿಳಿಯಬೇಕಾದರೆ ಅವು ಸಾಮಾನ್ಯವಾಗಿ ಇಂದಿಗೂ ಇರುವ ಪ್ರದೇಶಗಳನ್ನು ಮತ್ತು ವೀರಗಲ್ಲುಗಳ ಪಾಠದಿಂದಲೇ ತಿಳಿದುಬರುವ ಮಾಹಿತಿಗಳನ್ನು ಗಮನಿಸಬೇಕು. ಕರ್ನಾಟಕದ ವೀರಗಲ್ಲುಗಳು ಬಹುತೇಕವಾಗಿ ಇಂದು ದೊರೆಯುವುದು ದೇವಾಲಯಗಳ ಬಳಿ. ಯಾವ ದೇವಾಲಯದ ಮುಂದೆ ವೀರಗಲ್ಲು ಇರುತ್ತದೆಯೋ ಅದು ಸಾಮಾನ್ಯವಾಗಿ ಆ ಧರ್ಮದ, ಮತದ, ಶಿಲ್ಪದ ವಿವರವನ್ನು ಹೊಂದಿರುತ್ತದೆ. ದೇವಾಲಯಗಳ ಬಳಿಯಿರುವ ಎಲ್ಲಾ ವೀರಗಲ್ಲುಗಳನ್ನು ಅದೇ ದೇವಾಲಯದ ಮುಂದೆ ಮೊದಲಿಗೆ ನೆಟ್ಟಿದ್ದರು ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಯಾವುದೇ ಉದ್ದೇಶಕ್ಕಾಗಿ ಬೇರೆ ಕಡೆಯಿಂದ ತಂದು ನಿಲ್ಲಿಸಿರುವ ಸಾಧ್ಯತೆಗಳು ಹೆಚ್ಚು. ಉದಾಹರಣೆಗೆ ದಿದ್ದಿಗಿ ಗ್ರಾಮದ ಸೋಮನಾಥೇಶ್ವರ ದೇವಾಲಯದ ಮುಂಭಾಗದಲ್ಲಿನ ವೀರಗಲ್ಲುಗಳನ್ನು ಬೇರೆ ಬೇರೆ ಕಡೆಯಿಂದ ತಂದು ಇರಿಸಲಾಗಿದೆ.

ವೀರನಾದವನು ಎಲ್ಲೇ ಸಾಯಲಿ ಅವನಿಗೆ ಅವನ ಸ್ವಂತ ಊರಿನಲ್ಲೇ ವೀರಗಲ್ಲನ್ನು ಹಾಕುತ್ತಿದ್ದರೆಂಬ ಅಂಶ ಶಾಸನೋಕ್ತ ವೀರಗಲ್ಲುಗಳ ಪಾಠದಿಂದ ತಿಳಿದುಬರುತ್ತದೆ.[೪೦] ಹಲವಾರು ವೀರಗಲ್ಲುಗಳು ಹೊಲ, ಗದ್ದೆಗಳಲ್ಲಿ ದೊರೆಯುವುದರಿಂದ ಬಹುಶಃ ವೀರನಿಗೆ ಬಿಟ್ಟ ದತ್ತಿಯ ಬಳಿಯೇ ಆ ವೀರಗಲ್ಲನ್ನು ಹಾಕಿಸಿದ್ದಿರಬೇಕೆಂದು ತೋರುತ್ತದೆ.

ವೀರಗಲ್ಲುಗಳು ಸಾಮಾನ್ಯವಾಗಿ ಮೂರು ಹಂತದ ವಿವರಣೆಯನ್ನು ಹೊಂದಿರುತ್ತವೆ. ಮೊದಲ ಹಂತದಲ್ಲಿ ವೀರಗಲ್ಲು ಪ್ರತಿನಿಧಿಸುವ ವೀರನ ಹೋರಾಟದ ಚಿತ್ರಣ, ಎರಡನೆಯ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ದೃಶ್ಯ, ಮೂರನೆಯ ಹಂತದಲ್ಲಿ ವೀರನು ಸ್ವರ್ಗದಲ್ಲಿರುವ ದೃಶ್ಯವಿರುತ್ತದೆ. ಎಲ್ಲಾ ವೀರಗಲ್ಲುಗಳ ಶಿಲ್ಪದ ವಿವರಗಳು ವೀರಗಲ್ಲಿನ ತಳಭಾಗದಲ್ಲಿ ಆರಂಭವಾಗಿ ಮೇಲಕ್ಕೆ ಹೋಗುತ್ತವೆ. ಇಂತಹ ವೀರಗಲ್ಲುಗಳನ್ನು ಅಧ್ಯಯನ ಕ್ಷೇತ್ರದಲ್ಲಿ ಕಾಣುತ್ತೇವೆ.

ಬಳಗಾನೂರು ಪರಿಸರದಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮತ್ತು ವಿಜಯನಗರ ಕಾಲದ ಸುಮಾರು ೩೦ಕ್ಕೂ ಹೆಚ್ಚು ವೀರಗಲ್ಲುಗಳು ಲಭ್ಯವಾಗಿವೆ.

**ರಾಷ್ಟ್ರಕೂಟ ವೀರಗಲ್ಲು :** ದಿದ್ದಿಗಿ ಗ್ರಾಮದ ಬಸ್ಸಮ್ಮ ಗೊಲ್ಲರ ಹೊಲದಲ್ಲಿರುವ ಶಾಸನದ ಹಿಂಬದಿಯಲ್ಲಿ ವೀರಗಲ್ಲು ಶಿಲ್ಪವಿದೆ. ಈ ವೀರಗಲ್ಲು ಮತ್ತು ಶಾಸನ(ಸು.೯೧೮ ಅಥವಾ ೯೬೦) ರಾಷ್ಟ್ರಕೂಟ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಆದರೆ ವೀರಗಲ್ಲು ಶಿಲ್ಪಕ್ಕಾಗಲೀ ಶಾಸನ ಪಾಠಕ್ಕಾಗಲೀ ಯಾವುದೇ

ಸಂಬಂಧವಿಲ್ಲ. ಶಾಸನಕಲ್ಲನ್ನು ವೀರಗಲ್ಲಾಗಿ ಬಳಸಿರಬಹುದು ಅಥವಾ ವೀರಗಲ್ಲಿನ ಹಿಂಬದಿಯನ್ನು ಶಾಸನ ಪಾಠಕ್ಕೆ ಬಳಸಿರಬಹುದು. ಬಹುಶಃ ಶಾಸನ ಪಾಠದ ಹಿಂಬದಿಯನ್ನು ವೀರಗಲ್ಲು ಶಿಲ್ಪಕ್ಕೆ ಬಳಸಿರುತ್ತಾರೆಂದು ಹೇಳುವುದು ಸರಿಯೆಂದು ತೋರುತ್ತದೆ. ವೀರನು ಸ್ಥಾನಿಕ ಭಂಗಿಯಲ್ಲಿದ್ದು, ಕಾಲುಗಳು ಕಣಕಾಲುಗಳ ರೀತಿಯಲ್ಲಿವೆ. ವೀರನ ಎದೆಗೆ ಎರಡು ಬಾಣಗಳು ನಾಟಿಕೊಂಡಿವೆ. ಕೈಗಳನ್ನು ತನ್ನ ಎದೆಯ ಮೇಲಿಟ್ಟು ಕೊಂಡಿದ್ದಾನೆ. ಕಿವಿಗಳು ಅಗಲವಾಗಿವೆ.

**ಕಲ್ಯಾಣ ಚಾಲುಕ್ಯರ ವೀರಗಲ್ಲು :** ಬಳಗಾನೂರು, ದಿದ್ದಿಗಿ, ಕ್ಯಾತನಹಟ್ಟಿ ಗ್ರಾಮಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ವೀರಗಲ್ಲುಗಳು ಕಂಡುಬಂದಿವೆ. ಇವುಗಳ ಶಿಲೆ ಮತ್ತು ಚಿತ್ರಣವನ್ನಾಧರಿಸಿ ಈ ವೀರಗಲ್ಲು ಗಳ ಕಾಲವನ್ನು ಕ್ರಿ.ಶ. ೧೦-೧೧, ೧೨ನೇ ಶತಮಾನದವುಗಳೆಂದು ಹೇಳಬಹುದು.

ಬಳಗಾನೂರು ಗ್ರಾಮದಲ್ಲಿ ಆದಯ್ಯ-ಅಮರಯ್ಯ, ವೀರಭದ್ರೇಶ್ವರ ಮತ್ತು ಹನುಮಂತ ದೇವಾಲಯದ ಮುಂಭಾಗದಲ್ಲಿ ಸುಮಾರು ಎರಡು ಅಡಿ ಎತ್ತರದ ವೀರಗಲ್ಲುಗಳಿವೆ. ಆದಯ್ಯ-ಅಮರಯ್ಯ ದೇವಾಲಯದ ಮುಂಭಾಗದಲ್ಲಿ ಮೂರು ಹಂತದ ವೀರಗಲ್ಲು ಇದೆ. ಮೊದಲ ಹಂತದಲ್ಲಿ ಖಡ್ಗ, ಗುರಾಣಿ ಹಿಡಿದಿರುವ ವೀರನ ದೃಶ್ಯ, ಎರಡನೇ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಮೂರನೇ ಹಂತದಲ್ಲಿ ವೀರರು ಅಂಜಲಿ ಮುದ್ರೆಯಲ್ಲಿ ಶಿವಲಿಂಗದ ಎದುರು ಕೈಮುಗಿದು ಕುಳಿತಿದ್ದಾರೆ. ಯತಿ ಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಾನೆ.

ವೀರಭದ್ರೇಶ್ವರ ದೇವಾಲಯದ ಮುಂಭಾಗದಲ್ಲಿನ ವೀರಗಲ್ಲು ಎರಡು ಹಂತವನ್ನು ಹೊಂದಿದೆ. ಮೊದಲ ಹಂತದಲ್ಲಿ ಕುದುರೆಯ ಮೇಲೆ ಕುಳಿತ ವೀರರು ತಮ್ಮ ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಕುದುರೆಯ ಲಗಾಮು ಹಿಡಿದಿದ್ದಾರೆ. ಕುದುರೆಗಳು ತಮ್ಮ ಎರಡು ಕಾಲನ್ನು ಮೇಲೆತ್ತಿವೆ. ಕುದುರೆಯ ಮುಂಭಾಗದಲ್ಲಿ ಖಡ್ಗ, ಗುರಾಣಿ ಹಿಡಿದಿರುವ ಇಬ್ಬರು ವೀರರ ಶಿಲ್ಪಗಳಿವೆ. ಕುದುರೆ ಕಾಲ ಬಳಿ ಸತ್ತ ಸೈನಿಕನ ಚಿತ್ರಣವಿದೆ. ಎರಡನೇ ಹಂತದಲ್ಲಿ ವೀರರು ಅಂಜಲಿ ಮುದ್ರೆಯಲ್ಲಿ ಶಿವಲಿಂಗದ ಎದುರು ಕೈಮುಗಿದು ಕುಳಿತಿದ್ದಾರೆ. ಯತಿ ಲಿಂಗಕ್ಕೆ ಪೂಜೆ ಮಾಡುವ ಚಿತ್ರಣವಿದೆ. ಇದರ ಪಕ್ಕದಲ್ಲಿರುವ ಮತ್ತೊಂದು ವೀರಗಲ್ಲಿನಲ್ಲಿ ಗೋವುಗಳನ್ನು ಚಿತ್ರಿಸಲಾಗಿದೆ.

ಹನುಮಂತ ದೇವಾಲಯದ ಮುಂಭಾಗದಲ್ಲಿರುವ ವೀರಗಲ್ಲು ಮೂರು ಹಂತವನ್ನು ಹೊಂದಿದೆ. ಮೊದಲ ಹಂತದಲ್ಲಿ ವೀಣಾವಾದಕ ಮತ್ತು ನೃತ್ಯಗಾರ್ತಿಯರ ಚಿತ್ರಣವಿದೆ. ಎರಡನೇ ಹಂತದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದು, ಮೂರನೇ ಹಂತದಲ್ಲಿ ಸ್ವರ್ಗದಲ್ಲಿರುವ ವೀರನ ಚಿತ್ರಣವಿದೆ.

ದಿದ್ದಿಗಿ ಗ್ರಾಮದಲ್ಲಿನ ಕಲ್ಯಾಣ ಚಾಲುಕ್ಯರ ಕಾಲದ ವೀರಗಲ್ಲುಗಳು ಉಳಿದ ಪ್ರದೇಶಗಳಿಗಿಂತ ಭಿನ್ನವಾಗಿವೆ. ಇಲ್ಲಿನ ಸೋಮನಾಥೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ವೀರಗಲ್ಲೊಂದು ನಾಲ್ಕು ಹಂತವನ್ನು ಹೊಂದಿದೆ. ಈ ವೀರಗಲ್ಲು ಸುಮಾರು ೩ ಅಡಿ ಎತ್ತರವಿದೆ. ಮೊದಲ ಹಂತದಲ್ಲಿ ವೀರನನ್ನು ದೊಡ್ಡ ಗಾತ್ರದಲ್ಲಿ ಚಿತ್ರಿಸಿದ್ದು, ಬಲಗೈಯಲ್ಲಿ ಬಿಲ್ಲು, ಎಡಗೈಯಲ್ಲಿ ಬಾಣಗಳಿವೆ. ಸೊಂಟದಲ್ಲಿ ಖಡ್ಗವಿಡುವ ಸಾಧನವಿದೆ. ವೀರನ ಬದಿಯಲ್ಲಿರುವ ಬಿಲ್ಲು ಬಾಣಗಳನ್ನು ಹಿಡಿದಿರುವ ಹಾಗೂ ಸತ್ತ ಸೈನಿಕರ ದೇಹಗಳಿಗಿವೆ. ಎರಡನೇ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ಚಿತ್ರಣವಿದೆ. ಮೂರನೇ

ಹಂತದಲ್ಲಿ ಶಿವಲಿಂಗದ ಎದುರು ವೀರನು ಅಂಜಲಿ ಮುದ್ರೆಯಲ್ಲಿ ಕೈಮುಗಿದು ಕುಳಿತಿದ್ದಾನೆ. ಯತಿ ಲಿಂಗಕ್ಕೆ ಪೂಜೆ ಸಲ್ಲಿಸುವ ದೃಶ್ಯವಿದೆ. ನಾಲ್ಕನೇ ಹಂತದಲ್ಲಿ ಶಿವಲಿಂಗ ಮತ್ತು ಚಂದ್ರನ ಉಬ್ಬುಶಿಲ್ಪವನ್ನು ಕಾಣಬಹುದು.

ಇದರ ಪಕ್ಕದಲ್ಲಿ ಮೂರು ಹಂತದ ವೀರಗಲ್ಲು ಇದೆ. ಮೊದಲ ಹಂತದಲ್ಲಿ ವೀರನು ಬಿಲ್ಲು ಬಾಣ ಹಿಡಿದಿದ್ದು ವೀರನ ಎದುರಿಗೆ ಕುದುರೆ ಸವಾರಿ ನಿರತ ವೀರನ ದೃಶ್ಯವಿದೆ. ಇವೆರಡೂ ಪರಸ್ಪರ ಮುನ್ನುಗ್ಗುತ್ತಿರುವಂತೆ ಚಿತ್ರಿಸಲಾಗಿದೆ. ಎರಡನೇ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಮೂರನೇ ಹಂತದಲ್ಲಿ ಅಂಜಲಿ ಮುದ್ರೆಯಲ್ಲಿರುವ ವೀರನ ದೃಶ್ಯ ಮತ್ತು ಶಿವಲಿಂಗಕ್ಕೆ ಪೂಜೆ ಮಾಡುವ ಯತಿಯ ಚಿತ್ರಣವಿದೆ.

ಗರ್ಭಗೃಹದಲ್ಲಿರುವ ಎರಡು ಹಂತದ ವೀರಗಲ್ಲು ಆಕರ್ಷಕವಾಗಿದೆ. ಇದು ಎರಡು ಅಡಿ ಎತ್ತರವಿದೆ. ಮೊದಲ ಹಂತದಲ್ಲಿ ಖಡ್ಗ, ಗುರಾಣಿ, ಭರ್ಜಿ ಮುಂತಾದ ಆಯುಧಗಳನ್ನು ಹಿಡಿದಿರುವ ಹಾಗೆಯೇ ಪಲ್ಲಕ್ಕಿ, ಛತ್ರಿ ಹಿಡಿದಿರುವ ಸೈನಿಕರ ಚಿತ್ರಣವಿದೆ. ಎರಡನೇ ಹಂತದಲ್ಲಿ ಕುದುರೆಯ ಮೇಲೆ ಕುಳಿತಿರುವ ವೀರನನ್ನು ದೊಡ್ಡ ಗಾತ್ರದಲ್ಲಿ ಚಿತ್ರಿಸಲಾಗಿದೆ. ವೀರನು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದಿದ್ದಾನೆ. ಈ ವೀರನ ಸುತ್ತ ಖಡ್ಗ, ಗುರಾಣಿ, ಬಿಲ್ಲು, ಬಾಣ, ಭರ್ಜಿ ಮುಂತಾದ ಆಯುಧಗಳನ್ನು ಹಿಡಿದಿರುವ ಸೈನಿಕರ ಚಿತ್ರಣಗಳಿವೆ. ಹಾಗೆಯೇ ಕುದುರೆ, ನಾಯಿ ಮುಂತಾದ ಪ್ರಾಣಿಗಳನ್ನು ಇಲ್ಲಿ ಚಿತ್ರಿಸಲಾಗಿದೆ.

ದೇವಾಲಯದ ಮುಂಭಾಗದಲ್ಲಿ ಒಂದು ಹಂತದ ವೀರಗಲ್ಲಿನಲ್ಲಿ ವೀರನನ್ನು ದೊಡ್ಡ ಗಾತ್ರದಲ್ಲಿ ಚಿತ್ರಿಸಲಾಗಿದೆ. ವೀರನು ಬಿಲ್ಲು, ಬಾಣಗಳನ್ನು ಹಿಡಿದಿದ್ದು ತಲೆಯ ಮೇಲೆ ಪೇಟ ಸುತ್ತಿರುವ ದೃಶ್ಯವಿದೆ. ವೀರನ ಮೇಲ್ಭಾಗದಲ್ಲಿ ಅಪ್ಸರೆಯರು ವೀರನನ್ನು ಕೊಂಡೊಯ್ಯುತ್ತಿರುವ ಚಿತ್ರಣವಿದೆ.

ಇದೇ ಗ್ರಾಮದ ಬಸವಲಿಂಗೇಶ್ವರ ಗದ್ದುಗೆಯ ಹತ್ತಿರ ಕಲ್ಯಾಣ ಚಾಲುಕ್ಯರ ಕಾಲದ ೩ ವೀರಗಲ್ಲುಗಳಿವೆ. ಈ ವೀರಗಲ್ಲುಗಳು ಮೂರು ಹಂತವನ್ನು ಹೊಂದಿವೆ. ಮೊದಲ ಹಂತದಲ್ಲಿ ಬಿಲ್ಲು ಬಾಣಗಳನ್ನು ಹಿಡಿದಿರುವ ವೀರನ ಚಿತ್ರಣ, ಎರಡನೇ ಹಂತದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಮೂರನೇ ಹಂತದಲ್ಲಿ ಶಿವಲಿಂಗದ ಎದುರು ಅಂಜಲಿ ಮುದ್ರೆಯಲ್ಲಿ ಕೈಮುಗಿದು ಕುಳಿತ ವೀರನ ಹಾಗೂ ಯತಿ ಶಿವಲಿಂಗಕ್ಕೆ ಪೂಜೆ ಮಾಡುವ ಚಿತ್ರಣವಿದೆ.

ಕ್ಯಾತನಹಟ್ಟಿ ಗ್ರಾಮದ ಹನುಮಂತನ ಗುಡಿಯ ಮುಂಭಾಗದಲ್ಲಿ ಒಂದು ಹಂತದ ಐದು ವೀರಗಲ್ಲುಗಳಿವೆ. ಇಲ್ಲಿನ ವೀರರು ಕೈಯಲ್ಲಿ ಖಡ್ಗ, ಗುರಾಣಿ, ಬಿಲ್ಲು, ಬಾಣ ಹಿಡಿದು ತಲೆಗೆ ಪೇಟವನ್ನು ಸುತ್ತಿದ್ದಾರೆ.

**ವಿಜಯನಗರ ಕಾಲದ ವೀರಗಲ್ಲುಗಳು**

ಬಳಗಾನೂರು ಪರಿಸರದಲ್ಲಿ ವಿಜಯನಗರ ಕಾಲದ ಅನೇಕ ವೀರಗಲ್ಲುಗಳು ಅಧ್ಯಯನ ಸಂದರ್ಭದಲ್ಲಿ ಕಾಣಿಸಿಕೊಂಡಿವೆ. ಪ್ರಮುಖವಾಗಿ ಹುಲ್ಲೂರು, ಬಳಗಾನೂರು, ರಾಮತ್ನಾಳ ಗ್ರಾಮಗಳಲ್ಲಿ ಒಂದೊಂದು ವೀರಗಲ್ಲು, ಜಾಲವಾಡಿಗೆಯಲ್ಲಿ ಎರಡು, ದಿದ್ದಿಗೆಯಲ್ಲಿ ಎಂಟು ವೀರಗಲ್ಲುಗಳು ಲಭ್ಯವಾಗಿವೆ.

ಹುಲ್ಲೂರು ಗ್ರಾಮದ ದುರುಗಮ್ಮ ಗುಡಿಯ ಪಕ್ಕದಲ್ಲಿರುವ ವೀರಗಲ್ಲು ವಿಶೇಷವಾಗಿದೆ. ಇದು ಎರಡು ಅಡಿ ಎತ್ತರವಿದೆ. ವೀರಗಲ್ಲಿನಲ್ಲಿ ವೀರರು ಕೈಯಲ್ಲಿ ಖಡ್ಗ, ಬಂದೂಕು ಮತ್ತು ಗುರಾಣಿ ಹಿಡಿದಿರುವ ದೃಶ್ಯವಿದೆ. ಸೈನಿಕರ ಕಾಲುಗಳು ನೆರವಾಗಿಲ್ಲದೆ ಕಣಕಾಲು ರೀತಿಯಲ್ಲಿವೆ. ವೀರರ ಪಕ್ಕದಲ್ಲಿ ಸೂರ್ಯ ಮತ್ತು ಚಂದ್ರನ ಚಿತ್ರಣವಿದೆ. ಇದರ ಕಾಲವನ್ನು ಕ್ರಿ.ಶ. ೧೫-೧೬ನೇ ಶತಮಾನ ಎಂದು ಹೇಳಬಹುದು.

ಜಾಲವಾಡಿಗಿ ಗ್ರಾಮದ ಶ್ರೀಮಂತ ತಾತನ ಕಟ್ಟೆಯ ಬಳಿಯಲ್ಲಿರುವ ವೀರಗಲ್ಲು ಎರಡು ಅಡಿ ಎತ್ತರವಿದೆ ಇದು ಒಂದು ಹಂತವನ್ನು ಹೊಂದಿದ್ದು ಕುದುರೆಯ ಮೇಲೆ ಕುಳಿತಿರುವ ವೀರನನ್ನು ದೊಡ್ಡ ಗಾತ್ರದಲ್ಲಿ ಚಿತ್ರಿಸಲಾಗಿದೆ. ವೀರನ ಕೈಯಲ್ಲಿ ಖಡ್ಗವಿದೆ. ವೀರನ ಕುದುರೆಯನ್ನು ಒಬ್ಬ ಸೈನಿಕನು ಹಿಡಿದು ಕೊಂಡು ಹೋಗುತ್ತಿರುವ ದೃಶ್ಯವಿದೆ. ವೀರನ ಪಕ್ಕದಲ್ಲಿ ಭರ್ಜಿ, ಧ್ವಜ, ಖಡ್ಗ, ಗುರಾಣಿ ಹಿಡಿದಿರುವ ಸೈನಿಕರ ಮತ್ತು ನಾಯಿಯ ದೃಶ್ಯವಿದೆ. ಮೇಲ್ಭಾಗದಲ್ಲಿ ಸೂರ್ಯ, ಚಂದ್ರನನ್ನು ಚಿತ್ರಿಸಲಾಗಿದೆ.

ದಿದ್ದಿಗಿ ಗ್ರಾಮದಲ್ಲಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಂಭಾಗದ ಹೊಲದಲ್ಲಿ ನಾಲ್ಕು ವೀರಗಲ್ಲುಗಳಿವೆ. ಇವು ಒಂದೇ ರೀತಿಯ ಕೆತ್ತನೆಯನ್ನು ಹೊಂದಿವೆ. ಅಲ್ಲದೇ ಅಷ್ಟೇ ಸುಂದರವಾಗಿವೆ. ಕುದುರೆ ಮೇಲೆ ಕುಳಿತ ವೀರನನ್ನು ದೊಡ್ಡಗಾತ್ರದಲ್ಲಿ ಚಿತ್ರಿಸಲಾಗಿದೆ. ವೀರನ ಕೈಯಲ್ಲಿ ಖಡ್ಗ, ಸೊಂಟದಲ್ಲಿ ಪಟ್ಟಿಯಿದೆ. ವೀರ ಕುಳಿತ ಕುದುರೆಯನ್ನು ಸೈನಿಕನು ಹಿಡಿದು ಹೋಗುತ್ತಿದ್ದಾನೆ. ಈತನ ಕೈಯಲ್ಲಿ ಧ್ವಜವಿದೆ. ಹಿಂಭಾಗದಲ್ಲಿ ಛತ್ರಿಯನ್ನು ಹಿಡಿದಿರುವ ಮತ್ತು ಮೇಲ್ಭಾಗದಲ್ಲಿ ಸೂರ್ಯ, ಚಂದ್ರರನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ.

**ಮಹಾಸತಿಗಲ್ಲು :** ಸಹಗಮನವನ್ನು ಮಾಡಿ 'ಮಹಾಸತಿ'ಯರಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ 'ಮಹಾಸತಿಗಲ್ಲು'ಗಳು. ಮಹಾಸತಿಯಾಗುವುದು ಮಹಾ ಪುಣ್ಯದ ಕಾರ್ಯವೆಂದು ಒಂದು ಕಾಲದ ಸಮಾಜ ಬಲವಾಗಿ ನಂಬಿತ್ತು. ಆವತ್ತಿನ ಸಹಗಮನಗೊಂಡ ಅನೇಕ ಮಾಸ್ತಿಗಲ್ಲುಗಳ ಕುರುಹುಗಳು ಈಗಲೂ ಕಾಣಸಿಗುತ್ತವೆ. ದಿದ್ದಿಗಿ ಗ್ರಾಮದಲ್ಲಿರುವ ಮಹಾಸತಿಗಲ್ಲಿನಲ್ಲಿ ಸತಿಯು ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿದ್ದಾಳೆ. ಕೊರಳಲ್ಲಿ ಹಾಕಿದ ಹಾರ ಮೊಣಕಾಲಿನವರೆಗೂ ಇಳಿಬಿದ್ದಿದೆ.

**ಇತರೆ ಶಾಸನಶಿಲ್ಪಗಳು**

**೧. ಲಿಂಗಮುದ್ರೆ ಕಲ್ಲು:** ಲಿಂಗಮುದ್ರೆ ಕಲ್ಲುಗಳು ದಾನ ಶಾಸನಗಳಲ್ಲಿ ಬರುವ ಒಂದು ಪ್ರಕಾರ. ಪ್ರಾಚೀನ ಕಾಲದಲ್ಲಿ ಶೈವ, ವೀರಶೈವ ದೇವಾಲಯಗಳಿಗೆ ಇಲ್ಲವೇ ಮಠಗಳಿಗೆ ದಾನ ನೀಡಿದ ಭೂಮಿಯ ಮೇರೆಗಳನ್ನು ಗುರುತಿಸಲು ಹಾಕಿದ ಕಲ್ಲುಗಳೇ ಲಿಂಗಮುದ್ರೆ ಕಲ್ಲುಗಳು. ಇವು ಎರಡು ಅಥವಾ ಮೂರು ಅಡಿಗಳಷ್ಟು ಎತ್ತರವಾಗಿರುತ್ತವೆ. ಶಾಸನದ ಮಧ್ಯಭಾಗ ಅಥವಾ ಮೇಲಿನ ಭಾಗದಲ್ಲಿ ಶಿವಲಿಂಗ, ಅದರ ಪಕ್ಕದಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿರುತ್ತದೆ. ಬಹುತೇಕ ಲಿಂಗಮುದ್ರೆ ಕಲ್ಲುಗಳು ರೇಖೆಯಲ್ಲಿಯೇ ಚಿತ್ರಿತವಾಗಿರುತ್ತವೆ. ಲಿಂಗಮುದ್ರೆ ಕಲ್ಲುಗಳಲ್ಲಿ ದಿಕ್ಕುಗಳನ್ನು ಗುರುತಿಸಲಾಗಿರುತ್ತದೆ. ಇಂತಹ ಲಿಂಗಮುದ್ರೆ ಕಲ್ಲುಗಳು ಸುಂಕನೂರು, ಉದ್ಬಾಳ(ಉ), ಜವಳಗೆರೆ ಗ್ರಾಮಗಳಲ್ಲಿ ಕಂಡುಬಂದಿವೆ.

## ಅಡಿಟಿಪ್ಪಣಿಗಳು

೧. ಅಂಬಳಿಕೆ ಹಿರಿಯಣ್ಣ(ಸಂ). ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಪುಟ-೯೧೪.
೨. ತಿಪ್ಪೇರುದ್ರಸ್ವಾಮಿ ಎಚ್, ೨೦೦೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೫೨೩.
೩. ಅದೇ, ಪುಟ-೫೨೫.
೪. ಅದೇ, ಪುಟ-೫೨೫.
೫. ಅದೇ, ಪುಟ-೫೨೪.
೬. ವಸು ಎಂ. ವಿ., ೨೦೦೯, ಕರ್ನಾಟಕ ಚರಿತ್ರೆ ಆಯ್ದ ವಿಷಯಗಳು, ಪುಟ-೯೩.
೭. ತಿಪ್ಪೇರುದ್ರಸ್ವಾಮಿ ಎಚ್, ೨೦೦೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೫೨೬.
೮. ಅಂಬಳಿಕೆ ಹಿರಿಯಣ್ಣ(ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಪುಟ-೯೪೧-೪೨
೯. ತಿಪ್ಪೇರುದ್ರಸ್ವಾಮಿ ಎಚ್, ೨೦೦೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೫೩೩.
೧೦. ಪ್ರಭಾಕರ್ ಎಂ.ಎನ್., ೨೦೧೧, ದೇವಾಲಯ ವಾಸ್ತು, ಪುಟ-೧೮.
೧೧. ತಿಪ್ಪೇರುದ್ರಸ್ವಾಮಿ ಎಚ್, ೨೦೦೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೫೩೪.
೧೨. ಪ್ರಭಾಕರ ಎಂ.ಎನ್., ೨೦೧೧, ದೇವಾಲಯ ವಾಸ್ತು, ಪುಟ-೧೮.
೧೩. ಅದೇ, ಪುಟ-೧೮.
೧೪. ಅದೇ, ಪುಟ-೧೯.
೧೫. ತಿಪ್ಪೇರುದ್ರಸ್ವಾಮಿ ಎಚ್, ೨೦೦೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೫೩೫.
೧೬. ವಸು ಎಂ.ವಿ.,(ಸಂ) ೨೦೦೯, ಕರ್ನಾಟಕ ಚರಿತ್ರೆ ಆಯ್ದ ವಿಷಯಗಳು, ಪುಟ-೯೬.
೧೭. ವಾಸುದೇವನ್ ಸಿ.ಎಸ್., ೨೦೧೨, ಕರ್ನಾಟಕ ದೇವಾಲಯಕೋಶ ರಾಯಚೂರು ಜಿಲ್ಲೆ, ಪುಟ-೧೪೨.
೧೮. ಅದೇ, ಪುಟ-೧೪೩.
೧೯. ಅದೇ, ಪುಟ-೧೪೬.
೨೦. ಅದೇ, ಪುಟ-೧೪೮.
೨೧. ಅದೇ, ಪುಟ-೧೩೯.
೨೨. ಅದೇ, ಪುಟ-೧೪೭.
೨೩. ವಸು. ಎಂ.ವಿ. ೨೦೦೯, ಕರ್ನಾಟಕ ಚರಿತ್ರೆ ಆಯ್ದ ವಿಷಯಗಳು, ಪುಟ-೯೪.
೨೪. ಜೋಶಿ ಎಸ್.ಕೆ., ೨೦೦೮, ಕರ್ನಾಟಕ ಕೋಟೆ-ಕೊತ್ತಲಗಳು, ಪುಟ-೧.
೨೫. ಅಂಬಳಿಕೆ ಹಿರಿಯಣ್ಣ(ಪ್ರ.ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ-೨೮೧.
೨೬. ಅದೇ, ಪುಟ-೨೮೧.
೨೭. ವಸು. ಎಂ.ವಿ. ೨೦೦೯, ಕರ್ನಾಟಕ ಚರಿತ್ರೆ ಆಯ್ದ ವಿಷಯಗಳು, ಪುಟ-೯೪.
೨೮. ಅಂಬಳಿಕೆ ಹಿರಿಯಣ್ಣ (ಪ್ರ.ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ-೨೮೫.
೨೯. ಸೋಮಶೇಖರ್ ಎಸ್.ವೈ.(ಸಂ). ೨೦೧೦, ಜಗಲೂರು, ಪುಟ-೬೪.
೩೦. ವಸು ಎಂ ವಿ.,((ಸಂ). ೨೦೦೯, ಕರ್ನಾಟಕ ಚರಿತ್ರೆ ಆಯ್ದ ವಿಷಯಗಳು, ಪುಟ-೮೨.

೩೧. ಅದೇ, ಪುಟ-೮೩.

೩೨. ತಿಪ್ಪೇರುದ್ರಸ್ವಾಮಿ ಎಚ್, ೨೦೦೭, ಕರ್ಣಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೨೭೩.

೩೩. ಅಂಬಳಿಕೆ ಹಿರಿಯಣ್ಣ(ಪ್ರ.ಸಂ). ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ-೮೦೧.

೩೪. ಅದೇ, ಪುಟ-೮೦೧.

೩೫. ಅದೇ, ಪುಟ-೮೦೧.

೩೬. ಚವ್ಹಾಣ ರವಿ ನಾನಾ, ೨೦೧೧, ಕುಷ್ಟಗಿ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು ಪಿಹೆಚ್.ಡಿ. ಪ್ರಬಂಧ(ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ-೧೪೮.

೩೭. ಸದಾನಂದಪ್ಪ ನೆಲ್ಕುದ್ರಿ, ೨೦೧೨, ಅರಸಿಕೆರೆ ಪರಿಸರದ ಇತಿಹಾಸ ಮತ್ತು ಪುರಾತತ್ವ, ಎಂ.ಫಿಲ್ ನಿಬಂಧ(ಅಪ್ರಕಟಿತ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ-೧೦೦.

೩೮. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ-೩೯.

೩೯. ತಿಪ್ಪೇರುದ್ರಸ್ವಾಮಿ ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೨೪೨.

೪೦. ಶೇಷಶಾಸ್ತ್ರಿ ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಪುಟ-೧೧೪.

❑❑❑

# ಅಧ್ಯಾಯ : ಐದು

# ಸಮಾಜ ಮತ್ತು ಧರ್ಮ

---

೫.೧. ಸಾಮಾಜಿಕ ಸ್ಥಿತಿಗತಿ

೫.೨. ಧಾರ್ಮಿಕ ಸ್ಥಿತಿಗತಿ

೫.೩. ಆರ್ಥಿಕ ಸ್ಥಿತಿಗತಿ

೫.೪. ಉತ್ಸವ ಮತ್ತು ಆಚರಣೆಗಳು

# ಅಧ್ಯಾಯ : ಐದು

# ಸಮಾಜ ಮತ್ತು ಧರ್ಮ

ಸಮಾಜ ಮತ್ತು ಧರ್ಮ ಎಂಬ ಈ ಅಧ್ಯಾಯದಲ್ಲಿ ಬಳಗಾನೂರು ಪರಿಸರದ ಆಗಿನ ಕಾಲದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿ, ಉತ್ಸವ ಮತ್ತು ಆಚರಣೆಗಳ ಕುರಿತಾಗಿ ವಿಶ್ಲೇಷಿಸಲಾಗಿದೆ.

## ೫.೧. ಸಾಮಾಜಿಕ ಸ್ಥಿತಿಗತಿ

ಒಂದು ಸಮಾಜದ ಸ್ಥಿರತೆ-ಅಸ್ಥಿರತೆ, ಪರಿವರ್ತನೆಯ ರೀತಿ ಮತ್ತು ಅಗಾಧತೆ, ಸ್ವಂತಿಕೆಯ ಅಳಿವು-ಉಳಿವು ಮೊದಲಾದವು ಅವರ ಸಾಂಸ್ಕೃತಿಕ ಆಳ ಎತ್ತರಗಳನ್ನು ಪ್ರೌಢಿಮೆ-ಪ್ರಬುದ್ಧತೆಯನ್ನು ಅವಲಂಬಿಸಿ ರುತ್ತವೆ. ಆಯಾ ಕಾಲದ ಸಾಮಾಜಿಕ ವ್ಯವಸ್ಥೆಯ ವಿವಿಧ ಮುಖಗಳನ್ನು ಸ್ಪಷ್ಟವಾಗಿ ಗುರುತಿಸಲು ಸಮಕಾಲೀನ ಸಾಹಿತ್ಯಕ ಮತ್ತು ಶಾಸನಾದಿ ಪುರಾತತ್ವ ಕುರುಹುಗಳು ಪ್ರತ್ಯಕ್ಷ ಮತ್ತು ಪರೋಕ್ಷ ಆಕರಗಳಾಗಿವೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಸಮಾಜದಲ್ಲಿದ್ದಂತಹ ಜಾತಿವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ, ಶಿಕ್ಷಣ ಅಥವಾ ಅಗ್ರಹಾರಗಳ ಕುರಿತಾಗಿ ಚರ್ಚಿಸಲಾಗಿದೆ.

### ಜಾತಿವ್ಯವಸ್ಥೆ

ವೇದ ಕಾಲದಿಂದಲೂ ಭಾರತೀಯ ಸಮಾಜವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಗಗಳಾಗಿ ವಿಭಾಗಗೊಂಡದ್ದು ಸರ್ವವಿದಿತ. ಋಗ್ವೇದದ 'ಪುರುಷಸೂಕ್ತ'ದಲ್ಲಿ ಬ್ರಾಹ್ಮಣನು ಮುಖದಿಂದಲೂ, ಕ್ಷತ್ರಿಯನು ತೋಳಿನಿಂದಲೂ, ವೈಶ್ಯನು ತೊಡೆಯಿಂದಲೂ, ಶೂದ್ರನು ಪಾದಗಳಿಂದಲೂ ಜನಿಸಿದರೆಂದು ಹೇಳಲಾಗಿದೆ.[೧] ಶತಪಥ ಬ್ರಾಹ್ಮಣ ಮೊದಲಾದವುಗಳು ಈ ವರ್ಗಗಳನ್ನು ವರ್ಣಗಳೆಂದು ಕರೆದವು. ಆರ್ಯರ ಈ ವರ್ಣವ್ಯವಸ್ಥೆಯು ಕರ್ನಾಟಕ ಪ್ರದೇಶದಲ್ಲಿ ಶಾತವಾಹನರ ಕಾಲಕ್ಕೆ ಆಗಲೇ ಇದ್ದಿತ್ತು. ಕರ್ನಾಟಕದ ಶಾಸನಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಣಗಳ ಪ್ರಸ್ತಾಪವಿದೆ. ಕ್ರಮೇಣ ವರ್ಣಪದ್ಧತಿಯು ಸಡಿಲಗೊಂಡು ವರ್ಣಸಂಕರವುಂಟಾಗಿ ಜಾತಿಗಳು ಹುಟ್ಟಿದವೆಂದು ಮನುವಿನ ಅಭಿಮತ.[೨] ಹಿಂದಿನಿಂದಲೂ ಬೇರೆ ಬೇರೆ ವರ್ಗದ ಜನರು ವಿವಿಧ ಪ್ರವೃತ್ತಿಗಳನ್ನು ಅನುಸರಿಸುತ್ತಿದ್ದುದು ಇತಿಹಾಸದಿಂದ ಸ್ಪಷ್ಟವಿದೆ. ಇದು ಮುಂದೆ ವೃತ್ತಿಗಳಿಗನುಸಾರವಾಗಿ ಜಾತಿಗಳು ಹುಟ್ಟಿಕೊಳ್ಳಲು ಕಾರಣವಾಯಿತು.

**ಬ್ರಾಹ್ಮಣರು :** ಪ್ರಾಚೀನ ಸಮಾಜದಲ್ಲಿ ಬ್ರಾಹ್ಮಣರು ಅತ್ಯಂತ ಗೌರವಾನ್ವಿತರೆನಿಸಿದ್ದರು. ಅತ್ಯಂತ ಪ್ರಭಾವಶಾಲಿಗಳೂ ಆಗಿದ್ದರು. ಬ್ರಾಹ್ಮಣರನ್ನು ಮಹಾಜನರೆಂದು ಕರೆಯಲಾಗುತ್ತಿತ್ತು. ಇವರು ಪೂಜೆ, ಪುನಸ್ಕಾರ, ಅಧ್ಯಯನ, ಅಧ್ಯಾಪನ, ಪ್ರತಿಗ್ರಹಣ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಬಳಗಾನೂರು ಮತ್ತು ದಿದ್ದಿಗಿ ಗ್ರಾಮಗಳು ಪ್ರಮುಖ ಅಗ್ರಹಾರಗಳಾಗಿದ್ದು, ಬ್ರಾಹ್ಮಣರು ಪ್ರಬಲರಾಗಿದ್ದರು. ಕ್ರಿ.ಶ. ೧೧೭೫ರ ಶಾಸನವು[3] ''ಶ್ರೀಮತ್ತ್ರಿಭುವನ ಮಲ್ಲದೇವರ ನಿತ್ಯಭೂಮಿದಾನದ ಸರ್ವನಮಸ್ಯದ ಮಹಾರಗ್ರಹಾರಂ ಹಿರಿಯ ಬಳಗಾನೂರ ಶೇಷಮಹಾನಂಗಳ ಸಂನಿಧಾನಲು'' ಎಂದು ಮುಂತಾಗಿ ಹೇಳುತ್ತದೆ. ರಾಷ್ಟ್ರಕೂಟ ರಾಜನು ''ಮೇಲ್ಪಾಟಿಯ ನೆಲೆವೀಡಿನಲ್ಲಿದ್ದಾಗ ಮಹಾಗ್ರಹಾರ ದೆಳ್ದುಗೆಯ ಕಾಳಭಟ್ಟ ಪ್ರಮುಖರಾದ ೧೦೮ ಜನ ಮಹಾಜನರು ದೆಳ್ದುಗೆಯ ಮಹಾ ಅಗ್ರಹಾರ''ವನ್ನು ದತ್ತಿಯಾಗಿ ಬಿಡುತ್ತಾರೆ. ಈ ಅಂಶವನ್ನು ಗಮನಿಸಿದಾಗ ಬ್ರಾಹ್ಮಣರು ಅಪಾರ ಸಂಪತ್ತನ್ನೊಂದಿದ್ದು ಶ್ರೀಮಂತರಾಗಿದ್ದರು ಎಂಬುದಾಗಿ ತಿಳಿದುಬರುತ್ತದೆ. ಮಹಾಜನರು ಆಡಳಿತದಲ್ಲಿ ಭಾಗಿಗಳಾಗುತ್ತಿದ್ದರು. ಅಲ್ಲದೆ ಇವರು ರಾಜಬೆಂಬಲವನ್ನು ಗಳಿಸಿಕೊಂಡವರಾಗಿದ್ದರು.

**ಕ್ಷತ್ರಿಯರು :** ಬ್ರಾಹ್ಮಣರ ತರುವಾಯ ಸಮಾಜದಲ್ಲಿ ಕ್ಷತ್ರಿಯರ ಸ್ಥಾನ ಹಿರಿದಾಗಿತ್ತು. ಅಂದಿನ ಸಮಾಜದ ಧಾರ್ಮಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣನು ಸರ್ವೋತ್ತಮನೆನಿಸಿದರೆ ಆಡಳಿತ ವ್ಯವಸ್ಥೆಯಲ್ಲಿ ರಾಜನು ಸರ್ವಾಧಿಕಾರಿ ಎನಿಸಿದನು. ಬ್ರಾಹ್ಮಣರು ಆರ್ಥಿಕವಾಗಿ ಕ್ಷತ್ರಿಯರನ್ನು ಅವಲಂಬಿಸಿದ್ದರೆ ಪ್ರತಿಯಾಗಿ ಕ್ಷತ್ರಿಯರು ತಮ್ಮ ಪುಣ್ಯಾರ್ಜನೆಯ ವೈದಿಕ ಆಚರಣೆಗಳಿಗಾಗಿ ಬ್ರಾಹ್ಮಣರನ್ನು ಅವಲಂಬಿಸಿದ್ದರು. ರಾಜ್ಯಕ್ಕೆ ಒಡೆಯರಾದ ಅರಸರು ದೇವ ದ್ವಿಜರ ದಾಸರಾಗಿದ್ದರು. ಸಂಪತ್ತು, ಸಾಮ್ರಾಜ್ಯವನ್ನು ರಕ್ಷಿಸುವುದು ಇವರ ಕರ್ತವ್ಯವಾಗಿತ್ತು. ಇಲ್ಲಿನ ಶಾಸನವೊಂದು[4] ಹಿರಿಯ ಬಳಗಾನೂರಿನ ಅಗ್ರಹಾರಕ್ಕೆ ಮತ್ತು ಲಕ್ಷ್ಮೀನಾರಾಯಣ ದೇವರಿಗೆ ನೀಡಿದ ದಾನವನ್ನು ಕ್ಷತ್ರಿಯರು ಸರ್ವಬಾಧಪರಿಹಾರವಾಗಿ ಕಾದು ಸುಧರ್ಮದಿಂದ ರಕ್ಷಿಸುವವರು ಎಂದು ಹೇಳುತ್ತದೆ. ಬ್ರಾಹ್ಮಣರು ಧಾರ್ಮಿಕ ಜೀವನವನ್ನು ರೂಪಿಸಿದರೆ ಕ್ಷತ್ರಿಯರು ಆಡಳಿತ ಸೂತ್ರವನ್ನು ಹಿಡಿದರು.

**ವೈಶ್ಯರು :** ಮೂರನೆಯ ವರ್ಗದವರಾದ ವೈಶ್ಯರು ವರ್ತಕರು. ಇವರು ಪ್ರಮುಖವಾಗಿ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದರು. ಇಲ್ಲಿನ ಶಾಸನಗಳು ವೈಶ್ಯರಾದ ನಖರರು, ತೆಲ್ಲಿಗರು, ಸೆಟ್ಟಿಗುತ್ತ, ವಡ್ಡವ್ಯವಹಾರಿ ಇನ್ನು ಮುಂತಾದವರನ್ನು ಉಲ್ಲೇಖಿಸುತ್ತವೆ. ವರ್ತಕರು ಆಡಳಿತಾತ್ಮಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಸಮಾಜದೊಂದಿಗೆ ಬೆರೆಯುವುದರ ಜೊತೆಗೆ ಬ್ರಾಹ್ಮಣ ಮತ್ತು ಅರಸರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದರು. ಇದು ಅವರ ವ್ಯಾಪಾರಾಭಿವೃದ್ಧಿಗೆ ಪೂರಕವಾಗಿತ್ತು.

**ಶೂದ್ರರು :** ಸಮಾಜದ ಕೆಳವರ್ಗದ ವೃತ್ತಿಗಳನ್ನು ಅನುಸರಿಸಿದವರು ಶೂದ್ರರೆನಿಸಿದರು. ಆದ್ದರಿಂದ ಅವರು ಆರ್ಥಿಕವಾಗಿ ಬಡವರಾಗಿದ್ದರು. ಶೂದ್ರರ ಜೀವನ ಕುರಿತಾಗಿ ಶಾಸನಗಳು ಮೌನವಾಗಿವೆ. ಕಾರಣ ಇವರ ಸಂಪೂರ್ಣ ಜೀವನ ರೀತಿಯನ್ನು ತಿಳಿಯಲು ಕಷ್ಟಕರವಾಗಿದೆ. ಆದರೂ ಇವರು ಉಳಿದವರಿಗಿಂತ ನಿಕೃಷ್ಟವಾಗಿ ಜೀವಿಸುತ್ತಿದ್ದರು ಮತ್ತು ಮೇಲ್ವರ್ಗದ ದಬ್ಬಾಳಿಕೆ ಇವರ ಮೇಲಿತ್ತು ಎಂದು ಹೇಳಲಾಗುವುದು.

ವರ್ಣಸಂಕರದಿಂದ ಹುಟ್ಟಿಕೊಂಡ ಅನೇಕ ಜಾತಿಗಳು ಇಲ್ಲಿದ್ದವು. ಕೆಲವು ವೃತ್ತಿಗಳಿಂದಾಗಿ ಪ್ರಸಿದ್ಧಿಯನ್ನು ಹೊಂದಿ ಜಾತಿಗಳಾಗಿ ಬೆಳೆದುಬಂದವು. ಅಕ್ಕಸಾಲಿಗ, ಬಳೆಗಾರ, ವಡ್ಡರು, ಗಾಣಿಗ, ಬಡಗಿ, ಕಮ್ಮಾರ ಇನ್ನೂ ಮುಂತಾದವರು ಇಲ್ಲಿದ್ದರು.

**ಸ್ತ್ರೀಯರ ಸ್ಥಾನಮಾನ**

ಸುದೀರ್ಘವಾದ ಭಾರತೀಯ ಇತಿಹಾಸದಲ್ಲಿ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಎಲ್ಲ ಕಾಲದಲ್ಲಿಯೂ ಒಂದೇ ತೆರನಾಗಿ ಇದ್ದುದಿಲ್ಲ. ವೇದ ಕಾಲದಲ್ಲಿ ಸ್ತ್ರೀಯರಿಗಿದ್ದ ಸ್ವಾತಂತ್ರ್ಯ ಮನ್ನಣೆಗಳು ಅನಂತರ ಕಾಲದಲ್ಲಿ ಕಡಿಮೆಯಾದವು. ವೇದಮಂತ್ರಗಳನ್ನು ರಚಿಸಿ ಪ್ರತಿಭೆ ತೋರಿದ ಹೆಣ್ಣುಕುಲವು ಸ್ಮೃತಿಗಳ ಕಾಲದಲ್ಲಿ ಶಾಸ್ತ್ರಾಧ್ಯಯನ ವೇದಾಧ್ಯಯನಗಳಿಂದ ವಿಮುಖವಾಯಿತು.[೫] ಸ್ತ್ರೀಯರಲ್ಲಿ ಕೆಲವರು ಸ್ಥಾನಬಲದಿಂದ ಪ್ರಾಮುಖ್ಯತೆ ಪಡೆದರೆ ಇನ್ನೂ ಕೆಲವರು ಸ್ವಕಾರ್ಯ ಬಲದಿಂದ ಪ್ರಾಮುಖ್ಯತೆ ಪಡೆದಿದ್ದಾರೆ. ಆಳುವ ವರ್ಗದ ಸ್ತ್ರೀಯರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನ ನೀಡಲಾಗಿತ್ತು. ಇಲ್ಲಿನ ಶಾಸನಗಳು ಆಳ್ವಿಕೆ ಮಾಡುತ್ತಿದ್ದ ಅರಸರು ದಾನವನ್ನು ನೀಡುವಾಗ ಅವರ ಪಟ್ಟದರಸಿ ರಾಣಿಯರು ಭಾಗಿಗಳಾಗುತ್ತಿದ್ದರು ಎಂಬುದಾಗಿ ಉಲ್ಲೇಖಿಸುತ್ತವೆ. ಹೈಹಯ ವಂಶದ ಮಲ್ಲಿದೇವರಸ ಅಲ್ಲಿನ ಲಕ್ಷ್ಮೀನಾರಾಯಣ ದೇವಾಲಯಕ್ಕೆ ದಾನ ನೀಡುವಾಗ ಪಟ್ಟದರಸಿ ಮಾಕಲದೇವಿ ಮತ್ತು ಮಕ್ಕಳು ಸೇರಿದ್ದರು. ಮಹಾಸತಿಗಲ್ಲು ಇಲ್ಲಿ ಸತಿಸಹಗಮನ ಪದ್ಧತಿ ಆಚರಣೆಯಲ್ಲಿತ್ತು ಎಂದು ತಿಳಿಸುತ್ತದೆ. ಅಲ್ಲದೆ ಅದು ಸಮಾಜದಲ್ಲಿನ ಮಹಿಳೆಯರ ಚಿತ್ರಣವನ್ನು ಎತ್ತಿತೋರಿಸುತ್ತದೆ.

**ಶಿಕ್ಷಣ**

ಪ್ರಾಚೀನ ಭಾರತದಲ್ಲಿ ವೇದ, ಉಪನಿಷತ್ತು, ವ್ಯಾಕರಣ, ಜ್ಯೋತಿಷ್ಯ, ತರ್ಕ ಮೀಮಾಂಸೆ ಮೊದಲಾದ ಶಾಸ್ತ್ರಗಳ ಜೊತೆಗೆ ಶಾಸ್ತ್ರ, ಸಂಗೀತ, ನಾಟ್ಯ ಮೊದಲಾದ ವಿದ್ಯೆಗಳನ್ನು ಬೋಧಿಸಲಾಗುತಿತ್ತೆಂಬುದನ್ನು ರಾಮಾಯಣ ಮಹಾಭಾರತ ಕಾವ್ಯಗಳಿಂದ ತಿಳಿಯಬಹುದು. ಕರ್ನಾಟಕದಲ್ಲಿ ಶಾತವಾಹನರ ಕಾಲದಿಂದ ವಿದ್ಯಾಭ್ಯಾಸ ಪ್ರಾರಂಭವಾಗಿರಬೇಕೆನಿಸುತ್ತದೆ. ಹಿಂದಿನ ಕಾಲದಲ್ಲಿ ರಾಜಕುಮಾರರಿಗೆ ಶಿಕ್ಷಣ ಸುಲಭವಾಗಿ ದೊರೆಯುತ್ತಿತ್ತು. ಇವರ ವಿದ್ಯಾಭ್ಯಾಸ ಅರಮನೆಯಲ್ಲಿಯೇ ನಡೆಯುತ್ತಿತ್ತು. ಆಶ್ರಮ, ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳು ಪ್ರಮುಖ ವಿದ್ಯಾಕೇಂದ್ರಗಳಾಗಿದ್ದವು. ಈ ಅಧ್ಯಯನದ ವ್ಯಾಪ್ತಿಯಲ್ಲಿ ಅಗ್ರಹಾರಗಳು ಕಂಡುಬರುತ್ತಿದ್ದು ಅವುಗಳನ್ನು ಕುರಿತು ಚರ್ಚಿಸಲಾಗಿದೆ.

**ಅಗ್ರಹಾರಗಳು :** ಪ್ರಾಚೀನ ಭಾರತದಲ್ಲಿ ವಿದ್ಯಾಪದ್ಧತಿಯು ಬಹುಮಟ್ಟಿಗೆ ಧಾರ್ಮಿಕವಾದುದು. ಅಂದರೆ ಅಂದಿನ ಕ್ರಮದಲ್ಲಿ ಧಾರ್ಮಿಕ ಶಿಕ್ಷಣವೇ ವಿದ್ಯಾಭ್ಯಾಸವಾಗಿತ್ತು. ವಿದ್ಯೆಯನ್ನು 'ಆತ್ಮಜ್ಞಾನ' ವಿದ್ಯೆಯೆಂದೂ ಮೋಕ್ಷಸಾಧನವೆಂದೂ ಕರೆಯಲಾಗುತ್ತಿತ್ತು. ಜೀವಿಗಳ ಹುಟ್ಟಿಗೆ ಕಾರಣವೇನು? ಮರಣಾನಂತರ ಅವು ಹೋಗುವುದೆಲ್ಲಿಗೆ? ಮೊದಲಾದ ಭೂತ ಭವಿಷತ್ತಿನ ಬಗೆಗಿನ ಜಿಜ್ಞಾಸೆಯೇ ಅಂದಿನ ವಿದ್ಯೆಯ ತಳಹದಿಯಾಗಿತ್ತು. ಆಗಿನ ಸಾಮಾಜಿಕ ರಚನೆಗೆ ತಕ್ಕಂತೆ ಆತ್ಮೋನ್ನತಿ, ಆತ್ಮಸಾಕ್ಷಾತ್ಕಾರ ಮೊದಲಾದ ವ್ಯಕ್ತಿ ವಿಕಾಸವನ್ನು ಪ್ರಮುಖವಾಗಿಟ್ಟುಕೊಂಡ ಪದ್ಧತಿಯಲ್ಲಿ ಶಿಕ್ಷಣ ಕ್ರಮ ಬೆಳೆದು ಬಂದಿತು. ಪ್ರಾಚೀನಕಾಲದ ವಿದ್ಯಾಭ್ಯಾಸ

ಪದ್ಧತಿಯನ್ನು ವೈದಿಕ ಕ್ರಮ, ಬೌದ್ಧ ಹಾಗೂ ಜೈನ ಕ್ರಮ ಮತ್ತು ಸಿದ್ಧಾಂತಗಳ ಕ್ರಮ ಎಂದು ಸ್ಥೂಲವಾಗಿ ವಿಂಗಡಿಸಬಹುದು.[೬]

ಹಿಂದೆ ಉಚ್ಚಶಿಕ್ಷಣ ಕೇಂದ್ರಗಳನ್ನು ಅಗ್ರಹಾರ, ಬ್ರಹ್ಮಪುರಿ, ಘಟಿಕಸ್ಥಾನಗಳೆಂದು ಕರೆಯುತ್ತಿದ್ದರು. ಇವುಗಳಲ್ಲಿ ಅಗ್ರಹಾರವೆಂದರೆ ಶ್ರೇಷ್ಠವಾದ ಸ್ಥಳ ಅಥವಾ ಶ್ರೇಷ್ಠರಿಗೆಂದು ಕೊಟ್ಟ ಸ್ಥಳ. ಅನೇಕ ರಾಜರು ವಿದ್ಯಾಭಿವೃದ್ಧಿಗಾಗಿ ಅಗ್ರಹಾರಗಳನ್ನು ನಿರ್ಮಿಸಿ ಅದರಲ್ಲಿ ವಿದ್ಯಾಸಂಪನ್ನರಾದ ಬ್ರಾಹ್ಮಣರನ್ನು ಪ್ರತಿಷ್ಠಾಪಿಸಿ, ಅವರ ಮೂಲಕ ವಿದ್ಯೆಯ ಪ್ರಸಾರ ಮಾಡಿಸುತ್ತಿದ್ದರು. ಬ್ರಾಹ್ಮಣರಿಗೆ ಊರುಗಳನ್ನು ದತ್ತಿ ಬಿಟ್ಟುಕೊಡುವ ಈ 'ಅಗ್ರಹಾರ' ಸಂಪ್ರದಾಯವು ಸಾಕಷ್ಟು ಪುರಾತನವಾದುದು. ಕ್ರಿ.ಶ. ೪೨೦-೪೪೫ರಲ್ಲಿ ರಾಜ್ಯವಾಳಿದ ಶಾಲಂಕಾಯನ ದೊರೆ ಎರಡನೇ ನಂದಿವರ್ಮನ ತಾಮ್ರಪಟವೊಂದರಲ್ಲಿ 'ಕುರವಕ ಶ್ರೀವರ'[೭] ಎಂಬ ಅಗ್ರಹಾರದ ಪ್ರಸ್ತಾಪವಿದೆ.

ಅಗ್ರಹಾರಗಳು ವೈದಿಕ ಸಂಪ್ರದಾಯದ ಪ್ರೌಢ ವಿದ್ಯಾಕೇಂದ್ರಗಳು. ಇದರ ಸ್ವಾಮಿತ್ವವನ್ನು ಪಡೆದ 'ಮಹಾಜನರು' ವಿದ್ವಾಂಸರಾಗುತ್ತಿದ್ದರು. ಅವರು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತಿಗ್ರಹ ಎಂಬ ಷಟ್ಕರ್ಮಗಳಲ್ಲಿ ನಿರತರಾಗಿರುತ್ತಿದ್ದರು. ಅಗ್ರಹಾರಗಳಲ್ಲಿ ಪಾಠಗಳನ್ನು ಆರಂಭಿಸುವ ಮೊದಲು ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಉಪಾಕರ್ಮವನ್ನು ಮಾಡುತ್ತಿದ್ದರು. 'ಉಪಾಕರ್ಮ' ಎಂದರೆ ಅಧ್ಯಯನದ ಆರಂಭ. ಕರ್ನಾಟಕದ ಪ್ರಪ್ರಥಮ ವ್ಯವಸ್ಥಿತವಾದ ಅಗ್ರಹಾರ ಪ್ರಾಯಶಃ ಶಿವಮೊಗ್ಗ ಜಿಲ್ಲೆಯ ತಾಳಗುಂದ ಅಥವಾ ಸ್ಥಾನಕುಂದೂರು. ಇದನ್ನು ಸ್ಥಾಪಿಸಿದವನು ಮಯೂರಶರ್ಮನ ಪೂರ್ವಜ ಮುಕ್ಕಣ್ಣ ಎಂಬುವನು.[೮] ಹೀಗೆ ಸ್ಥಾಪಿತಗೊಂಡ ಅಗ್ರಹಾರಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ವಿಸ್ತರಿಸಿ ಕೊಂಡಿರುವುದನ್ನು ಶಾಸನ ಮತ್ತು ಇನ್ನಿತರ ಆಕರಗಳು ತಿಳಿಸುತ್ತವೆ. ಬಳಗಾನೂರು ಪರಿಸರದಲ್ಲಿಯೂ ಬಳಗಾನೂರು ಮತ್ತು ದಿದ್ದಿಗಿ ಗ್ರಾಮಗಳು ಹಿಂದಿನ ಕಾಲದಲ್ಲಿ ಪ್ರಮುಖ ಅಗ್ರಹಾರಗಳಾಗಿದ್ದವು. ಈ ಅಗ್ರಹಾರಗಳು ಸರ್ವನಮಸ್ಯದ ಅಗ್ರಹಾರಗಳಾಗಿದ್ದವು. ಅಂದರೆ ಆರ್ಥಿಕತೆಯಿಂದ, ರಕ್ಷಣೆ ದೃಷ್ಟಿಯಿಂದ, ವಿಪುಲ ಸಂಪತ್ತನ್ನು ಹೊಂದಿದ ಅಗ್ರಹಾರಗಳು ಎಂದರ್ಥ. ರಾಯಚೂರು ಜಿಲ್ಲೆಯಲ್ಲಿರುವ ಅಗ್ರಹಾರಗಳಲ್ಲಿ ಇವೆರಡು ವಿಶೇಷತೆಯನ್ನುಳ್ಳವಾಗಿವೆ.

**ಬಳಗಾನೂರು ಅಗ್ರಹಾರ :** ಬಳಗಾನೂರು ಅಗ್ರಹಾರದ ಕಾಲ ಕ್ರಿ.ಶ. ೧೧೭೫.[೯] ಈ ಸಮಯದಲ್ಲಿ ಶ್ರೀಮತ್ ತ್ರಿಭುವನಮಲ್ಲದೇವರ ನಿತ್ಯಭೂಮಿದಾನದ ವೇಳೆಯಲ್ಲಿ ಮಹಾಗ್ರಹಾರವಾದ ಹಿರಿಯ ಬಳಗಾನೂರಿಗೆ ಗೋಸಹಪ್ರದಾನ, ಅನ್ನದಾನ, ವಿನೋದದೀನನಾಥ ಸಮುದ್ಧರಣ ಮುಂತಾದ ವಿಶೇಷಣಗಳಿಂದ ಕೂಡಿದ ನಖರರು ಮುತ್ತೆಯನ ಮಾದುಪಾಧ್ಯರ ಕೈಯಿಂದ ಕೆಲವು ವೃತ್ತಿಗಳನ್ನು ಪಡೆದನೆಂದು ಅಲ್ಲಿನ ಶಾಸನಗಳು ತಿಳಿಸುತ್ತವೆ. ಹಾಗೂ ಕಳಚೂರಿ ರಾಯಮುರಾರಿ ಸೋವಿದೇವರಸನು ಮಾದುಪಾಧ್ಯ ಅವನ ಚಿಕ್ಕಪ್ಪ ನಾಗವಿಷ್ಣುಪಾಧ್ಯಾಯರ ಮಗ ಮುದ್ದಣುಪಾಧ್ಯಾಯರ ಕೈಯಿಂದ ಕೆಲವು ವೃತ್ತಿಗಳನ್ನು ಕ್ರಯಕ್ಕೆ ಪಡೆದು ಮಹಾಜನಗಳ ಪಾದಪೂಜೆಯನ್ನು ಮಾಡಿ ಸರ್ವಬಾಧಾಪರಿಹಾರವಾಗಿ ಅಗಸ್ತ್ಯದೇವರಿಗೆ ದಾನ ನೀಡುತ್ತಾನೆಂದು ಶಾಸನವೊಂದು ಉಲ್ಲೇಖಿಸುತ್ತದೆ.[೧೦]

ಇದೇ ಗ್ರಾಮದ ನಗರೇಶ್ವರ ದೇವಾಲಯದ ಕಳಚೂರಿ ಚಕ್ರವರ್ತಿ ಆಹವಮಲ್ಲನ ಆಳ್ವಿಕೆಯ ಕಾಲದ(ಕ್ರಿ.ಶ. ೧೧೮೨) ಶಾಸನವು[೧೧] ಶ್ರೀನರಸಿಂಹದಾಸ ವೈಜನಾಥ ಪೆದ್ದಿಗಳು ತಮ್ಮ ಸರ್ವಬಾಧಾಪರಿಹಾರವಾಗಿ ಶ್ರೀ ಲಕ್ಷ್ಮೀನಾರಾಯಣ ದೇವರಿಗೆ ಹಾಗೂ ಅಲ್ಲಿದ್ದ ನಾಲ್ಕು ಮಹಾಜನಗಳ ಪಾದಪೂಜೆಯನ್ನು ಮಾಡಿ ಅಗ್ರಹಾರಕ್ಕೆ ದಾನ ಕೊಟ್ಟನೆಂದು ಹೇಳುತ್ತದೆ. ಇಲ್ಲಿನ ವಿದ್ಯಾಭ್ಯಾಸವು ಲಕ್ಷ್ಮೀನಾರಾಯಣ ದೇವಾಲಯದಲ್ಲಿ ನಡೆಯುತ್ತಿದ್ದಿರಬೇಕು.

## ದಿದ್ದಿಗಿ ಅಗ್ರಹಾರ

ದಿದ್ದಿಗಿ ಅಗ್ರಹಾರದ ಕಾಲ ಕ್ರಿ.ಶ. ೯೧೮.[೧೨] ಇಲ್ಲಿನ ಶಾಸನವು ರಟ್ಟರಮೇರು, ಮದಗಜಮಲ್ಲ, ಎಲ್ಲರಮರುಳ, ಪರಾಂಗನಾಪುತ್ರ ಮುಂತಾದ ವಿಶೇಷಣಗಳನ್ನುಳ್ಳ ಒಬ್ಬ ರಾಜನು ಮೇಳ್ಪಾಟಿಯ ನೆಲೆವೀಡಿನಲ್ಲಿದ್ದನು. ಕಂಚಿಯ ಕಾಮಕೋಟಿ ಭಳಾರಿಯ ಮುಂದೆ ಕನ್ನೆ ಸಂಕ್ರಾಂತಿ ನಿಮಿತ್ತವಾಗಿ ಶ್ರೇಷ್ಠವಾದ ಅಗ್ರಹಾರ ದೆಳ್ವಗೆಯನ್ನು ಕಾಳಭಟ್ಟನೇ ಮುಖ್ಯವಾದ ೧೦೮ ಜನರಿಗೆ ದಾನ ನೀಡುತ್ತಾನೆಂದು ಉಲ್ಲೇಖಿಸುತ್ತದೆ. ಈ ದಾನದಲ್ಲಿ ವಿಷ್ಣುದೇವರಿಗೆ ಒಂದು ಮತ್ತರು ೧೫೦ ಕಮ್ಮಗದ್ದೆ, ಸುಬ್ರಮಣ್ಯ ದೇವರಿಗೆ ೧೩ ಮತ್ತರು, ರಾಮೇಶ್ವರದೇವರಿಗೆ ಸೋಮೇಶ್ವರ ದೇವರಿಗೆ ೧೩ ಮತ್ತರು ಮತ್ತು ೧ ಮತ್ತರು ತೋಟ, ಬಿಕೇಸ್ವರ ದೇವರಿಗೆ ಮತ್ತರು ೭, ಬಳರಿ ಮಾರಿಕಬ್ಬೆಗೆ ೩ ಮತ್ತರು, ಬಳರಿ ಪಿರಿಯಕಬ್ಬೆಗೆ .... ಸತ್ರಕ್ಕೆ ೪ ಮತ್ತರು, ಸರಸ್ವತಿಗೆ.... ಭಟರೆಯ ಮತ್ತರು ೧೩, ಯಟ್ಟಗೆಯಿ ೧೩ ಮತ್ತರು ಹೀಗೆ ಹಂಚಿಕೆಯಾಗಬೇಕೆಂದು ತಿಳಿಸಿ ದಾನವನ್ನು ಬಿಡಲಾಗಿದೆ.

ಎರಡು ಅಗ್ರಹಾರಗಳ ಮಹಾಜನರು ಅಪಾರ ಸಿರಿಸಂಪತ್ತನ್ನುಳ್ಳವರಾಗಿದ್ದರು. ದಿದ್ದಿಗಿಯ ಅಗ್ರಹಾರದ ಮಹಾಜನರೇ ಇತರರಿಗೆ ದಾನ ನೀಡಿದರೆಂದರೆ ಇವರ ಆರ್ಥಿಕ ಸ್ಥಿತಿಯು ಎಂತಹದ್ದು ಎಂದು ತಿಳಿಯದೇ ಇರಲಾರದು. ಈ ಅಗ್ರಹಾರಗಳಲ್ಲಿ ಉಪಾಧ್ಯಾಯರ ಸಂಖ್ಯೆ ಹೆಚ್ಚಿನ ರೀತಿಯಲ್ಲಿತ್ತು. ಅಗ್ರಹಾರವನ್ನು ದತ್ತಿಯಾಗಿ ಪಡೆದ ಬ್ರಾಹ್ಮಣರು ಅಥವಾ ಮಹಾಜನರು ವೇದ, ವೇದಾಂಗ, ಉಪಾಂಗ, ಅನೇಕ ಶಾಸ್ತ್ರ, ಅಷ್ಟಾದಶ ಪುರಾಣ, ಸ್ಮೃತಿಗಳನ್ನು ಅರಿತವರೂ ವಾಗ್ಭೂಷಣರೂ ಷಟ್ಕರ್ಮನಿರತರೂ ಪರಮ ಪರೋಪಕಾರಿಗಳು, ಆಶ್ರಿತರಿಗೆ ಕಲ್ಪವೃಕ್ಷದಂತೆ ಇರುವವರು ಆಗಿರುತ್ತಾರೆಂದು ತಿಳಿದುಬರುತ್ತದೆ. ಇಂತಹ ಮಹಾಜನರ ಸಂಖ್ಯೆ ದಿದ್ದಿಗಿ ಅಗ್ರಹಾರದಲ್ಲಿ ೧೦೮[೧೩] ಜನ ಇದ್ದು, ಬಳಗಾನೂರು ಅಗ್ರಹಾರದಲ್ಲಿ ನಿರ್ದಿಷ್ಟ ಸಂಖ್ಯೆ ತಿಳಿದುಬಂದಿಲ್ಲ.

ಅಗ್ರಹಾರ, ಬ್ರಹ್ಮಪುರಿಗಳನ್ನು ಸ್ಥಾಪಿಸಿ ಬ್ರಾಹ್ಮಣರಿಗೆ ದಾನ ಮಾಡಿ ಆ ಮೂಲಕ ವಿದ್ಯಾ ಪ್ರಸಾರ ಮಾಡುವುದರಿಂದ ತಮಗೆ ಪುಣ್ಯ ಬರುವುದೆಂದು ಹಿಂದಿನ ರಾಜರು ಭಾವಿಸಿದ್ದರು. ಅನೇಕರು ತಮಗೊದಗುವ ಬಾಧೆಗಳನ್ನು, ಸಂಕಷ್ಟಗಳನ್ನು ಪರಿಹರಿಸಿಕೊಳ್ಳುವ ಸಲುವಾಗಿಯೂ ದಾನ ಮಾಡುತ್ತಿದ್ದರು. ಒಂದು ಶಾಸನವು ''ಪುಣ್ಯನದಿಗಳಲ್ಲಿ ಸ್ನಾನ ಮಾಡುವ ಸಲುವಾಗಿ ತೀರ್ಥಯಾತ್ರೆಗೈದರೆ ಎಷ್ಟು ಪುಣ್ಯ ಬರುತ್ತದೆಯೋ ಅದರ ಕೋಟಿಯಷ್ಟು ಪುಣ್ಯ ಶಿಕ್ಷಣಕ್ಕಾಗಿ ಸಹಾಯ ಮಾಡುವ ದಾನಿಗೆ ಸಿಗುತ್ತದೆ''[೧೪] ಎಂದು ಹೇಳಿದೆ.

## ೫.೨. ಧಾರ್ಮಿಕ ಸ್ಥಿತಿಗತಿ

ಧರ್ಮವು ಸಂಸ್ಕೃತಿಯ ಜೀವಾಳ. ಒಂದು ನಾಡಿನ ಜನತೆಯ ಜೀವನ ರೀತಿಯನ್ನು ರೂಪಿಸುವಲ್ಲಿ ಧರ್ಮದ ಪಾತ್ರ ಬಲು ದೊಡ್ಡದು. ಬುಡಕಟ್ಟು ಜನಾಂಗದ ಧಾರ್ಮಿಕ ಜೀವನದ ಹಿನ್ನೆಲೆಯಲ್ಲಿ ನೆಲೆಗೊಂಡ ಆಚರಣೆಯಲ್ಲಿ ಸಂಪ್ರದಾಯಗಳು ಕ್ರಮೇಣ ಧರ್ಮದ ಶಿಷ್ಟರೂಪ ಪಡೆಯುತ್ತವೆಂಬುದು ಸಮಾಜಶಾಸ್ತ್ರಜ್ಞರ ನಿಲುವು.[೧೫] ಭಾರತದ ಇತರ ಭಾಗಗಳಂತೆ ಕರ್ನಾಟಕವೂ ತನ್ನ ಹಲವಾರು ಬುಡಕಟ್ಟು ಜನಾಂಗಗಳ ಆಚರಣೆ, ಪರಂಪರೆಗಳನ್ನು ಉಳಿಸಿಕೊಂಡು ಬಂದಿದೆ. ಕರ್ನಾಟಕ ತನ್ನ ಜೀವನದ ಎಲ್ಲ ಮುಖಗಳಲ್ಲಿಯೂ ಧರ್ಮವನ್ನು ಅಳವಡಿಸಿಕೊಂಡಿತು. ವೇದ, ಉಪನಿಷತ್ತುಗಳು, ಆಗಮ ಸ್ಮೃತಿಗಳು, ಇತಿಹಾಸ, ಪುರಾಣಗಳು ನಿರೂಪಿಸಿದ ಮತ್ತು ರೂಪಿಸಿದ ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯವಾದ ಅಂಗವಾಗಿ ಇದು ಬೆಳೆದುದಲ್ಲದೆ ಆ ಪರಂಪರೆಯನ್ನು ಬೆಳೆಸುವುದಕ್ಕೆ ತನ್ನ ಕೊಡುಗೆಯನ್ನು ನೀಡಿತು. ಕರ್ನಾಟಕವು ಉದಾರವಾದ ಪ್ರಕೃತಿಯ ಅನುಕೂಲಗಳನ್ನು ಒದಗಿಸಿ ಎಲ್ಲ ಧರ್ಮಗಳನ್ನೂ ಅಕರ್ಷಿಸಿತು ಎಂಬುದು ತಿಳಿದ ವಿಚಾರವೇ. ಧರ್ಮ ಸಮನ್ವಯದ ಆದರ್ಶಕ್ಕೆ ಸಮೃದ್ಧವಾದ ರಂಗಭೂಮಿಯಾಗಿ ಪರಿಣಮಿಸಿತು ಕರ್ನಾಟಕ. ಇದರಂತೆಯೇ ಪ್ರಸ್ತುತ ಬಳಗಾನೂರು ಹೋಬಳಿ ಪರಿಸರವು ಸರ್ವ ಸಮನ್ವಯದಿಂದ ಹೊರತಾಗಿರಲಿಲ್ಲ. ಇಲ್ಲಿ ಬೌದ್ಧ, ಜೈನ, ವೈಷ್ಣವ, ಶೈವ ಮತ್ತು ಮುಸ್ಲಿಂ ಧರ್ಮಗಳ ಪ್ರಭಾವವನ್ನು ಕಾಣಬಹುದು.

**೧. ಬೌದ್ಧಧರ್ಮ :** ಕರ್ನಾಟಕದಲ್ಲಿ ಬೌದ್ಧಧರ್ಮದ ಅತ್ಯಂತ ಪ್ರಾಚೀನ ಕುರುಹುಗಳೆಂದರೆ, ಮಧ್ಯ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಸಿದ್ಧಾಪುರ, ಜಟಿಂಗ ರಾಮೇಶ್ವರ, ಬ್ರಹ್ಮಗಿರಿಗಳಲ್ಲಿ, ಉತ್ತರ ಕರ್ನಾಟಕದ ಮಸ್ಕಿ ಮತ್ತು ಕೊಪ್ಪಳಗಳಲ್ಲಿ ಸಿಕ್ಕಿರುವ ಅಶೋಕನ ಕ್ರಿಸ್ತಪೂರ್ವ ೩ನೇ ಶತಮಾನದ ಶಾಸನಗಳು.[೧೬] ಮಸ್ಕಿಯ ಶಾಸನದಲ್ಲಿ ಅಶೋಕನು ಈ ಧರ್ಮದ ಸಂದೇಶವನ್ನು ಹೀಗೆ ಹೇಳಿದ್ದಾನೆ.[೧೭]

‘‘ಈಗ ಎರಡೂವರೆ ವರ್ಷಗಳಿಗಿಂತಲೂ ಹೆಚ್ಚುಕಾಲ ನಾನು ಬುದ್ಧನ ಉಪಾಸಕನಾಗಿದ್ದೇನೆ. ಈಚೆಗೆ ಒಂದು ವರ್ಷಕ್ಕಿಂತಲೂ ಹೆಚ್ಚುಕಾಲ ಬೌದ್ಧ ಸಂಘಕ್ಕೆ ಸೇರಿ ಧರ್ಮೋದ್ಯೋಗದಲ್ಲಿ ತೊಡಗಿದ್ದೇನೆ. ಮೊದಲು ಜಂಬೂದ್ವೀಪದಲ್ಲಿ ಮಾನವರ ಹಾಗೂ ದೇವತೆಗಳ ಸಂಗಮ ಸಾಧ್ಯವಾಗುತ್ತಿರಲಿಲ್ಲ. ಈಗ ಅದು ಸಾಧ್ಯವಾಗಿದೆ. ಈ ಗುರಿಯನ್ನು ಶ್ರೀಮಂತ ಸಾಧಿಸುತ್ತಾನೆ ಎಂದಲ್ಲ; ಬಡವನಾಗಲಿ, ಬಲ್ಲಿದನಾಗಲಿ ಧರ್ಮದಲ್ಲಿ ನಿರತನಾದರೆ ಇದನ್ನು ಪಡೆಯಬಹುದು.’’

ಇದಲ್ಲದೆ ಮಸ್ಕಿಯಲ್ಲಿ ಪದ್ಮಾಸನದಲ್ಲಿ ಧ್ಯಾನಾಸಕ್ತನಾಗಿ ಕುಳಿತ ವ್ಯಕ್ತಿಯ ಶಿಲ್ಪವೊಂದು ದೊರೆತಿದೆ. ಇದು ಬಹುಶಃ ಬುದ್ಧನದಾಗಿರಬೇಕೆಂದು ಅ.ಸುಂದರ ಅವರು(ಕ್ರಿ.ಶ. ೧ನೆಯ ಶತಮಾನ) ಊಹಿಸಿದ್ದಾರೆ.[೧೮] ಈ ಹಿನ್ನೆಲೆಯಲ್ಲಿ ಮಸ್ಕಿ ಪ್ರದೇಶಕ್ಕೆ ಅಂಟಿಕೊಂಡಿರುವ ಬಳಗಾನೂರು ಪರಿಸರವು ಕೂಡ ಬೌದ್ಧಧರ್ಮದ ಪ್ರಭಾವವನ್ನು ಹೊಂದಿತ್ತು.

**೨. ಜೈನಧರ್ಮ :** ‘‘ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ.’’[೧೯] ಕ್ರಿ.ಶ. ೩ನೇ ಶತಮಾನಕ್ಕೂ ಮೊದಲಿನಿಂದಲೇ ಜೈನಧರ್ಮ ಇಲ್ಲಿ ನೆಲೆಗೊಂಡಿದೆ. ಆರಂಭದಲ್ಲಿ ಬೆಟ್ಟ-ಗುಡ್ಡಗಳಿಂದ ಕೂಡಿದ ಪ್ರದೇಶಗಳನ್ನೇ ಇವರು ತಮ್ಮ ನೆಲೆಯನ್ನಾಗಿ ಮಾಡಿಕೊಂಡರು

ಎಂಬುದಾಗಿ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಅವರು ಆರಿಸಿಕೊಂಡ ಎರಡು ಮುಖ್ಯ ಸ್ಥಳಗಳೆಂದರೆ ಶ್ರವಣಬೆಳಗೊಳ ಮತ್ತು ಕೊಪ್ಪಳ. ಕೊಪ್ಪಳದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಶಾಸನ, ಶಿಲ್ಪ, ನಿಸಿದಿ ಮತ್ತು ಬಸದಿಗಳು ಕಂಡುಬರುತ್ತವೆ. ಮಸ್ಕಿಯು ೧೧ನೇ ಶತಮಾನದಲ್ಲಿ ಜೈನಧರ್ಮದ ನೆಲೆಯಾಗಿತ್ತು. ಬೆಸವೋಜನು ಅಲ್ಲಿ ಬಸದಿಯನ್ನು ಮಾಡಿಸಿದನೆಂದು ಕ್ರಿ.ಶ. ೧೦೨೭ರ ಶಾಸನ ಹೇಳಿದೆ.[೨೦]

ಪ್ರಸ್ತುತ ಬಳಗಾನೂರು ಗ್ರಾಮದ ಆದಯ್ಯ-ಅಮರಯ್ಯ ಗುಡಿಯ ಹತ್ತಿರ ಜಿನಬಿಂಬದ ಕುಂಡವೊಂದು ದೊರೆತಿದೆ ಎಂದು ಹೇಳಲಾಗುತ್ತಿರುವುದರಿಂದ ಆ ಪ್ರದೇಶದಲ್ಲೊಂದು ಜೈನ ದೇವಾಲಯ ಇತ್ತೆಂದು ಊಹಿಸಬಹುದು. ಇಲ್ಲಿದ್ದ ಜೈನಮೂರ್ತಿಯೊಂದನ್ನು ತೆಗೆದುಕೊಂಡು ಹೋಗಿ ಲಿಂಗಸೂಗೂರಿನಲ್ಲಿ ಇಡಲಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಜೈನರು ಇಲ್ಲಿನ ಪ್ರಮುಖ ವರ್ತಕರು ಕೂಡ ಆಗಿದ್ದರು. ಈಗಲೂ ಇಲ್ಲಿ ಜೈನರು ವಾಸವಾಗಿದ್ದಾರೆ. ಒಟ್ಟಾರೆಯಾಗಿ ಬಳಗಾನೂರು ಪ್ರದೇಶವು ಜೈನಧರ್ಮದ ಪ್ರಭಾವಕ್ಕೂ ಒಳಗಾಗಿತ್ತು.

**೩. ವೈಷ್ಣವಧರ್ಮ :** ಭಾಗವತ ಧರ್ಮವು ದಕ್ಷಿಣ ಭಾರತವನ್ನು ಕ್ರಿಸ್ತಶಕಕ್ಕಿಂತ ಪೂರ್ವದಲ್ಲಿಯೇ ಪ್ರವೇಶಿಸಿದ್ದಿತೆಂದು ನಾನಘಾಟ್ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. ಆದಿಭಾಗದಲ್ಲಿ ತಮಿಳುನಾಡಿನ ಆಳ್ವಾರರ ಪ್ರಭಾವವು ಕನ್ನಡ ನಾಡಿನ ಮೇಲೆ ಎಷ್ಟರಮಟ್ಟಿಗೆ ಆಯಿತೋ ತಿಳಿಯದು. ಭಾಗವತ ಧರ್ಮದ ಇತಿಹಾಸವನ್ನು ನೋಡಿದಂತೆ ಕ್ರಿ.ಶ ಮೊದಲ ಹತ್ತು ಅಥವಾ ಹನ್ನೊಂದು ಶತಕಗಳಲ್ಲಿ ವೈದಿಕಗೊಳಿಸಲ್ಪಟ್ಟ ಭಾಗವತ ಧರ್ಮವು ಕರ್ನಾಟಕದಲ್ಲಿ ಪ್ರಚುರವಾಗಿದ್ದಿರಬೇಕು. ಶಾಸನಗಳಲ್ಲಿ 'ಭಾಗವತ', 'ವೈಷ್ಣವ' ಎಂಬ ಉಕ್ತಿಗಳು ದೊರೆಯುತ್ತವೆ. ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಶಾಸನವಾದ ಹಲ್ಮಿಡಿ ಶಾಸನವು(ಕ್ರಿ.ಶ.೪೫೦) ವಿಷ್ಣುವಿನ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ.[೨೧]

ಬಳಗಾನೂರು ಪ್ರದೇಶವು ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ವೈಷ್ಣವಧರ್ಮದ ಪ್ರಭಾವಕ್ಕೆ ಒಳಗಾಗಿತ್ತು. ಇಲ್ಲಿ ಆಂಜನೇಯ, ಲಕ್ಷ್ಮಿನಾರಾಯಣ ಪ್ರಮುಖ ವೈಷ್ಣವ ದೇವಾಲಯಗಳಾಗಿವೆ. ಲಕ್ಷ್ಮಿನಾರಾಯಣ ದೇವರಿಗೆ ವೈಷ್ಣವ ಅರಸರೇ ಹೆಚ್ಚಿನ ರೀತಿಯಲ್ಲಿ ದಾನವನ್ನು ಕೊಟ್ಟಿದ್ದಾರೆ. ಈ ದೇವಾಲಯದ ಶಾಸನವು ಹೈಹಯ ವಂಶದ ಅಲ್ಲಿಹುಲಿದೇವನು ತನ್ನ ಪತ್ನಿ ವೈಷ್ಣವ ರಬ್ಬಲದೇವಿ ಮಕ್ಕಳು ಪ್ರಧಾನರೊಂದಿಗೆ ದಾನ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಅಲ್ಲದೇ ವೈಷ್ಣವ ರವಿದೇವಸೆಟ್ಟಿ, ವಿರೂಪಾಕ್ಷಸೆಟ್ಟಿ, ಬಾಚೈಯ ಪಿನಮಲ್ಲ ಮುಂತಾದವರು ಅಂಕಿಮಗೆರೆಯಲ್ಲಿ ಭೂದಾನ ನೀಡುತ್ತಾರೆಂದು ತಿಳಿಸುತ್ತದೆ.

ಇಲ್ಲಿನ ನಗರೇಶ್ವರ ದೇವಾಲಯದ ಶಾಸನವು ದಿದ್ದಿಗಿಯಲ್ಲಿ ವೈಷ್ಣವ ಸರ್ವದೇವಸೆಟ್ಟಿ, ವೈಷ್ಣವ ಮಾರಿಸೆಟ್ಟಿ, ವೈಷ್ಣವ ನಾಚಾಡ್ಯಾರಾಯ ಸೆಟ್ಟಿಯರು ಮಹಾಜನಗಳ ಪಾದಪೂಜೆಯನ್ನು ಮಾಡಿ ದಾನ ಕೊಡಲಾಯಿತೆಂದು ಹೇಳುತ್ತದೆ. ಈ ಶಾಸನವು 'ವೈಷ್ಣವ ಕಲ್ಪತರು' (ನಗರೇಶ್ವರ ದೇವಾಲಯದ ೩ಲನೇ ಶಾಸನ, ಕ್ರಿ.ಶ. ೧೧೮೨) ಎಂದು ಹೆಸರಿಸುತ್ತದೆ. ಈ ಅಂಶಗಳ ಜೊತೆಗೆ ಇಲ್ಲಿನ ಅಗ್ರಹಾರದಲ್ಲಿದ್ದ ಬ್ರಾಹ್ಮಣರು ಪ್ರಬಲರಾಗಿದ್ದಲ್ಲದೆ ಆಡಳಿತಾಧಿಕಾರದಲ್ಲಿ ಭಾಗಿಗಳಾಗುತ್ತಿದ್ದರು. ಇವರು ವೈಷ್ಣವ ಧರ್ಮದವರಾಗಿದ್ದರು. ಇವುಗಳಿಂದಾಗಿ ಇಲ್ಲಿ ವೈಷ್ಣವ ಧರ್ಮ ಪ್ರಬಲವಾಗಿತ್ತೆಂದು ಹೇಳಬಹುದು.

೪. **ಶೈವಧರ್ಮ :** ಭರತಖಂಡದಲ್ಲಿ ಶೈವಧರ್ಮವು ಅತ್ಯಂತ ಪ್ರಾಚೀನವಾದ ಧರ್ಮಗಳಲ್ಲೊಂದು. ಶಿವೋಪಾಸನೆಯ ಇತಿಹಾಸವು ವೇದಗಳಿಗಿಂತಲೂ ಹಿಂದಕ್ಕೆ ಹೋಗುತ್ತದೆ. ಹರಪ್ಪ-ಮೆಹಂಜೋದಾರೋಗಳ ಸೈಂಧವ ಸಂಸ್ಕೃತಿಯಲ್ಲಿ(ಕ್ರಿ.ಪೂ. ೩೨೫೦-೨೭೫೦) ಕೊಂಬುಗಳಿರುವ ದೇವತೆಯ ಚಿತ್ರವಿರುವ ಮುದ್ರಿಕೆಗಳೂ ಲಿಂಗಗಳೂ ದೊರೆತಿವೆ. ಕೊಂಬುಗಳಿರುವ ದೇವತೆಗೆ ಮೂರು ಮುಖಗಳಿವೆ. ಅವನು ಯೋಗಸಮಾಧಿಯ ಭಂಗಿಯಲ್ಲಿ ಕುಳಿತಿದ್ದಾನೆ. ಅವನ ಸುತ್ತಮುತ್ತ ಮತ್ತು ಪೀಠದ ಕೆಳಗೆ ಆನೆ, ಹುಲಿ, ಖಡ್ಗಮೃಗ, ಎಮ್ಮೆ, ಜಿಂಕೆಗಳು ಸುತ್ತುವರಿದಿವೆ. ಇದನ್ನು ಪರಿಶೀಲಿಸಿ ಆ ವಿಗ್ರಹವು ಹಿಂದೂ ಧರ್ಮದ ಮಹಾಯೋಗಿಯೂ ಪಶುಪತಿಯೂ ಆದ ಶಿವನ ಪ್ರಾಚೀನ ರೂಪವನ್ನು ಸೂಚಿಸುತ್ತದೆಯೆಂದು ಸರ್ ಜಾನ್ ಮಾರ್ಷಲ್ ಅವರು ಅಭಿಪ್ರಾಯಪಡುತ್ತಾರೆ.[೨೨] ಶೈವಧರ್ಮಕ್ಕೆ ಆಧಾರಗ್ರಂಥಗಳಾದ ಶೈವಾಗಮಗಳು ಇಪ್ಪತ್ತೆಂಟು. ಇವು ಮುಖ್ಯಾಗಮಗಳು. ಇವಲ್ಲದೆ ಇವುಗಳಲ್ಲಿ ಒಂದೊಂದಕ್ಕೂ ಹೊಂದಿಕೊಂಡಂತೆ ಉಪಾಗಮಗಳಿವೆ.

ವೈಷ್ಣವಧರ್ಮದ ನಂತರ ಬಳಗಾನೂರು ಪರಿಸರದಲ್ಲಿ ಶೈವ ಧರ್ಮದ ಪ್ರಭಾವವನ್ನೂ ಕಾಣಬಹುದು. ಇಲ್ಲಿ ನಿರ್ಮಾಣಗೊಂಡಿರುವ ಶೈವ ದೇವಾಲಯಗಳೇ ಸಾಕ್ಷಿಗಳಾಗಿವೆ. ಬಳಗಾನೂರು ಮತ್ತು ದಿದ್ದಿಗಿ ಗ್ರಾಮದಲ್ಲಿ ಶೈವ ದೇವಾಲಯಗಳ ಸಂಖ್ಯೆ ಹೆಚ್ಚಿನವುಗಳಾಗಿವೆ.

ಬಳಗಾನೂರು ಪ್ರದೇಶವು ಕಲ್ಯಾಣದ ಕಲಚೂರಿಗಳ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ಇಲ್ಲಿನ ಇತಿಹಾಸ ಅವಲೋಕನದಿಂದ ತಿಳಿದುಬಂದಿರುವ ಸಂಗತಿ. ರಾಮಮುರಾರಿ ಸೋವಿದೇವ, ಆಹವಮಲ್ಲರಸರು ಇಲ್ಲಿ ಆಳ್ವಿಕೆ ಮಾಡಿದ್ದಾರೆ. ಇವರು ಶೈವಧರ್ಮವನ್ನು ಅನುಸರಿಸಿದವರಾಗಿದ್ದರು. ಕಲಚೂರಿಗಳ ಕಾಲದಲ್ಲಿ ಶೈವ-ವೀರಶೈವ ಧರ್ಮ ಬೆಳೆದುಬಂದಿತು. ಇಲ್ಲಿನ ಆದಯ್ಯ ಅಮರಯ್ಯ ದೇವಾಲಯದ ಮಂಟಪದಲ್ಲಿ ಎರಡು ಶಾಸನಗಳಿವೆ. ಇವುಗಳಲ್ಲಿ ಒಂದು 'ಮಾರೆಯ್ಯನ ಒಡೆಯನಾದ ಅಮರಗೊಂಡದ ಮಲ್ಲಿಕಾರ್ಜುನ ದೇವರ ಶ್ರೀಪಾದಕ್ಕೆ ಶರಣು' ಎಂದಿದೆ. ಇನ್ನೊಂದು ಶಾಸನದಲ್ಲಿ 'ತ್ರಿಪುರ ವಿರಂಣ ವಡೆಯನ ಮಗ ಅಮರಯ್ಯನ ಒಡೆಯನಾದ ಅಮರದೇವರ ಶ್ರೀಪಾದಕ್ಕೆ ಶರಣು' ಮಾಡಿದ ಉಲ್ಲೇಖವಿದೆ.[೨೩] ಈ ಎರಡು ಶಾಸನಗಳು ಶೈವ ಧರ್ಮವನ್ನು ಪ್ರತಿನಿಧಿಸುವಂತಹವುಗಳಾಗಿವೆ.

ಈ ಮೇಲಿನ ಆಧಾರಗಳಿಂದ ಇಲ್ಲಿ ಶೈವಧರ್ಮ ಉಳಿದೆಲ್ಲ ಧರ್ಮಗಳಿಗಿಂತ ಪ್ರಬಲವಾಗಿ ನೆಲೆಯೂರಿತ್ತು ಎಂದು ಹೇಳಬಹುದು.

೫. **ಇಸ್ಲಾಂ ಧರ್ಮ :** ವಿಜಯನಗರ ಮತ್ತು ಬಹಮನಿ ಸುಲ್ತಾನರ ಕಾಲದಲ್ಲಿ ಈ ಪ್ರದೇಶದ ಮೇಲೆ ಮುಸ್ಲಿಂ ಧರ್ಮ ಪ್ರಭಾವವನ್ನು ಬೀರಿತು. ವಿಜಯನಗರದ ನಂತರ ಮುಸ್ಲಿಂ ಧರ್ಮ ಯಾವುದೇ ಪ್ರಬಲ ವಿರೋಧವಿಲ್ಲದೆ ಬೆಳೆದುಬಂದಿತು. ಬಹಮನಿ, ಆದಿಲ್‌ಶಾಹಿ, ಹೈದರಾಬಾದ್ ನಿಜಾಮ ಮನೆತನಗಳು ಮುಸ್ಲಿಂ ಧರ್ಮವನ್ನು ಪ್ರತಿನಿಧಿಸುವಂತಗಳಾಗಿದ್ದವು. ಬಳಗಾನೂರಿನ ಎಲ್ಲಮ್ಮ ದೇವತೆಗೆ ಪಾಳೆಯಗಾರ ಪರಿಸರದ ಶ್ರೀಮನ್ಮಹಾನಾಚಾರ್ಯ ಅಜರತ್ ಅಲಿ ಸಾಹೇಬರು ದತ್ತಿಬಿಟ್ಟ ಬಗ್ಗೆ ಹೇಳುವ ಶಾಸನ ಭಾವೈಕ್ಯತೆಯ ಧರ್ಮಸಾಮರಸ್ಯದ ಕುರುಹಾಗಿ ಕಾಣುತ್ತದೆ. ಹಿಂದೂ-ಮುಸ್ಲಿಮರು ಅನೇಕ ಸಲ ಈ ಪ್ರದೇಶದ ವಶಕ್ಕಾಗಿ ಪರಸ್ಪರ ವಿರೋಧಿಗಳಾಗಿ ದಾಯಾದಿಗಳಾಗಿ ಸಂಘರ್ಷಕ್ಕೆ ಇಳಿದಿದ್ದುಂಟು.

ಈ ಎಲ್ಲಾ ಧರ್ಮಗಳು ತಮ್ಮದೇ ಆದ ತತ್ವ, ಸಂಪ್ರದಾಯ, ಆಚರಣೆಗಳನ್ನು ಹೊಂದಿದ್ದವು. ಇವು ಒಂದರ ಮೇಲೆ ಮತ್ತೊಂದು ಪ್ರಭಾವ ಬೀರಿರುವುದು ಗಮನಾರ್ಹವಾದ ಅಂಶವಾಗಿದೆ.

**೫.೩. ಆರ್ಥಿಕ ಸ್ಥಿತಿ**

ಒಂದು ರಾಜ್ಯ ಅಥವಾ ಸಾಮ್ರಾಜ್ಯದ ಆಡಳಿತವು ಸುವ್ಯವಸ್ಥಿತವಾಗಿದೆ ಎಂದರೆ ಅಲ್ಲಿ ಆರ್ಥಿಕ ಸ್ಥಿತಿಯೂ ಉತ್ತಮಮಟ್ಟದಲ್ಲಿದೆ ಎಂದರ್ಥ. ಆಡಳಿತ ಅವ್ಯವಸ್ಥೆಯಿಂದ ಕೂಡಿದ್ದರೆ ಅದು ಆರ್ಥಿಕತೆಯಿಂದ ಬಳಲುತ್ತಿದೆ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಪ್ರಾಚೀನ ಅರಸರು ಸಾಮ್ರಾಜ್ಯ ವಿಸ್ತರಣೆಯ ಜೊತೆಗೆ ಆರ್ಥಿಕತೆಗೂ ಗಮನ ಹರಿಸುತ್ತಿದ್ದುದು ಚರಿತ್ರಾರ್ಹ. ಕೌಟಿಲ್ಯನು ತನ್ನ ಸಪ್ತಾಂಗ ಸಿದ್ಧಾಂತದಲ್ಲಿ 'ಕೋಶ'ವನ್ನು ಕುರಿತು ಹೇಳುತ್ತಾನೆ. ಈತನು ಸದೃಢ ಸಾಮ್ರಾಜ್ಯಕ್ಕೆ ಹಣವೇ ಮೂಲ ಎಂಬುದಾಗಿ ತಿಳಿಸುತ್ತಾನೆ. ಆರ್ಥಿಕತೆಯಲ್ಲಿ ಕೃಷಿ, ಕೈಗಾರಿಕೆ, ಉತ್ಪನ್ನ, ವ್ಯಾಪಾರ-ವಾಣಿಜ್ಯ, ವೃತ್ತಿ ಸಂಘಗಳು, ಅಳತೆ, ತೂಕ ಮತ್ತು ನಾಣ್ಯಗಳು ಪ್ರಮುಖ ಅಂಶಗಳಾಗಿವೆ. ಇಲ್ಲಿನ ಆರ್ಥಿಕ ಸ್ಥಿತಿಗತಿಯನ್ನು ತಿಳಿಯಲು ಶಾಸನಾಧಾರಗಳೇ ಪ್ರಮುಖವಾಗಿವೆ.

**ಕೃಷಿ :** ''ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಮೇಟಿಯಂ ರಾಟಿ ನಡೆದುದಲ್ಲದೆ ದೇಶ ದಾಟವೆ ಕೆಡಗು ಸರ್ವಜ್ಞ''[೨೪] ಎಂಬ ಸರ್ವಜ್ಞನ ಈ ವ್ಯಾಖ್ಯೆಯಿಂದ ಕೃಷಿಯ ಪ್ರಾಮುಖ್ಯತೆ ಎಷ್ಟಿತ್ತೆಂದು ಅರ್ಥವಾಗುತ್ತದೆ. ಪ್ರಾಚೀನ ಕಾಲದ ಮಾನವನು ತನ್ನ ಅಲೆಮಾರಿ ಜೀವನವನ್ನು ನಿಲ್ಲಿಸಿ ಒಂದು ಕಡೆ ನೆಲೆ ನಿಲ್ಲುವ ಮೂಲಕವಾಗಿ ಕೃಷಿಯ ಬೆಳವಣಿಗೆಯು ಪ್ರಾರಂಭವಾಯಿತು. ಅಂದಿನಿಂದ ಭೂಮಿಯನ್ನು ಸಂಪತ್ತು ಎಂದು ಭಾವಿಸಲಾಗಿದೆ. ಸಮಾಜದ ಎಲ್ಲ ವರ್ಗದ ಜನ ವ್ಯವಸಾಹಯಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಾ ಬಂದರು. ಹೀಗಾಗಿ ವ್ಯವಸಾಯವೇ ನಾಡಿನ ಪ್ರಧಾನ ವೃತ್ತಿ ಹಾಗೂ ಜೀವನೋಪಾಯದ ಮಾರ್ಗವಾಯಿತು. ರಾಜ್ಯದ ಒಟ್ಟು ಆರ್ಥಿಕತೆ ಕೃಷಿ ಮತ್ತು ಅದರ ಉತ್ಪಾದನೆಯನ್ನು ಅವಲಂಬಿಸಿರುತ್ತಿತ್ತು.

ಬಳಗಾನೂರು ಪರಿಸರದ ಶಾಸನಗಳೆಲ್ಲವೂ ದಾನಕ್ಕೆ ಸಂಬಂಧಿಸಿದವುಗಳಾಗಿವೆ. ಅದರಲ್ಲಿ ಭೂಮಿಯನ್ನು ದಾನ ಕೊಟ್ಟ ಬಗ್ಗೆ ಹೆಚ್ಚಿನ ಉಲ್ಲೇಖಗಳು ಕಂಡುಬರುತ್ತವೆ. ಇಲ್ಲಿನ ಶಾಸನಗಳಲ್ಲಿ ಕಂಡುಬರುವ ಭೂದಾನಗಳ ವರ್ಣನೆಯು ಕೃಷಿಯ ಮಹತ್ವವನ್ನು ತಿಳಿಸುತ್ತವೆ. ಇಲ್ಲಿನ ಶಾಸನಗಳು ದಾನ ನೀಡಿದ ಭೂಮಿಯನ್ನು 'ಕರಿಯ ಭೂಮಿ', 'ಬೆಂಕೊಳ್ಳನ ಭೂಮಿ'[೨೫] ಎಂಬ ವಿಶೇಷಣದೊಂದಿಗೆ ಸೂಚಿಸಲಾಗಿದೆ. ಅರಸರು ಈ ಭೂಮಿಯನ್ನು ದೇವಾಲಯಕ್ಕೆ ನೀಡಿದ್ದಾರೆ. ದಾನಗಳನ್ನು ನೀಡುವಾಗ ಗದ್ದೆ, ತೋಟ, ಬಣವೆ ಎಂದು ಹೇಳಿ ಕೊಡಲಾಗಿದೆ. 'ಗದ್ದೆ' (ನೀರಾವರಿಗೊಳಪಟ್ಟ ಭೂಮಿ) ಎಂದರೆ ಸಾಮಾನ್ಯವಾಗಿ ಭತ್ತವನ್ನು ಬೆಳೆಯುತ್ತಿರುವ ಪ್ರದೇಶ. ತೋಟಗಳಲ್ಲಿ ಎಲೆ, ಅಡಿಕೆ, ಹೊಂಗೆಗಳನ್ನು ಬೆಳೆಯುತ್ತಿದ್ದರು. ಸುಂಕನೂರಿನ ಶಾಸನದಲ್ಲಿ ಉಲ್ಲೇಖಿತ ಕರಿಯಭೂಮಿ ದೇಸಿಗ ಗಣಕ್ಕೆ ಸೇರಿದ್ದೆಂದು ಹೇಳಲಾಗಿದೆ. ಭೂಮಿಯ ಒಡೆಯರು ತಮ್ಮ ಕೃಷಿ ಭೂಮಿಯನ್ನು ವಿವಿಧ ಗಡಿಗಳಿಂದ ಗುರುತಿಸುತ್ತಿದ್ದರು. ವಾಮನಮುದ್ರೆ ಮತ್ತು ಲಿಂಗಮುದ್ರೆ ಕಲ್ಲುಗಳನ್ನು ಸ್ಥಾಪಿಸಿ ತಮ್ಮ ಭೂಮಿಯ ಗಡಿಯನ್ನು ಭದ್ರಪಡಿಸಿಕೊಳ್ಳುತ್ತಿದ್ದರು.

ಕೆರೆ, ಕಾಲುವೆ, ಬಾವಿ, ಹಳ್ಳ ಮುಂತಾದ ನೀರಿನ ಮೂಲಗಳ ಆಶ್ರಯದಿಂದ ವ್ಯವಸಾಯಕ್ಕೆ ಒಳಪಡಿಸಿದ ಭೂಮಿಯನ್ನು ಗದ್ದೆ, ಕರಿಭೂಮಿ, ನೀರಾವರಿ ಎಂದು ಕರೆಯುತ್ತಿದ್ದರು. ಇಲ್ಲಿನ ಲಕ್ಷ್ಮೀನಾರಾಯಣ

ದೇವಾಲಯದ ''ಶಾಸನವೊಂದು ಜಲವಾಡಿಯ ಕಾಲ್ವೆಯಂ ಹತ್ತಿರ ಪಡುವಲ(ಪಶ್ಚಿಮ) ಬಾರಿಯ ಹಳ್ಳಿ''ಗಳೆಂದು ಉಲ್ಲೇಖಿಸುತ್ತದೆ. ಇಲ್ಲಿನ ಪ್ರಮುಖ ಬೆಳೆ ಹತ್ತಿಯಾಗಿತ್ತು. ಎಲೆ, ಅಡಿಕೆ, ಕಬ್ಬು ಮುಂತಾದ ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತಿತ್ತು. ಆಹಾರದ ಬೆಳೆಯಾಗಿ ನವಣೆ, ಜೋಳ, ಸಜ್ಜೆಯನ್ನು ಬೆಳೆಯುತ್ತಿದ್ದರು. ಪಶುಪಾಲನೆಯು ಇಲ್ಲಿ ಅಧಿಕವಾಗಿತ್ತು ಎಂಬುದನ್ನು ಶಾಸನಶಿಲ್ಪಗಳು ಉಲ್ಲೇಖಿಸುತ್ತವೆ.

**ಕೈಗಾರಿಕೆ ವೃತ್ತಿಗಳು :** ಕೃಷಿಯ ಜೊತೆಗೆ ಕೈಗಾರಿಕೆಯೂ ಇಲ್ಲಿ ಬೆಳೆದುಬಂದಿತ್ತು. ಶಾಸನಗಳು ಬೇರೆ ಬೇರೆ ಉದ್ಯಮಗಳನ್ನು ಹೆಸರಿಸುತ್ತವೆಯೇ ಹೊರತು ಹೆಚ್ಚು ವಿವರಗಳನ್ನು ಕೊಡುವುದಿಲ್ಲ. ಹತ್ತಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದರಿಂದ ನೇಕಾರಿಕೆಯು ಇಲ್ಲಿ ಬೆಳೆದುಬಂದಿತ್ತು. ಅಲ್ಲದೇ ಉನ್ನತ ಮಟ್ಟದಲ್ಲಿತ್ತು. ಹಾಗೆ ಸಣ್ಣ, ದೊಡ್ಡ ಕೈಮಗ್ಗ ಕಾರ್ಖಾನೆಗಳು, ಗುಡಿಕೈಗಾರಿಕೆಗಳು ಇಲ್ಲಿದ್ದವು. ಅರಳೆ ಮತ್ತು ರೇಷ್ಮೆ ನೂಲುಗಳಿಂದ ಸೀರೆ ಮತ್ತು ಇನ್ನಿತರ ವಸ್ತ್ರಗಳನ್ನು ತಯಾರಿಸಲಾಗುತ್ತಿತ್ತು. ಇಲ್ಲಿ ತಯಾರಾದಂತಹ ಸೀರೆಗಳಿಗೆ ಬಹುಬೇಡಿಕೆಯಿತ್ತು.

ವೃತ್ತಿಗಳಿಗನುಸಾರವಾಗಿ ಹುಟ್ಟಿಕೊಂಡ ಜಾತಿಗಳು ಇಲ್ಲಿದ್ದವು ಎನಿಸುತ್ತದೆ. ಇಲ್ಲಿನ ಶಾಸನಗಳು ತೆಲ್ಲಿಗರು, ನಖರರು, ಬಳೆಗಾರರು, ವಡ್ಡರು, ಸೆಟ್ಟಿ, ಸೆಟ್ಟಿಗುತ್ತರನ್ನು ಹೆಸರಿಸುತ್ತವೆ. ಅಕ್ಕಸಾಲಿಗ, ಬಡಿಗ, ಕಮ್ಮಾರರು ಇಲ್ಲಿದ್ದರು ಎಂದು ತಿಳಿದುಬರುತ್ತದೆ. ಇವೆಲ್ಲವುಗಳು ಆ ಕಾಲದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದವು. ಅಕ್ಕಸಾಲಿಗರು ಆಭರಣಗಳ ತಯಾರಿಕೆಯಲ್ಲಿ ತೊಡಗಿಕೊಂಡಿದ್ದರು. ಈ ಪ್ರದೇಶದ ಹತ್ತಿರದಲ್ಲಿ ಇರುವ ಹಟ್ಟಿ ಚಿನ್ನದ ಗಣಿಯಿಂದ ಅಕ್ಕಸಾಲಿಗರು ಅದಿರನ್ನು ಪಡೆದುಕೊಳ್ಳುತ್ತಿದ್ದಿರಬೇಕು. ಬಡಗಿಗಳು, ಕಮ್ಮಾರರು, ವಡ್ಡರು ಸಹ ಉತ್ತಮ ಗೌರವದಿಂದ ಜೀವಿಸುತ್ತಿದ್ದರು. ಬಳೆಗಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಆದ್ದರಿಂದ ಬಳೆಗಳ ಕೈಗಾರಿಕೆಯನ್ನು ಹೆಸರಿಸಬಹುದು. ಇನ್ನೂ ಹೆಚ್ಚಿನ ಕೈಗಾರಿಕೆಗಳು ಇಲ್ಲಿದ್ದಿರ ಬಹುದು.

**ವ್ಯಾಪಾರ ವಾಣಿಜ್ಯ :** ಬಳಗಾನೂರು ಗ್ರಾಮವು ೧೨ನೆಯ ಶತಮಾನದ ಸಂದರ್ಭದಲ್ಲಿ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಇದಕ್ಕೆ ಇಲ್ಲಿನ ಶಾಸನಗಳು ವಿವಿಧ ಶ್ರೇಣಿ, ವರ್ತಕ ಸಂಘಗಳನ್ನು ಹೆಸರಿಸುವುದನ್ನು ಆಧಾರವಾಗಿ ಕೊಡಬಹುದು. ಒಂದು ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಫಲವತ್ತಾದ ಭೂಮಿ ಹಾಗೂ ಅದರ ಉತ್ಪನ್ನಗಳು ಕಾರಣವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಕೃಷಿ, ಕೈಗಾರಿಕೆಗಳಿಂದಾಗಿ ಅನೇಕ ವಸ್ತುಗಳು ಉತ್ಪಾದನೆಗೊಳ್ಳುತ್ತಿದ್ದವು. ಉತ್ಪಾದನೆಯಾದ ಉತ್ಪನ್ನಗಳು ಅಥವಾ ವಸ್ತುಗಳು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುತ್ತಿದ್ದರಿಂದ ಸಹಜವಾಗಿ ಬೇರೆ ಬೇರೆ ಪ್ರದೇಶಗಳಿಗೆ ಉತ್ಪನ್ನಗಳು ಸರಬರಾಜಾ ಗುತ್ತಿದ್ದವು. ಇದು ಪ್ರತಿ ವ್ಯಾಪಾರ ಕೇಂದ್ರಕ್ಕೂ ಅನ್ವಯಿಸುತ್ತದೆ. ಪ್ರಸ್ತುತ ಈ ಪ್ರದೇಶದಲ್ಲಿ ಉತ್ಪಾದನೆ ಯಾಗುತ್ತಿದ್ದ ಉತ್ಪನ್ನಗಳು ಬೇರೆ ಬೇರೆ ಕಡೆಗೆ ರಫ್ತಾಗುತ್ತಿದ್ದವು. ಇಲ್ಲಿಂದ ಮುಖ್ಯವಾಗಿ ಹತ್ತಿ, ಹತ್ತಿಬಟ್ಟೆ, ಸೀರೆ(ನೆಯ್ದು ಜಿನಗ ಸೀರೆ, ಕಡ್ಡಿ ಸೀರೆ, ಕರಿಕಾಳ, ಚಂದ್ರ ಸೀರೆ)ಗಳು ರಫ್ತಾಗುತ್ತಿದ್ದವು. ಇವು ರಾಯಚೂರನ್ನು ಒಳಗೊಂಡಂತೆ ಇನ್ನಿತರ ಪ್ರದೇಶಗಳಿಗೆ ಸರಬರಾಜಾಗುತ್ತಿದ್ದಂತೆ ತೋರುತ್ತದೆ. ರಾಯಚೂರಿನಿಂದ ಬೆಲ್ಲ, ಬೇಳೆ, ಸಕ್ಕರೆ, ಕಾಳು ಕಡಿಗಳು ಇಲ್ಲಿಗೆ ಬರುತ್ತಿದ್ದವು. ವ್ಯಾಪಾರದ ಸರಕು ಸಾಗಾಣಿಕೆಗಾಗಿ ಬಂಡಿಗಳನ್ನು ಬಳಸಲಾಗುತ್ತಿತ್ತು.

ಇಲ್ಲಿನ ಶಾಸನಗಳು ನಖರರು,[೩೬] ತೆಲ್ಲಿಗರು, ಅಯ್ಯಾವೊಳೆ ೫೦೦ ಸ್ವಾಮಿಗಳು ವಡ್ಡವ್ಯವಹಾರಿ, ಹಿರಿಯ ಬಳಾರನೂರು ನಾನಾದೇಸಿ, ಸೌದರೆ, ಮಿಂಡಗುದ್ದಲಿ[೩೭], ಬಳಗಾನೂರು ವ್ಯಾಪಾರಿಗಳು, ರವಿಸೆಟ್ಟಿ, ಚೌಡಿಸೆಟ್ಟಿ[೩೮] ಮುಂತಾದ ವ್ಯಾಪಾರ ಮತ್ತು ವರ್ತಕ ಸಂಘಗಳನ್ನು ಹೆಸರಿಸುತ್ತವೆ.

**ನಖರರು:** ನಖರ ಪ್ರಾಚೀನ ಕಾಲದ ಒಂದು ವರ್ತಕ ಪ್ರಕಾರ.[೩೯] ನಖರರು ಒಂದೇ ಸ್ಥಳದಲ್ಲಿ ನೆಲೆನಿಂತು ವ್ಯಾಪಾರ ಮಾಡಿದವರಲ್ಲ. ಇವರು ಮೂಲತಃ ಸಂಚಾರಿ ವ್ಯಾಪಾರಿಗಳು. ಇಂತಹ ವ್ಯಾಪಾರರ ಗುಂಪು ಬಳಗಾನೂರಿನಲ್ಲಿತ್ತು. ಇಲ್ಲಿನ ಶಾಸನವು ಇವರನ್ನು ಕುರಿತು ಸಮಸ್ತ ವಸ್ತು ಪರೀಕ್ಷಾದಕ್ಷರೂ ಗೋಸಹಸ್ರದಾನ ಅನ್ನದಾನ ವಿನೋದ, ದೀನಾನಾಥ ಸಮುದ್ಧರಣ ಮುಂತಾದ ವಿಶೇಷಣಗಳಿಂದ ಕೂಡಿದವರೆಂದು ಉಲ್ಲೇಖಿಸುತ್ತದೆ. ಇವರು ಸಂತೆ ಪೇಟೆಗಳಿಗೆ ಬಂದ ವಿವಿಧ ಸರಕುಗಳನ್ನು ಖರೀದಿಸಿ ಬಯಲು ಅಂಗಡಿ ಹಾಗೂ ಮಳಿಗೆಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದರು. ಪ್ರಾಚೀನ ಹಾಗೂ ಮಧ್ಯಕಾಲೀನ ಸಮಗ್ರ ಆರ್ಥಿಕಾಭಿವೃದ್ಧಿಯಲ್ಲಿ ನಖರರ ಪಾತ್ರ ಗಮನಾರ್ಹವಾಗಿದ್ದಿತು.

**ತೆಲ್ಲಿಗರು :** ಗ್ರಾಮ, ಪಟ್ಟಣಗಳಲ್ಲಿ ಎಣ್ಣೆ ಉತ್ಪಾದನೆ ಮಾಡುವವರು ತೆಲ್ಲಿಗರು.[೪೦] ಇವರ ಇನ್ನೊಂದು ಹೆಸರು ಗಾಣಿಗರು. ನಿತ್ಯೋಪಯೋಗಿಯಾದ ಎಣ್ಣೆಯ ಬೇಡಿಕೆಯನ್ನು ಪೂರೈಸುವಲ್ಲಿ ಕಾರ್ಯನಿರತರಾದ ತೆಲ್ಲಿಗರದು ಆ ಕಾಲದ ಪ್ರಧಾನ ಘಟಕ.

**ಅಯ್ಯಾವೊಳೆ ೫೦೦ ಸ್ವಾಮಿಗಳು :** ಪ್ರಾಚೀನ ದಕ್ಷಿಣ ಭಾರತದ ವರ್ತಕ ಶ್ರೇಣಿಗಳಲ್ಲಿ ಅಯ್ಯಾವೊಳೆ ಐನೂರ್ವರು ಎಂಬ ಹೆಸರು ಅತ್ಯಂತ ಪ್ರಸಿದ್ಧವಾದುದು. ಈ ಸಂಘದ ಕೇಂದ್ರ ಕಚೇರಿಯು ಕನ್ನಡನಾಡಿನ ಐಹೊಳೆಯಲ್ಲಿದ್ದುದರಿಂದ ಆ ಸಂಘಕ್ಕೆ 'ಅಯ್ಯಾವೊಳೆಯ ಐನೂರ್ವರ್' ಎಂಬ ಹೆಸರು ಬಂದಿರಬೇಕು[೪೧] ಎಂದು ಡಾ. ಎಂ. ಚಿದಾನಂದಮೂರ್ತಿಯವರು ಊಹಿಸುತ್ತಾರೆ. ಅಯ್ಯಾವೊಳೆ ಐನೂರ್ವರ ಶಾಖೆಗಳು ಐಹೊಳೆಯಲ್ಲಿ ಕುಸಿದು ಬಿದ್ದ ನಂತರ ಉಳಿದ ಭಾಗಗಳಲ್ಲಿ ಐನೂರ್ವರು ಎನಿಸಿಕೊಳ್ಳದೆ ಅಯ್ಯಾವೊಳೆ ಸ್ವಾಮಿ ಎಂಬ ಹೆಸರಿನಲ್ಲಿ ಮುಂದುವರಿದಿರುವ ಸಾಧ್ಯತೆ ಉಂಟು.

ಈ ಅಯ್ಯಾವೊಳೆ ಐನೂರುರ್ವರು ಅಗ್ರಹಾರದಿಂದ ಬಂದವರಾಗಿರಬೇಕೆನಿಸುತ್ತದೆ. ಇವರ ಶಾಸನಗಳು ಕಂಡುಬರುವ ಪ್ರದೇಶಗಳೆಲ್ಲ ಅಗ್ರಹಾರಗಳಾಗಿದ್ದವೆಂಬುದು ಇದಕ್ಕೆ ಪೂರಕವಾಗಿದೆ.[೪೨] ಈ ಐನೂರ್ವರು ಬಹುಶಃ ಒಂದೇ ಸಂಘವಾಗಿರದೆ ಹಲವು ವರ್ತಕ ಸಮುದಾಯಗಳು ಇದರಲ್ಲಿ ಸೇರಿದ್ದವು. ಸುಮಾರು ೪೬ ವಿವಿಧ ಗುಂಪುಗಳು ಬೇರೆ ಬೇರೆ ಸಂದರ್ಭಗಳಲ್ಲಿ ಅಯ್ಯಾವೊಳೆ ಐನೂರ್ವರಾಗಿ ಕಾಣಿಸಿಕೊಳ್ಳುತ್ತಾರೆ. ಅಗ್ರಹಾರದ ಮಹಾಜನರಲ್ಲದೇ ಇತರ ಜಾತಿ, ಧರ್ಮದ ಜನರೂ ಆ ಸಂಘದಲ್ಲಿದ್ದರು. ಇಂತಹ ಉನ್ನತ ವರ್ತಕ ಶ್ರೇಣಿಗಳನ್ನೊಂದಿದ್ದ ಬಳಗಾನೂರು ಪ್ರಮುಖ ವ್ಯಾಪಾರ ಕೇಂದ್ರವಾಗಿರುವುದರಲ್ಲಿ ಅನುಮಾನವೇ ಇಲ್ಲ.

**ವಡ್ಡವ್ಯವಹಾರಿ :** ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವರ್ತಕ ಪ್ರಕಾರಗಳಲ್ಲಿ ವಡ್ಡವ್ಯವಹಾರಿ ಅತ್ಯಂತ ಪ್ರಮುಖವೂ, ಅಧ್ಯಯನ ಯೋಗ್ಯವೂ ಆದುದಾಗಿದೆ.

**ಹಿರಿಯ ಬಳಾರನೂರು ನಾನಾದೇಸಿ :** ನಾನಾದೇಸಿಗಳು ಒಳನಾಡಿನ ಸರ್ವಪ್ರಕಾರದ ವರ್ತಕರಿಗೆ ಸಂಬಂಧಿಸಿದ ಒಂದು ಪಂಗಡ. ಇವರು ಹಲವು ಬಗೆಯ ಸರಕು ತೆಗೆದುಕೊಂಡು ವಿವಿಧ ಗ್ರಾಮ ಪಟ್ಟಣಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದರು. ಜೊತೆಗೆ ಆಯಾ ಪ್ರದೇಶಗಳಲ್ಲಿ ಬೆಳೆಯುವ ವಸ್ತುಗಳನ್ನು ಖರೀದಿಸುತ್ತಿದ್ದರು. ಸೌದರೆ, ಎಂಟು ಹಿಟ್ಟು ಎಂಬುದು ಸಣ್ಣಪುಟ್ಟ ವ್ಯಾಪಾರ ನಡೆಸುತ್ತಿದ್ದ ವರ್ತಕ ಸಂಘಗಳಿರಬೇಕೆನಿಸುತ್ತಿದೆ. ಈ ವರ್ತಕ ಮತ್ತು ವೃತ್ತಿ ಸಂಘಗಳು ಯಾವ ಯಾವ ಪ್ರದೇಶಗಳೊಂದಿಗೆ ವ್ಯಾಪಾರ ನಡೆಸುತ್ತಿದ್ದರು ಎಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ.

**ಅಳತೆಗಳು ಮತ್ತು ತೂಕಗಳು :** ಒಂದು ವಸ್ತು ಅಥವಾ ಪ್ರದೇಶದ ನಿರ್ದಿಷ್ಟ ಪ್ರಮಾಣವನ್ನು ತಿಳಿಯಲು ಅಳತೆ ಮತ್ತು ತೂಕ ಅವಶ್ಯಕ. ಹಿಂದೆ ರಾಜರು, ವ್ಯಾಪಾರಿಗಳು ಇನ್ನಿತರರು ದಾನಗಳನ್ನು ನೀಡುವಾಗ ಇಂತಿಷ್ಟು ಎಂದು ಹೇಳಿ ಕೊಟ್ಟಿರುವುದು ತಿಳಿದುಬರುತ್ತದೆ. ಬಳಗಾನೂರು ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದರಿಂದ ಅಗ್ರಹಾರ ಮತ್ತು ದೇವಾಲಯಗಳಿಗೆ ದಾನಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ನೀಡಿರುವುದನ್ನು ಗಮನಿಸಬಹುದು. ಈ ಪರಿಸರದ ಶಾಸನಗಳು ಅಳತೆ ಮತ್ತು ತೂಕಗಳನ್ನು ಮತ್ತರು, ಕಮ್ಮ, ಕಂಬ,[೩೩] ಬೆಂಕೊಳ್ವನ ಕಂಬ, ಬೆಂಕೊಳ್ವನ ಕೋಲು,[೩೪] ಹಿರಿಯ ಕೋಲು,[೩೫] ಹೆರಿಗೆ, ಹೊರೆಗೆ ಎಂದು ಉಲ್ಲೇಖಿಸುತ್ತವೆ. ಬಹುತೇಕವಾಗಿ ಈ ಅಳತೆಗೋಲು, ಪ್ರಮಾಣಗಳಿಂದ ಹೊಲ ಅಥವಾ ಭೂಮಿಗಳನ್ನು ಅಳೆಯುತ್ತಿದ್ದರು.

ಭೂ ಅಳತೆಯ ಘಟಕಗಳಿಗೆ ಸಾಮಾನ್ಯವಾಗಿ ನಿರ್ವತನ, ಮತ್ತರ್ ಮತ್ತು ಕಮ್ಮ ಎಂಬ ಹೆಸರುಗಳನ್ನು ಉಪಯೋಗಿಸಲಾಗುತ್ತಿದ್ದಿತು. ಇಲ್ಲಿ ಮತ್ತರಿನ ಪ್ರಮಾಣದಲ್ಲಿಯೇ ದಾನಗಳನ್ನು ಹೆಚ್ಚಾಗಿ ಕೊಡಲಾಗಿದೆ. ಉದಾಹರಣೆಗೆ ಚಾಲುಕ್ಯ ವಂಶದ ಅರಸ ಸೋಮೇಶ್ವರನು ಲಕ್ಷ್ಮಿನಾರಾಯಣ ದೇವಾಲಯಕ್ಕೆ ೧೪ ಮತ್ತರು ಭೂದಾನ ನೀಡುತ್ತಾನೆ. ಒಂದು ಮತ್ತರಿಗೆ ೬೦೦ ಕಂಬಗಳು. ಇದಕ್ಕೆ ಆಧಾರ ಕ್ರಿ.ಶ. ೧೯೬ರ ಒಂದು ಶಾಸನ.[೩೬] ಕಮ್ಮತೀರ ಚಿಕ್ಕ ಘಟಕ ನವಧಾನ್ಯಗಳ ಅಳತೆಗೋಸ್ಕರ ಉಪಯೋಗಿಸಲಾಗುತ್ತಿದ್ದ ಅಳತೆ ಮಿಷ್ಕ.

**ನಾಣ್ಯಗಳು :** ಆರ್ಥಿಕ ವ್ಯವಸ್ಥೆಯಲ್ಲಿ ನಾಣ್ಯಪದ್ಧತಿಯ ಪಾತ್ರ ಪ್ರಮುಖವಾದುದು. ಭಾರತದಲ್ಲಿ ನಾಣ್ಯಗಳ ಉಗಮದ ಬಗ್ಗೆ ಸ್ಪಷ್ಟ ಮಾಹಿತಿಗಳು ಲಭ್ಯವಿಲ್ಲ. ವೇದಗಳಲ್ಲಿ ವಸ್ತುವಿನಿಮಯದ ಉಲ್ಲೇಖವಿದೆ. ಇದರ ಅನಾನುಕೂಲಗಳನ್ನು ತಪ್ಪಿಸಲು ಸಣ್ಣ ಸಣ್ಣ ಚಿನ್ನದ ತುಂಡುಗಳನ್ನು ವ್ಯವಹಾರಕ್ಕೆ ಬಳಸಲು ಪ್ರಾರಂಭಿಸಲಾಯಿತು. ಕಾಲಕ್ರಮೇಣ ಅವು ನಾಣ್ಯಗಳಾಗಿ ರೂಪುಗೊಂಡವು. ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು ಅಚ್ಚಿನ ಟಂಕಸಾಲೆಗಳೆಂದು ಕರೆಯುತ್ತಿದ್ದರು. ಬಳಗಾನೂರು ಶಾಸನಗಳಲ್ಲಿ ಬೇಳೆ, ವೀಸ,[೩೭] ಹಣ, ಎರಡುಹಾಗ,[೩೮] ಕಾಣಿ[೩೯] ನಾಣ್ಯಗಳ ಉಲ್ಲೇಖವಿದೆ. ಈ ಶಾಸನಗಳು ಕಲ್ಯಾಣಚಾಲುಕ್ಯ ಮತ್ತು ಕಲ್ಯಾಣ ಕಲಚೂರಿಗಳ ಕಾಲದವು. ಕಲಚೂರಿಗಳ ಕಾಲದ ನಾಣ್ಯಗಳು ಕಲ್ಯಾಣಚಾಲುಕ್ಯರ ನಾಣ್ಯಗಳಿಗಿಂತ ವಿರಳವಾಗಿದ್ದವು. ಅಲ್ಲದೇ ಅವರ ನಾಣ್ಯಗಳು ಚಾಲುಕ್ಯರ ನಾಣ್ಯಗಳನ್ನು ಹೋಲುತ್ತಿದ್ದವು. ಈ ಆಧಾರದಿಂದ ಮೇಲೆ ಉಲ್ಲೇಖಿತ ನಾಣ್ಯಗಳು ಕಲ್ಯಾಣ ಚಾಲುಕ್ಯರ ಕಾಲದವು ಎಂಬ ತೀರ್ಮಾನಕ್ಕೆ ಬರಲಾಗಿದೆ. ಚಾಲುಕ್ಯರ ಕಾಲದ ಈ ನಾಣ್ಯಗಳ ಮೌಲ್ಯ, ಪ್ರಮಾಣವೆಷ್ಟು ಎಂದು ಈ ಕೆಳಗಿನಂತೆ ನೀಡಲಾಗಿದೆ.

ಒಂದು ಹಣ ಅಥವಾ ಪಣ = ೪ ಹಾಗ, ಒಂದು ಹಣ = ೪ ಕಾಗಿನಿ, ಒಂದು ಹಾಗ = ೪ ವಿಸ, ಒಂದು ಹಾಗ = ೨ ಬೇಳೆ.

### ೫.೪. ಉತ್ಸವ ಮತ್ತು ಆಚರಣೆಗಳು

ಪರಂಪರಾನುಗತವಾಗಿ ನಡೆದುಕೊಂಡು ಬಂದಿರುವ ಉತ್ಸವ ಮತ್ತು ಆಚರಣೆಗಳು ನಿಜವಾದ ಸಂಸ್ಕೃತಿಯ ಪ್ರತೀಕಗಳಾಗಿವೆ. ಇವುಗಳ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೂ ಉತ್ಸವ ಮತ್ತು ಆಚರಣೆಗಳು ಅನಾದಿಕಾಲದಿಂದ ನಡೆದುಕೊಂಡು ಬಂದಿರುವುದನ್ನು ತಳ್ಳಿಹಾಕುವಂತಿಲ್ಲ. ಪ್ರಾರಂಭದಲ್ಲಿ ಬುಡಕಟ್ಟು ಸಂಪ್ರದಾಯದ ಹಿನ್ನೆಲೆಯಿಂದ ಹುಟ್ಟಿಕೊಂಡ ಉತ್ಸವ, ಆಚರಣೆಗಳು ತಮ್ಮೊಳಗೆ ಅನೇಕ ಅಂಶಗಳನ್ನು ಒಳಗುಮಾಡಿಕೊಂಡು ಬಂದವು. ಆಧುನಿಕ ಕಾಲಘಟ್ಟದ ಸಂದರ್ಭದಲ್ಲಿ ಕೆಲ ಬದಲಾವಣೆಗಳನ್ನು ಕಂಡರೂ ಅವು ತಮ್ಮ ಮೂಲ ಸಂಸ್ಕೃತಿಯಿಂದ ಸಂಪೂರ್ಣವಾಗಿ ಹೊರಬರದಿರುವುದು ಗಮನಾರ್ಹ ಸಂಗತಿ. ಆಚರಣೆಗಳು ಒಂದು ಕ್ಷೇತ್ರದಲ್ಲಿ ವಿಸ್ತಾರಗೊಂಡಾಗ ಹಬ್ಬಗಳಾಗಿ ಮಾರ್ಪಡುತ್ತವೆ. ಹೀಗಾಗಿ ಸಂಪ್ರದಾಯ, ಆಚರಣೆ, ಹಬ್ಬ, ಜಾತ್ರೆಗಳಿಗೆ ಸರಪಳಿಯ ಸಂಬಂಧವಿರುತ್ತದೆ. ಬದುಕಿನ ಸರಪಳಿಯನ್ನು ಸಾಮಾಜಿಕ ಪರಿಸರದಲ್ಲಿ ಬಿಡಿಸಿ ನೋಡಿದಾಗ ಆಚರಣೆಗಳಾಗಲಿ, ಹಬ್ಬಗಳಾಗಲಿ, ಸಂಸ್ಕೃತಿಯ ಕತೆಯನ್ನು ಹೇಳುತ್ತವೆ. ಇಲ್ಲಿ ಬಳಗಾನೂರು ಪರಿಸರದಲ್ಲಿನ ಜಾತ್ರೆ ಮತ್ತು ಹಬ್ಬಹರಿದಿನಗಳ ಬಗ್ಗೆ ಚರ್ಚಿಸಲಾಗಿದೆ.

**ಜಾತ್ರೆಗಳು :** ಅತ್ಯಂತ ಆಕರ್ಷಕವಾದ ಜನಪದೀಯ ಆಚರಣೆಯೇ ಜಾತ್ರೆ. ಜಾತಿ ವರ್ಗಗಳ, ಮೇಲು-ಕೀಳು, ಮಡಿ-ಮೈಲಿಗೆಯನ್ನು ಮೀರಿ ಜನಸಮುದಾಯ ಮತೀಯ ವಿಧಿಯಾಚರಣೆಯ ನೆಪದಲ್ಲಿ ದೈವವೊಂದರ ಸುತ್ತ ನಿರ್ದಿಷ್ಟ ದಿನಗಳಂದು ನೆರೆಯುವುದನ್ನು 'ಜಾತ್ರೆ' ಎನ್ನಬಹುದು. 'ಜನ ಜನ ಸೇರಿದರೆ ಜಾತ್ರೆ' ಎಂಬ ಮಾತಿನಂತೆ ಜನತೆಯೇ ಪ್ರಮುಖ ಆಕರ್ಷಣೆ. 'ಯಾತ್ರೆ' ಎಂಬ ಸಂಸ್ಕೃತ ಪದದ ತದ್ಭವವಾಗಿ ಜಾತ್ರೆ ಹುಟ್ಟಿದೆ. ಜಾತ್ರೇಲಿ ಪರೀಷೆ ಎಂಬ ಪದವೂ ಇದೆ. ಪರೀಷೆ, ಪರ್ಷೆ ಪದಗಳು ಸಂಸ್ಕೃತದ ಪರಿಷತ್ ಎಂಬ ಪದದಿಂದ ಬಂದಿವೆ.[೬೦] ಜಾತ್ರೆಗಳು ಜನಪದದಲ್ಲಿ ಭಾವನಾತ್ಮಕ ಏಕತೆಯನ್ನು ತರುತ್ತವೆ. ಭಾವೈಕ್ಯತೆಗೆ ನಾಂದಿ ಹಾಡುತ್ತವೆ. ಜಾತ್ರೆಗಳ ಮೂಲಕ ಗ್ರಾಮೀಣರ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಬದುಕನ್ನು ಅರಿಯುವುದರ ಜೊತೆಗೆ ಗ್ರಾಮಸಂಸ್ಕೃತಿಯ ಅಧ್ಯಯನಕ್ಕೆ ಪ್ರಬಲ ಭೂಮಿಕೆಯಾಗುತ್ತದೆ. ಜಾತ್ರೆಯೂ ಭಿನ್ನ ಭಿನ್ನ ಆಶಯವನ್ನೊಂದಿದ್ದು, ಆಯಾಯ ಗ್ರಾಮಸಂಸ್ಕೃತಿಯನ್ನು ಅಚ್ಚುಕಟ್ಟಾಗಿ ಹೇಳುತ್ತವೆ. ಬಳಗಾನೂರು, ಜವಳಗೆರೆ, ಉದ್ಬಾಳ(ಉ) ಗ್ರಾಮಗಳಲ್ಲಿ ಹಿಂದಿನಿಂದ ಜಾತ್ರೆಗಳು ನಡೆದುಕೊಂಡು ಬಂದಿವೆ.

**ಹನುಮಂತನ ಜಾತ್ರೆ ಬಳಗಾನೂರು :** ಬಳಗಾನೂರು ಗ್ರಾಮದಲ್ಲಿ ಜರುಗುವ ಪುರಾಣಪ್ರಸಿದ್ಧವಾದ ಹನುಮಂತನ ಜಾತ್ರೆ ಈ ಭಾಗದ ಅತ್ಯಂತ ದೊಡ್ಡ ಹಾಗೂ ವರ್ಷದ ಕೊನೆಯ ಜಾತ್ರೆಯಾಗಿದೆ. ಸಿಂಧನೂರು ತಾಲೂಕಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅಂಬಾಮಠದ ಅಂಬಾದೇವಿಜಾತ್ರೆಯ ನಂತರ ನಡೆಯುವ ಎರಡನೆಯ ದೊಡ್ಡ ಜಾತ್ರೆಯಾಗಿದೆ.

ಪ್ರತೀ ವರ್ಷ ವೈಶಾಖ ಶುದ್ಧ ಪೌರ್ಣಮಿ ದಿನದಂದು ಜಾತ್ರೆ ನಡೆಯುತ್ತದೆ. ಈ ಸಮಯದಲ್ಲಿ ಸತತವಾಗಿ ಐದು ದಿನಗಳ ಕಾಲ ಹನುಮಂತನಿಗೆ ವಿಶೇಷ ಪೂಜೆ ಪುನಸ್ಕಾರಗಳನ್ನು ಸಲ್ಲಿಸಲಾಗುತ್ತದೆ.

ತೇರನ್ನು ಎಳೆಯುವ ಒಂದು ದಿನದ ಮುಂಚೆ ಹನುಮಂತನಿಗೆ ಪೂಜೆ ಮತ್ತು ಅಭಿಷೇಕ ಕಾರ್ಯಗಳನ್ನು ಮಾಡಿ ಕಂಕಣವನ್ನು ಕಟ್ಟಲಾಗುತ್ತದೆ. ದೇವಾಲಯದ ಶಿಖರಕ್ಕೆ ಕಳಸವನ್ನು ಏರಿಸುತ್ತಾರೆ. ಹೀಗೆ ಅನೇಕ ಕಾರ್ಯಕ್ರಮಗಳು ನಡೆದ ನಂತರ ದಿನದ ಸಾಯಂಕಾಲ ಐದು ಗಂಟೆ ವೇಳೆಗೆ ಉಚ್ಚಯ್ಯವನ್ನು ಎಳೆಯಲಾಗುತ್ತದೆ.

ಅಗಿ ಹುಣ್ಣಿಮೆ ದಿನದಂದು ತೇರನ್ನು ಎಳೆಯಲಾಗುತ್ತದೆ. ಆ ದಿನ ಬೆಳಗ್ಗೆ ಹನುಮಂತನಿಗೆ ಪಂಚಾಮೃತದಿಂದ ಅಭಿಷೇಕ ಮಾಡಿ, ಮೂರ್ತಿಯನ್ನು ವಿವಿಧ ರೀತಿಯಿಂದ ಅಲಂಕರಿಸಲಾಗುತ್ತದೆ. ಅಲ್ಲಿನ ದಿವಟರ್(ವರ್ಗ), ಗದ್ದಿಗೌಡರ, ಬ್ರಾಹ್ಮಣರ ಮನೆಗಳಿಂದ ಡೊಳ್ಳು ವಾದ್ಯಗಳ ಮೂಲಕ 'ಪಡೆವು'ಗಳನ್ನು ತರಲಾಗುತ್ತದೆ. ಆಗ ಹನುಮಂತ ಮತ್ತು ಅಲ್ಲಿನ ಪರಿವಾರ ದೇವರುಗಳಿಗೆ ಪೂಜಾಕಾರ್ಯಗಳನ್ನು ಸಲ್ಲಿಸಲಾಗುತ್ತದೆ. ಎಲ್ಲಾ ಪೂಜಾಕಾರ್ಯಗಳು ಮುಗಿದ ನಂತರ ದೀಡ್ ನಮಸ್ಕಾರ, ಕಾಣಿಕೆಯನ್ನು ಸಲ್ಲಿಸುವುದು, ಹೂ ಹಣ್ಣುಗಳನ್ನು ಅರ್ಪಿಸುವುದರ ಮೂಲಕ ಜನರು ತಮ್ಮ ಹರಕೆಯನ್ನು ತೀರಿಸುತ್ತಾರೆ. ಬ್ರಾಹ್ಮಣರು ಈ ದಿನ ಲಕ್ಷ್ಮೀನಾರಾಯಣ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಈ ಪದ್ಧತಿ ಹಿಂದಿನಿಂದಲೂ ನಡೆದುಕೊಂಡುಬಂದಿದೆ.

ಸಾಯಂಕಾಲ ಐದು ಗಂಟೆಗೆ ದೇವಾಲಯದಿಂದ ತೇರಿನ ಕಳಸವನ್ನು ಅರ್ಚಕರು(ಪೂಜಾರಿ) ಆವೇಶಭರಿತ ರಾಗಿ ಹೊತ್ತುಕೊಂಡು ಬಂದು ತೇರಿನ ಸುತ್ತ ಪ್ರದಕ್ಷಿಣೆ ಹಾಕಿ ತೇರಿನ ಮುಂಭಾಗದಲ್ಲಿ ಇರಿಸುತ್ತಾರೆ. ಕಳಸಕ್ಕೆ ಪೂಜೆಯನ್ನು ಸಲ್ಲಿಸಿ ತೇರಿನ ಮೇಲೆ ಆರೋಹಣ ಮಾಡಲಾಗುತ್ತದೆ. ತೇರಿನ ಸಿದ್ಧತೆ ಕಾರ್ಯವೆಲ್ಲವೂ ಬಡಗಿಗಳದು. ಕಳಸಾರೋಹಣದ ನಂತರ ತೇರನ್ನು ಎಳೆಯಲಾಗುತ್ತದೆ. ತೇರು ಸಾಗುವಾಗ ಮುಂಭಾಗದಲ್ಲಿ ಡೊಳ್ಳುವಾದ್ಯಗಾರರು, ಬಾಜ ಭಜಂತ್ರಿಯವರು, ಸನಾಯಿ ಊದುವವರೂ, ಹಲಗೆ, ಡ್ರಮ್‌ಸೆಟ್ ಬಾರಿಸುವವರು ಇರುತ್ತಾರೆ. ಹಾಗೆಯೆ ಛತ್ರಿ, ಪಲ್ಲಕ್ಕಿ ಹೊತ್ತಿರುವವರು ಮತ್ತು ಕೊಬ್ಬರಿ ಹಾಗೂ ಎಣ್ಣೆ ದೀವಟಿಗೆಯನ್ನು ಹಿಡಿದ ಬ್ರಾಹ್ಮಣರು ಇನ್ನಿತರರು ಇರುತ್ತಾರೆ. ತೇರು ಸಾಗುವ ಹೊತ್ತಿಗೆಲ್ಲ ಸುತ್ತಮುತ್ತಲ ಹಳ್ಳಿಗಳಿಂದ ದೂರದ ಪ್ರದೇಶಗಳಿಂದ ಬಂದ ಸಾವಿರಾರು ಭಕ್ತರು ಸೇರಿರುತ್ತಾರೆ. ತೇರನ್ನು ಎದುರು ಹನುಮಪ್ಪನವರೆಗೆ ಎಳೆಯಲಾಗುತ್ತದೆ.

ನವವಧುವರರು ತೇರನ್ನು ನೋಡಲು ಆಗಮಿಸುವುದು ಒಂದು ನಂಬಿಕೆಯಾಗಿ ಉಳಿದುಬಂದಿದೆ. ಬ್ರಾಹ್ಮಣರು ತಮ್ಮ ಮೂಲಸಂಸ್ಕೃತಿ ಮತ್ತು ಸ್ಥಾನಮಾನವನ್ನು ಉಳಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ರಥೋತ್ಸವದ ಮರುದಿನ ದನದ ಜಾತ್ರೆ ನಡೆಯುತ್ತಿತ್ತು. ಇಂದು ದನದ ಜಾತ್ರೆ ನಿಂತಿರುವುದಕ್ಕೆ ಐತಿಹ್ಯವೊಂದು ಹೀಗೆ ಹೇಳುತ್ತದೆ. ಜಾತ್ರೆಯಂದು ಒಬ್ಬ ರೈತ ಬಲಿಷ್ಠ ಹೋರಿಯೊಂದನ್ನು ಕೊಂಡುಕೊಂಡನು. ಆ ಹೋರಿಯನ್ನು ಹಿಡಿದುಕೊಂಡು ಹೋಗುವಾಗ ಅದು ಅಲ್ಲಿಯೇ ಸತ್ತುಹೋಯಿತು. ಅಂದಿನಿಂದ ದನದ ಜಾತ್ರೆ ನಿಂತಿತು ಎಂಬುದಾಗಿದೆ. ಒಟ್ಟಾರೆ ಈ ಜಾತ್ರೆಯು ೧೦-೧೨ ದಿನಗಳವರೆಗೆ ತನ್ನ ಮೆರಗನ್ನು ಕಳೆದುಕೊಳ್ಳುವುದಿಲ್ಲ.

**ಅಂಬಾದೇವಿ ಜಾತ್ರೆ ಉದ್ಬಾಳ(ಉ):** ನಾಡಗೌಡರ ಆಳ್ವಿಕೆ ಕಾಲದಿಂದ ಅಂಬಾದೇವಿ ಜಾತ್ರೆ ನಡೆದುಕೊಂಡು ಬಂದಿದೆ. ಪ್ರತಿ ವರ್ಷ ಬನದ ಹುಣ್ಣಿಮೆಯಂದು ಈ ಜಾತ್ರೆ ನಡೆಯುತ್ತದೆ. ಆ ದಿನ

ಬೆಳಗ್ಗೆಯಿಂದ ಸಂಜೆಯವರೆಗೂ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಬೆಳಗಿನ ಜಾವ ಐದು ಗಂಟೆಯಿಂದ ಅರ್ಚನೆ, ಅಭಿಷೇಕ, ಪೂಜಾಕಾರ್ಯಗಳು ನಡೆಯುತ್ತವೆ. ನಾಡಗೌಡರ ಮನೆಯಿಂದ ಅಂಬಾದೇವಿ ಮೂರ್ತಿ(ಬೆಳ್ಳಿಯ ಮುಖಭಾವ)ಯನ್ನು ಕಳಸ, ಡೊಳ್ಳು, ವಾದ್ಯಗಳೊಂದಿಗೆ ಗುಡಿಗೆ ತರಲಾಗುತ್ತದೆ. ಮಧ್ಯಾಹ್ನದವರೆಗೆ ಸಾಮಾನ್ಯವಾಗಿ ಕಾರ್ಯಕ್ರಮಗಳು ನಡೆಯುತ್ತವೆ. ಸಾಯಂಕಾಲ ರಥೋತ್ಸವದ ವೇಳೆಗೆ ನಾಡಗೌಡರು ಶಸ್ತ್ರಸಜ್ಜಿತರಾಗಿರುವ ಸೈನಿಕ ವೇಷವನ್ನು ಧರಿಸಿದ ನಾಲ್ಕಾರು ಜನರೊಂದಿಗೆ ರಾಜಮರ್ಯಾದೆಯೊಂದಿಗೆ ಗುಡಿಯ ಹತ್ತಿರಕ್ಕೆ ಧಾವಿಸುತ್ತಾರೆ. ಇವರ ಸಮ್ಮುಖದಲ್ಲಿಯೇ ಪೂಜಾಕಾರ್ಯವನ್ನು ಮುಗಿಸಿ ರಥವನ್ನು ಎಳೆಯಲಾಗುತ್ತದೆ. ಇದು ಅಂಬಾದೇವಿಯ ಎರಡನೇ ಸಂಸ್ಥಾನವೆಂದು ಅಲ್ಲಿನವರು ಹೇಳುತ್ತಾರೆ.

**ಮೌನೇಶ್ವರ ಪಲ್ಲಕ್ಕಿ ಉತ್ಸವ ಬಳಗಾನೂರು :** ಈ ಉತ್ಸವ ನೂಲಹುಣ್ಣಿಮೆ ದಿನದಂದು ವಿಜೃಂಭಣೆ ಯಿಂದ ನಡೆಯುತ್ತದೆ. ಉತ್ಸವ ನಡೆಯುವುದಕ್ಕಿಂತ ೧೧ ದಿನಗಳ ಹಿಂದಿನ ದಿನದಿಂದ ಪ್ರತಿ ವರ್ಷ ಪುರಾಣ ಪ್ರವಚನವನ್ನು ನಡೆಸಿಕೊಂಡು ಬರಲಾಗುತ್ತದೆ. ಪುರಾಣ ಮಂಗಲ ಆಗುವುದಕ್ಕಿಂತ ಒಂದು ದಿನ ಮುಂಚೆ ಮೌನೇಶ್ವರ ಗುಡಿಯನ್ನು ಸ್ವಚ್ಛಗೊಳಿಸಿ, ಅಭಿಷೇಕವನ್ನು ಮಾಡಲಾಗುತ್ತದೆ. ಹಾಗೂ ಮರುದಿನದ ಉತ್ಸವಕ್ಕೆ ಸಕಲ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತದೆ. ಉತ್ಸವದ ದಿನ ಬೆಳಗಿನ ಜಾವ ಸುಮಾರು ೪-೫ ಗಂಟೆಗೆ ಪಂಚಾಮೃತದಿಂದ ಅಭಿಷೇಕ ಮಾಡಿ ಅಲಂಕರಿಸಲಾಗುತ್ತದೆ. ಆ ದಿನ ಪುರವಂತರು ಬಂದು ಒಡಪುಗಳನ್ನು ಹೇಳುತ್ತಾರೆ. ಪಲ್ಲಕ್ಕಿ ಸಮೇತರಾಗಿ ಗುಡಿಯನ್ನು ಪ್ರದಕ್ಷಿಣೆ ಹಾಕಿದ ನಂತರ ದಂಡಶಾಸ್ತ್ರ ಕಾರ್ಯಕ್ರಮ ನಡೆಯುತ್ತದೆ. ಈ ಎಲ್ಲಾ ಕಾರ್ಯಕ್ರಮಗಳು ಮುಗಿದ ನಂತರ, ಡೊಳ್ಳು, ಬಾಜಭಜಂತ್ರಿ, ಭಜನೆ, ತಬಲ ಇನ್ನಿತರ ವಾದ್ಯಗಳೊಂದಿಗೆ ಮೌನೇಶ್ವರ ಮೂರ್ತಿ, ಅಡ್ಡಪಲ್ಲಕ್ಕಿ, ಕುಂಭ, ಕಳಸವನ್ನು ಹೊತ್ತು ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ಹೊರಟು ಗಂಗಾಸ್ಥಳಕ್ಕೆ ಹೋಗಲಾಗುತ್ತದೆ. ಅಲ್ಲಿ ಪೂಜೆ, ದಂಡಶಾಸ್ತ್ರ ಕಾರ್ಯಗಳು ನಡೆಯುತ್ತವೆ. ಸುತ್ತಮುತ್ತಲಿನಿಂದ ಬಂದ ಭಕ್ತರೆಲ್ಲರಿಗೂ ಪ್ರಸಾದ ವ್ಯವಸ್ಥೆ ಮಾಡಲಾಗಿರುತ್ತದೆ. ಸಾಯಂಕಾಲ ಗಂಗಾಸ್ಥಳದಿಂದ ಮೊದಲಿನಂತೆ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ವಾಪಸ್ಸಾಗುತ್ತಾರೆ. ದೇವಸ್ಥಾನದ ಪೂಜಾರಿಯು ಗರ್ಭಗೃಹದೊಳಕ್ಕೆ ಪ್ರವೇಶಿಸಿದ ನಂತರ ಕಾರ್ಯಕ್ರಮಗಳು ಮುಗಿಯುತ್ತವೆ. ದೇವಸ್ಥಾನದ ಆಡಳಿತ ಕಾರ್ಯವೆಲ್ಲವೂ ವಿಶ್ವಕರ್ಮ ಜನಾಂಗಕ್ಕೆ ಸೇರಿರುತ್ತದೆ.

**ವೆಂಕಟರಮಣ ಜಾತ್ರೆ ಜವಳಗೆರೆ :** ವೆಂಕಟರಮಣ ಜಾತ್ರೆ ಪ್ರತಿ ವರ್ಷ ವಿಜಯದಶಮಿ ದಿನದಂದು ನಾಡಗೌಡರ ಸಮ್ಮುಖದಲ್ಲಿ ನಡೆಯುತ್ತದೆ. ವಿಜಯದಶಮಿಗಿಂತ ಒಂದು ದಿನದ ಮುಂಚೆ ಉಚ್ಚಯ್ಯವನ್ನು ಎಳೆಯಲಾಗುತ್ತದೆ. ವಿಜಯದಶಮಿ ದಿನದ ಬೆಳಗಿನ ಜಾವ ವೆಂಕಟರಮಣನಿಗೆ ಅರ್ಚಕರಿಂದ ನಾಡಗೌಡರಿಂದ ವಿಶೇಷ ಪೂಜಾಕಾರ್ಯ, ಅಭಿಷೇಕಗಳು ನಡೆಯುತ್ತವೆ. ದೇವಾಲಯದಲ್ಲಿ ಮಾತ್ರವಲ್ಲದೆ ನಾಡಗೌಡರ ಮನೆಯಲ್ಲಿಯೂ ವಿಶೇಷ ಪೂಜೆಯನ್ನು ನಡೆಸಲಾಗುತ್ತದೆ. ಪೂಜಾಕಾರ್ಯಗಳು ಮುಗಿದ ನಂತರ ಸಾಧುಸಂತರಿಗೆ, ಸ್ವಾಮಿಗಳಿಗೆ ಮೇಲ್ವರ್ಗದವರಿಗೆ ಅನ್ನಸಂತರ್ಪಣೆ ಕಾರ್ಯವೇರ್ಪಡಿಸಿ ಕಾಣಿಕೆಗಳನ್ನು ಸಲ್ಲಿಸಲಾಗುತ್ತದೆ. ಇದು ನಾಡಗೌಡರ ಮನೆಯಲ್ಲಿ ನಡೆಯುತ್ತದೆ. ಈ ಹಿಂದೆ ಅನ್ನಸಂತರ್ಪಣೆ ಕಾರ್ಯವು

ವೆಂಕಟರಮಣ ದೇವಾಲಯದ ಹಿಂಭಾಗದಲ್ಲಿರುವ ಪಾಕಶಾಲೆಯಲ್ಲಿ ನಡೆಯುತ್ತಿತ್ತು. ಆದರೆ ಅದು ಇಂದು ನಾಶಗೊಂಡಿದೆ.

ಸಾಯಂಕಾಲ ಆರು ಗಂಟೆಯ ವೇಳೆಗೆ ರಥೋತ್ಸವ ನಡೆಯುವುದಕ್ಕಿಂತ ಮುಂಚೆ ಸಿಂಧನೂರು ತಹಶೀಲ್ದಾರರು ಗ್ರಾಮಕ್ಕೆ ಬಂದು ಗ್ರಾಮದ ಕೆಲವು ಮುಖಂಡರೊಂದಿಗೆ ಬನ್ನಿಮಹಾಂಕಾಳಿಗೆ ಹೋಗಿ ಬನ್ನಿ ಮುಡಿದು ಬರುತ್ತಾರೆ(ಇದು ಹಿಂದಿನಿಂದ ನಡೆದುಕೊಂಡು ಬಂದಿದೆ). ರಥೋತ್ಸವ ಜರುಗುವ ವೇಳೆಗೆ ಅಲ್ಲಿನ ನಾಡಗೌಡರು ರಾಜದರ್ಬಾರಿನ ವಸ್ತ್ರ(ನಿಲುವಂಗಿ), ಪೇಟಾ ತೊಟ್ಟು, ರಾಜದಂಡವನ್ನು ಹಿಡಿದು ಕತ್ತಿ, ಗುರಾಣಿ, ಬಂದೂಕಿನ ಆಯುಧಗಳನ್ನು ಹಿಡಿದ ನಾಲ್ಕಾರು ಶಸ್ತ್ರಸಜ್ಜಿತ ಸೈನಿಕರೊಡನೆ ರಾಜಮರ್ಯಾದೆಯೊಂದಿಗೆ ರಥದ ಹತ್ತಿರ ಆಗಮಿಸುತ್ತಾರೆ. ಹೀಗೆ ಆಗಮಿಸಿದ ನಾಡಗೌಡರು ರಥದ ಸುತ್ತ ಪ್ರದಕ್ಷಿಣೆ ಹಾಕಿ ಪೂಜೆ ಸಲ್ಲಿಸಿದ ನಂತರ ರಥೋತ್ಸವ ಜರುಗುವುದು. ರಥದ ಮುಂದೆ ಪಲ್ಲಕ್ಕಿ, ಛತ್ರಿ, ನಂದಿಕೋಲು ಹಿಡಿದಿರುವವರು, ಡೊಳ್ಳು ಕುಣಿತದವರು, ಭಜನೆ ಮಂಡಳಿಯವರು, ಕಳಸ ಹೊತ್ತ ಸ್ತ್ರೀಯರು ಸಾಗುತ್ತಿರುತ್ತಾರೆ. ಸುತ್ತ ಹತ್ತಾರು ಹಳ್ಳಿಯಿಂದ ಬಂದ ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ರಥ ಎದುರು ಹನುಮಪ್ಪನವರೆಗೆ ಎಳೆಯಲಾಗುತ್ತದೆ.

ರಥೋತ್ಸವ ಮುಗಿದ ನಂತರ ನಾಡಗೌಡರು ಅದೇ ರಾಜಮರ್ಯಾದೆಯೊಂದಿಗೆ ಬನ್ನಿಮಹಾಂಕಾಳಿಗೆ ಹೋಗುತ್ತಾರೆ. ನಾಡಗೌಡರು ಬನ್ನಿಮಹಾಂಕಾಳಿಗೆ ಪೂಜೆ ಸಲ್ಲಿಸಿ, ಬಂದೂಕಿನ ನಳಿಕೆಯಿಂದ ಎರಡು ಗುಂಡುಗಳನ್ನು ಹಾರಿಸಿ ಬನ್ನಿ ಮುಡಿದ ನಂತರ ಸಾಮಾನ್ಯರು ಬನ್ನಿಯನ್ನು ಮುಡಿಯುತ್ತಾರೆ. ಮನೆಯಲ್ಲಿರುವ ಆಯುಧಗಳನ್ನು ಬನ್ನಿಮಹಾಂಕಾಳಿಗೆ ಹೋದ ಸಂದರ್ಭದಲ್ಲಿ ತೆಗೆದುಕೊಂಡು ಹೋಗಿರುತ್ತಾರೆ. ಇವೆಲ್ಲ ಕಾರ್ಯಗಳು ನಡೆದ ನಂತರ ಗ್ರಾಮಸ್ಥರೆಲ್ಲರೂ ಪರಸ್ಪರ ಬನ್ನಿಯನ್ನು ಹಂಚಿಕೊಂಡು ಶುಭ ಹಾರೈಸುತ್ತಾರೆ. ವಿಜಯದಶಮಿ ಸಮಯದಲ್ಲಿ ಜಾತ್ರೆಯನ್ನೊಳಗೊಂಡಂತೆ ಒಂಬತ್ತು ದಿವಸ ವಿಶೇಷ ಆಚರಣೆಗಳು ಇಲ್ಲಿ ನಡೆಯುತ್ತವೆ.

**ಹಬ್ಬ-ಹರಿದಿನಗಳು**

ಭಾರತೀಯ ಪರಂಪರೆಯಲ್ಲಿ ಹಬ್ಬ-ಹರಿದಿನಗಳಿಗೆ ವಿಶಿಷ್ಟ ಸ್ಥಾನವಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮೀಯರು ತಮ್ಮ ತಮ್ಮ ಧರ್ಮದ ನಿಯಮಗಳಿಗನುಗುಣವಾಗಿ ಹಬ್ಬಗಳನ್ನು ನಡೆಸಿಕೊಂಡು ಬಂದಿರುವರು. ಹಬ್ಬಗಳಿಗೆ ವಿಶೇಷ ಮೆರುಗು ತಂದುಕೊಡುವವರೆಂದರೆ ಜನಪದರು. ಜನಪದರ ಬದುಕಿನಲ್ಲಿ ಹಬ್ಬಗಳು ಹಾಸುಹೊಕ್ಕಾಗಿ ಬೆಳೆದುಕೊಂಡು ಬಂದಿವೆ. ಜನರು ತಮ್ಮ ದಿನನಿತ್ಯದ ಬದುಕಿನಲ್ಲಿ ನಿರಂತರವಾಗಿ ದುಡಿಮೆ, ಜೀವನದ ಏಳು-ಬೀಳುಗಳಿಂದ, ಹಗಲಿರುಳು ಕಷ್ಟದ ಕಾಲವನ್ನು ನೂಕುತ್ತಿದ್ದಾರೆ. ದುಡಿಮೆ, ಕೆಲಸಗಳಿಂದ ದಣಿದ ಜನರಿಗೆ ಹಬ್ಬಗಳು ಪುನಶ್ಚೇತನ ನೀಡುತ್ತವೆ. ಕರ್ನಾಟಕದಲ್ಲಿ ಆಚರಣೆಯಲ್ಲಿರುವ ಹಬ್ಬಗಳನ್ನೇ ಈ ಭಾಗದ ಜನರು ಆಚರಿಸುತ್ತಾರೆ.

ಜನಪದರು ತಮ್ಮ ಬದುಕಿನಲ್ಲಿ ಹಬ್ಬಗಳಿಗೆ ಮಹತ್ವ ನೀಡಿರುವಂತೆ ಅವುಗಳ ವಿಭಜನೆಯಾಗಿರುವುದು ಕಂಡುಬರುತ್ತದೆ. ಯುಗಾದಿ, ಬಸವಜಯಂತಿ, ಕಾರಹುಣ್ಣಿಮೆ, ನಾಗರ ಪಂಚಮಿ, ಶ್ರಾವಣ, ಗಣೇಶ ಚತುರ್ಥಿ,

ಮಹಾನವಮಿ, ದೀಪಾವಳಿ, ಎಳ್ಳಅಮಾವಾಸ್ಯೆ, ಮಕರ ಸಂಕ್ರಾಂತಿ ಪ್ರಮುಖ ಹಬ್ಬಗಳಾಗಿವೆ. ಮುಸ್ಲಿಮರಲ್ಲಿ ಮೊಹರಂ ಪ್ರಸಿದ್ಧವಾಗಿದೆ.

**ಯುಗಾದಿ :** ರೈತರಿಗೆ ಹೊಸ ವರ್ಷವಾಗಿ ಚಾಂದ್ರಮಾನ ಯುಗಾದಿ ಆಚರಣೆಯಲ್ಲಿದೆ. ಈ ಸಮಯದಲ್ಲಿ ರೈತರು ಹೊಸದಾಗಿ ಕುಂಟೆ-ರಂಟೆಗಳನ್ನು ಹೊಲದಲ್ಲಿ ಮೊದಲು ಮಾಡುವ ಪದ್ಧತಿ ಚಾಲ್ತಿಯಲ್ಲಿದೆ. ಚೈತ್ರಮಾಸದ ಶುದ್ಧಪೌರ್ಣಮಿ ದಿನದಿಂದ ಮೂರು ದಿನಗಳ ಕಾಲ ಈ ಹಬ್ಬವನ್ನು ಆಚರಿಸಲಾಗುತ್ತದೆ. ಚಿಗುರಿದ ಬೇವಿನ ಎಲೆ, ಹೂ, ಮಾವಿನ ಹೂ, ಮಾವಿನ ಕಾಯಿ ಹಾಗೂ ವಿವಿಧ ಹಣ್ಣುಗಳನ್ನು ಬೆರೆಸಿ ಹೊಸ ಮಡಿಕೆಯಲ್ಲಿ ಬೇವು ಮಾಡಿ ಹಂಚಲಾಗುತ್ತದೆ. ಹಾಗೆಯೇ ಈ ದಿನ ಗ್ರಾಮಗಳಲ್ಲಿ ಉತ್ಸವ, ಪಲ್ಲಕ್ಕಿ, ಅರಿಬೇಟೆ, ಹೇಳಿಕೆಗಳು ನಡೆಯುತ್ತವೆ. ಇದು ಆಯಾ ಗ್ರಾಮದ ಸಂಸ್ಕೃತಿಯಂತೆ ವಿವಿಧ ತೆರನಾಗಿ ನಡೆಯುತ್ತವೆ. ಒಟ್ಟಿನಲ್ಲಿ ಈಗಲೂ ಜನಪ್ರಿಯ ಹಬ್ಬವಾಗಿ ಆಚರಣೆಯಲ್ಲಿದೆ.

**ಕಾರಹುಣ್ಣಿಮೆ :** ಕನ್ನಡ ನಾಡಿನ ಹಬ್ಬಗಳನ್ನು ಹೆಚ್ಚಾಗಿ ಹುಣ್ಣಿಮೆಯ ದಿನದಂದು ಆಚರಿಸಲಾಗುತ್ತದೆ. ನಮ್ಮ ನಾಡಿನಲ್ಲಿ ಹಬ್ಬ ಹುಣ್ಣಿಮೆಗಳನ್ನು ಏರ್ಪಡಿಸಿಕೊಂಡು ಬಂದವರು ಒಕ್ಕಲಿಗರೆಂದೇ ಹೇಳಬಹುದು. ಕಾರಹುಣ್ಣಿಮೆಗೆ ವರ್ಷಾರಂಭದ ಮಳೆಯನ್ನು ಸ್ವಾಗತಿಸಿ, ಕೃಷಿ ಆರಂಭದ ಪೂಜೆಯೆನ್ನುವಂತೆ ಎತ್ತುಗಳನ್ನು ಸಿಂಗರಿಸುವುದು ಸಾಮಾನ್ಯ. ಈ ಭಾಗದಲ್ಲಿ ಕಾರಹುಣ್ಣಿಮೆ ಮುನ್ನಾ ದಿನ(ಹೊನ್ನುಗ್ಗಿ ಎಂದು ಕರೆಯುತ್ತಾರೆ) ಎತ್ತುಗಳಿಗೆ ಎಣ್ಣೆ ಹಚ್ಚಿ, ಹಣೆಗೆ ಕಂಕಣ ಕಟ್ಟಿ ಮದು ಮಕ್ಕಳನ್ನಾಗಿ ಮಾಡಲಾಗುತ್ತದೆ. ಹುಣ್ಣಿಮೆ ದಿನ ಎತ್ತು ಬಂಡಿಗಳನ್ನು ಕಟ್ಟಿಕೊಂಡು ಹಳ್ಳಕ್ಕೆ ಹೋಗಿ ಸ್ನಾನ ಮಾಡಿಸಿಕೊಂಡು ಬರುವುದು ಸಂಪ್ರದಾಯ. ಬಂದನಂತರ ಎತ್ತುಗಳ ಕೊಂಬುಗಳಿಗೆ ಬಣ್ಣ ಹಚ್ಚಿ, ಎತ್ತುಗಳನ್ನು ಘಂಟೆ, ಗೆಜ್ಜೆ, ಹಣೆಪಟ್ಟಿ, ಹಣೆಕಟ್ಟು, ಗೊಂಡೇವು, ಗಗ್ರಿ, ಜೂಲು, ಮಗಡ, ರಿಬ್ಬನ್, ಮೈಕಟ್ಟು ಮುಂತಾದ ವಸ್ತುಗಳಿಂದ ಅಲಂಕರಿಸಲಾಗುತ್ತದೆ. ಬಂಡಿಯನ್ನು ಸಹ ಅಲಂಕರಿಸಲಾಗುತ್ತದೆ. ಸಂಜೆ ವೇಳೆಗೆ ಹೆಚ್ಚಾಗಿ ಗ್ರಾಮದ ಗೌಡ, ನಾಡಗೌಡ, ಮುಖ್ಯಸ್ಥರ ಮನೆಯ ಎತ್ತುಗಳಿಗೆ ಬಾಸಿಂಗವನ್ನು ಕಟ್ಟಿಕೊಂಡು ವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಅಗಸೆಯ ಹತ್ತಿರ ಬರಲಾಗುತ್ತದೆ. ಉಳಿದಂತೆ ಗ್ರಾಮದ ಇತರರ ಎತ್ತುಗಳನ್ನು ಹೊಡೆದುಕೊಂಡು ಬಂದು ನಿರ್ದಿಷ್ಟ ಸ್ಥಳದಲ್ಲಿ ಸಾಲಾಗಿ ನಿಲ್ಲಿಸಲಾಗುವುದು. ಹೀಗೆ ನಿಲ್ಲಿಸಿದ ಎತ್ತುಗಳನ್ನು ಅಗಸೆಯ ಮೂಲಕ ಕರಿಹರಿಯಲಾಗುತ್ತದೆ. ಐದು ಸುತ್ತು ಕರಿಯನ್ನು ಹರಿಯುವುದು ಸಂಪ್ರದಾಯ. ಈ ದಿನ ಅಗಸೆಯನ್ನು ಸಿಂಗರಿಸುವುದು ಕೆಳವರ್ಗದವರ ಕೆಲಸವಾಗಿರುತ್ತದೆ. ಅಗಸೆಗೆ ಅಡ್ಡವಾಗಿ ಕಟ್ಟಿದ ಬೇವಿನ ತೋರಣವನ್ನು ಹಾರಿ ಮುಟ್ಟುವುದು ಒಂದು ಸ್ಪರ್ಧೆಯಾಗಿರುತ್ತದೆ. ಕರಿ ಹರಿಯುವಾಗ ಎತ್ತುಗಳ ಓಟದಿಂದ ಮುಂಗಾರು ಹಿಂಗಾರು ಮಳೆ ಬೆಳೆಗಳ ಭವಿಷ್ಯವನ್ನು ಲೆಕ್ಕ ಹಾಕುತ್ತಾರೆ. ಇದು ಹಳ್ಳಿಗರ ಸಾಂಪ್ರದಾಯಿಕ ನಂಬಿಕೆಯಾಗಿದೆ. ತಮ್ಮೊಂದಿಗೆ ಅನ್ಯೋನ್ಯತೆಯಿಂದ ಜೊತೆಗೂಡಿರುವ ಎತ್ತುಗಳ ಬಗೆಗೆ ಅಭಿಮಾನವೂ ಈ ಸಮಯದಲ್ಲಿ ವ್ಯಕ್ತವಾಗುತ್ತದೆ. ಕಾರಹುಣ್ಣಿಮೆ ಸಮಯದಲ್ಲಿ ಎತ್ತುಗಳಿಗೆ ವಿವಿಧ ಸ್ಪರ್ದೆಗಳನ್ನು ನಡೆಸಲಾಗುತ್ತದೆ.

**ನಾಗರಪಂಚಮಿ :** ಸಾಮಾನ್ಯವಾಗಿ ಈ ಹಬ್ಬ ಶ್ರಾವಣ ಮಾಸದಲ್ಲಿ ಬರುವುದು. ಸಿಂಧೂ ಸಂಸ್ಕೃತಿಯ ಅವಶೇಷಗಳಲ್ಲಿ ಸರ್ಪಮಿಥುನ ಸಿಕ್ಕಿದ್ದನ್ನು ಗಮನಿಸಿದಾಗ, ಮಾನವ ಜನಾಂಗದ ಆದಿಕಾಲದಿಂದಲೂ ಈ

ನಾಗಾರಾಧನೆ ನಡೆದುಬಂದಿದ್ದು ತಿಳಿದುಬರುತ್ತದೆ. 'ದಯವೇ ಧರ್ಮದ ಮೂಲವಯ್ಯ' ಎಂಬುದು ಎಷ್ಟು ಸತ್ಯವೋ, 'ಭಯವೇ ಧರ್ಮದ ಮೂಲವಯ್ಯ' ಎಂಬುದು ಅಷ್ಟೇ ಸತ್ಯ. ಪ್ರಾಚೀನ ಕಾಲದಲ್ಲಿ ಹಾವಿನ ಭಯಂಕರ ವಿಷವನ್ನು ಅರಿತ ಮಾನವ ಅವುಗಳಿಂದ ತೊಂದರೆ ಬರದಿರಲೆಂಬ ಉದ್ದೇಶದಿಂದ ಈ ಹಬ್ಬ ಆಚರಣೆಗೆ ಬಂದಿತೆಂದು ಊಹಿಸಬಹುದು. ನಾಗರಪಂಚಮಿ ಹೆಚ್ಚಾಗಿ ಹೆಣ್ಣುಮಕ್ಕಳ ಹಬ್ಬ. ಅದು ಅವರಿಗೆ ಮಾಂಗಲ್ಯಪ್ರದ, ಸಂತಾನಪ್ರದ ಎಂದೂ ನಂಬಿಕೆಯಿದೆ. ಗಂಡನ ಮನೆಯಲ್ಲಿಯ ಆಯಾಸ, ಕಿರಿಕಿರಿಗಳನ್ನೆಲ್ಲಾ ಮರೆತ ಹೆಣ್ಣು ಹಿಗ್ಗಿನಿಂದ ಈ ಹಬ್ಬವನ್ನು ಆಚರಿಸುತ್ತಾಳೆ. ನಾಗರಪಂಚಮಿ ದಿನದಂದು ಬೆಳಗ್ಗೆ ಉಷಾ ಕಾಲದಲ್ಲೇ ಎದ್ದು ಮನೆಯನ್ನೆಲ್ಲಾ ಸ್ವಚ್ಛಗೊಳಿಸಿ, ತಂಬಿಟ್ಟು ಉಂಡೆ, ಉಸುಳಿಗಳನ್ನೆಲ್ಲ ಅಣಿಗೊಳಿಸಿ, ಮಣ್ಣಿನ ಅಥವಾ ಹಿಟ್ಟಿನ ನಾಗವನ್ನು ಮಾಡಿ ಕಲ್ಲುನಾಗ, ಹುತ್ತಗಳಿಗೆ ಹಾಲೆರೆಯುತ್ತಾರೆ. ಈದಿನ ಬೆಳಗ್ಗೆ ಪೂಜಾರಿಗಳು ಊರಿಗೆಲ್ಲ 'ಪತ್ರಿ'ಯನ್ನು ಹಂಚುತ್ತಾರೆ. ಇದನ್ನು ಹಾಲೆರೆಯಲು ಬಳಸಲಾಗುತ್ತದೆ. ಜೋಕಾಲಿಯನ್ನು ಹೆಣ್ಣು ಗಂಡು ಎಂಬ ಭೇದವಿಲ್ಲದೆ ಹಾಡಲಾಗುತ್ತದೆ.

**ಮಹಾನವಮಿ ಹಬ್ಬ :** ಮಹಾನವಮಿ ನಾಡಿನ ತುಂಬ ಆಚರಿಸುವ ದೊಡ್ಡ ಹಬ್ಬ. ಅನೇಕ ಕಡೆಗಳಲ್ಲಿ ವಿವಿಧ ರೀತಿಯಲ್ಲಿ ನಡೆಯುವ ಈ ಹಬ್ಬ ಅಲ್ಲಿನ ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಈ ಪರಿಸರದಲ್ಲಿ ಬಲಿಪಾಡ್ಯ, ಅಮಾವಾಸ್ಯೆ, ಕರಿ, ದಿನವೆಂದು ಮೂರು ದಿನಗಳ ಕಾಲ ವಿಶೇಷವಾಗಿ ಆಚರಣೆ ಮಾಡಲಾಗುತ್ತದೆ. ಅಮಾವಾಸ್ಯೆ ದಿನ ಸಾಯಂಕಾಲ ಪ್ರತಿಗ್ರಾಮದ ಗೌಡ, ನಾಡಗೌಡ, ಪೋಲೀಸ್ ಪಾಟೀಲ್, ಮಾಲಿಪಾಟೀಲ ಇನ್ನಿತರ ಮುಖಂಡರ ನೇತೃತ್ವದಲ್ಲಿ ಗ್ರಾಮಸ್ಥರೊಂದಿಗೆ ಬನ್ನಿ ಮಹಾಂಕಾಳಿಗೆ ಹೋಗಿ ಪೂಜೆ ನೆರವೇರಿಸಿ ಬನ್ನಿಯನ್ನು ಮುಡಿದು ಬರುತ್ತಾರೆ. ಬನ್ನಿ ಮಹಾಂಕಾಳಿಗೆ ಹೋದವರು ಗ್ರಾಮದ ಪ್ರಮುಖ ದೇವರಿಗೆ ಪೂಜೆಯನ್ನು ಸಲ್ಲಿಸಿದ ನಂತರ ಗ್ರಾಮದ ಜನತೆ ಬೀದಿ ಬೀದಿಗಳಲ್ಲಿ ಸುತ್ತಾಡುತ್ತ ಎಲ್ಲರಿಗೂ ಬನ್ನಿಯನ್ನು ಹಂಚುತ್ತಾರೆ. ಬನ್ನಿಯನ್ನು ಕೊಡುವಾಗ 'ಬನ್ನಿ ತಗೊಂಡು ಬಂಗಾರದಂತೆ ಇರೀ' ಎಂದು ಶುಭ ಕೋರುವರು. ಬನ್ನಿಯು ಬಂಗಾರದಷ್ಟು ಬೆಲೆ ತಂದುಕೊಟ್ಟು ಸ್ನೇಹಸೌಹಾರ್ದದ ಸಂಕೇತವಾಗಿ ಭಾವನೆಗಳನ್ನು ಒಗ್ಗೂಡಿಸುತ್ತದೆ.

**ಎಳ್ಳಅಮಾವಾಸ್ಯೆ :** ಬಳಗಾನೂರು ಪ್ರದೇಶವನ್ನೊಳಗೊಂಡಂತೆ ಉತ್ತರ ಕರ್ನಾಟಕದ ಜನರಿಗೆ ಎಳ್ಳಅಮಾವಾಸ್ಯೆಯೆಂದರೆ ಎಳ್ಳು ಹೋಳಿಗೆಯಷ್ಟು ಇಷ್ಟವಾಗುತ್ತದೆ. ಇದು ರೈತರ ಹಬ್ಬ. ವರ್ಷವಿಡೀ ಹೊಲದಲ್ಲಿಯೇ ಶ್ರಮಿಸುವ ರೈತರು ತಮ್ಮ ಶ್ರಮಕ್ಕೆ ದೊರೆಯುವ ಫಲವನ್ನು ಅತ್ಯುತ್ಸುಕತೆಯಿಂದ ನಿರೀಕ್ಷಿಸುತ್ತಾರೆ. ಎಳ್ಳಅಮಾವಾಸ್ಯೆಗೆ ಹೊಲ ಗದ್ದೆಗಳಲ್ಲಿ ಬೆಳೆ ಭರಪೂರ ಬೆಳೆದಿರುತ್ತದೆ. ಜೋಳ, ಹತ್ತಿ, ಮೆಣಸಿನಕಾಯಿ, ಭತ್ತಗಳಿಂದ ಭೂಮಿ ತಾಯಿ ಹಚ್ಚಹಸಿರಿನಿಂದ ತನ್ನ ಒಡಲನ್ನು ತುಂಬಿಕೊಂಡು ನಸುನಗುತ್ತಿರುತ್ತಾಳೆ. ಈ ಸಮಯ ರೈತಾಪಿ ವರ್ಗಕ್ಕೆ ಎಲ್ಲಿಲ್ಲದ ಸಂತೋಷವನ್ನು ತಂದುಕೊಡುತ್ತದೆ. ಅಮಾವಾಸ್ಯೆ ದಿನಕ್ಕಿಂತ ಒಂದು ದಿನ ಮುಂಚೆ ಹೆಣ್ಣುಮಕ್ಕಳು ರಾತ್ರಿಯಿಡೀ ಎದ್ದು ಸಿಹಿತಿನಿಸನ್ನು ಮಾಡುತ್ತಾರೆ. ಮುಖ್ಯವಾಗಿ ಎಳ್ಳುಹೋಳಿಗೆ, ಕಡಲೆ ಹೋಳಿಗೆ, ಸಜ್ಜೆ ರೊಟ್ಟಿ, ಎಣ್ಣೆಬದನೆಕಾಯಿ, ಮೊಸರನ್ನ, ಹೆಸರುಕಾಳು, ಅಲಸಂದಿಕಾಳು, ಅನ್ನಸಾಂಬಾರು ಹೀಗೆ ಅನೇಕ ರೀತಿಯ ತಿನಿಸುಗಳನ್ನು ಸಜ್ಜುಗೊಳಿಸುತ್ತಾರೆ. ಬೆಳಗಿನ

ಜಾವ ೫-೬ ಗಂಟೆಗೆ ರೈತರೆಲ್ಲರೂ ರಾತ್ರಿಯಿಡೀ ಮಾಡಿದ ತಿನಿಸುಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು ಕಾಲ್ನಡಿಗೆಯಲ್ಲಿ, ಬಂಡಿಯಲ್ಲಿ ಕುಟುಂಬದ ಸದಸ್ಯರೊಂದಿಗೆ ಸಡಗರ ಸಂಭ್ರಮದಿಂದ ಹೊಲಕ್ಕೆ ಹೋಗುತ್ತಾರೆ. ಬೆಳೆದಿರುವ ಜೋಳದ ಗರಿಯನ್ನು ಕಿತ್ತುಕೊಂಡು, ಐದು ಕಲ್ಲುಗಳನ್ನು ಹುಡುಕಿ ಬನ್ನಿಗಿಡದ ಮುಂದೆ ಕಲ್ಲುಗಳನ್ನಿರಿಸಿ ಪಂಚಪಾಂಡವರೆಂದು ಪೂಜಿಸುತ್ತಾರೆ. ಇದಾದ ನಂತರ ತಂದಿರುವ ಬುತ್ತಿಯನ್ನು ಪ್ರಸಾದವೆಂದೂ ಸ್ವಲ್ಪ ಸ್ವಲ್ಪ ತೆಗೆದುಕೊಂಡು ನಾಲ್ಕು ದಿಕ್ಕಿಗೆ ಎಸೆಯುವರು(ಇದನ್ನು ಚರಗ ಚೆಲ್ಲುವುದು ಎನ್ನುತ್ತಾರೆ). ಒಕ್ಕಲುತನ ಪ್ರಧಾನ ಕುಟುಂಬಗಳು ಇದನ್ನು ತಪ್ಪದೇ ಅನುಸರಿಸುತ್ತಾರೆ.

**ಮೊಹರಂ ಹಬ್ಬ :** ಹಿಂದೂಗಳಿಗೆ ದೀಪಾವಳಿ, ಯುಗಾದಿ, ಮಹಾನವಮಿ ಹಬ್ಬಗಳಂತೆ ಮುಸ್ಲಿಮರಿಗೆ ಮೊಹರಂ ಹಬ್ಬ ವಿಶಿಷ್ಟವಾಗಿ ಗೋಚರಿಸಿದೆ. ಅನೇಕ ಮುಸ್ಲಿಂ ರಾಷ್ಟ್ರಗಳಲ್ಲಿ ಪ್ರಚಲಿತವಾಗಿರುವ ಹಿಜರಿ ಸಂವತ್ಸರದ ಮೊದಲನೆಯ ತಿಂಗಳು ಮೊಹರಂ. ಇದರರ್ಥ ನಿಷಿದ್ಧವಾದುದು ಅಥವಾ ವರ್ಜಿತವಾದುದು. ಮಹಮ್ಮದೀಯರಲ್ಲಿ ಷಿಯಾ ಪಂಗಡದವರು ಮೊಹರಂ ಆಚರಿಸುತ್ತಾರೆ. ಮಹಮ್ಮದೀಯರ ವರ್ಷದ ಮೊದಲ ತಿಂಗಳು ಮೋಹರಂ(ಮುಸ್ಲಿ ಹೊಸ ವರ್ಷ ಹಿಜರಿ ೧೪೩೫). ತಿಂಗಳ ಮೊದಲಿನ ೧೦ ದಿನಗಳನ್ನು ಮೊಹರಂ ಎನ್ನುತ್ತಾರೆ. ಮೊಹರಂ ಆಚರಣೆಗೆ ಕಾರಣ ಪ್ರವಾದಿ ಮಹಮ್ಮದರ ಮರಿಮೊಮ್ಮಗ ಹಜರತ್ ಇಮಾಂ ಹುಸೇನ್‌ರ ವೀರಮರಣ. ಹುಸೇನ್ ಇದ್ದಿದ್ದು ಮೆಕ್ಕಾದಲ್ಲಿ. ಆಗ ಅರಬ್ ರಾಜ್ಯವನ್ನು ಆಳುತ್ತಿದ್ದ ಯುಜೀದ್ ಕೆಟ್ಟ ಆಡಳಿತಗಾರನಾಗಿ ಜನರಿಗೆ ಬೇಸರ ತರಿಸಿದ್ದ. ಅವನ ಆಡಳಿತದಿಂದ ಬೇಸತ್ತ ಕುಫಾದ ಜನ ಯುಜೀದ್‌ನನ್ನು ಪದಚ್ಯುತಿಗೊಳಿಸಬೇಕೆಂದು ಹುಸೇನರನ್ನು ಕರೆದರಲ್ಲದೆ ಬೇಕಾದ ಸಹಾಯ ನೀಡಲು ಸಿದ್ಧರೆಂದೂ ಹೇಳಿದರು. ಮನೆಯವರು ನೂರು ಜನ ಸೈನಿಕರು ಹಾಗೂ ಕೆಲವು ಕುದುರೆ ಸವಾರರೊಡನೆ ಹುಸೇನ್ ಹೊರಟರು. ಕರ್ಬಾಲದ ಬಳಿ ಯುಜೀದ್‌ನ ಸೈನಿಕರಿಂದ ಹತರಾದರು. ಹುಸೇನ್ ಮಡಿದಿದ್ದು ಮೊಹರಂನ ಹತ್ತನೆಯ ದಿನ.[೧೧] ಮೊಹರಂನ ಇನ್ನೊಂದು ಹೆಸರು ಸೈಯದುಲ್ ಅಶಹರ್ ಎಂದರೆ ಎಲ್ಲಾ ತಿಂಗಳುಗಳ ದೊರೆ. ಹುಸೇನರು ಹುತಾತ್ಮರಾದ ಈ ತಿಂಗಳು ದುಃಖದಾಯಕದ ಪವಿತ್ರದಿನ ಎನಿಸಿಕೊಳ್ಳುತ್ತದೆ. ಮೊಹರಂ ಆಚರಣೆ ಮೂಲತಃ ಶೋಕಸ್ಥಾಯಿಯಾಗಿದ್ದರೂ ಕಾಲಚಕ್ರದಲ್ಲಿ ತನ್ನ ಮೂಲಭಾವ ಕಳೆದುಕೊಂಡು ಉತ್ಸವದ ರಂಗು ಪಡೆದು ರಂಜಿಸುತ್ತದೆ.

ಮೊಹರಂ ಆಚರಣೆಗೆ ಅನೇಕರ ಪ್ರೋತ್ಸಾಹ ದೊರೆಯಿತು. ಬಹಮನಿ ಸುಲ್ತಾನರು, ಆದಿಲ್‌ಶಾಹಿಗಳು ಸಂಭ್ರಮ, ಸಡಗರದಿಂದ ಮೊಹರಂ ಆಚರಿಸುತ್ತಿದ್ದರು. ಸಾಮ್ರಾಟ ಅಕ್ಬರ್ ದೀನ್- ಎ-ಇಲಾಯಿ ಸ್ಥಾಪಿಸಿದ ಅನಂತರ ಮೊಹರಂ ರಾಷ್ಟ್ರೀಯ ಹಬ್ಬವಾಗಿ ಮಾರ್ಪಾಡಾಯಿತು. ಇಂದು ಕರ್ನಾಟಕದಾದ್ಯಂತ ಮೊಹರಂ ಆಚರಿಸಲಾಗುತ್ತದೆ. ಅದರಲ್ಲಿ ರಾಯಚೂರು ಜಿಲ್ಲೆಯ ಮುದಗಲ್ಲು ಮತ್ತು ಆಯನೂರುಗಳಲ್ಲಿ ನಡೆಯುವ ಈ ಹಬ್ಬ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಪ್ರಸ್ತುತ ಅಧ್ಯಯನ ವ್ಯಾಪ್ತಿಯಲ್ಲಿ ಗೌಡನಬಾಯಿ, ಬುದ್ದಿನ್ನಿಯನ್ನು ಬಿಟ್ಟರೆ ಉಳಿದೆಲ್ಲ ಗ್ರಾಮಗಳಲ್ಲಿ ಮೊಹರಂ ಹಬ್ಬವನ್ನು ಆಚರಿಸಲಾಗುತ್ತದೆ. ಈ ಪರಿಸರದಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆಯಿದ್ದರೂ ಹಿಂದೂಗಳ ಭಾಗವಹಿಸುವಿಕೆಯಿಂದಾಗಿ ಅತ್ಯಂತ ವೈಭವಯುತವಾಗಿ ನಡೆಯುತ್ತದೆ.

ಅಮಾವಾಸ್ಯೆ(ದೀಪಾವಳಿ)ಯಾದ ಮೂರು ದಿನಗಳ ನಂತರ ಗುದ್ದಲಿ ಬೀಳುತ್ತವೆ(ಅಲಾವಿ ಕುಣಿ ತೋಡುವುದು.). ಅಂದಿನ ಸಂಜೆಯೇ ಮಸೀದಿಗಳಲ್ಲಿ ಪೀರಾ ಮಾಡಿ ಇಡಲಾಗುತ್ತದೆ. ಪೀರಾಗಳನ್ನು ವಿವಿಧ ರೀತಿಯ ಬಟ್ಟೆಗಳಿಂದ ಬೆಳ್ಳಿ, ಕಂಚು, ಬಂಗಾರದ ಮುಖ, ಛತ್ರಿ, ತೊಟ್ಟಿಲು, ಕುದುರೆ ಇನ್ನೂ ಮುಂತಾದ ವಸ್ತುಗಳಿಂದ ಸಿಂಗರಿಸಲಾಗುತ್ತದೆ. ಪೀರಾಗಳನ್ನು ಖಾಸಿಂಸಾಬ, ಪೀರಲ, ಏಳುಸವಾರಿ, ಯಮನೂರ, ಇಮಾಮ್‌ಸಾಬ್, ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಒಂದೊಂದು ಗ್ರಾಮದಲ್ಲಿ ಕೂರಿಸುವ ಪೀರಾಗಳ ಸಂಖ್ಯೆಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ಗುದ್ದಲಿ ಬಿದ್ದ ದಿನದಿಂದ ಪ್ರತಿದಿನ ಒಂದೊಂದು ಪೀರಾಗಳನ್ನು ಮೆರವಣಿಗೆ ಮಾಡಲಾಗುತ್ತದೆ. ಪೀರಾಗಳನ್ನು ಮೆರವಣಿಗೆ ಮಾಡುವಾಗ ಪೀರಾಗಳು ಆ ಗ್ರಾಮದ ಸೀಮೆಯನ್ನು ದಾಟದಂತೆ ನಿಗಾ ವಹಿಸಲಾಗುತ್ತದೆ. ಕಾರಣ ನಮ್ಮೂರ ದೇವರು ಬೇರೆ ಊರಿಗೆ ಹೋಗಬಾರದೆಂಬುದು ನಂಬಿಕೆ. ಈ ಒಂಬತ್ತು ದಿನಗಳ ಮಧ್ಯದಲ್ಲಿ ಸಣ್ಣ ಹಾಗೂ ದೊಡ್ಡ ಖಥಲ್ ರಾತ್ರಿ(ಖಥಲ್ ರಾತ್)ಗಳು ವಿಶೇಷವಾಗಿರುತ್ತವೆ. ಈ ದಿನದಂದು ಇಡೀ ರಾತ್ರಿ ಅಲಾವಿ ಕುಣಿಯ ಸುತ್ತ ಅಲಾವಿಯನ್ನು ಆಡಲಾಗುತ್ತದೆ. ಹಾಗೂ ಹುಲಿವೇಷ, ಕರಡಿವೇಷ, ಪದಗಳು ಹಾಡುವುದು, ಕೋಲಾಟ, ಸ್ತ್ರೀಪುರುಷ ವೇಷಗಳನ್ನು ಹಾಕಲಾಗುತ್ತದೆ. ಅಲಾವಿ ಕುಣಿಗೆ ಟ್ರಾಕ್ಟರ್, ಬಂಡಿಗಳ ಮೂಲಕ ಕಟ್ಟಿಗೆ ತುಂಡುಗಳನ್ನು ತಂದು ಹಾಕಲಾಗುತ್ತದೆ. ಸಣ್ಣ ಖಥಲ್ ರಾತ್ರಿಯ ಮರುದಿನ ಏಳುಸವಾರಿಯನ್ನು ಮೆರವಣಿಗೆ ಮಾಡಲಾಗುತ್ತದೆ. ದೊಡ್ಡ ಖಥಲ್ ರಾತ್ರಿಯ ಮರುದಿನ ಅಂದರೆ ಮೊಹರಂ ಕೊನೆದಿನದಂದು ಎಲ್ಲಾ ಪೀರಾಗಳನ್ನು ಮೆರವಣಿಗೆ ಮಾಡಲಾಗುತ್ತದೆ. ಆ ದಿನ ಸಂಜೆ ಪೀರಾಗಳು ಹೊಳೆಗೆ ಹೋಗುತ್ತವೆ. ಅಂದರೆ ಹಬ್ಬ ಕೊನೆಗೊಳ್ಳುತ್ತದೆ. ಪೀರಾಗಳ ವಸ್ತ್ರ, ಆಭರಣಗಳನ್ನು ಬಿಚ್ಚಿ ಪೆಟ್ಟಿಗೆಯಲ್ಲಿ ಹಾಕಿಕೊಂಡು ಶೋಕಗೀತೆ ಯನ್ನು ಹಾಡುತ್ತಾ ಮಸೀದಿ ಅಥವಾ ದರ್ಗಾಕ್ಕೆ ಬರುತ್ತಾರೆ. ಈ ಹಬ್ಬದಲ್ಲಿ ಮುಸ್ಲಿಮರು ಮಾತ್ರವಲ್ಲದೆ ಹಿಂದೂಗಳು ಪೀರಾಗಳನ್ನು ಹಿಡಿಯುತ್ತಾರೆ. ಬೇರೆ ಬೇರೆ ಭಾಗಗಳಿಗೆ ದುಡಿಯಲು ಹೋಗಿರುವಂತಹ ಜನರು ಈ ಹಬ್ಬಕ್ಕೆ ಮರೆಯದೆ ಆಗಮಿಸುತ್ತಾರೆ. ಇದು ಮುಸ್ಲಿಮರಂತೆ ಹಿಂದೂಗಳಿಗೂ ಶ್ರೇಷ್ಠ ಹಬ್ಬವಾಗಿ ಪರಿಣಮಿಸಿದೆ. ಈ ಹಬ್ಬದಲ್ಲಿ ಕೆಂಡ ತುಳಿಯುವುದು, ಹೇಳಿಕೆ ಹೇಳುವುದು, ಪ್ರಮುಖ ಆಕರ್ಷಣೆ. ಹಳ್ಳಳ್ಳಿಬವ್ವ ಹಚ್ಚಳ್ಳಿಬವ್ವ ವೇಷ ಈ ಹಬ್ಬದ ಸಮಯದಲ್ಲಿ ಮಾತ್ರ ನೋಡಲಾಗುವುದು.

ಒಟ್ಟಿನಲ್ಲಿ ತಲೆತಲೆಮಾರಿನಿಂದ ಪರಂಪರಾನುಗತವಾಗಿ ಬೆಳೆದುಬಂದ ಹಬ್ಬಗಳ ಆಚರಣೆ, ಜಾತ್ರೆ, ಉತ್ಸವಗಳನ್ನು ವಿನಾಶಗೊಳಿಸದೇ ಅವುಗಳನ್ನು ಉಳಿಸಿಕೊಂಡು ಬರುವುದು ಈ ಪೀಳಿಗೆಯ ಕರ್ತವ್ಯವಾಗಿದೆ.

**ಅಡಿಟಿಪ್ಪಣಿಗಳು**

೧. ಶೀಲಾಕಾಂತ ಪತ್ತಾರ, ೨೦೦೦, ಬಾದಾಮಿ : ಸಾಂಸ್ಕೃತಿಕ ಅಧ್ಯಯನ, ಪುಟ-೫೮.

೨. ಅದೇ, ಪುಟ-೫೮

೩. ದೇವರಕೊಂಡಾರೆಡ್ಡಿ(ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭ ರಾಯಚೂರು ಜಿಲ್ಲೆ, ಪುಟ-೩೯೯

೪. ಅದೇ, ಪುಟ-೪೦೭.

೫. ಶಿಲಾಕಾಂತ ಪತ್ತಾರ, ೨೦೦೦, ಬಾದಾಮಿ: ಸಾಂಸ್ಕೃತಿಕ ಅಧ್ಯಯನ, ಪುಟ-೬೪.

೬. ನಾಗರಾಜ ಮೈ.ನ. ೧೯೮೨, ಕರ್ನಾಟಕದಲ್ಲಿ ಪುರಾತನ ವಿದ್ಯಾಕೇಂದ್ರಗಳು, ಪುಟ-೫.

೭. ಅದೇ, ಪುಟ-೧೧.

೮. ಅದೇ, ಪುಟ-೧೪.

೯. ದೇವರಕೊಂಡಾರೆಡ್ಡಿ(ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭ ರಾಯಚೂರು ಜಿಲ್ಲೆ, ಪುಟ-೩೯.

೧೦. ಅದೇ, ಪುಟ-೪೦೪.

೧೧. ಅದೇ, ಪುಟ-೪೦೬.

೧೨. ಅದೇ, ಪುಟ-೪೧೪.

೧೩. ಅದೇ, ಪುಟ-೧.

೧೪. ನಾಗರಾಜ ಮೈ.ನ. ೧೯೮೨, ಕರ್ನಾಟಕದಲ್ಲಿ ಪುರಾತನ ವಿದ್ಯಾಕೇಂದ್ರಗಳು, ಪುಟ-೨೦.

೧೫. ಶೀಲಾಕಾಂತ ಪತ್ತಾರ, ೨೦೦೦, ಬಾದಾಮಿ: ಸಾಂಸ್ಕೃತಿಕ ಅಧ್ಯಯನ, ಪುಟ-೧೪೬.

೧೬. ಚಿದಾನಂದಮೂರ್ತಿ ಎಂ., ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೧೨೪.

೧೭. ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಪುಟ-೧೮.

೧೮. ಅದೇ, ಪುಟ-೧೮.

೧೯. ಚಿದಾನಂದಮೂರ್ತಿ ಎಂ., ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೭೩.

೨೦. ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಪುಟ-೧೯.

೨೧. ಚಿದಾನಂದಮೂರ್ತಿ ಎಂ., ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೧೮೨.

೨೨. ಅದೇ, ಪುಟ-೧೩೮.

೨೩. ದೇವರಕೊಂಡಾರೆಡ್ಡಿ(ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ-೭ ರಾಯಚೂರು ಜಿಲ್ಲೆ, ಪುಟ ೩೭-೩೮.

೨೪. ವಸು ಎಂ.ವಿ. (ಸಂ.), ೨೦೦೯, ಕರ್ನಾಟಕ ಚರಿತ್ರೆ: ಆಯ್ದ ವಿಷಯಗಳು, ಪುಟ-೭೮.

೨೫. ದೇವರಕೊಂಡಾರೆಡ್ಡಿ(ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ-೭ ರಾಯಚೂರು ಜಿಲ್ಲೆ, ಪುಟ-೪೦೬.

೨೬. ದೇವರಕೊಂಡಾರೆಡ್ಡಿ(ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ-೭ ರಾಯಚೂರು ಜಿಲ್ಲೆ, ಪುಟ-೩೯.

೨೭. ಅದೇ, ಪುಟ-೪೦೧.

೨೮. ಅದೇ, ಪುಟ-೪೧೯.

೨೯. ಹಿರೇಮಠ ಬಿ.ಆರ್., ೧೯೮೬, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪುಟ-೪೧.

೩೦. ಅದೇ, ಪುಟ-೧೦೩.

೩೧. ಚಿದಾನಂದಮೂರ್ತಿ ಎಂ., ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೪೨೪.

೩೨. ವಸು ಎಂ.ವಿ. (ಸಂ.), ೨೦೦೯, ಕರ್ನಾಟಕ ಚರಿತ್ರೆ : ಆಯ್ದ ವಿಷಯಗಳು, ಪುಟ-೯೧.

೩೩. ದೇವರಕೊಂಡಾರೆಡ್ಡಿ(ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ-೭ ರಾಯಚೂರು ಜಿಲ್ಲೆ, ಪುಟ-೪೧೪.

೩೪. ಅದೇ, ಪುಟ-೪೦೫.

೩೫. ಅದೇ, ಪುಟ-೪೧೨.

೩೬. ಚಿದಾನಂದಮೂರ್ತಿ ಎಂ., ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೪೩೭.

೩೭. ದೇವರಕೊಂಡಾರೆಡ್ಡಿ(ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ-೭ ರಾಯಚೂರು ಜಿಲ್ಲೆ, ಪುಟ-೪೧೦.

೩೮. ಅದೇ, ಪುಟ-೪೦೧.

೩೯. ಅದೇ, ಪುಟ-೪೦೨.

೪೦. ಬರಗೂರು ರಾಮಚಂದ್ರಪ್ಪ, ೨೦೦೨, ಕರ್ನಾಟಕ ಸಂಗಾತಿ, ಪುಟ-೩೬೧.

೪೧. ದಸ್ತಗೀರ್ ಅಲ್ಲೀಭಾಯಿ, ೧೯೯೯, ಮೊಹರಂ ಪದಗಳು, ಪುಟ-viii-ix.

❑❑❑

# ಅಧ್ಯಾಯ : ಆರು

# ಸಮಾರೋಪ

# ಅಧ್ಯಾಯ : ಆರು

# ಸಮಾರೋಪ

ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ ಅಪಾರವಾದುದು. ಇಲ್ಲಿನ ಪ್ರತಿಯೊಂದು ಹಳ್ಳಿಯೂ ಭಾರತೀಯ ಸಂಸ್ಕೃತಿಗೆ ತಮ್ಮದೇ ಆದಂತಹ ಕಾಣಿಕೆಗಳನ್ನು ನೀಡಿವೆ ಎಂಬ ಮಾತು ಒಪ್ಪಿಕೊಂಡಿರುವಂತಹದ್ದು. ಇಂದು ಮರೆಯಾದ ಸಾಂಸ್ಕೃತಿಕ ಚರಿತ್ರೆಯನ್ನು ಮರುಜೋಡಣೆ ಮಾಡುವ ಕಾರ್ಯ ಸ್ಥಳೀಯ ಇತಿಹಾಸದಿಂದ ಆಗಬೇಕಾಗಿರುವುದು ಅನಿವಾರ್ಯವಾಗಿದೆ. ಇತಿಹಾಸವು ಪ್ರದೇಶ, ಪ್ರಾಂತ್ಯ, ರಾಜ್ಯ, ಸಂಸ್ಥೆ ಹಾಗೂ ಜನಾಂಗಗಳ ಕತೆ ಎಂಬುದನ್ನು ಮತ್ತೊಮ್ಮೆ ಪರಿಶೀಲಿಸುವುದು ಅಗತ್ಯ. ವಿವಿಧ ಪ್ರದೇಶದಲ್ಲಿರುವ ಜನರ ಜೀವನವಿಧಾನ, ಧರ್ಮ, ಸಂಸ್ಕೃತಿ, ಆಚರಣೆಗಳಲ್ಲಿ ಭಿನ್ನತೆಗಳಿವೆ. ಇವುಗಳನ್ನು ಒಟ್ಟುಗೂಡಿಸಿ ನಾಡಿನ ಇತಿಹಾಸವನ್ನು ನಿರ್ಮಿಸಬೇಕಾಗಿದೆ.

**'ಬಳಗಾನೂರು ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ'**ದಿಂದ ಅನೇಕ ಮಹತ್ವದ ಅಂಶಗಳು ಬೆಳಕಿಗೆ ಬಂದಿವೆ. ಹಿಂದೆ ಈ ಪರಿಸರದಲ್ಲಿದ್ದಂತಹ ಅನೇಕ ಪ್ರಾಗಿತಿಹಾಸಿಕ ನೆಲೆಗಳು ನಾಶವಾಗಿದ್ದರಿಂದ ಅವುಗಳ ಮಾಹಿತಿ ಈಗ ಲಭ್ಯವಾಗಿಲ್ಲ. ಹುಲ್ಲೂರಿನಲ್ಲಿ ಬೃಹತ್‌ಶಿಲಾಗೋರಿ ನೆಲೆಯೊಂದು ಮಾತ್ರ ಕಂಡುಬಂದಿದೆ. ಮೌರ್ಯರಿಂದ ಆರಂಭವಾಗುವ ಇಲ್ಲಿನ ರಾಜಕೀಯ ಇತಿಹಾಸವು ಕ್ರಮೇಣವಾಗಿ ಹೈದರಾಬಾದ್ ನಿಜಾಮ ಮತ್ತು ನಾಡಗೌಡ ಮನೆತನಗಳ ಆಳ್ವಿಕೆಯವರೆಗೂ ವಿಸ್ತರಿಸಿಕೊಂಡಿದೆ. ಕಲ್ಯಾಣ ಚಾಲುಕ್ಯ, ಕಲಚೂರಿಗಳ ಕಾಲದಲ್ಲಿ ಪ್ರಮುಖ ಆಡಳಿತ ಕೇಂದ್ರವಾಗಿದ್ದ ಈ ಪ್ರದೇಶವು ವಿಜಯನಗರ ಕಾಲದಲ್ಲಿ ಕ್ರಿಯಾತ್ಮಕ ಚಟುವಟಿಕೆಯಿಂದ ಕೂಡಿತ್ತು. ಹೈಹಯರ ಮತ್ತು ಮೊರಟ-೩೦೦ ಆಡಳಿತ ವಿಭಾಗದ ಕಾಲದಲ್ಲಿಯೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತೆಂಬ ವಿಚಾರಗಳು ತಿಳಿದುಬಂದಿವೆ. ನಾಡಗೌಡರು ಎಷ್ಟೇ ಉತ್ತಮವಾದ ಆಳ್ವಿಕೆಯನ್ನು ನಡೆಸಿದ್ದರೂ ಅವರು ಸ್ವಾರ್ಥಿಗಳಾಗಿದ್ದರು. ಅಲ್ಲದೆ, ಅಧಿಕಾರದ ದಬ್ಬಾಳಿಕೆಯನ್ನು ನಡೆಸುತ್ತಿದ್ದರು. ಸಾಮಾನ್ಯ ಜನರ ಭೂಮಿಯನ್ನು ಅನ್ಯ ಮಾರ್ಗಗಳಿಂದ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದರು.

ಇಲ್ಲಿನ ಪ್ರತಿಯೊಂದು ಗ್ರಾಮದ ಸ್ಥಳನಾಮ ಮತ್ತು ಐತಿಹ್ಯಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿದ್ದು, ಇತಿಹಾಸ ರಚನೆಯಲ್ಲಿ ಸಹಾಯಕವಾಗಿವೆ. ಉತ್ತಮ ಕಲೆ ಮತ್ತು ವಾಸ್ತುಶಿಲ್ಪವನ್ನು ಹೊಂದಿರುವ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳು ಇಲ್ಲಿವೆ. ಏಕಕೂಟ, ದ್ವಿಕೂಟ, ತ್ರಿಕೂಟ ಮಾದರಿಯ

ದೇವಾಲಯಗಳು ಇದರಲ್ಲಿ ಸೇರಿವೆ. ಬಳಗಾನೂರಿನ ನಗರೇಶ್ವರ ದೇವಾಲಯವು ಮೂಲತಃ ತ್ರಿಕೂಟ ಮಾದರಿಯಾಗಿದ್ದು, ಇದರಲ್ಲಿ ಒಂದು ಕೂಟವು ನಾಶವಾಗಿದೆ. ಉತ್ತಮ ವಾಸ್ತುಶೈಲಿ ಮತ್ತು ಸೂಕ್ಷ್ಮ ಕೆತ್ತನೆಯಿಂದ ಕೂಡಿರುವ ಲಕ್ಷ್ಮೀನಾರಾಯಣ ದೇವಾಲಯವು ಮಣ್ಣಿನಲ್ಲಿ ಮುಚ್ಚಿಹೋಗಿತ್ತು. ಅದನ್ನು ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಗುರುತಿಸಿ ಹೊರತೆಗೆಯಲಾಯಿತು. ಆದರೆ ಇಂದು ಅದನ್ನು ಸರಿಯಾದ ರೀತಿಯಲ್ಲಿ ಸಂರಕ್ಷಣೆ ಮಾಡುವಲ್ಲಿ ವಿಫಲಗೊಂಡಿರುವುದು ಎದ್ದುಕಾಣುತ್ತಿದೆ. ದೇವಾಲಯದ ಜಾಗವನ್ನು ಅತಿಕ್ರಮಣ ಮಾಡಿಕೊಳ್ಳಲಾಗಿದೆ. ರಕ್ಷಣೆಯಿಲ್ಲದ ದೇವಾಲಯವು ತನ್ನ ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತಿದೆ. ದಿದ್ದಿಗಿ ಗ್ರಾಮದ ದೇವಾಲಯಗಳ ಸ್ಥಿತಿಯಂತೂ ಗಂಭೀರವಾಗಿದೆ. ಇವು ಬಹುತೇಕವಾಗಿ ನಾಶವಾಗಿವೆ. ಪೂರ್ಣ ಮತ್ತು ಅಪೂರ್ಣಗೊಂಡಿರುವ ದೇವಾಲಯಗಳು ಇಲ್ಲಿವೆ.

ಬಳಗಾನೂರು ಪರಿಸರದಲ್ಲಿ ಶೈವ, ವೈಷ್ಣವ, ಶಾಕ್ತ ಸಂಪ್ರದಾಯಗಳಿಗೆ ಸಂಬಂಧಿಸಿದ ಮೂರ್ತಿಶಿಲ್ಪಗಳು ಕಂಡುಬಂದಿವೆ. ಶೈವ ಸಂಪ್ರದಾಯಕ್ಕೆ ಸಂಬಂಧಿಸಿದ ಶಿವನ ಸಂಕೇತವಾಗಿ ಪೂಜಿಸಲ್ಪಡುವ ವಿವಿಧ ಬಗೆಯ ಬ್ರಹ್ಮಸೂತ್ರಗಳನ್ನೊಳಗೊಂಡ ಶಿವಲಿಂಗಗಳು ಮತ್ತು ನಂದಿ, ಗಣೇಶ, ವೀರಭದ್ರ ಶಿಲ್ಪಗಳು, ವೈಷ್ಣವ ಧರ್ಮದ ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಲ್ಲಿ ಲಕ್ಷ್ಮೀನಾರಾಯಣ, ಹನುಮಂತ, ಗರುಡ, ಸೂರ್ಯ ಶಿಲ್ಪಗಳು, ಶಾಕ್ತ ಸಂಪ್ರದಾಯದ ಶಿಲ್ಪಗಳಲ್ಲಿ ದುರ್ಗಿ, ಚೌಡೇಶ್ವರಿ, ಸಪ್ತಮಾತೃಕೆ, ಉಮಾಮಹೇಶ್ವರಿ ಶಿಲ್ಪಗಳು ಕಂಡುಬಂದಿವೆ. ಇವುಗಳಿಂದ ಈ ಪ್ರದೇಶದ ಜನರು ತಮ್ಮದೇ ಆದ ದೈವತ್ವವನ್ನು ಸ್ವೀಕರಿಸಿ ಪೂಜಿಸುತ್ತಿದ್ದರೆಂಬುದಂತೂ ಸ್ಪಷ್ಟ.

ಲೌಕಿಕ ವಾಸ್ತುಶಿಲ್ಪದಲ್ಲಿ ಕೆರೆ, ಬಾವಿ, ಕೋಟೆ ಅವಶೇಷಗಳು ಪ್ರಮುಖವಾಗಿ ಗೋಚರಿಸಿವೆ. ಚಿಕ್ಕ ಕಡಬೂರು, ಉದ್ಬಾಳ(ಉ), ಗೌಡನಬಾವಿ, ಜವಳಗೆರೆ, ಜಾಲವಾಡಿಗೆ ಗ್ರಾಮಗಳಲ್ಲಿನ ಬಾವಿಗಳು ಧಾರ್ಮಿಕ, ಸಾಂಸ್ಕೃತಿಕ ಅಂಶಗಳನ್ನು ಅರಹುತ್ತವೆ. ಅನೇಕ ಅಂಶಗಳಿಂದ ಪ್ರಾಮುಖ್ಯತೆಯನ್ನು ಪಡೆದಿದ್ದ ಈ ಬಾವಿಗಳ ನೀರನ್ನು ಸರಿಯಾಗಿ ಉಪಯೋಗಿಸದಿದ್ದರಿಂದ ನೀರು ಜಡತ್ವವಾಗಿದೆ. ಬಾವಿಗಳ ಗೋಡೆಗಳ ಮೇಲಿರುವ ಉಬ್ಬುಶಿಲ್ಪಗಳು ಸಾಂಸ್ಕೃತಿಕ ಸಂಗತಿಗಳನ್ನು ಬಿತ್ತರಿಸುತ್ತವೆ. ದಿದ್ದಿಗಿ ಗ್ರಾಮದಲ್ಲಿ ಪಾಳೆಯಗಾರ ಕಾಲದ ಕೋಟೆಯ ಅವಶೇಷಗಳು ಕಂಡುಬಂದಿವೆ. ಈ ಪ್ರದೇಶವು ರಾಜಕೀಯ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಇದು ಪಾಳೆಯಗಾರ ಮತ್ತು ಇನ್ನಿತರ ಅರಸುಮನೆತನಗಳ ಆಳ್ವಿಕೆಯ ಕೇಂದ್ರಸ್ಥಾನ ವಾಗಿತ್ತೆಂದು ದೃಢವಾಗುತ್ತದೆ.

ಶಾಸನ ಶಿಲ್ಪಗಳಿಂದ ಈ ಪ್ರದೇಶವು ಮಹತ್ವವನ್ನು ಪಡೆಯುತ್ತದೆ. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚೂರಿ, ಬಿಜಾಪುರದ ಆದಿಲ್‌ಶಾಹಿ ಮತ್ತು ಪಾಳೆಯಗಾರರ ಕಾಲದ ಶಾಸನಗಳು ಲಭ್ಯವಾಗಿವೆ. ಇವೆಲ್ಲವು ದಾನಶಾಸನಗಳಾಗಿದ್ದು, ಸರ್ವಧರ್ಮಸಮನ್ವಯತೆಯನ್ನು ಸಾರುತ್ತವೆ. ಶೈವ-ವೈಷ್ಣವ, ಹಿಂದೂ-ಮುಸ್ಲಿಂ ಧರ್ಮದವರು ಪರಸ್ಪರವಾಗಿ ಸೇರಿ ಹಾಗೂ ಪ್ರತ್ಯೇಕವಾಗಿ ತಮ್ಮದಲ್ಲದ ದೇವಾಲಯಗಳಿಗೆ ದಾನ ಬಿಟ್ಟಿರುವುದು ವಿಶೇಷ. ಸ್ಮಾರಕ ಶಾಸನಗಳಲ್ಲಿ ವೀರಗಲ್ಲುಗಳೇ ಮೊದಲ ಸ್ಥಾನದಲ್ಲಿ ನಿಲ್ಲುತ್ತವೆ. ವೀರಗಲ್ಲುಗಳು ವಿವಿಧ ಹಂತಗಳನ್ನೊಂದಿವೆ. ಕಲ್ಯಾಣ ಚಾಲುಕ್ಯರ ವೀರಗಲ್ಲುಗಳಲ್ಲಿ ಹೋರಾಟದ ಚಿತ್ರಣವನ್ನು, ಗೋವುಗಳನ್ನು

ಚಿತ್ರಿಸಿದ್ದರೆ, ವಿಜಯನಗರ ವೀರಗಲ್ಲುಗಳಲ್ಲಿ ಕುದುರೆ ಮೇಲೆ ಕುಳಿತ ವೀರನ ಹಾಗೂ ಧ್ವಜ ಹಿಡಿದಿರುವ ಸೈನಿಕನ ಚಿತ್ರಣವನ್ನು ಚಿತ್ರಿಸಲಾಗಿದೆ. ಧ್ವಜಗಳು ಆ ಪ್ರದೇಶದ ಮೇಲಿನ ಅಧಿಕಾರ ಮತ್ತು ಪ್ರಭುತ್ವವನ್ನು ಸೂಚಿಸುತ್ತವೆ. ದಿದ್ದಿಗಿಯಲ್ಲಿ ಈ ಮೇಲಿನ ಎಲ್ಲಾ ರೀತಿಯ ವೀರಗಲ್ಲುಗಳು ಕಂಡು ಬರುತ್ತಿದ್ದು ಅದೊಂದು ವೀರಗಲ್ಲುಗಳ ಕೇಂದ್ರಸ್ಥಾನವಾಗಿದೆ. ಹುಲ್ಲೂರಿನಲ್ಲಿ ವಿಜಯನಗರ ಕಾಲದ ಬಂದೂಕು ಹಿಡಿದಿರುವ ವೀರಗಲ್ಲು ಇದೆ. ವಿಜಯನಗರದ ಅರಸರು ಪ್ರಪ್ರಥಮವಾಗಿ ಯುದ್ಧಗಳಲ್ಲಿ ಬಳಸಿದ ಸಿಡಿಮದ್ದಿನ ಬಳಕೆಯ ಪ್ರತೀಕವಿದು.

ಸಾಮಾಜಿಕ ಸ್ಥಿತಿಗತಿಯಲ್ಲಿ ಜಾತಿವ್ಯವಸ್ಥೆ ಪ್ರಧಾನವಾಗಿದೆ. ವಿವಿಧ ಪ್ರದೇಶಗಳಲ್ಲಿರುವಂತೆ ಇಲ್ಲಿಯೂ ಎಲ್ಲಾ ಜಾತಿಯವರಿದ್ದರು ಎಂಬುದು ಸ್ಪಷ್ಟ. ಬ್ರಾಹ್ಮಣರು ಉನ್ನತಸ್ಥಾನವಾಗಿದ್ದರೆ, ರಾಜ್ಯರಕ್ಷಣೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದ ಕ್ಷತ್ರಿಯರು ಎರಡನೇ ಸ್ಥಾನ ಪಡೆದುಕೊಂಡಿದ್ದರು. ಕ್ಷತ್ರಿಯರು ದೇವಸ್ಥಾನಗಳಿಗೆ ನೀಡುತ್ತಿದ್ದ ದಾನವನ್ನು ರಕ್ಷಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ವೈಶ್ಯರಲ್ಲಿ ತೆಲ್ಲಿಗರು, ನಖರರು, ತಮ್ಮ ವ್ಯಾಪಾರ ವೃತ್ತಿಯಿಂದ ಸಮಾಜದಲ್ಲಿ ಗೌರವಸ್ಥಾನ ಪಡೆದವರಾಗಿದ್ದರು. ಸಾಮಾನ್ಯ ಮಹಿಳೆಯರ ಕುರಿತು ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ರಾಜಪರಿವಾರದ ರಾಣಿಯರು ಆಡಳಿತವನ್ನು ನಿರ್ವಹಿಸುತ್ತಿದ್ದರಲ್ಲದೆ, ದಾನವನ್ನು ನೀಡುತ್ತಿದ್ದರು. ವೃತ್ತಿ ಆಧಾರದ ಮೇಲೆ ಜಾತಿಗಳು ಹುಟ್ಟಿಕೊಂಡಿರುವುದು ತಿಳಿದಿರುವ ಸಂಗತಿ. ಇಂದು ಕುಗ್ರಾಮಗಳಾಗಿರುವ ಬಳಗಾನೂರು ಮತ್ತು ದಿದ್ದಿಗಿ ಗ್ರಾಮಗಳು ಹಿಂದೆ ಸರ್ವನಮಸ್ಯದ ಅಗ್ರಹಾರ ಗಳಾಗಿದ್ದವು. ಈ ಅಗ್ರಹಾರಗಳಲ್ಲಿದ್ದ ಬ್ರಾಹ್ಮಣರು ಶಿಕ್ಷಣ ಬೋಧಿಸುವುದು ಮಾತ್ರವಲ್ಲದೆ, ಆಡಳಿತದಲ್ಲೂ ಭಾಗವಹಿಸುತ್ತಿದ್ದರು. ಅಗ್ರಹಾರಗಳಿಗೆ ರಾಜರು, ರಾಜಪರಿವಾರದವರು, ವರ್ತಕರು, ವ್ಯಾಪಾರಿಗಳು ಭೂಮಿ ಮತ್ತು ಗೋವುಗಳನ್ನು ದಾನವಾಗಿ ನೀಡುತ್ತಿದ್ದರು. ಆದರೆ ಮಹಾಜನರು ತಮ್ಮಲ್ಲಿರುವ ದಾನಗಳನ್ನು ಇತರರಿಗೆ ಹಂಚಿರುವ ಸಂಗತಿಯನ್ನು ದಿದ್ದಿಗಿ ಶಾಸನ ವ್ಯಕ್ತಪಡಿಸುತ್ತಿರುವುದು ಗಮನಾರ್ಹ.

ಈ ಪರಿಸರದಲ್ಲಿ ಬೌದ್ಧ, ಜೈನ, ಶೈವ, ವೈಷ್ಣವ ಮತ್ತು ಹಿಂದೂ-ಮುಸ್ಲಿಂ ಧರ್ಮಗಳು ಆಯಾ ಕಾಲಘಟ್ಟದಲ್ಲಿ ಪ್ರಭಾವಿತವಾಗಿದ್ದವು. ಈ ಧರ್ಮಗಳು ಕೆಲವೊಮ್ಮೆ ಪರಸ್ಪರ ವಿರೋಧಿಗಳಾಗಿ ಕಾಣಿಸಿಕೊಂಡರೂ ಸರ್ವಧರ್ಮ ಸಮನ್ವಯತೆಯನ್ನು ಮಾತ್ರ ಬಿಟ್ಟುಕೊಟ್ಟಿರಲಿಲ್ಲ. ಶೈವ-ವೈಷ್ಣವ, ಹಿಂದೂ-ಮುಸ್ಲಿಮರು ಪರಸ್ಪರವಾಗಿ ಸೇರಿಕೊಂಡು ದಾನವನ್ನು ಬಿಟ್ಟಿರುವುದು ಸರ್ವಧರ್ಮ ಸಮನ್ವಯಕ್ಕೆ ಹಿಡಿದ ಕೈಗನ್ನಡಿ. ಬಳಗಾನೂರು ಗ್ರಾಮವು ಕ್ರಿ.ಶ. ೧೧-೧೨ನೇ ಶತಮಾನದ ಸಂದರ್ಭದಲ್ಲಿ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು ಎಂಬುದಕ್ಕೆ ಆಧಾರಗಳು ಲಭ್ಯವಾಗಿವೆ. ಜವಳಗೆರೆಯು ಸಹ ವ್ಯಾಪಾರ ಕೇಂದ್ರವಾಗಿದ್ದರೂ ಬಳಗಾನೂರಿನಷ್ಟು ಉನ್ನತಮಟ್ಟದ ವ್ಯಾಪಾರ ನಡೆಯುತ್ತಿರಲಿಲ್ಲ. ಇಲ್ಲಿ ಅನೇಕ ಸ್ಥಳೀಯ ಹಾಗೂ ಹೊರಗಿನ ವ್ಯಾಪಾರ ಸಂಘಗಳು ನೆಲೆಯೂರಿದ್ದವು. ಅವುಗಳಲ್ಲಿ ನಾನಾದೇಸಿ, ಅಯ್ಯಾವೊಳೆ-೫೦೦ ಸ್ವಾಮಿಗಳು ಪ್ರಮುಖವಾಗಿ ಕಂಡುಬಂದಿದ್ದಾರೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆದ ಬೆಳೆಗಳನ್ನು ಮಾರಾಟಕ್ಕಾಗಿ ಇಲ್ಲಿಗೆ ತರುತ್ತಿದ್ದರೆಂಬುದು ಗಮನಾರ್ಹ. ವ್ಯಾಪಾರವು ಆಂತರಿಕ ಹಾಗೂ ಬಾಹ್ಯವಾಗಿ ನಡೆಯುತ್ತಿತ್ತು. ಇಲ್ಲಿನ ಆಚರಣೆ ಮತ್ತು ಉತ್ಸವಗಳಲ್ಲಿ ಮಹತ್ತರ ಬದಲಾವಣೆಗಳು ಕಂಡುಬರದೆ ಗ್ರಾಮೀಣ ಸಂಸ್ಕೃತಿ ಇಂದಿಗೂ ಉಳಿದುಬಂದಿದೆ. ಜಾತ್ರೆ ಮತ್ತು ಹಬ್ಬಗಳು ಉಳಿದ ಪ್ರದೇಶಗಳಿಗಿಂತ ಭಿನ್ನವಾಗಿ ಆಚರಣೆಯಲ್ಲಿವೆ.

ಒಟ್ಟಾರೆಯಾಗಿ ಈ ಅಧ್ಯಯನ ಕುರಿತು ಹೇಳುವುದಾದರೆ, ಇಲ್ಲಿನ ಶಾಸನ, ದೇವಾಲಯ, ಶಿಲ್ಪ ಹಾಗೂ ಇನ್ನಿತರೆ ಸ್ಮಾರಕಾವಶೇಷಗಳು ಪ್ರಾದೇಶಿಕವಾಗಿ ಕನ್ನಡನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳ ಅಧ್ಯಯನಕ್ಕೆ ಅಪಾರವಾದ ಕೊಡುಗೆಗಳನ್ನು ಸಲ್ಲಿಸಿರುವುದು ದೃಢವಾಗುತ್ತದೆ. ಇಷ್ಟೆಲ್ಲಾ ಮಹತ್ವದ ವಿಷಯಗಳನ್ನು ಹೊರಗೆಡಹುವ ಈ ಅವಶೇಷಗಳು ವಿನಾಶದ ಅಂಚಿನಲ್ಲಿವೆ. ಮಾನವನ ಸ್ವಾರ್ಥ, ಮೂಢನಂಬಿಕೆ ಮತ್ತು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು, ಸಂಘಸಂಸ್ಥೆಗಳು ಮತ್ತು ಜನರು ಇವುಗಳ ಸಂರಕ್ಷಣೆಗೆ ಮುಂದಾಗಬೇಕಿದೆ.

ಈ ಪರಿಸರದ ಕುರಿತು ಹಿಂದೆಯೇ ಅಧ್ಯಯನಗಳು ನಡೆದಿದ್ದರೆ, ಇನ್ನೂ ಹೆಚ್ಚಿನ ಅಂಶಗಳು ಬೆಳಕಿಗೆ ಬರುತ್ತಿದ್ದವೆಂಬುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಬಳಗಾನೂರು ಗ್ರಾಮದಲ್ಲಿ ಇತ್ತೆನ್ನಲಾದ ಕೋಟೆಯ ನಿಖರವಾದ ಅವಶೇಷಗಳು ಸಿಗುವುದಿಲ್ಲ. ಇದರಿಂದ ಈ ಭಾಗದ ಅಧ್ಯಯನಕ್ಕೆ ಸ್ವಲ್ಪ ಹಿನ್ನೆಡೆ ಉಂಟಾಗಿರುವುದನ್ನು ಒಪ್ಪಿಕೊಳ್ಳಬೇಕಾಗಿದೆ. ಇಂತಹ ಅನೇಕ ವಸ್ತುವಿಷಯವನ್ನು ಒಳಗೊಂಡಿರುವ ಅದೆಷ್ಟೋ ಗ್ರಾಮಗಳು, ಪ್ರದೇಶಗಳು ಸಿಂಧನೂರು ತಾಲೂಕು ಮತ್ತು ರಾಯಚೂರು ಜಿಲ್ಲೆಗಳಲ್ಲಿವೆ. ಇಂದು ಅವುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಅವುಗಳ ಬಗ್ಗೆ ತುರ್ತಾಗಿ ಅಧ್ಯಯನಗಳು ನಡೆದಾಗ ಮಾತ್ರ ನಾಡಿನ ಇತಿಹಾಸದಲ್ಲಿ ಅವುಗಳ ಪಾತ್ರ ಮತ್ತು ಮಹತ್ವವೇನು ಎಂಬುದು ತಿಳಿದುಬರುತ್ತದೆ.

❑❑❑

# ಅನುಬಂಧಗಳು

# ೧. ಗ್ರಂಥಋಣ


ಅಂಬಳಿಕೆ ಹಿರಿಯಣ್ಣ(ಪ್ರ.ಸಂ), ೨೦೦೯, **ಕನ್ನಡ ವಿಷಯ ವಿಶ್ವಕೋಶ, ಸಂಪುಟ-೪, ಇತಿಹಾಸ ಮತ್ತು ಪುರಾತತ್ವ**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಅಮರೇಶ ನುಗಡೋಣಿ, ೨೦೦೩, **ಹೈದರಾಬಾದು ಕರ್ನಾಟಕ ಹಾಡು-ಪಾಡು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಮರೇಶ ಯತಗಲ್(ಸಂ), ೨೦೧೦, **ದೋ-ಅಬ್ ರಾಯಚೂರು ಇತಿಹಾಸ**, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು.

ಕಪಟಾಳ ಕೃಷ್ಣರಾಯರು, ೨೦೦೫, **ಸುರಪುರ ಸಂಸ್ಥಾನದ ಇತಿಹಾಸ**, ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು.

ಕರಿಬಸಪ್ಪ, ೨೦೦೯, **ಬಳ್ಳಾರಿ ಜಿಲ್ಲೆಯ ಐತಿಹ್ಯಗಳು**, ಸಾಯಿಮಣಿ ಪ್ರಕಾಶನ, ಹೊಸಪೇಟೆ.

ಕೇದಾರನಾಥ ಹಿರೇಮಠ, ೨೦೦೩, **ಪಂಪಕಿರಣ**, ಹಿರೇಮಠ ಪ್ರಕಾಶನ, ಬಳಗಾನೂರು.

ಕೊಟ್ರಯ್ಯ ಸಿ.ಟಿ.ಎಂ., ೨೦೧೦, **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗೋಪಾಲರಾವ್ ಹೇಜಿಬ್, ೨೦೦೧, **ಹೈದರಾಬಾದ್ ಮುಕ್ತಿ ಸಂಘರ್ಷ**, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.೬.

ಚನ್ನಬಸವ ಹಿರೇಮಠ, ೨೦೦೮, **ಸತ್ಯದ ಹಾದಿ**, ಬಂಡಾರ ಪ್ರಕಾಶನ, ಮಸ್ಕಿ.

ಚನ್ನಬಸಪ್ಪ ಬಿ, ೨೦೦೪, **ಶಾಸನೋಕ್ತ ಅಗ್ರಹಾರಗಳು**, ನಾಗರಾಜ್ ಎಂ.ಜಿ., ಮತ್ತು ಕೃಷ್ಣಮೂರ್ತಿ ಪಿ.ವಿ.,(ಸಂ), ಇತಿಹಾಸ ದರ್ಶನ-೧೯, ಕರ್ನಾಟಕ ಇತಿಹಾಸ ಅಕಾಡೆಮಿ(ರಿ), ಬೆಂಗಳೂರು.

ಚನ್ನಬಸಪ್ಪ ಬಿ, ೨೦೦೫, **ಬಳಗಾನೂರು ಅಪ್ರಕಟಿತ ಶಾಸನ**, ಇತಿಹಾಸ ದರ್ಶನ-೨೦, ಕರ್ನಾಟಕ ಇತಿಹಾಸ ಅಕಾಡೆಮಿ(ರಿ), ಬೆಂಗಳೂರು.

ಜಾಜಿ ದೇವೇಂದ್ರಪ್ಪ, ೨೦೦೪, **ಆಂಧ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು**, ವಿಕಾಸ ಪ್ರಕಾಶನ, ಹೊಸಪೇಟೆ.

ಜೋಶಿ ಎಸ್.ಕೆ., ೨೦೦೮, **ಕರ್ನಾಟಕದ ಕೋಟೆ ಕೊತ್ತಲಗಳು,** ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ.

ತಿಪ್ಪೇರುದ್ರಸ್ವಾಮಿ ಎಚ್., ೨೦೦೩, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

ದಸ್ತಗೀರ್ ಅಲ್ಲೀಬಾಯಿ, ೧೯೯೯, **ಮೊಹರಂ ಪದಗಳು,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ದೇವರಕೊಂಡಾರೆಡ್ಡಿ(ಸಂ), ಭಟ್‌ಸೂರಿ ಕೆ.ಜಿ., ಕಲವೀರ ಮನ್ವಾಚಾರ್, ಪರಮಶಿವಮೂರ್ತಿ ಡಿ.ವಿ.(ಸ.ಸಂ), **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭,** ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇವರಕೊಂಡಾರೆಡ್ಡಿ, ೧೯೯೯, **ದಿದ್ದಿಗೆಯ ಕಾಮಕೋಟಿ ಭಳಾರಿ ಶಾಸನ,** ಇತಿಹಾಸ ದರ್ಶನ- ೧೪, ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ.,(ಸಂ), ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು.

ದೇ.ಜ.ಗೌ, ೨೦೧೧, **ಸ್ಥಳನಾಮ ವ್ಯಾಸಂಗ,** ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ನರಸಿಂಹಮೂರ್ತಿ ಎ.ವಿ., ೨೦೧೦, **ಕರ್ನಾಟಕದ ಸೇವುಣರ ಇತಿಹಾಸ,** ತಳುಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

ನರಸಿಂಹಮೂರ್ತಿ ಎ.ವಿ., ೨೦೦೦, **ಸಾಮ್ರಾಜ್ಯಕ್ಕಾಗಿ ಹೋರಾಟ, ಭಾಗ-೧(ಸಂಪುಟ-೯),** ಭಾರತೀಯ ವಿದ್ಯಾಭವನ, ಬೆಂಗಳೂರು.

ನಾಗರಾಜ ಮೈ.ನ., ೧೯೮೨, **ಕರ್ನಾಟಕದಲ್ಲಿ ಪುರಾತನ ವಿದ್ಯಾಕೇಂದ್ರಗಳು,** ಐಬಿಎಚ್ ಪ್ರಕಾಶನ, ಬೆಂಗಳೂರು.

ನಿಂಗಣ್ಣ ಚಿ.ಸಿ., ೨೦೧೦, **ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ,** ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

ಪರಮಶಿವಮೂರ್ತಿ ಡಿ.ವಿ., ೧೯೯೯, **ಶಾಸನಶಿಲ್ಪ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ್ ಎಂ.ಎನ್., ೨೦೧೧, **ದೇವಾಲಯ ವಾಸ್ತು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಾಲಚಂದ್ರ ಜಯಶೆಟ್ಟಿ, ೨೦೦೬, **ಹೈದರಾಬಾದ್ ಕರ್ನಾಟಕದ ವಿಮೋಚನಾ ಚಳುವಳಿ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಭಟ್ ವಿ.ಎನ್. ವಿದ್ವಾನ್, ೨೦೦೭, **ಭಾರತೀಯ ಹಬ್ಬಗಳ ವೈಶಿಷ್ಟ್ಯ,** ಪ್ರಾಚೀ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

ಭೀಮಸೇನರಾವ್ ಡಿ.ಕೆ., ೨೦೦೦, **ಅವಲೋಕನ-ಸಂಶೋಧನ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಭೀಮಸೇನರಾವ್ ಡಿ.ಕೆ., ೧೯೭೦, **ಸಾಹಿತ್ಯಾವಲೋಕನ(ಪ್ರಬಂಧಗಳ ಸಂಕಲನ),** ಉಷಾ ಸಾಹಿತ್ಯಮಾಲೆ, ಮೈಸೂರು.

ಭಗವತಿ ಎಸ್.ಎಸ್., ಮೂಲಿನಮನಿ ಎನ್.ಎಸ್., ೨೦೦೨, **ಹೊಸಗನ್ನಡ ಸಾಹಿತ್ಯಾವಲೋಕನ,** ವಿದ್ಯಾನಿಧಿ ಪ್ರಕಾಶನ, ಗದಗ.

ಮೃತ್ಯುಂಜಯ ಹೊರಕೇರಿ ಮತ್ತು ಬಸವಲಿಂಗ ಸೊಪ್ಪಿಮಠ, ೨೦೦೫, ರಾಯಚೂರು ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಮಹಂತೇಶ ಎನ್.ಎಸ್., ೨೦೦೮, **ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು**, ರೇಣುಕ ಪ್ರಕಾಶನ, ಚಿತ್ರದುರ್ಗ.

ಮಹಾಬಳೇಶ್ವರಪ್ಪ, ೨೦೦೮, **ಹೈದ್ರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ರಾಮಣ್ಣ ಹವಳೆ, ೨೦೧೦, **ಹೈದರಾಬಾದ ಸಂಸ್ಥಾನ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆಯ ಹೋರಾಟ**, ಶ್ರೀ ಶ್ರೀ ಪಬ್ಲಿಕೇಷನ್ಸ್, ರಾಯಚೂರು.

ರಾಘುವೇಂದ್ರರಾವ್, ೨೦೧೦, **ಪ್ರೊ.ಡಿ.ಕೆ. ಭೀಮಸೇನರಾಯರು (ಬದುಕು-ಬರಹ)**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಲಕ್ಷ್ಮಣ ಅಳವಂಡಿ, ೧೯೯೭, **ಇತಿಹಾಸ ಕೋಶ(ಭಾಗ-೧ ಪ್ರಾಚೀನ ಕರ್ನಾಟಕ)**, ಕಾವ್ಯಶ್ರೀ ಪ್ರಕಾಶನ, ಅಳವಂಡಿ, ಕೊಪ್ಪಳ ಜಿಲ್ಲೆ.

ಲಕ್ಷ್ಮಣ್ ತೆಲಗಾವಿ, ೨೦೦೪, **ಮೌರ್ಯ ಮತ್ತು ಶಾತವಾಹನಯುಗ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಸು ಎಂ.ವಿ., ೨೦೦೯, **ಕರ್ನಾಟಕ ಆಯ್ದ ವಿಷಯಗಳು**, ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವನ್ ಸಿ.ಎಸ್., ೨೦೧೨, **ಕರ್ನಾಟಕ ದೇವಾಲಯ ಕೋಶ**, ರಾಯಚೂರು ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟರತ್ನ ಎ.ವಿ. ಮತ್ತು ಪದ್ಮ ಎಂ.ಬಿ., ೧೯೮೫, **ಇತಿಹಾಸ ಸಂಶೋಧನಾ ಮಾರ್ಗ**, ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು.

ಹಿರೇಮಠ ಬಿ.ಆರ್., ೧೯೮೬, **ಶಾಸನಗಳಲ್ಲಿ ಕರ್ನಾಟಕದ ವರ್ತಕರು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶಾಶ್ವತಸ್ವಾಮಿ ಮುಕ್ಕುಂದಿಮಠ, ೨೦೦೮, **ಕೃಷ್ಣತುಂಗೆ ನೆಲದ ಸಿರಿ**, ಸುಮುಖ ಪ್ರಕಾಶನ, ಬೆಂಗಳೂರು.

ಶಾಶ್ವತಸ್ವಾಮಿ ಮುಕ್ಕುಂದಿಮಠ, ೨೦೦೫, **ದರ್ಪಣ(ಸಿಂಧನೂರು ತಾಲೂಕು ಪರಿಚಯ)**, ಪಂಪ ಪ್ರಕಾಶನ, ಸಿಂಧನೂರು.

ಶಾಶ್ವತಸ್ವಾಮಿ ಮುಕ್ಕುಂದಿಮಠ, ೨೦೧೦, **ಲಿಂಗಾಯತ ನಾಡಗೌಡ ಮನೆತನಗಳು**, ರಾಣಿಯರು ರಾಯಚೂರು ಜಿಲ್ಲೆ, ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ.

ಶಿರೂರ ಬಿ.ವಿ., ೨೦೧೨, **ಸಂಶೋಧನೆಯ ಸ್ವರೂಪ**, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.

ಶಿವತಾರಕ್ ಕೆ.ಬಿ., ೨೦೦೧, **ಕರ್ನಾಟಕದ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿಲಾಕಾಂತ ಪತ್ತಾರ, ೨೦೦೦, **ಬಾದಾಮಿ : ಸಂಸ್ಕೃತಿ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀನಿವಾಸರಾವ್ ಬಿ.ವಿ., ೧೯೫೬, **ರಾಯಚೂರು ಇತಿಹಾಸ**, ಶ್ರೀನಿವಾಸ ಅಮರವಾಣಿ ಮುದ್ರಣಾಲಯ, ರಾಯಚೂರು.

ಶ್ರೀನಿವಾಸರಾಜು ಚಿ., ಬಸವರಾಜ ಕಲ್ಗುಡಿ, ೨೦೦೨, **ಕರ್ನಾಟಕ ಸಂಗಾತಿ**, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಶೇಷಶಾಸ್ತ್ರಿ ಆರ್., ೨೦೦೪, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸಂತೋಷ ಹಾನಗಲ್ಲ, ೨೦೦೯, **ಬೆಳಗಾವಿ ಜಿಲ್ಲೆಯ ಲಿಂಗಾಯತ ವಾಡೆಗಳು**, ಶರಣ ಸಾಹಿತ್ಯ ಅಕಾಡೆಮಿ, ಚನ್ನಮ್ಮನ ಕಿತ್ತೂರು.

ಸುಂದರ ಅ., ೧೯೯೭, **ಕರ್ನಾಟಕ ಚರಿತ್ರೆ, ಚರಿತ್ರೆಮಾಲೆ-೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸುರೇಂದ್ರರಾವ್ ಬಿ., ೧೯೯೭, **ಕರ್ನಾಟಕ ಚರಿತ್ರೆ ಮಾಲೆ-೨**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್ ಎಸ್.ವೈ., ೨೦೧೦, **ಜಗಲೂರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಬಳಗಾನೂರು ಹೋಬಳಿ ಕಂದಾಯ ವಲಯ ಸಾಮಾನ್ಯ ಮಾಹಿತಿ**, ೨೦೦೫-೦೬.

**ಪತ್ರಿಕೆ ಲೇಖನ**

ಸೂರ್ಯನಾಥ ಕಾಮತ್, ಸೆಪ್ಟೆಂಬರ್ ೪, ೨೦೧೨, **ರಾಯಚೂರು ಜಿಲ್ಲೆಯ ಪ್ರಾಚೀನ ಕೇಂದ್ರಗಳು**, ವಿಜಯ ಕರ್ನಾಟಕ(ಪ).

**ಸಂಶೋಧನ ಪ್ರಬಂಧಗಳು**

ನಾಗರಾಜಪ್ಪ ಎಸ್., ೨೦೦೮, **ಚಿತ್ರದುರ್ಗ ಪರಿಸರದ ದೇವಾಲಯಗಳು**(ಎಂ.ಫಿಲ್ ನಿಬಂಧ ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿರುಪತಿ ಜಿ., ೨೦೦೭, **ಮುಕ್ಕುಂದಿ ಇತಿಹಾಸ**, (ಎಂ.ಫಿಲ್ ನಿಬಂಧ ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಿದ್ಧರಾಮ ನಾಯಕ, ೨೦೧೦, **ರಾಯಚೂರು ಪ್ರದೇಶದ ಹೈಹಯರ ಇತಿಹಾಸ ಶಾಸನಗಳ ಸಮಾಜೋ-ಧಾರ್ಮಿಕ ಅಧ್ಯಯನ** (ಎಂ.ಫಿಲ್ ನಿಬಂಧ ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿಲ್ಪಾ ಜೆ.ಎಂ., ೨೦೦೯, ರಾಯಚೂರು ಜಿಲ್ಲಾ ಶಾಸನ ಸಾಹಿತ್ಯದಲ್ಲಿ ಮಹಿಳೆಯರು, (ಎಂ.ಫಿಲ್ ನಿಬಂಧ ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನೆಲ್ಲುದ್ರಿ ಸದಾನಂದಪ್ಪ, ೨೦೧೨, ಅರಸಿಕೆರೆ ಪರಿಸರದ ಇತಿಹಾಸ ಮತ್ತು ಪುರಾತತ್ವ, (ಎಂ.ಫಿಲ್ ನಿಬಂಧ ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರವೀಶ್ ಜಿ.ಎನ್., ೨೦೧೦, ನಿಡುಗಲ್ಲು ಪರಿಸರದ ರಕ್ಷಣಾ ವಾಸ್ತುಶಿಲ್ಪ,(ಎಂ.ಫಿಲ್ ನಿಬಂಧ ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚವ್ಹಾಣ ರವಿ ನಾನಾ, ೨೦೧೧, ಕುಷ್ಟಗಿ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು,(ಪಿಎಚ್.ಡಿ ಮಹಾಪ್ರಬಂಧ ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಇಂಗ್ಲೀಷ್ ಗ್ರಂಥಗಳು

1. Channabasappa S. Patil, 1992, **Themples of Raichur and Bellary Districts,** Directorate of archaeology and Musuems, Mysore.
2. Mysore Sate Gazatteer, 1970, **Raichur District,** Printed the Director of Printing, Stationery and Publications of the Government Press, Bangalore.

ವಕ್ತೃಗಳ ವಿವರ

೧. ಅಂಬಮ್ಮ ಪೂಜಾರಿ, ಉದ್ಬಾಳ, ವಯಸ್ಸು-೮೩, ವೃತ್ತಿ-ಪೂಜಾರಿ.

೨. ಗಂಗಾಧರಶಾಸ್ತ್ರಿ, ಜವಳಗೆರೆ, ವಯಸ್ಸು-೮೩, ವೃತ್ತಿ-ಜ್ಯೋತಿಷಿ

೩. ದಿನೇಶ ಡಿ. ಉದ್ಬಾಳ, ವಯಸ್ಸು-೩೦, ವೃತ್ತಿ-ಶಿಕ್ಷಕ.

೪. ಪಂಪಾಪತಿ ಕೊಂಡಾರೆಡ್ಡಿ, ಬಳಗಾನೂರು, ವಯಸ್ಸು-೫೦, ವೃತ್ತಿ-ವ್ಯವಸಾಯ.

೫. ರಾಮರಾವ್ ನಾಡಗೌಡ, ಉದ್ಬಾಳ, ವಯಸ್ಸು-೮೦, ವೃತ್ತಿ-ನಾಡಗೌಡಕಿ.

೬. ವೀರೇಶ ಕುಲಕರ್ಣಿ, ಬಳಗಾನೂರು, ವಯಸ್ಸು-೭೦, ವೃತ್ತಿ-ವ್ಯಾಪಾರ.

೭. ಹನುಮಂತ, ಬಳಗಾನೂರು, ವಯಸ್ಸು-೪೫, ವೃತ್ತಿ-ಪೂಜಾರಿ.

೮. ಶ್ರೀಧರ, ಮಸ್ಕಿ, ವಯಸ್ಸು-೩೫, ವೃತ್ತಿ-ವೈದ್ಯ.


ಅಂತರ್ಜಾಲ ಮಾಹಿತಿ

1. www.google.com. geographical featurs of balaganur, www.onefivenine.com. india/village/raichur/sindhanur/balaganur.
2. www.google.com. http1/ NIPU.nic.samany mahithi created by govt. (etd. used. ft.th.8416-pdf)
3. www.google.com. geographical featurs of balaganur.
4. PCA 2905, 2011, MDDS Raichur.


□□□

# ೨. ತಲವಿನ್ಯಾಸಗಳು


# ಲಕ್ಷ್ಮೀನಾರಾಯಣ ದೇವಾಲಯದ ತಲವಿನ್ಯಾಸ, ಬಳಗಾನೂರು




ಆದಯ್ಯ-ಅಮರಯ್ಯ ದೇವಾಲಯದ ತಲವಿನ್ಯಾಸ,
ಬಳಗಾನೂರು



ನಗರೇಶ್ವರ-ಸಂಗಮೇಶ್ವರ ದೇವಾಲಯದ ತಲವಿನ್ಯಾಸ, ಬಳಗಾನೂರು



ಕೋಟೆ, ಜವಳಗೆರೆ



# ೩. ಛಾಯಾಚಿತ್ರಗಳು



ಲಕ್ಷ್ಮೀನಾರಾಯಣ ದೇವಾಲಯ, ಬಳಗಾನೂರು



ಲಕ್ಷ್ಮೀನಾರಾಯಣ ದೇವಾಲಯದ ಪಾರ್ಶನೋಟ, ಬಳಗಾನೂರು



ಆದಯ್ಯ-ಅಮರಯ್ಯ ದೇವಾಲಯ, ಬಳಗಾನೂರು



ನಗರೇಶ್ವರ-ಸಂಗಮೇಶ್ವರ ದೇವಾಲಯ, ಬಳಗಾನೂರು




ನಾಗಭೂಷಣ ದೇವಾಲಯ, ಬಳಗಾನೂರು



ನವರಂಗ-ಲಕ್ಷ್ಮೀನಾರಾಯಣ ದೇವಾಲಯ, ಬಳಗಾನೂ



ರಾಮಲಿಂಗ -ಚೌಡೇಶ್ವರಿ ದೇವಾಲಯ, ಬಳಗಾನೂರು



ಬಾಗಿಲುವಾಡ, ಆದಯ್ಯ-ಅಮರಯ್ಯ ದೇವಾಲಯ, ಬಳಗಾನೂರು



ನವರಂಗ, ಬಾವಿ ಬಸವೇಶ್ವರ ದೇವಾಲಯ, ಗೌಡನಬಾವಿ



ಕೋಟೆಯ ಪ್ರವೇಶ ದ್ವಾರ, ದಿದ್ದಿಗಿ



ಬಾವಿ–ಚಿಕ್ಕಕಡಬೂರು



ಬಾವಿ–ಉದ್ಬಾಳ(ಉ)



ಹನುಮಂತ ಮೂರ್ತಿ, ಬಳಗಾನೂರು



ಲಕ್ಷ್ಮೀನಾರಾಯಣ ಮೂರ್ತಿ, ಬಳಗಾನೂರು



ಸಪ್ತಮಾತೃಕೆಯರ ಪಟ್ಟಿಕೆ, ಬಳಗಾನೂರು



ನಗರೇಶ್ವರ-ಸಂಗಮೇಶ್ವರ ದೇವಾಲಯದ ಶಾಸನ, ಬಳಗಾನೂರು



ವೀರಗಲ್ಲುಗಳು, ದಿದ್ದಿಗಿ